ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು

ರಂಜಿತಾ ಆರ್.

ಮಾರ್ಗದರ್ಶಕರು

ಡಾ.ಕಲವೀರ ಮನ್ವಾಚಾರ

ಪ್ರಾಧ್ಯಾಪಕರು

ಶಾಸನಶಾಸ್ತ್ರ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೫

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ

(ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ರಂಜಿತಾ ಆರ್.

ಮಾರ್ಗದರ್ಶಕರು
ಡಾ.ಕಲವೀರ ಮನ್ವಾಚಾರ
ಪ್ರಾಧ್ಯಾಪಕರು

ಶಾಸನಶಾಸ್ತ್ರ
ಸಮಾಜವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೫

ಮಾರ್ಗದರ್ಶಕರ ದೃಢೀಕರಣ

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ **ರಂಜಿತಾ ಆರ್.** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಇಲ್ಲವೆ ಪ್ರಕಟಣೆಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಕೆ ಬ [signature]

ಡಾ.ಕಲವೀರ ಮನ್ವಾಚಾರ
ಮಾರ್ಗದರ್ಶಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 30.7.15

ಘೋಷಣಾ ಪತ್ರ

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ ಎಂಬ ಸಂಪ್ರಬಂಧವನ್ನು **ಡಾ.ಕಲವೀರ ಮನ್ವಚಾರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸು ತ್ತಿದ್ದೇನೆ. ಈ ಸಂಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗ ಎಲ್ಲಿಯೂ ಪ್ರಕಟಗೊಳಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

Ranjitha R
ರಂಜಿತಾ ಆರ್.
ಸಂಶೋಧಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ: 20-2-022

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನ, ಸಮೀಕ್ಷೆ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನ, ಸಮೀಕ್ಷೆ

ಪ್ರಾಚೀನ ಕಾಲದಿಂದ ಇಂದಿನ ಆಧುನಿಕ ತಂತ್ರಜ್ಞಾನದ ಕಾಲದಲ್ಲಿಯೂ ನಮ್ಮ ದೇಶದ ಸಂಸ್ಕೃತಿ ಪರಂಪರೆ, ನಾಗರಿಕತೆಯ ಸಂವರ್ಧನೆಯ ವಿಷಯದಲ್ಲಿ ಬಹುಮುಖ್ಯ ಪಾತ್ರ ನಿರ್ವಹಿಸಿದವಳು ಭಾರತೀಯ ಮಹಿಳೆ. ಪುರಷಪ್ರಧಾನ ವ್ಯವಸ್ಥೆಯಲ್ಲಿ ಪುರುಷನ ಪುರುಷಾರ್ಥಗಳೆನಿಸಿದ ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಅವನ ಹೆಗಲಿಗೆ ಹೆಗಲು ಕೊಟ್ಟುನಿಂತವಳು ಹೆಣ್ಣು. ಆದರೂ ಸಮಾಜ ನಿರ್ಮಿತ ಮೌಲ್ಯಗಳ ವ್ಯವಸ್ಥೆಯಲ್ಲಿ ಅವಳ ಸ್ಥಾನ ತೀರಾ ಗೌಣವಾಗಿದೆ. ಮಾನವ ಜನಾಂಗದ ಸೃಷ್ಟಿಕ್ರಿಯೆಗೆ ಕಾರಣಕರ್ತಳಾದ ಸ್ತ್ರೀಯನ್ನು ನಮ್ಮ ಸಮಾಜ ದ್ವಿತೀಯ ದರ್ಜೆಯ ಪ್ರಜೆಯನ್ನಾಗಿ ಕಾಣುತ್ತಿದೆ. ಹೆಣ್ಣು ನಡೆದು ಬಂದ ಹಿಂದಿನ ಹಾದಿಯನ್ನು ಗಮನಿಸುವುದಾದರೆ ವೇದ, ಉಪನಿಷತ್ತುಗಳ ಕಾಲದ ಸಮಾಜ ವ್ಯವಸ್ಥೆಯಲ್ಲಿ ಭಾರತೀಯ ಮಹಿಳೆಯರ ಸ್ಥಾನಮಾನಗಳು ಸ್ವಲ್ಪಮಟ್ಟಿಗೆ ಉಸಿರಾಡಿರುವ ವಾತಾವರಣ ಕಂಡುಬಂದಿತು ಎಂದು ಹೇಳಲಾಗಿದೆ. ಆದರೂ ಉನ್ನತ ವರ್ಗದ ಮಹಿಳೆಯರು, ಋಷಿಮುನಿಗಳ ಪತ್ನಿಯರೆನಿಸಿದ ಅಪಲಾ, ಲೋಪಮುದ್ರ, ಗಾರ್ಗಿ, ಮೈತ್ರೇಯಿಯರಂತಹ ಹೆಣ್ಣುಗಳ ಪಾಲಿಗೆ ಮಾತ್ರ ಲಭಿಸಿತು. ಆದರೆ ಸಾಮಾನ್ಯವರ್ಗದ ಮಹಿಳೆಯರು ಹಾಗೂ ಮಧ್ಯಮ ವರ್ಗದ ಮಹಿಳೆಯರು ಸಮಾಜಲ್ಲಿ ದೊರಕುವ ಎಲ್ಲ ಹಕ್ಕು ಗಳಿಂದಲೂ ವಂಚಿತರಾಗಿದ್ದರು. ಬರಬರುತ್ತಾ ಯಾವ ವರ್ಗದ ಮಹಿಳೆಯರಿಗೂ ಶಿಕ್ಷಣ ಮೊದಲಾದ ಹಕ್ಕುಗಳು ಕೈಗೆಟುಕದ ಕುಸುಮಗಳಂತಾದವು. ಅವು ಎಷ್ಟರ ಮಟ್ಟಿಗೆ ಪ್ರಬಲವಾದವೆಂದರೆ ಸ್ತ್ರೀಯಾದವಳು ವೇದ, ಮಂತ್ರಗಳನ್ನು ಕಿವಿಯಿಂದ ಕೇಳಿಸಿಕೊಳ್ಳುವುದು ಅಪರಾಧವೆಂಬದಷ್ಟುರ ಮಟ್ಟಕ್ಕೆ ಅಸಮಾನತೆ, ಲಿಂಗತಾರತಮ್ಯಗಳು ಬೆಳೆದು ಬಂದವು. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೆ ತತ್ರ ದೇವತಃ" ಎಂಬ ಘೋಷಣೆಯನ್ನು ಸಾರುತ್ತ ಸ್ತ್ರೀಯರನ್ನು ವೈಭವೀಕರಣದ ಉನ್ನತ ಶಿಖರದಲ್ಲಿ ಕುಳ್ಳಿರಿಸಿ ಅವರನ್ನು ಪಾತಾಳಕ್ಕೆ ತುಳಿಯುವ ಕೆಲಸಗಳೂ ಜೊತೆಯಲ್ಲಿಯೆ ಸಾಗಿಬಂದಿವೆ. ಮಧ್ಯಕಾಲೀನಯುಗದ ಕಾಲಕ್ಕಾಗಲೆ ಸ್ತ್ರೀಯರ ಸ್ಥಿತಿಗತಿಗಳು ಅತ್ಯಂತ

ಚಿಂತಾಜನಕವಾದುದಲ್ಲದೆ "ಅಪುತ್ರಸ್ಯ ಗತಿರ್ನಾಸ್ತಿ" 'ನಾ ಸ್ತ್ರೀ ಸ್ವಾತಂತ್ರ್ಯಯರ್ಹತಿ' ಎಂಬ ಮನುವಿನ ಮಾತುಗಳು ಸ್ತ್ರೀ ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲ ಅವಳ ಬುದ್ಧಿ ಮೊಳಕಾಲಿನಿಂದ ಕೆಳಗಡೆ. ಅವಳು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಗಂಡ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿರಬೇಕೆಂಬ ಕರಾರುಗಳನ್ನು ಹೆಣ್ಣಿನ ಮೇಲೆ ವಿಧಿಸಲಾಯಿತು.

ವೈದಿಕ ಸಂಸ್ಕೃತಿಯ ಆಚರಣೆಗಳು ಹೆಚ್ಚಾಗಿ ಆರಂಭದಿಂದಲೂ ಬೆಳೆದು ಬಂದಿರುವುದು ಔತ್ತರೇಯ ಮಾದರಿಯ ಆರ್ಯಸಂಸ್ಕೃತಿಯಲ್ಲಿ. ಇದಕ್ಕೆ ವಿರುದ್ಧವೆಂಬಂತೆ ದಕ್ಷಿಣ ಭಾರತದ ಭಾಗದಲೆಲ್ಲ ಹೆಚ್ಚು ರೂಢಿಯಲ್ಲಿ ಬೆಳೆದು ಬಂದ ಪರಂಪರೆ ಎಂದರೆ ಅದು ದ್ರಾವಿಡ ಸಂಸ್ಕೃತಿ. ಈ ಸಂಸ್ಕೃತಿಯಲ್ಲಿ ಮಾತೃಮೂಲೀಯ ಕುಟುಂಬ ವ್ಯವಸ್ಥೆಯೇ ಅಗ್ರಸ್ಥಾನದಲ್ಲಿದ್ದುದು ಕಂಡುಬರುತ್ತದೆ. ಇಂತಹ ಕುಟುಂಬ ವ್ಯವಸ್ಥೆಯಲ್ಲಿ ಸ್ತ್ರೀಯಾದವಳು ತನ್ನ ಜವಾಬ್ದಾರಿ, ಕರ್ತವ್ಯ ಪಾಲನೆಯನ್ನು ಯಾವ ಪುರುಷನಿಗಿಂತಲೂ ತಾನು ಕಡಿಮೆ ಇಲ್ಲ ಎಂಬಂತೆ ಏಕಮೇವ ಅದ್ವಿತೀಯಳಾಗಿ ಕಾರ್ಯ ನಿರ್ವಹಿಸಿದ್ದಾಳೆ. ಇಲ್ಲಿ ಪುರುಷನ ಸ್ಥಾನ ಗೌಣ. ಇಂದಿಗೂ ಕೇರಳ, ಕರ್ನಾಟಕದ ಮಂಗಳೂರು ಪ್ರದೇಶಗಳಲ್ಲಿ ಈ ಪದ್ಧತಿ ಗೋಚರಿಸುತ್ತದೆ. ಆದರೆ ಪುರುಷ ಮೇಲುಗೈ ಸಾಧಿಸಿದ ವೈದಿಕ ಸಮಾಜದಲ್ಲಿ ಪುರುಷಪ್ರಧಾನ ವ್ಯವಸ್ಥೆ ಬಲವಾಗಿ ಬೇರೂರಿದ್ದು ಕಂಡುಬರುತ್ತದೆ. ಯಾವಾಗ ಸಮಾಜದಲ್ಲಿ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಹಾಗೂ ರಾಜಕೀಯ ಪಲ್ಲಟಗಳು ಸ್ಥಿತ್ಯಂತರವಾಗ ತೋಡಗಿದವೋ ಆಗ ದ್ರಾವಿಡ ಸಂಸ್ಕೃತಿಯ ಮೇಲೆ ಆರ್ಯಸಂಸ್ಕೃತಿಯು ಬಂದೆರಗಿ ಕುಳಿತು ಕೊಂಡಿತು. ಆಗ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯರ ಸ್ಥಾನಮಾನಗಳು ಕುಸಿಯಲಾರಂಭಿಸಿದವು.

ನಮ್ಮ ಸಮಾಜ ವೇದಗಳ ಕಾಲದಿಂದ ಇಂದಿನವರೆಗೂ ಸ್ತ್ರೀಯಾದವಳು ಮಕ್ಕಳನ್ನು ಹೆರುವ ಯಂತ್ರವೆಂದು ಪರಿಭಾವಿಸಿದೆ. ಜೊತೆಗೆ ಗಂಡು ಸಂತಾನಕ್ಕೆ ಸಮಾಜ ನೀಡಿದ ಅಪೇಕ್ಷೆ, ಹಂಬಲ, ಸಂತಸ, ಹಾರೈಕೆ, ಬೇಡಿಕೆಗಳಿಗೆ ಕೊಟ್ಟ ಮಾನ್ಯತೆ ಸ್ತ್ರೀಸಂತಾನಕ್ಕೆ ಕೊಟ್ಟದ್ದು ನಮ್ಮ ಭಾರತೀಯ ಚರಿತ್ರೆಯಲ್ಲೇ ದಾಖಲಾಗಿಲ್ಲ. ಆದರೂ ಹೆಣ್ಣಿನ ಬದುಕಿನ ಆಶಾಕಿರಣವೆಂಬಂತೆ ಚಂಡಯ್ಯಮಲ್ಲಿದೇವಿಯರು ತಮ್ಮ ಮಗಳು ಸೋಮವ್ವೆಯನ್ನು "ಸುಪುತ್ರಿ ಕುಲದೀಪಕಿ" ಎಂದು ಕರೆದಿರುವುದು ಹೆಣ್ಣಿಗೆ ಸಿಕ್ಕ ತುಣುಕು ಗೌರವವನ್ನು ಪ್ರತಿನಿಧಿಸುತ್ತದೆ. ಚನ್ನರಾಯಪಟ್ಟಣದ ಶಾಸನವೊಂದು ಬೆಳ್ಳಪ್ಪನಾಯಕನ ಮಡದಿ ಚುಂಗವ್ವೆಯನ್ನು ಕುರಿತು ಹೀಗೆ ಹೇಳಿದೆ.

ಬಡವರ್ಗೆ ಕಲ್ಪವೃಕ್ಷಮನೆಡ
ರಡಸಿದವರ್ಗರತ್ನದಾಗರವಂ ತಾಂ
ಪಡೆದೀವ ತೆರದೆ ಚುಂಗವ್ವೆ
ಪಡೆದಳೆ....ರತ್ನಮೆನಿಪ ಗೌರಲಸುತೆಯಂ

ಈ ಮಾತುಗಳು ಎಲ್ಲೋ ಒಂದು ಕಡೆ ಅಪರೂಪಕ್ಕೆ ಹೆಣ್ಣಿಗೆ ಸಮಾಧಾನ ತರಿಸುವ ವಿಷಯಗಳಷ್ಟೆ ಆಗಿ ನಿಲ್ಲುತ್ತವೆ. ಪರಂಪಾರನುಗತವಾಗಿ ಸಾಗಿಬಂದ ಭಾರತೀಯ ಇತಿಹಾಸದಲ್ಲಿ ಸಾಹಿತ್ಯದ

ಬೆಳೆನಿಂತು ಕೊಯ್ಲು ಸಿದ್ಧವಾಗುವುದಕ್ಕೂ ಪೂರ್ವದಲ್ಲಿ ಶಾಸನೋಕ್ತ ಸಾಹಿತ್ಯದ ಆಧಾರಗಳಿಗೆ ಇತಿಹಾಸದಲ್ಲಿ ಹೆಚ್ಚಿನ ಪ್ರಾತಿನಿಧ್ಯವಿರುವುದು ಕಂಡುಬರುತ್ತದೆ. ಕಾರಣ ಅವುಗಳಿಗೆ ಅಷ್ಟು ಪುರಾತನ ಚರಿತ್ರೆಯಿರುವುದು ನಮ್ಮ ಗಮನಕ್ಕೆ ಬಾರದೇ ಇರಲಾರದು. ಇಂತಹ ಚರಿತ್ರೆಯ ಸೃಷ್ಟಿಯಿಂದಲೇ ನಮಗೆ ಹಿಂದೆ ಗತಿಸಿಹೋದ ಘಟನೆಗಳನ್ನು ಪುನಃ ಬೆಳಕಿಗೆ ತರಲು ಸಾಧ್ಯವಾಗುತ್ತಿದೆ. ಹೀಗೆ ರಚಿತವಾದ ಮಾನವ ಜನಾಂಗದ ಇತಿಹಾಸದಲ್ಲಿ ಹುದುಗಿ ಹೋದ ಹೆಣ್ಣಿನ ಚರಿತ್ರೆಯನ್ನು ಅಧ್ಯಯನ ಮಾಡುವುದು ತೀರಾ ಅಗತ್ಯದ ಸಂಗತಿಯೇ ಆಗಿದೆ. ಅನಾದಿಕಾಲದಿಂದಲೂ ಸ್ತ್ರೀಯರನ್ನು ಪ್ರತಿಯೊಂದು ಕ್ಷೇತ್ರಗಳಿಂದ ಹೊರಗುಳಿಸುವ ಯತ್ನಗಳೇ ನಡೆದಿವೆ. ಇವುಗಳಿಂದ ಶಾಸನಗಳೂ ಸಹ ಹೊರತಾಗಿಲ್ಲ. ಹೆಣ್ಣನ್ನು ಶೂದ್ರಳೆಂಬಂತೆ ಪರಿಭಾವಿಸಿ ಶೂದ್ರರಂತೆಯೇ ಕಾಣಲಾಗುತ್ತಿದೆ. ಶೂದ್ರರು ಹೇಗೆ ಶೋಷಿಸಲ್ಪಟ್ಟು ನಿರ್ಲಕ್ಷ್ಯಕ್ಕೆ ಗುರಿಯಗಿದ್ದಾರೋ ಅಂತೆಯೇ ಸ್ತ್ರೀಯರೂ ಸಹ ಪುರುಷ ಸಮಾಜದಲ್ಲಿ ಶೋಷಣೆಗೆ ಒಳಗಾಗಿದ್ದಾರೆ. ಶಾಸನಗಳಲ್ಲಿ ಅಲ್ಲೊಬ್ಬ ಇಲ್ಲೊಬ್ಬ ರಾಜನ ಪತ್ನಿಯರ ಉಲ್ಲೇಖ ಬರುತ್ತದೆಯಾದರೂ ಅವಳ ಪಾತ್ರ ಹೊರನೋಟಕ್ಕೆ ಮಾತ್ರ ಕಾಣಿಸಿಕೊಳ್ಳುತ್ತದೆ. ಒಳಗಿನ ಅವಳ ಕಾರ್ಯ ಚಟುವಟಿಕೆಗಳೆಲ್ಲ ಮೌನವಾಗಿ ಮಡುಗಟ್ಟಿ ನಿಂತಿರುತ್ತವೆ. ವಿರೋಧವೆಂಬಂತೆ ಅವಳ ಸಹಭಾಗಿತ್ವ ಕಂಡರೂ ಅದು ಪುರುಷ ನಿರ್ಮಿತ ಸಮಾಜ ಮುಂಜಾಗರೂಕತೆಯಿಂದ ಮಾಡಿದ ಹುನ್ನಾರವೆಂದು ಸ್ಪಷ್ಟವಾಗಿ ಭಾಸವಾಗುತ್ತದೆ.

ಕ್ರಿ.ಶ.ಸುಮಾರು ೯೦೦ರ ಶಾಸನದಲ್ಲಿ "ನಾಗಾರ್ಜುನಯ್ಯ ನಂದಿಂಗೆಯಬ್ಬೆಯರ ಮಗಳು ಸಾಮಿನಿರ್ಮಡಿ ಸರ್ವಶಾಸ್ತ್ರ ಪ್ರಸಿದ್ಧಿ" ಎಂಬ ಮಾತು ಇವಳೇ ಸಕಲಶಾಸ್ತ್ರಪಾರಂಗತಳಾದ ಶಾಸನದ ಮಹಿಳೆ ಎಂದು ತಿಳಿಸುತ್ತದೆ. "ಶ್ರೀ ಹರಿ ಅಥವಾ ಹರಸಿದ್ಧಿ" ಎಂಬ ಉಕ್ತಿ ಮೇಲಿನ ಮಾತಿಗೆ ಇಂಬುಕೊಡುತ್ತವೆ. ಸಾಮಂತನೊಬ್ಬನ ಮಡದಿ ಸಹಜ ಸರಸ್ವತಿ, ಚಕ್ರವರ್ತಿಯೊಬ್ಬನ ಪತ್ನಿ ಸಂಗೀತ ವಿದ್ಯಾಧರಿ, ಸಕಳ ಕಲಾಧರಿ, ಅಭಿನವ ಸರಸ್ವತಿ, ಪ್ರತಿಭಾ ಸರಸ್ವತಿ, ಹೊಯ್ಸಳ ವಿಷ್ಣುವರ್ಧನನ ಪತ್ನಿ ಶಾಂತಲೆ ನಾಟ್ಯ ಸರಸ್ವತಿಯಾಗಿದ್ದಳು. ಹೀಗೆ ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡರೂ ಕೆಲವೊಂದು ಕಲೆ, ನಾಟ್ಯ, ಸಂಗೀತ ಅಥವಾ ಇನ್ನಾವುದೋ ಪ್ರತಿಭೆಗೆ ಮಾತ್ರ ಮಿತಗೊಳಿಸಿರುವುದು ವ್ಯಕ್ತವಾಗುತ್ತದೆ. ಆದರೆ ಅಧಿಕಾರದ ಕೇಂದ್ರೀಕರಣವೆಲ್ಲ ಪುರುಷನ ಹಿಡಿತದಲ್ಲೆ ಭದ್ರವಾಗಿ ನೆಲೆಗೊಂಡಿರುತ್ತದೆ. ಇತಿಹಾಸದುದ್ದಕ್ಕೂ ಗಮನಿಸಿ ಆಯ್ದ ಮುತ್ತುಗಳಂತೆ ಮಹಿಳೆಯರ ಆಳ್ವಿಕೆಯ ಸಹಭಾಗಿತ್ವವನ್ನು ಗಮನಿಸಿದರೆ ಪುರುಷ ಅಧಿಕಾರದ ಎದುರು ಬಹಳ ವರ್ಷಗಳವರೆಗೆ ಮುಂದುವರೆಯುವುದು ದಾಖಲಾಗಿರುವ ಇತಿಹಾಸ ಲಭಿಸುವುದೇ ಕಷ್ಟಕರ ಸಂಗತಿಯಾಗಿದೆ. ಪುರುಷ ಸಮಾಜ ಹೆಣ್ಣಾದವಳ ಆಳ್ವಿಕೆಯನ್ನು ಸಹಿಸುವುದಿಲ್ಲ. ಅಧಿಕಾರವನ್ನು ಆಯ್ದು ತಿನ್ನುವ ಹದ್ದಿನಂತೆ ಸದಾ ಹೊಂಚು ಹಾಕುತ್ತಾ ಹುನ್ನಾರ ನಡೆಸುತ್ತಲೇ ಇರುತ್ತದೆ. ಬಹುತೇಕ ನೂರಕ್ಕೆ ೯೯% ರಷ್ಟು ಶಾಸನಗಳು ಸಂಪೂರ್ಣವಾಗಿ ಮಹಿಳೆಯರನ್ನು ನಿರ್ಲಕ್ಷಿಸಿವೆ. ಅಲ್ಲದೆ ಶಾಸನಗಳನ್ನು ಕೆತ್ತಿದ ರುವಾರಿಗಳು, ಶಿಲ್ಪಿಗಳು ಹಾಗೂ ಲಿಪಿಕಾರರು ಇವರಾರ ಹೆಸರುಗಳಲ್ಲೂ ಹೆಣ್ಣಿನ ಹೆಸರು

ಕಾಣಿಸದೆ ಎಲ್ಲವೂ ಪುರುಷ ನಿರ್ಮಿತವಾಗಿರುವುದು ಗೋಚರಿಸುತ್ತದೆ. ಜೊತೆಗೆ ರಾಜ್ಯವನ್ನು ಆಳುವ ರಾಜನೂ ಪುರುಷನೆ, ಸಮಾಜವೂ ಪುರುಷ ಪ್ರಧಾನವೇ ಆಗಿರುವುದು ಹಾಗಲುಕಾಯಿ ಮತ್ತು ಬೇವಿನಕಾಯಿಗಳ ಸಂಬಂಧ ಎಷ್ಟರ ಮಟ್ಟಿನದು ಎಂಬುದನ್ನು ಸೂಚಿಸುತ್ತದೆ.

ಅಧ್ಯಯನದ ಉದ್ದೇಶ

ನಮ್ಮ ಸಮಾಜ ನಿಂತನೀರಿನಂತೆ ಜಡವಾದುದಲ್ಲ. ಅದು ಕಾಲ ಬದಲಾದಂತೆ ಸಂದರ್ಭಕ್ಕೆ ಅನುಗುಣವಾಗಿ ಹೊಂದಿಕೊಂಡು ಚಲನಶೀಲವಾಗುತ್ತಲೇ ಸಾಗುತ್ತಿದೆ. ಇತಿಹಾಸವೆಂದರೆ ಗತಿಸಿದ ಘಟನೆಗಳ ಮೇಲೆ ಬೆಳಕು ಚಲ್ಲುವಂತದ್ದಾಗಿದೆ. ಪ್ರಸ್ತುತ ಇಂದಿನ ಸಮಾಜದಲ್ಲಿ ಅಧ್ಯಯನದ ಶಿಸ್ತುಗಳು ಹೊಸ–ಹೊಸ ಆಯಾಮವನ್ನು ಕಂಡು ಕೊಂಡು ಸೃಜನಶೀಲತೆಯನ್ನು ರೂಢಿಸಿಕೊಳ್ಳುತ್ತಿವೆ. ಶಾಸನಗಳನ್ನು ಕುರಿತು ಹಿಂದಿನ ತಜ್ಞರು ಅರ್ಥೈಸಿದ ರೀತಿ ದೃಷ್ಟಿಕೋನಗಳೆಲ್ಲ ಆಯಾಯಕಾಲಕ್ಕೆ ತಕ್ಕಂತೆ ಪ್ರಸ್ತುತವಾಗಿರುತ್ತವೆ. ಅದರಂತೆಯೇ "ಹಾಡು ಹಳೇಯದಾದರೇನು ಭಾವನವನವೀನ" ವೆಂಬ ಮಾತಿನಂತೆ ಸಮಾಜದಲ್ಲಿನ ವ್ಯಕ್ತಿ ವಿಭಿನ್ನತೆಗಳಿಂದ ಒಬ್ಬರು ಮತ್ತೊಬ್ಬರಿಗಿಂತ ಭಿನ್ನವಾಗಿ ಅರ್ಥೈಸುತ್ತಾರೆ. ಹೀಗೆ ಅರ್ಥೈಸುವಾಗ ಎಷ್ಟೋ ಮರೆಮಾಚಿದ ಹೊಸ ಸಂಗತಿಗಳು ಬೆಳಕಿಗೆ ಬರುತ್ತವೆ. ಸಮಾಜದಲ್ಲಿ ಕಂಡುಬರುವ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಮೊದಲಾದ ಕ್ಷೇತ್ರಗಳಲ್ಲಿ ಸ್ತ್ರೀಯರಿಗೆ ದೊರಕಿಸಿ ಕೊಟ್ಟಿರುವ ಸ್ಥಾನಮಾನಗಳು, ರೀತಿ, ನೀತಿಗಳನ್ನು ಅಧ್ಯಯನಕ್ಕೆ ತೊಡಗಿಸಿಕೊಂಡರೆ ಪುರುಷ ದೌರ್ಜನ್ಯದ ಒಂದೊಂದು ಎಳೆಗಳು ಬಿಚ್ಚಿಕೊಳ್ಳುತ್ತವೆ. ಸಮಾಜ ಮಹಿಳೆಯರ ಕಡೆಗಣಿಸಿ ಅವರಿಗೆ ಕೊಟ್ಟ ಕಠೋರ ಹಿಂಸೆಗಳೆಲ್ಲ ಅಧ್ಯಯನದ ಸಂದರ್ಭದಲ್ಲಿ ಮೈ ನವಿರೇಳಿಸುವಂತಹ ಕಹಿ ಘಟನೆಗಳೇ ಆಗಿವೆ. ಶಾಸನಗಳಲ್ಲಿ ಗೌಣವಾಗಿಸಿರುವ ಸ್ತ್ರೀಪಾತ್ರಗಳನ್ನು ಗುರುತಿಸಿ ಅವುಗಳ ಅಧ್ಯಯನ ನಡೆಸಬೇಕಾಗಿದೆ. ಪುರುಷ ಸಮಾಜ ಸ್ತ್ರೀಯರ ಅಂದಿನಿಂದ ಇಂದಿನವರೆಗೂ ಹೆಣ್ಣು, ಹೊನ್ನು, ಮಣ್ಣುಗಳೆಂಬ ವಸ್ತುವಿನೋಪಾದಿಯಲ್ಲಿ ಭೋಗದ ವಸ್ತುವನ್ನಾಗಿ ತನಗೆ ಬೇಕೆಂದೆಡೆ ಬಳಸಿಕೊಂಡು ಬೇಡವೆಂದಾಗ ತ್ಯಾಜ್ಯವಸ್ತುವಿನಂತೆ ಮೂಲೆಗುಂಪು ಮಾಡುತ್ತಾ ಬಂದಿದೆ. ಅಲ್ಲದೆ ಅವಳ ತ್ಯಾಗ, ಸಹನೆ, ಪರೋಪಕಾರದ ಗುಣಗಳನ್ನು ಅವಳ ದೌರ್ಬಲ್ಯಗಳೆಂದು ಭಾವಿಸಿದೆ. ಅವಳ ಸಾಹಸ, ಪ್ರತಿಭೆ, ಚತುರತೆಯ ಗುಣಗಳನ್ನು ನಿರಾಕರಿಸಿ ಪರಂಪರೆಯೊಂದರ ಮಹಿಳೆಯರ ಗೈರುಹಾಜರಿ ಪರಂಪರೆಯಲ್ಲಿ ದಾಖಲಾಗಿರುವ ಕೆಳಮಟ್ಟದ ಸಾಧನೆ ಮೊದಲಾದ ಎಲ್ಲ ಸಂಗತಿಗಳನ್ನು ಗಮನಿಸಿ ಸ್ತ್ರೀವಾದಿ ಚಿಂತಕಿಯಾದ ವರ್ಜೀನಿಯಾ ವುಲ್ಫ್ ಅವರು 'ದ ರೂಂ ಆಫ್ ಒನ್ಸ್ ಓನ್' ಕೃತಿಯಲ್ಲಿ "ಮಹಿಳೆಯರ ಸಾಂಸ್ಕೃತಿಕ ಬಡತನವು ಅವರ ಭೌತಿಕ ದಾರಿದ್ರ್ಯಕ್ಕೆ ಸಂಬಂಧಿಸಿದ್ದು" ಎಂದು ನಿರೂಪಿಸುತ್ತಾರೆ.

ಪುರುಷ ಪ್ರಾಧಾನ್ಯತೆಯಲ್ಲಿ ಸ್ತ್ರೀ ಪುರುಷಾಧಿಪತ್ಯದ ಶೋಷಣೆ ರಕ್ಷಣೆಗಳೆಂಬ ಎರಡೂ ನೆಲೆಗಳಿಂದಲೂ ಅಸಮಾನತೆಗೆ ಒಳಗಾಗಿದ್ದಾಳೆ. ಅಂತೆಯೇ ಶಾಸನಗಳಲ್ಲಿಯೂ ಕೂಡ ಲಕ್ಷ್ಯನಿರ್ಲಕ್ಷ್ಯಗಳೆಂಬ ಎರಡೂ ಅಸಮಾನತೆಗಳಿಗೂ ಬಲಿಯಾಗಿದ್ದಾಳೆ.

ಪ್ರಸ್ತುತ ಅಧ್ಯಯನಕ್ಕೊಳಪಡಿಸಿಕೊಂಡ ಚಿತ್ರದುರ್ಗ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ ಈ ಜಿಲ್ಲೆಯನ್ನಾಳಿದ ಅರಸರುಗಳ ಕಾಲಾವಧಿಯಲ್ಲಿ ಚಿತ್ರಿತಗೊಂಡ ಸ್ತ್ರೀಯರ ಜೀವನದ ವಿವಿಧ ಮಜಲುಗಳು ಬೆಳಕಿಗೆ ಬರುತ್ತವೆ. ಪ್ರತಿಯೊಂದು ವಿಷಯದ ಅಧ್ಯಯನಕ್ಕೂ ಗುರಿ ಮತ್ತು ಉದ್ದೇಶಗಳಿರಬೇಕು. ನಿರ್ಧಿಷ್ಟ ಗುರಿ ಉದ್ದೇಶಗಳಿಲ್ಲದ ಅಧ್ಯಯನ "ದಿಕ್ಸೂಚಿಯಿಲ್ಲದ ನಾವಿಕನಂತಾಗುತ್ತದೆ." ಲಭ್ಯವಾಗುವ ಶಾಸನಗಳ ಆಧಾರದ ಮೇಲೆ ಸ್ತ್ರೀಯನ್ನು ಹೇಗೆ ರಾಜಕೀಯವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಶೋಷಿಸಲಾಗುತ್ತಿದೆ ಎಂಬುದನ್ನು ಕಂಡುಕೊಳ್ಳಬಹುದಾಗಿದೆ.

೧. ಶಾಸನದಿಂದ ತಿಳಿದು ಬರುವ ಮಾಹಿತಿಯ ಆಧಾರದ ಮೇಲೆ ಪುರುಷ ಸಮಾಜದಲ್ಲಿ ಅವಳಿಗೆ ದೊರೆತ ಗೌರವ ಸ್ಥಾನಮಾನಗಳು ಶಾಸನಗಳಲ್ಲಿ ಅವಳ ಅನುಪಸ್ಥಿತಿ ಮೊದಲಾದ ಸಂಗತಿಗಳನ್ನು ಅಧ್ಯಯನ ಮಾಡುವುದು.

೨. ರಾಜಕೀಯ ಸಹಭಾಗಿತ್ವ, ಆರ್ಥಿಕ ಸಹಭಾಗಿತ್ವ ಹಾಗೂ ಧಾರ್ಮಿಕ ಸಹಭಾಗಿತ್ವ, ಸಾಂಸ್ಕೃತಿಕ ಸಹಭಾಗಿತ್ವದಲ್ಲಿ ಹೇಗೆ ಮಹಿಳೆಯನ್ನು ಹೊರಗಿಟ್ಟು ಪುರುಷ ಸಮಾಜ ಆಳ್ವಿಕೆ ನಡೆಸಿಕೊಂಡು ಬಂದಿದೆ ಎಂಬುದನ್ನು ಕುರಿತು ಅಧ್ಯಯನ ಮಾಡುವುದು.

೩. ಸಮಾಜದಲ್ಲಿ ಸ್ತ್ರೀಯನ್ನು ಶೂದ್ರಲೋಪಾದಿಯಲ್ಲಿ ಕಂಡು ಅವಳನ್ನು ಅಸ್ಪೃಶ್ಯಳೆಂಬಂತೆ ಪರಿಭಾವಿಸಿ ನೋಡಲಾಗುತ್ತಿದೆ. ಅಲ್ಲದೆ ಶಾಸನಗಳಲ್ಲಿಯೂ ಸಹ ಮಹಿಳೆಯರನ್ನು ನಿರ್ಲಕ್ಷಿಸಲಾಗಿದೆ. ಅವರ ಸಂಸ್ಕೃತಿಗೆ ಸಂಬಂಧಿಸಿದ ವಿಷಯಗಳು ಶಾಸನಗಳಲ್ಲಿ ಸಿಗುವುದು ತುಣುಕು ರೂಪಗಳಲ್ಲಿ ಅಲ್ಲೊಂದು ಇಲ್ಲೊಂದು ಲಭಿಸುತ್ತವೆ. ಇವುಗಳನ್ನು ಆಯ್ದು ಅವುಗಳ ನಿಜ ಅರ್ಥ, ಪರಸ್ಪರ ಸಮಾಜದಲ್ಲಿ ಗಂಡು-ಹೆಣ್ಣುಗಳ ಸಂಬಂಧ, ಸ್ತ್ರೀಯರ ಬದುಕಿಗೆ ಸಂಬಂಧಿಸಿದ ಅವಳ ಸಂವೇದನೆಯನ್ನು ಅರ್ಥೈಸಿಕೊಂಡು ಸಂಯೋಜಕ ಪ್ರತಿಭೆಯಲ್ಲಿ ಒಟ್ಟುಗೂಡಿಸುವುದು ಅಧ್ಯಯನದ ಉದ್ದೇಶವಾಗಿದೆ.

ಶಾಸನಗಳಲ್ಲಿ ಪುರುಷರನ್ನು ಚಿತ್ರಿಸಿದಂತೆ ಸ್ತ್ರೀಯರನ್ನೇಕೆ ಚಿತ್ರಿಸಿಲ್ಲ? ಅವಳ ಸ್ಥಾನವನ್ನೇಕೆ ಗೌಣಗೊಳಿಸಲಾಗಿದೆ. ಮಾನವ ಜನಾಂಗದ ಸೃಷ್ಟಿಯ ಅಭ್ಯುದಯಕ್ಕೆ ಕಾರಣ ಕರ್ತಳಾದ ಹೆಣ್ಣಿನ ವಿಷಯದಲ್ಲೇಕೆ ಶಾಸನ ಕರ್ತೃಗಳು ಅಸಹಭಾಗಿತ್ವಗೈದಿದ್ದಾರೆ. ಇದರ ಹಿಂದಿರುವ ಪುರುಷ ಧೋರಣೆಯ ಉದ್ದೇಶ, ಹೆಣ್ಣಿನ ವಿಷಯದಲ್ಲಿ ಪುರುಷ ಹೊಂದಿರುವ ಒಲವು-ನಿಲುವುಗಳೇನು? ಹೆಣ್ಣೆಂದರೆ ಗಂಡಿಗೆ ಬರೀ ಅವನ ಆಸೆಗಳನ್ನು ಈಡೇರಿಸಿಕೊಳ್ಳುವ ಆಟಿಕೆಯ ಬೊಂಬೆಯೇ? ಇವೇ ಮೊದಲಾದ ಅಂಶಗಳು ಅಧ್ಯಯನದ ಉದ್ದೇಶಗಳಾಗಿವೆ. ಸ್ತ್ರೀಯರ ಸಮಸ್ಯೆಗಳು ನಮ್ಮ ಸಾಮಾಜಿಕ ರಚನೆಯಲ್ಲಿ ತೀರಾ ಆಳದ ಪದರದಲ್ಲಿ ಹುದುಗಿಕೊಂಡಿವೆ. ಅವುಗಳನ್ನು ಶೋಧಿಸಿ ಹೊರತೆಗೆಯುವ ಅಗತ್ಯವಿದೆ.

ಸಮಾಜ ಹೆಣ್ಣಿನ ಮೇಲೆ ನಡೆಸುತ್ತಾ ಬಂದಿರುವ ಲಿಂಗತಾರತಮ್ಯಗಳನ್ನು ಗುರುತಿಸುವ ಪ್ರಯತ್ನ ಇಲ್ಲಿಯದಾಗಿದೆ.

ಅಧ್ಯಯನದ ವ್ಯಾಪ್ತಿ

ಅಧ್ಯಯನವನ್ನು ಕೈಗೊಳ್ಳುವಾಗ ಅಧ್ಯಯನದ ವ್ಯಾಪ್ತಿ ಅಥವಾ ಹರವನ್ನು ಸ್ಪಷ್ಟವಾಗಿ ನಿರ್ಧರಿಸಬೇಕಾಗಿರುತ್ತದೆ. ಪ್ರಸ್ತುತ ಅಧ್ಯಯನವು ಭೌಗೋಳಿಕವಾಗಿ ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಆರು ತಾಲ್ಲೂಕುಗಳ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದ್ದು ರೈಸ್ ಅವರು ಸಂಪಾದಿಸಿರುವ ಶಾಸನ ಸಂಪುಟ ಮತ್ತು ಇತ್ತೀಚೆಗೆ ಬೆಳಕಿಗೆ ಬಂದ ಶಾಸನಗಳನ್ನು ಕುರಿತು ಅಧ್ಯಯನ ಕೈಗೊಳ್ಳಲಾಗಿದೆ. ಕಾಲದ ದೃಷ್ಟಿಯಿಂದ ಈ ಶಾಸನಗಳು ೯, ೧೦ನೇ ಶತಮಾನದಿಂದ ೧೮ನೆಯ ಶತಮಾನದವುಗಳಾಗಿವೆ. ಅವುಗಳಲ್ಲಿ ಮಹಿಳೆಯರ ಚಿತ್ರಣಗಳನ್ನೊಳಗೊಂಡ ಶಾಸನಗಳ ಸಂಖ್ಯೆ ತೀರಾ ವಿರಳವಾಗಿದೆ. ಸುಮಾರು ೭೦ರಿಂದ ೮೦ ಶಾಸನಗಳಲ್ಲಿ ಮಹಿಳೆಯರ ಉಲ್ಲೇಖವಿರುವ ತುಂಡು-ತುಂಡು ಶಾಸನಗಳು ದೊರೆಯುತ್ತವೆ. ಈ ಶಾಸನಗಳ ಮೂಲಕ ಮಹಿಳೆಯರನ್ನು ಪುರುಷಪ್ರಧಾನ ಸಮಾಜ ಕಂಡು ಕಾಣಿಸಿದ ರೀತಿ, ಗಂಡಿನ ದೌರ್ಜನ್ಯ, ದಬ್ಬಾಳಿಕೆ, ಹೆಣ್ಣಿನ ಸ್ವಾತಂತ್ರ್ಯಹರಣ, ಪುರುಷ ಸ್ವಾರ್ಥಕ್ಕೆ ಬಲಿಯಾದ ಹೆಣ್ಣುಗಳ ಧಾರುಣಸ್ಥಿತಿ ಮೊದಲಾದವುಗಳ ಕುರಿತಾದ ಅಧ್ಯಯನವನ್ನು "ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ" ಎಂಬ ಕಿರುಪ್ರಬಂಧದ ವ್ಯಾಪ್ತಿಯಲ್ಲಿ ಚರ್ಚಿಸಲಾಗಿದೆ. ಈ ಅಧ್ಯಯನದಲ್ಲಿ ಶಾಸನದ ದಾಖಲೆಗಳನ್ನು ಸಂಗ್ರಹಿಸಿ ಕೂಲಂಕಷವಾಗಿ ಚರ್ಚಿಸಲಾಗಿದೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಶಾಸನಗಳು, ಸಾಹಿತ್ಯಿಕ ಕೃತಿಗಳು, ಮೌಖಿಕ ಸಾಹಿತ್ಯವನ್ನು ಅನುಲಕ್ಷಿಸಿ ಅಧ್ಯಯನ ಮಾಡಲಾಗಿದೆ. ಮೇಲಿನ ಅಧ್ಯಯನಕ್ಕೆ ಸಂಬಂಧಿಸಿದಂತೆ ಕಾರ್ಯಕ್ಷೇತ್ರ ಕೈಗೊಂಡು ಸಂಗ್ರಹಿಸಿದ ಮಾಹಿತಿಯನ್ನು ಅನುಲಕ್ಷಿಸಿ ಅಧ್ಯಯನ ನಡೆಸಲಾಗಿದೆ. ಸಂಗ್ರಹಿಸಿದ ಎಲ್ಲ ಮಾಹಿತಿಯನ್ನು ತುಲನಾತ್ಮಕವಾಗಿ ವಿವೇಚಿಸಿ ನಂತರ ಪ್ರಬಂಧ ರಚನೆಯಲ್ಲಿ ಬಳಸಲಾಗಿದೆ.

ಅಧ್ಯಯನದ ಸ್ವರೂಪ

ಈ ನಿಬಂಧವನ್ನು ಒಟ್ಟು ಆರು ಅಧ್ಯಾಯಗಳಲ್ಲಿ ರೂಪಿಸಲಾಗಿದೆ. ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ವಿಧಾನ ಹಾಗೂ ಈವರೆಗಿನ ಅಧ್ಯಯನದ ಸಮೀಕ್ಷೆಯನ್ನೊಳಗೊಂಡಿರುತ್ತದೆ.

ಎರಡನೇ ಅಧ್ಯಾಯದಲ್ಲಿ ಶಾಸನಗಳಲ್ಲಿ ಸ್ತ್ರೀಯರನ್ನು ಕುರಿತು ಅರಸನ ಪತ್ನಿಯರಾದ ರಾಣಿಯರು ಅಧಿಕಾರ ವರ್ಗದ ಸ್ತ್ರೀಯರಾಗಿ ಮಾಂಡಳೀಕ, ಸಾಮಂತ ಸ್ತ್ರೀಯರು, ಶಾಪಾಶಯಗಳಲ್ಲಿ ಸ್ತ್ರೀ ಸಾಮಾನ್ಯ ಬೇಡಕುಲದ ಸ್ತ್ರೀಯಾಗಿ ಚಿತ್ರದುರ್ಗದ ವೀರ ವನಿತೆಯಾದ ಓಬ್ಬವಳ ಸಾಹಸ,

ಹೆಳವನ ಕಟ್ಟೆ ಗಿರಿಯಮ್ಮನ ಸಾಧನೆ ಕುರಿತಾದ ಚಿತ್ರಣಗಳನ್ನು ಕಟ್ಟಿಕೊಡಲಾಗಿದೆ. ಮೂರನೇ ಅಧ್ಯಾಯದಲ್ಲಿ ಅಂಗಭೋಗ ಮತ್ತು ರಂಗಭೋಗದ ಸ್ತ್ರೀಯರನ್ನು ಕುರಿತಾದ ಕಂಬದಸೂಳೆಯರು, ಮಾಡದಸೂಳೆಯರು, ಚಾಮರದಸೂಳೆಯರು, ಪಾತ್ರದಸೂಳೆಯರು, ದೇವಸೂಳೆ, ಸಮಾಜ ಸೊಳೆ, ಪಾವುಳದವರು ಎಂದು ವಿಭಾಗಿಸಿನೋಡಿ ಆರಂಭದಲ್ಲಿ ಸಮಾಜದಲ್ಲಿ ಅಂಗಭೋಗ ರಂಗಭೋಗದ ಸೂಳೆಯರಿಗಿದ್ದ ಸ್ಥಾನಮಾನ, ಬೆಲೆ, ಗೌರವಗಳು ವ್ಯಾಪಾರೀಕರಣಗೊಂಡು ಬಸವಿ ಪದ್ಧತಿ, ದೇವದಾಸಿ ಪದ್ಧತಿಗಳಿಗೆ ದಾರಿಮಾಡಿಕೊಟ್ಟ ಪರಿಯನ್ನು ಕುರಿತು ಚರ್ಚಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಮಾಸ್ತಿಕಲ್ಲುಗಳಲ್ಲಿ ಧ್ವನಿ, ನೋವು, ಸಂಕಟಗಳು, ಬಹುಪತ್ನಿತ್ವ, ಪೆಣ್ಬುಯಲ್‌ಗೆ ಬಲಿಯಾದ ಸ್ತ್ರೀಯರ ಆಕ್ರಂದನವನ್ನು ಚರ್ಚಿಸಲಾಗಿದೆ. ಐದನೇ ಅಧ್ಯಾಯದಲ್ಲಿ ಚಿತ್ರದುರ್ಗ ಜಿಲ್ಲೆಯ ಜನಪದ ಕಥನ ಗೀತೆಗಳಲ್ಲಿ ಮಹಾಸತಿ ಆಚರಣೆ ಮತ್ತು ಸ್ತ್ರೀಬಲಿದಾನ, ಸಾಮಾಜಿಕ ಕಾರ್ಯಗಳ ಹೆಸರಿನಲ್ಲಿ ಕೆರೆಗಳಿಗೆ ಬಲಿಯಾದ ಹೆಣ್ಣುಗಳ ದುರಂತ, ಪುರುಷನ ಶಂಕೆಗೆ ಬಲಿಯಾದ ಹೆಣ್ಣಿನ ಶೀಲ, ಪಾವಿತ್ರ್ಯತೆಯ ಸತ್ವದ ಶೋಧ ಇವೆಲ್ಲವುಗಳನ್ನು ಕುರಿತು ನಿರೂಪಿಸಲಾಗಿದೆ. ಆರನೇ ಅಧ್ಯಯದಲ್ಲಿ ಒಟ್ಟಾರೆಯಾಗಿ ಕಿರುಪ್ರಬಂಧದಲ್ಲಿ ಕಂಡುಕೊಂಡ ಫಲಿತಗಳನ್ನು ಸಮಾರೋಪದಲ್ಲಿ ಚರ್ಚಿಸಲಾಗಿದೆ.

ಅಧ್ಯಯನದ ವಿಧಾನ

ಈ ಅಧ್ಯಯನ ವಿಧಾನವು ಕಾಲದ ಗರ್ಭದಲ್ಲಿ ಹುದುಗಿ ಹೋದ ಪುರುಷ ವ್ಯವಸ್ಥೆಯ ಒಳಗಡೆ ಸಿಕ್ಕು ನಲುಗುತ್ತಿರುವ ಸ್ತ್ರೀಯರ ಚಿತ್ರಣವನ್ನೊಳಗೊಂಡ ಸ್ತ್ರೀವಾದಿ ಅಧ್ಯಯನ ವಿಧಾನವನ್ನೊಳ ಗೊಂಡಿದೆ. ಈ ವಿಧಾನವು ಪ್ರಸ್ತುತ ನಮ್ಮ ಸಮಕಾಲೀನ ಸಮಾಜದ ಅರಿವನ ನೆಲೆಯಲ್ಲಿ ಸಾಗಬಹುದಾದ ಅಧ್ಯಯನದ ಶಿಸ್ತಾಗಿದೆ. ಈ ಅಧ್ಯಯನವನ್ನು ಕನ್ನಡ ವಿಶ್ವವಿದ್ಯಾಲಯದ ಗ್ರಂಥಾಲಯ, ಚಿತ್ರದುರ್ಗದ ಕೇಂದ್ರ ಗ್ರಂಥಾಲಯಗಳಿಗೆ ಭೇಟಿ ನೀಡಿ ಮಾರ್ಗದರ್ಶಕರ ಸಲಹೆ, ಕ್ಷೇತ್ರಕಾರ್ಯದಿಂದ ಸಂಗ್ರಹಿಸಿದ ಮಾಹಿತಿ, ಆಕರಗ್ರಂಥಗಳ ಸಹಾಯದಿಂದ ಕೈಗೊಳ್ಳಲಾಗಿದೆ.

ಅಧ್ಯಯನ ಸಮೀಕ್ಷೆ

ಚಿತ್ರದುರ್ಗ ಜಿಲ್ಲೆಯಲ್ಲಿ ಕಂಡು ಬರುವ ನಾಯಕರು, ಕಾಡುಗೊಲ್ಲರು, ಪಾಳೇಗಾರರು, ಬೇಡಜನಾಂಗದವರು ಮೊದಲಾದ ಜನಾಂಗದವರನ್ನು ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ ಮತ್ತು ನಡೆಯುತ್ತಿವೆ. ಆದರೆ ಸ್ತ್ರೀಯರನ್ನು ಕುರಿತಾದ ಅಧ್ಯಯನಗಳನ್ನು ಗಮನಿಸಿದರೆ ಕಮಲಾಹಂಪನಾ ಅವರು ವೀರವನಿತೆ ಓಬವ್ವ ಕೃತಿಯನ್ನು ೧೯೭೧ರಲ್ಲಿ ರಚಿಸಿದ್ದಾರೆ. ೧೯೭೪ರಲ್ಲಿ ಭಾರತದ ಧೀರ ಮಹಿಳೆ ಚಿತ್ರದುರ್ಗದ ಒನಕ್ಕೆ ಓಬವ್ವ ಕೃತಿಯನ್ನು ಎ.ಡಿ. ಕೃಷ್ಣಯ್ಯ ಸಂಪದಿಸಿದ್ದಾರೆ. ೧೯೭೦ರಲ್ಲಿ Bharatada Dheera Mahile chitradurgada onake obavva (A.D. Krishnaiah) The volour lady onake obavva and the two Glorious women (G.n. Harish kumar Gowda)

೨೦೦೧ರಲ್ಲಿ ವೀರವನಿತೆ ಓಬವ್ವ ಎಂಬ ಐತಿಹಾಸಿಕ ಕಾದಂಬರಿಯನ್ನು ಬಿ.ಎಲ್. ವೇಣು ರಚಿಸಿದ್ದಾರೆ. ಚಿತ್ರದುರ್ಗದ ಒನಕ್ಕೆ ಓಬವ್ವ: ಚಾರಿತ್ರಿಕ ವಿವೇಚನೆ ಕೃತಿಯನ್ನು ಪ್ರೊ. ಲಕ್ಷ್ಮಣ್ ತೆಲಗಾವಿ ಅವರು ರಚಿಸಿದ್ದಾರೆ. ಸ್ವಲ್ಪ ಮಟ್ಟಿಗೆ ಪ್ರೊ. ರಾಜಶೇಖರಪ್ಪ ಅವರು ತಮ್ಮ ಇತಿಹಾಸ ಕಥನ ಪುಸ್ತಕದಲ್ಲಿ ಹೆಳವನಕಟ್ಟೆ ಗಿರಿಯಮ್ಮನ ಅಧ್ಯಯನದ ಮೇಲೆ ಬೆಳಕನ್ನು ಚಲ್ಲುವ ಪ್ರಯತ್ನ ಮಾಡಿದ್ದಾರೆ. ಉಳಿದಂತೆ ಒಬವ್ವಳನ್ನು ಹೊರತು ಪಡಿಸಿ ಮಹಿಳೆಯರನ್ನು ಕುರಿತಾದ ಅಧ್ಯಯನಗಳು ಇನ್ನು ಸಾಕಷ್ಟು ನಡೆಯಬೇಕಿದೆ. ಪ್ರಸ್ತುತ ಅಧ್ಯಯನವು ಶಾಸನಗಳಲ್ಲಿ ಚಿತ್ರಿತವಾಗಿರುವ ಸ್ತ್ರೀಯರನ್ನು ಕುರಿತದ್ದಾಗಿದೆ.

ಅಧ್ಯಾಯ ಎರಡು

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಸ್ತ್ರೀಯರು

೨.೧. ರಾಣಿಯರು

೨.೨. ಅಧಿಕಾರಿವರ್ಗದ ಸ್ತ್ರೀಯರಾಗಿ
ಮಾಂಡಳೀಕ, ಸಾಮಂತ ಸ್ತ್ರೀಯರು

೨.೩. ಸಾಮಂತರ ಆಳ್ವಿಕೆಯಲ್ಲಿ ಸ್ತ್ರೀಯರು

೨.೪. ಶಾಪಾಶಯಗಳಲ್ಲಿ ಸ್ತ್ರೀಯರು

೨.೫. ಸಾಮಾನ್ಯ ವರ್ಗದ ಸ್ತ್ರೀಯರು

೨.೬. ಸಾಮಾನ್ಯ ವರ್ಗದ ಮಹಿಳೆಯಾಗಿ ಓಬವ್ವ

೨.೭. ಸಾಮಾನ್ಯ ವರ್ಗದ ಸ್ತ್ರೀಯಾಗಿ ಹೆಳವನಕಟ್ಟೆ ಗಿರಿಯಮ್ಮ

ಅಧ್ಯಾಯ ಎರಡು

ಚಿತ್ರದುರ್ಗ ಜಿಲ್ಲೆಯ ಶಾಸನಗಳಲ್ಲಿ ಸ್ತ್ರೀಯರು

ಮಾನವ ಜನಾಂಗದ ಇತಿಹಾಸದಲ್ಲಿ ಕುಟುಂಬ ವ್ಯವಸ್ಥೆ ರಚನೆಯಾಗದ ಆದಿಮಾನವನ ಸಂಸ್ಕೃತಿಯನ್ನು ಅವಲೋಕಿಸಿದಾಗ ಅಲ್ಲಿ ಲಿಂಗತಾರತಮ್ಯತೆ ಕಂಡುಬರುವುದಿಲ್ಲ. ಸು.ಕ್ರಿ.ಪೂ. ೬ ಸಾವಿರ ವರ್ಷಗಳ ಪೂರ್ವದ ಚಿತ್ರವೊಂದು ಚೀನಾದಲ್ಲಿ ದೊರೆತಿದೆ. ಅದರಲ್ಲಿ ಬೇಟೆಯಾಡುವ ಗಂಡಸು, ಮಗುವಿನೊಂದಿಗೆ ನೆಲ ಅಗಿಯುವ ಹೆಂಗಸು, ನೃತ್ಯದ ಚಿತ್ರವಿದೆ. ಇದನ್ನು ಗಮನಿಸಿದರೆ ಸ್ತ್ರೀ-ಪುರಷರೆಂಬ ಭಿನ್ನತೆ ಇಲ್ಲದೆ ಪತಿ-ಪತ್ನಿಯರು ಸಮಾನವಾಗಿ ತಮ್ಮ ಜೀವನ ನಿರ್ವಹಣೆಯನ್ನು ನಡೆಸುತ್ತಿದ್ದರೆನ್ನಿಸುತ್ತದೆ.

ಮನುಕುಲ ಹುಟ್ಟಿ ಸುಮಾರು ಶತಮಾನಗಳವರೆಗೂ ಸ್ತ್ರೀ ಪ್ರಧಾನ್ಯತೆಯೇ ಕಂಡುಬರುತ್ತದೆ. ಆದಿಸಂಸ್ಕೃತಿಯಲ್ಲಿಯೂ ಸ್ತ್ರೀ ಅದ್ವಿತಿಯಳಾಗಿಯೇ ತನ್ನ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದ್ದಾಳೆ. ಮನುಕುಲ ಮುಂದುವರಿದಂತೆ ಆರ್ಯ ಸಂಸ್ಕೃತಿಯು ಆದಿ ಸಂಸ್ಕೃತಿಯ ಮೇಲೆ ಬಂದೆರಗಿದಾಗ ಸಮಾಜದಲ್ಲಿ ಉಂಟಾದ ಸಾಂಸ್ಕೃತಿಕ ಸ್ಥಿತ್ಯಂತರಗಳಿಂದಾಗಿ ಕುಟುಂಬಗಳು ಪಲ್ಲಟಗೊಂಡವು. ಆಗ ಮಾತೃಮೂಲೀಯ ಕುಟುಂಬ ವ್ಯವಸ್ಥೆಗಳು ಕ್ಷೀಣಿಸುತ್ತಾ ಪುರುಷ ಮೇಲುಗೈ ಸಾಧಿಸಿ ಸ್ತ್ರೀಯನ್ನು ತನ್ನ ಅಧೀನಳನ್ನಾಗಿಸಲು ಪ್ರಾರಂಭಿಸಿದನು.

ಸಮಾಜದಲ್ಲಿ ಪುರುಷ ಪ್ರಧಾನ್ಯತೆ ಭದ್ರವಾಗಿ ನೆಲೆಯೂರಿದಂದಿನಿಂದ ಇಂದಿನವರೆಗೂ ಗಂಡು ಶ್ರೇಷ್ಠ ಸ್ತ್ರೀ ಕನಿಷ್ಠವೆಂಬ ಭಾವನೆಗಳು ಸಮಾಜದಲ್ಲಿ ಒಂದಿಲ್ಲೊಂದು ತೆರನಾಗಿ ಕಾಣಿಸುತ್ತಲೇ ಬಂದಿವೆ. ಪ್ರಾಚೀನ ಭಾರತದಲ್ಲಿ ಅದರಲ್ಲೂ ವೇದಗಳ ಕಾಲದಲ್ಲಿ ಸ್ತ್ರೀಯರು ಪುರುಷನಷ್ಟೇ ಸ್ವಾತಂತ್ರರಾಗಿದ್ದರು."[೧] ಅಂದಿನ ಸ್ತ್ರೀಯರು ವಿವಾಹ, ಶಿಕ್ಷಣ, ಆಸ್ತಿಯ ಹಕ್ಕು, ಕೃಷಿ ಉತ್ಪಾದನೆ, ಧಾರ್ಮಿಕ ವಿಧಿ ವಿಧಾನಗಳಲ್ಲಿ ಪುರುಷನಿಗೆ ಸಮಾನವಾಗಿ ಕಾರ್ಯನಿರ್ವಹಿಸುತ್ತಿದ್ದರು. ಶತಪಥ ಬ್ರಾಹ್ಮಣವು "ಪತ್ನಿಯಿಲ್ಲದ ಪುರುಷ ಅಪರಿಪೂರ್ಣ ವ್ಯಕ್ತಿ"[೨] ಎಂದು ತಿಳಿಸುತ್ತದೆ. ಅಪಾರ ಪಾಂಡಿತ್ಯ ಉಳ್ಳ ಸ್ತ್ರೀಯರಾದ ಲೋಪಮುದ್ರಾ ಅಪಲಾ,

ವಿಶ್ವಾವರ, ಘೋಷಾ, ಸಿಕತಾ, ನಿವಾವರಿ, ಇಂದ್ರಾಣಿ, ಸುಲಭಾ, ಮೈತ್ರೇಯಿ, ಸಾಸ್ವತಿ, ಮೊದಲಾದವರು ಶಿಕ್ಷಣ ಪಡೆದ ವಿದ್ವನ್ಮಣಿಗಳಾಗಿದ್ದರು. ವಿವಾಹ ಮತ್ತು ಕೌಟುಂಬಿಕ ವಿಚಾರಕ್ಕೆ ಸಂಬಂಧಿಸಿದಂತೆ ಬಾಲ್ಯವಿವಾಹ ಕಂಡುಬರುವುದಿಲ್ಲ. ಸ್ತ್ರೀಯಾದವಳು ತನ್ನ ಬಾಳಸಂಗಾತಿಯನ್ನು ಆಯ್ದುಕೊಳ್ಳುವ ಸಂಪೂರ್ಣ ಸ್ವಾತಂತ್ರ್ಯ ಹೊಂದಿದ್ದಳು. ಶಿಕ್ಷಣ ಮುಗಿಸಿ ಯೌವನಾವಸ್ಥೆಗೆ ಬಂದನಂತರವೇ ವಿವಾಹ ಜರುಗುತ್ತಿತ್ತು. ಆದರೆ ಏಕಪತ್ನಿತ್ವ ರೂಢಿಯಲ್ಲಿತ್ತು ಎಂದು ಹೇಳುವಾಗ ಅದು ಸಾಮಾನ್ಯವರ್ಗಗಳಲ್ಲಿ ಮಾತ್ರ ರೂಢಿಯಲ್ಲಿತ್ತು. ಶ್ರೀಮಂತ ವರ್ಗ ಮತ್ತು ಕ್ಷತ್ರೀಯರಲ್ಲಿ ಬಹುಪತ್ನಿತ್ವ ಆಚರಣೆಯಲ್ಲಿತ್ತೆಂದು ತಿಳಿದುಬರುತ್ತದೆ. ಒಟ್ಟಿನಲ್ಲಿ ವೇದಗಳ ಕಾಲದಲ್ಲಿ ಸ್ತ್ರೀಯರಿಗೆ ಸ್ವತಂತ್ರ್ಯವಿತ್ತೆ ಎಂಬ ಪ್ರಶ್ನೆ ಹಾಕಿಕೊಂಡರೆ ಅದು ಹೆಚ್ಚಾಗಿ ಮೇಲ್ವರ್ಗದವರಿಗೆ, ಋಷಿಪತ್ನಿಯರಿಗೆ, ರಾಜನಪತ್ನಿಯರಿಗೆ ಅನ್ವಯವಾಗುತ್ತಿತ್ತೆ ವಿನಃ ಸಾಮಾನ್ಯ ವರ್ಗದ ಮಹಿಳೆಯರ ಪಾಲಿಗೆ ಸಾಧಾರಣವಾಗಿತ್ತೇನೋ ಎನ್ನಿಸುತ್ತದೆ. ಕಾರಣ ಆ ವೇಳೆಗಾಗಲೇ ಮಾತೃಮೂಲೀಯ ಕುಟುಂಬಗಳು ಕ್ಷೀಣಿಸಿ ಪುರುಷ ಪ್ರಾಬಲ್ಯತೆ ಹೊಂದಿದ್ದನು.

ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತದ ಕಾಲದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿತ್ತು. ಅವರನ್ನು ಗೌರವಭಾವದಿಂದ ಕಾಣಲಾಗುತ್ತಿತ್ತು. ಸ್ವಯಂವರ ಆಚರಣೆಯಲ್ಲಿತ್ತೆಂದು ತಿಳಿದುಬರುತ್ತದೆ. ಪಿ.ಹೆಚ್.ಪ್ರಭು ಅವರು "ರಾಮಾಯಣವು ಹಿಂದುಗಳಿಗೆ ಆದರ್ಶ ಸ್ತ್ರೀತ್ವದ ಒಂದು ಅತ್ಯಂತ ಭವ್ಯವಾದ ನಿದರ್ಶನವಾಗಿದೆ"[೩] ಎಂದಿದ್ದಾರೆ. ಆದರೆ ರಾಮಾಯಣದಲ್ಲಿ ಸೀತೆಯೊಬ್ಬಳು ಅದರಲ್ಲೂ ಚಕ್ರವರ್ತಿಯ ಪತ್ನಿಯಾದವಳು ಮಾತ್ರವೇ ಆದರ್ಶ ಸ್ತ್ರೀ. ಆದರೆ ಸಾಮಾನ್ಯ ವರ್ಗದ ಸ್ತ್ರೀಯರಿಗೆ ಆದರ್ಶ ನಾರಿಯ ಪಟ್ಟವೆಲ್ಲಿದೆ? ಸ್ವಯಂವರವೆಲ್ಲಿದೆ? ಸ್ವಾತಂತ್ರ್ಯವೆಲ್ಲಿದೆ? ಅಲ್ಲದೆ ಈ ವೇಳೆಗಾಗಲೇ ಸತಿ ಪದ್ಧತಿ ಆಚರಣೆಗೆ ಬಂದಿತ್ತೆಂಬುದಕ್ಕೆ ಮಾದ್ರಿಯ ನಿದರ್ಶನವೇ ಆಧಾರವಾಗುತ್ತದೆ. ಹೆಣ್ಣಾದವಳು ಬೆಂಕಿಗೆ ತಾನು ಬಲಿಯಾಗುತ್ತಾಳೆಂದರೇ ಅದಕ್ಕೆ ಸಮಾಜದಲ್ಲಿ ಬೇರೂರಿದ ವ್ಯವಸ್ಥೆಗಳೇ ಕಾರಣವಾಗಿರುತ್ತವೆ. ಈ ವೇಳೆಗಾಗಲೇ ಸಂಪ್ರದಾಯದ ಅಂದ ಆಚರಣೆಗಳು ಪ್ರಾರಂಭವಾಗಿರಬೇಕೆನ್ನಿಸುತ್ತದೆ.

ಧರ್ಮಶಾಸ್ತ್ರ ಪುರಾಣಗಳ ಕಾಲದಲ್ಲಂತೂ ಪುರುಷ ಪ್ರಧಾನ್ಯತೆಯೇ ಉಚ್ಚಮಟ್ಟದಲ್ಲಿದ್ದು, ಸ್ತ್ರೀಯರ ಸ್ಥಾನಮಾನಗಳು ಸಂಪೂರ್ಣವಾಗಿ ಕುಂಟಿತವಾಗಿದ್ದವು. ಸ್ಮೃತಿಕಾರನಾದ ಮನು ಸ್ತ್ರೀಯಾದವಳು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ. ಅವಳು ಬಾಲ್ಯದಲ್ಲಿ ತಂದೆ, ಯೌವ್ವನದಲ್ಲಿ ಪತಿ, ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿರಬೇಕು ಎನ್ನುತ್ತಾನೆ. ಅಲ್ಲದೆ ಮಹಿಳೆಯರು 'ಕಾಮಾಸಕ್ತರು'. ಅವರ ಬುದ್ಧಿ ಮೊಳಕಾಲಿನಿಂದ ಕೆಳಗಡೆ ಎನ್ನುತ್ತಾನೆ. ಈ ವೇಳೆಯಲ್ಲಿಯೇ ಇಂದಿಗೂ ಸಮಾಜದ ಪಿಡುಗುಗಳಾಗಿರುವ ವರದಕ್ಷಿಣೆ, ಬಾಲ್ಯವಿವಾಹ, ವಿಧವಾ ಸಮಸ್ಯೆ, ದೇವದಾಸಿ ಪದ್ಧತಿಗಳು ಪ್ರಾರಂಭವಾದವೆನ್ನಬಹುದು.

ಬೌದ್ಧ, ಜೈನಧರ್ಮಗಳ ಕಾಲದಲ್ಲಿ ಸ್ತ್ರೀಯರ ಶೈಕ್ಷಣಿಕ, ಧಾರ್ಮಿಕ ಅಂತಸ್ತುಗಳು ಸ್ವಲ್ಪ ಮಟ್ಟಿಗೆ ಸುಧಾರಣೆಯಾದವೆಂದು ಹೇಳಲಾಯಿತು. ಆದರೂ ಸ್ತ್ರೀಯರ ಸಮಸ್ಯೆಗಳಿಗೆ ಪರಿಹಾರ ಮಾತ್ರ ದೊರೆಯಲೇ ಇಲ್ಲ.

ನಮ್ಮ ಭಾರತ ದೇಶದಲ್ಲಿ ಮಧ್ಯಕಾಲೀನ ವೇಳೆಗಾಗಲೇ ಮುಸ್ಲಿಂ ದಾಳಿ ಮತ್ತು ಆಳ್ವಿಕೆಯಿಂದಾಗಿ ಸಂಪೂರ್ಣವಾಗಿ ಸ್ತ್ರೀಯರು ತಮ್ಮೆಲ್ಲ ಹಕ್ಕು ಬಾಧ್ಯತೆಗಳಿಂದಲೂ ದೂರ ಸರಿಯುವಂತಾಯಿತು. ಸ್ತ್ರೀಯರ ಪಾಲಿಗಂತೂ 'ಅಂಧಕಾರ' ಯುಗವೇ ಆಗಿತ್ತೆನ್ನಲಾಗಿದೆ. ಪಿ.ಥಾಮಸ್ ಅವರು ತಿಳಿಸುವಂತೆ ಸ್ತ್ರೀಯರ "ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಯಿತು. ಶಾಸ್ತ್ರಗಳ ಬಗ್ಗೆ ಜ್ಞಾನ ಹೆಚ್ಚಿಸಿಕೊಳ್ಳುವುದಿರಲಿ ಅವರ ಅಕ್ಷರಾಭ್ಯಾಸಕ್ಕೆ ಅವಕಾಶವಿಲ್ಲವಾಯಿತು. ಸ್ತ್ರೀಯರ ಅಂತಸ್ತು ಎಂಬುದು ಪುರುಷರ ಅನುಬಂಧವೆಂಬಂತಹ ಸ್ಥಿತಿಗೆ ಬಂದಿತು."[೪] "ಮಿತಾಕ್ಷರ ಕಾನೂನು ಮತ್ತು ಬಂಗಾಳದ ದಾಯ ಭಾಗ ಕಾನೂನು ಸ್ತ್ರೀಯರನ್ನು ಗುಲಾಮರ ಸ್ಥಿತಿಗೆ ತಂದಿಟ್ಟವು."[೫]

ಈ ವೇಳೆಯಲ್ಲಿಯೇ ಪರದಾ ಪದ್ಧತಿ, ಬಾಲ್ಯವಿವಾಹ, ಸತಿಪದ್ಧತಿ, ವಿಧವಾ ಪುನರ್ವಿವಾಹ ನಿಷೇಧ, ದೇವದಾಸಿ ಪದ್ಧತಿ ಮೊದಲಾದ ಪಿಡುಗುಗಳು ಕಠಿಣವಾಗಿ ಆಚರಣೆಗೆ ಬಂದವು. ಇಂತಹ ಸಂದರ್ಭದಲ್ಲಿ ಹಿಂದೂ ಸಮಾಜಕ್ಕೆ ಅಂಟಿಕೊಂಡ ಬಹುದೊಡ್ಡ ಸಮಸ್ಯೆಗಳಾಗಿ ಮೇಲಿನ ಸಮಸ್ಯೆಗಳು ಕಾಡಿದ್ದಲ್ಲದೆ, ಇಂದಿಗೂ ಮುಸ್ಲಿಂ ಸಮಾಜದಲ್ಲಿ ಎಷ್ಟೇ ಸುಧಾರಣೆಯಾದರೂ ಪರದಾ ಪದ್ಧತಿಯಂತೂ ನಿವಾರಣೆಯೇ ಆಗಿಲ್ಲವೆನ್ನಬಹುದು. ತದನಂತರ ಕ್ರಿ.ಶ.೧೪ನೇ ಶತಮಾನದಿಂದ ನಂತರದಲ್ಲಿ ಭಕ್ತಿಪರಂಪರೆಯ ಆಂದೋಲನದಿಂದ ಸ್ವಲ್ಪ ಮಟ್ಟಿನ ಸುಧಾರಣೆ ಯಾಯಿತೆನ್ನಲಾಗಿದೆ.

ಮಹಿಳೆಯರು ಸಾಗಿ ಬಂದ ಇತಿಹಾಸವನ್ನು ಗಮನಿಸಿದರೆ ನಮ್ಮ ಭಾರತೀಯ ಸಮಾಜವು ಸ್ತ್ರೀಯರಿಗೆ ನೀಡಿದ ಸ್ಥಾನಮಾನಗಳು ಸಂಪೂರ್ಣ ಗೌಣವೆನ್ನಬಹುದು. ಅಂದಿನಿಂದಲೂ ಎಲ್ಲಾ ಕ್ಷೇತ್ರಗಳಿಂದಲೂ ಸ್ತ್ರೀಯರನ್ನು ಹೊರಗುಳಿಸುತ್ತಲೇ ಪುರುಷ ಸಮಾಜ ಸಾಗಿ ಬಂದಿದೆ. ಇದಕ್ಕೆ ಶಾಸನಗಳು ಸಹ ಹೊರತಾಗಿಲ್ಲ.

ಮಹಿಳೆಯರು ಶಾಸನಗಳನ್ನು ರಚಿಸಲಿಲ್ಲವೆ? ಎಂಬ ಪ್ರಶ್ನೆ ಹಾಕಿಕೊಂಡಾಗ ಮಹಿಳೆಯರು ಶಾಸನಗಳನ್ನು ರಚಿಸುವುದಿರಲಿ ನೂರಕ್ಕೆ ಶೇಕಡಾ ೯೯% ರಷ್ಟು ಶಾಸನಗಳಲ್ಲಿ ಮಹಿಳೆಯರ ಪಾತ್ರವಾಗಲೀ, ಸ್ತ್ರೀಯರ ಹೆಸರಿನ ಉಲ್ಲೇಖವಾಗಲೀ, ಅವಳ ಸಾಧನೆಗಳಾಗಲೀ ಶಾಸನಗಳಲ್ಲಿ ಉಲ್ಲೇಖವಾಗಿರುವುದು ವಿರಳ ಸಂಗತಿಯೇ ಆಗಿದೆ. ಒಂದು ದೃಷ್ಟಿಯಲ್ಲಿ ನೋಡಿದರೆ ಶಾಸನಗಳು ಮಹಿಳೆಯರನ್ನು ನಿರ್ಲಕ್ಷಿಸಿವೆ ಎಂದರೆ ತಪ್ಪಾಗಲಾರದು. ಚಿತ್ರದುರ್ಗ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಆರು ತಾಲೂಕುಗಳ ಶಾಸನಗಳನ್ನು ಗಮನಿಸಿದಾಗ ಮಹಿಳೆಯರ ಉಲ್ಲೇಖವಿರುವ

ಶಾಸನಗಳ ಸಂಖ್ಯೆ ಗೌಣವಾಗಿಯೇ ಇವೆ. ಅಲ್ಲೊಂದು ಇಲ್ಲೊಂದು ತುಂಡು-ತುಂಡು ಶಾಸನಗಳು ನಮಗೆ ದೊರೆಯುತ್ತವೆ. ಲಭ್ಯವಾಗುವ ಮಾಹಿತಿಯನ್ನಾಧರಿಸಿ ಅವರ ಕಾರ್ಯಚಟುವಟಿಕೆಯನ್ನು ಗಮನಿಸಬಹುದಾಗಿದೆ.

೨.೧. ರಾಣಿಯರು

ಆರಂಭದಿಂದಲೂ ಸ್ತ್ರೀಯರನ್ನು ಸಾಮಾಜಿಕ, ರಾಜಕೀಯ, ಧಾರ್ಮಿಕ, ಆರ್ಥಿಕ ಈ ಎಲ್ಲಾ ಕ್ಷೇತ್ರಗಳಿಂದ ಹೊರಗುಳಿಸಿ ಅವಳನ್ನು ಕುಟುಂಬದ ಕೆಲವೊಂದು ಕಾರ್ಯಚಟುವಟಿಕೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ. ಸ್ತ್ರೀಯರನ್ನು ಈ ಎಲ್ಲಾ ಕ್ಷೇತ್ರಗಳಿಂದ ಹೊರಗುಳಿಸಿದ ಮಾತ್ರಕ್ಕೆ ಅವಳು ಅಸಹಾಯಕಳು, ದುರ್ಬಲಳೆಂದಲ್ಲ. ಆದರೆ ಸ್ತ್ರೀ ಅವಕಾಶಗಳಿಂದ ವಂಚಿತಳಾಗಿದ್ದಾಳೆ. ಆದಿ ಮಾನವನ ಕಾಲದಲ್ಲಿ ಸ್ತ್ರೀಯೇ ಬೇಟೆಯಾಡಿ ಕುಟುಂಬ ನಿರ್ವಹಣೆ ಮಾಡಿಕೊಂಡು ಬಂದಿರುವುದನ್ನು ಮಾತೃ ಮೂಲೀಯ ಕುಟುಂಬಗಳು ಎತ್ತಿ ತೋರಿಸುತ್ತವೆ. ಇದನ್ನು ಪುರುಷ ಸಮಾಜ ಮರೆಯುವಂತಿಲ್ಲ.

"ಕರ್ನಾಟಕದ ರಾಣಿಯರು ಪಾಣಿನಿ ಹೇಳುವಂತೆ ಅಸೂರ್ಯಂ ಪಶ್ಯೆಯರಾಗಿರಲಿಲ್ಲ. ಸಾಮಾಜಿಕ, ಧಾರ್ಮಿಕ ಜೀವನಗಳಲ್ಲಿ ಮಾತ್ರವಲ್ಲ ರಾಜಕೀಯ ಜೀವನದಲ್ಲಿಯೂ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ."[೬] ಚಿತ್ರದುರ್ಗ ಜಿಲ್ಲೆಗೆ ಸಂಬಂಧಿಸಿದಂತೆ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸ್ತ್ರೀಯರು ರಾಜಕೀಯವಾಗಿ ಗಮನ ಸೆಳೆಯುವುದು ವಿರಳವೆನ್ನಬಹುದು. ಚಿತ್ರದುರ್ಗದ ಚರಿತ್ರೆಯಲ್ಲಿ ರಾಜಕೀಯವಾಗಿ ಗಮನ ಸೆಳೆಯುವ ಸ್ತ್ರೀಯರಲ್ಲಿ "ಗಂಡಿಲ ಓಬವ್ವ ನಾಗತಿಯು" ಪ್ರಮುಖಳಾಗಿದ್ದಾಳೆ. ಆಕೆಯು ಹಿರೇ ಮದಕರಿನಾಯಕನ ಪತ್ನಿ ಮತ್ತು ರಾಜಮಾತೆಯೂ ಆಗಿದ್ದಳು. ಈ ನಾಗತಿಯು ತನ್ನ ಪುತ್ರನಾದ ೨ನೇ ಕಸ್ತೂರಿ ರಂಗಪ್ಪನಾಯಕನು ಮರಣ ಹೊಂದಿದಾಗ ಬೇರೆಯವರನ್ನು ಸಿಂಹಾಸನಕ್ಕೆ ತಂದು ಕೂರಿಸುವವರೆಗೂ ತಾನೇ ಆಡಳಿತ ನಿರ್ವಹಣೆಯ ಕಾರ್ಯವನ್ನು ನೋಡಿಕೊಳ್ಳುತ್ತಿದ್ದಳು. "ಜೊತೆಗೆ ಮುದಿ ಬರಮಪ್ಪ ಮತ್ತು ಗುರುಸಿದ್ದಪ್ಪ ಇವರಿಬ್ಬರ ತಲೆ ಹೊಡೆಸಿದಳು"[೧೭] ಕಾರಣ ೨ನೇ ಕಸ್ತೂರಿ ರಂಗಪ್ಪ ನಾಯಕನು ಬದುಕಿರುವಾಗಲೇ ಅವನಿಗೆ ಮಕ್ಕಳಿಲ್ಲದ ಕಾರಣದಿಂದಾಗಿ ದಾಯಾದಿ ಬಂಧುವಾದ ತರುಣ ದೊಡ್ಡ ಮದಕೇರಿನಾಯಕನನ್ನು ದತ್ತು ತೆಗೆದುಕೊಂಡಿದ್ದನು. ಆದರೆ ಇವಳು ದೊಡ್ಡ ಮದಕೇರಿ ನಾಯಕನು ತಾನು ಹೇಳಿದಂತೆ ನಡೆದುಕೊಳ್ಳುವುದಿಲ್ಲವೆಂಬ ಮುಂದಾಲೋಚನೆಯಿಂದ ದೊಡ್ಡ ಮದಕೇರಿನಾಯಕನನ್ನು ಕೊಲ್ಲುವಂತೆ ಬರಮಪ್ಪ, ಗುರುಸಿದ್ದಪ್ಪನಿಗೆ ಹೇಳಿದ್ದಳು. ಆದರೆ ಇವರಿಂದ ಈ ರಹಸ್ಯ ಎಲ್ಲಿ ಬಯಲಾಗುತ್ತದೆಯೋ ಎಂದು ತಿಳಿದು ಕೊಲ್ಲಿಸಿದಳು. ನಂತರ ತನ್ನ ಪತಿ ಕನಸಿನಲ್ಲಿ ಬಂದು ತಾನು ಜಾನಕಲ್ಲಿನ ಬರಮಪ್ಪನಾಯಕನಿಗೆ ಮಗನಾಗಿ ಹುಟ್ಟಿರುವುದಾಗಿ ತನಗೆ ಪಟ್ಟಕಟ್ಟಬೇಕೆಂದು ಹೇಳಿದ್ದಾರೆ ಎಂಬ ವಿಷಯವನ್ನು ಜನರಿಗೆ ನಂಬಿಸುತ್ತಾಳೆ. ಅಲ್ಲದೆ

ಜಾನಕಲ್ಲಿನ ೧೨ ವರ್ಷದ ಬಾಲಕ ಚಿಕ್ಕ ಮದಕೇರಿನಾಯಕನಿಗೆ ಪಟ್ಟ ಕಟ್ಟುತ್ತಾಳೆ. ಇದು ರಾಜಕೀಯ ತಂತ್ರವಲ್ಲದೆ ಬೇರೇನು ಅಲ್ಲ ಎನ್ನಿಸುತ್ತದೆ.

ರಾಜಕೀಯ ತಂತ್ರವನ್ನು ಯಾವ ಪುರುಷನಿಗಿಂತಲೂ ತಾನು ಕಡಿಮೆಯಲ್ಲ, ರಾಜಕೀಯ ತಂತ್ರವನ್ನು, ಆಡಳಿತ ನಿರ್ವಹಣೆಯಲ್ಲಿ ತಾನು ನಿಬಾಯಿಸಬಲ್ಲೆ ಎಂಬ ಅವಳ ಆತ್ಮಸ್ಥೈರ್ಯ ಪುರುಷವರ್ಗದ ಕಡೆ ಮುಖಮಾಡಿ ತೋರಿಸುವಂತದ್ದು. ಆದರೆ ಪುರುಷ ಸಮಾಜ ಇವಳನ್ನು 'ಸರ್ವಾಧಿಕಾರಿ' ಎಂದು ಇತಿಹಾಸದಲ್ಲಿ ನಮೂದಿಸಿದೆ. ಭವಿಷ್ಯಃ ಈಕೆ ಹೆಣ್ಣಾಗಿರುವುದರಿಂದ ಇವಳ ಕಡೆ ಈ ರೀತಿ ಬೆರಳು ಮಾಡಿ ಸಮಾಜ ತೋರಿಸುತ್ತಿದೆ. ಆದರೆ ಬಾದಾಮಿ ಚಾಲುಕ್ಯ ದೊರೆ ಇಮ್ಮಡಿ ಪುಲಕೇಶಿ ತಾನು ಅಧಿಕಾರಕ್ಕೆ ಬರಲೆಂದು ತನ್ನ ಚಿಕ್ಕಪ್ಪ ಮಂಗಳೇಶನನ್ನು ಕೊಂದದ್ದನ್ನು ಏಕೆ ಇತಿಹಾಸ ವೈಭವೀಕರಿಸುವುದಿಲ್ಲ? ಎಂಬ ಪ್ರಶ್ನೆ ಕಾಡದಿರದು. ಅಲ್ಲದೆ ಇಂದಿರಾಗಾಂಧಿ ಪ್ರಧಾನಿಯಾದ ವೇಳೆಯಲ್ಲಿ ಅವಳು ಅಧಿಕಾರ ಕಳೆದುಕೊಂಡಾಗ ಕಾಂಗ್ರೇಸ್ ಸರ್ಕಾರದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಡಿ.ದೇವರಾಜ ಅರಸುರವರಿಂದಲೇ ಪುನಃ ಇಂದಿರಾ ಗಾಂಧೀ ಅಧಿಕಾರ ಪಡೆಯುತ್ತಾಳೆ. ಆದರೆ ಅವರು ಅರಸುರವರಿಗೆ ಮಾಡಿದ್ದೇನು. ಇವೆಲ್ಲ ರಾಜ ನಿಪುಣತೆಯ ತಂತ್ರಗಳಲ್ಲದೆ ಬೇರೇನು ಅರ್ಥೈಸುವ ಸಂಗತಿಗಳಲ್ಲ.

ಸ್ತ್ರೀಯರು ಚತುರತೆ, ರಾಜನೀತಿ ನಿಪುಣತೆಯಲ್ಲಿ ಯಾವ ಪುರುಷರಿಗಿಂತಲೂ ಕಡಿಮೆಯಿಲ್ಲ ಆದರೆ ಅದನ್ನು ವ್ಯಕ್ತಪಡಿಸುವ ಅವಕಾಶಗಳಿಂದ ಅವರು ವಂಚಿತರಾಗುತ್ತಿದ್ದಾರಷ್ಟೆ. ಅಲ್ಲದೆ ಈ ಪುರುಷ ಪ್ರಧಾನ ಸಮಾಜ ಅವಳಿಗೆ ಕಿಂಚಿತ್ತು ಎಲ್ಲಿಯೂ ಅವಕಾಶ ಕಲ್ಪಿಸುವುದಿಲ್ಲ. ಲಿಂಗಣ್ಣ ಕವಿಯು ತನ್ನ 'ಕೆಳದಿ ನೃಪವಿಜಯಂ' ಕೃತಿಯಲ್ಲಿ "ಕೆಳದಿ ಸೋಮಶೇಖರ ನಾಯಕನ ಪತ್ನಿ ಚೆನ್ನಾಮ್ಮಾಜಿಯು (ಕ್ರಿ.ಶ.೧೬೭೧–೧೬೯೭) ಜರಿಮಲೆಯ ರಾಜನ ಪರಾಕ್ರಮವನ್ನು ಕೇಳಿ ಸಬ್ಬುನೀಸ ಹಾಗೂ ಶಂಕರ ನಾರಾಯಣನನ್ನು ಕಳುಹಿಸಿ 'ಮೊಳಕಾಲ ಬಾಸಿಗ'ನೆಂಬ ಬಿರುದನ್ನು ಧರಿಸಿ ಪರಾಕ್ರಮದಿಂದ ಎದುರಾದ ಜರಿಮಲೆ ರಾಜನನ್ನು ಯುದ್ಧದಲ್ಲಿ ಸೆರೆ ಹಿಡಿದು ತನ್ನ ಬಾಹುಬಲ ಮೆರೆದಳೆಂದು ತಿಳಿಸುತ್ತದೆ."[೮]

ಬೂದಿಹಾಳನ್ನು ಆಳುತ್ತಿದ್ದ ಸಿರುಮನ ಮೇಲೆ ವಿಜಯನಗರದ ಅರಸು ಸಾಳ್ವ ನರಸಿಂಹ ರಾಯರು ಮುತ್ತಿದಾಗ ಸಿರುಮನ ಪಟ್ಟದರಸಿ ಚಿಕ್ಕಮ್ಮ ದೇವರ ಆರಾಧನೆಗಾಗಿ ಅಡುಗೆ ಸಿದ್ಧತೆ ಮಾಡಿಕೊಂಡು ಸ್ತ್ರೀಯರೊಂದಿಗೆ ಅಥವಾ ಸ್ತ್ರೀವೇಷಧಾರಿಗಳೊಂದಿಗೆ ಶತ್ರು ಸೈನ್ಯವನ್ನು ಗಮನ ಸೆಳೆದರು. ಅಲ್ಲದೆ ತೆಗೆದುಕೊಂಡು ಹೋದ ತಿನಿಸು ಪದಾರ್ಥಗಳನ್ನೆಲ್ಲಾ ಅಲ್ಲಿಯೇ ಬಿಟ್ಟು ಓಡಿ ಬಂದರು. ಆ ತಿನ್ನಿಸುಗಳನ್ನೆಲ್ಲಾ ಶತ್ರು ಸೈನ್ಯದವರು ತಿಂದು ಸತ್ತರೆಂದು ತಿಳಿದುಬರುತ್ತದೆ.

ಹೆಣ್ಣಾದವಳು ಅವಕಾಶಗಳಿಂದ ವಂಚಿತಳಾಗಿದ್ದಾಳಷ್ಟೆ. ಅವಳು ಅವಕಾಶ ಸಿಕ್ಕರೆ ಎಂತಹ ರಾಜ ತಂತ್ರವನ್ನಾದರೂ ಬಳಸಿ ಯಶಸ್ವಿಯಾಗಬಲ್ಲಳೆಂಬುದು ಮೇಲಿನ ಸಂಗತಿಯಿಂದ ಸಾಬೀತಾಗುತ್ತದೆ.

ಆದರೆ "ಸಿರುಮನ ಮೇಲೆ ಸಾಳ್ವನರಸಿಂಹನ ಬಂಧು ಕಾಕಿಯ ವಿಶ್ವರಾಜ ೬೦,೦೦೦ ಸೈನ್ಯದೊಂದಿಗೆ ದಂಡೆತ್ತಿ ಬಂದಾಗ ಸೋಲನ್ನೊಪ್ಪಿಕೊಂಡ ಸಿರುಮ ದೊರೆ ತನ್ನ ಮಡದಿಯರೊಂದಿಗೆ ಅಗ್ನಿಪ್ರವೇಶ ಮಾಡುತ್ತಾನೆ."[೯]

ಚಿತ್ರದುರ್ಗದ ಮುಸಾಫಿರ ಬಂಗಲೆಯ ಪಾಳಿನಲ್ಲಿ ನಟ್ಟ ಶಾಸನವೊಂದು ದೊರೆತಿದೆ.[೧೦] ಈ ಶಾಸನದಲ್ಲಿ ಹೊಯ್ಸಳ ದೊರೆ ಶ್ರೀ ನರಸಿಂಹರಾಯನ ಮಗ ವೀರಸೋಮೇಶ್ವರನಾಗಿದ್ದು, ಇವನ ರಾಣಿ 'ಶ್ರೀ ಬಿಜ್ಜಲಾರಾಣಿ'ಯಾಗಿದ್ದಳು. ಇವರಿಬ್ಬರಿಗೆ ಮಗನಾಗಿ ಜನಿಸಿದವನು ಶ್ರೀ ನರಸಿಂಹ ದೊರೆಯಾಗಿದ್ದನು. ಇವನಿಗೆ ರಾಣಿಯಾಗಿದ್ದವಳು 'ಪಟ್ಟಮಹಾದೇವಿ'. ಇವರಿಬ್ಬರಿಗೆ ಜನಿಸಿದ ಪುತ್ರನೇ ವೀರನೆನಿಸಿದ ಧರಣಿಪ ಬಲ್ಲಾಳದೇವ ಎಂದು ಶಾಸನ ತಿಳಿಸುತ್ತದೆ. ಇಲ್ಲಿ ಹೊಯ್ಸಳ ಸಾಮ್ರಾಜ್ಯದ ಅರಸರ ಪತ್ನಿಯರಾಗಿ ಮಾತ್ರ ರಾಣಿಯರನ್ನು ಗುರುತಿಸಲಾಗಿದೆ. ಹೆಸರಿಗೆ ಮಾತ್ರ ರಾಣಿಯ ಪಟ್ಟ. ಇಲ್ಲಿ ಅವಳ ಪಾತ್ರವೆಲ್ಲವು ಮುಂದಿನ ಪೀಳಿಗೆಗೆ ಉತ್ತರಾಧಿಕಾರಿಯನ್ನು ರಾಜ್ಯವಾಳುವುದಕ್ಕೆ ಧೀರ ಪುತ್ರನನ್ನು ಹಡೆಯುವುದಕ್ಕೆ ಇರುವ ಪುರುಷರ ಪಾಲಿನ ಯಂತ್ರವಾಗಿ ಅಷ್ಟೇ ಗೋಚರಿಸುತ್ತಾಳೆ. ಈ ಶಾಸನ ರಚನೆಯಾದ ಕಾಲದ ಬಗ್ಗೆ ಶಾಸನದಲ್ಲಿ ಮಾಹಿತಿ ದೊರೆಯುವುದಿಲ್ಲ.

ಕ್ರಿ.ಶ.೧೩೨೮ರ ಶಾಸನವೊಂದು ಚಿತ್ರದುರ್ಗ ಬೆಟ್ಟದ ಮೇಲೆ ಸಂಪಿಗೆ ಸಿದ್ದೇಶ್ವರ ದೇವಾಲಯದ ಒಳಗೋಡೆಯಲ್ಲಿ ದೊರೆತಿದೆ. ಈ ಶಾಸನದಲ್ಲಿ ಹೊಯ್ಸಳ ದೊರೆ ಸೋಮೇಶ್ವರ ಚಕ್ರವರ್ತಿಯ ರಾಣಿ ಶ್ರೀ ಬಿಜ್ಜಲಾ ರಾಣಿಗಂ ಭೂಸ ಉಭಾಗ್ಯ ನಿಧಾನನೂರ್ಜಿತಬಳಂ ಶ್ರೀ ನಾರಸಿಂಹೋ...[೧೧] ಬಿಜ್ಜಲಾ ರಾಣಿಯ ಮಗನಾಗಿ ನರಸಿಂಹ ದೊರೆ ಜನಿಸುತ್ತಾನೆ. ಇವನು ಸಾಹಿತ್ಯ ಸರ್ವಜ್ಞ, ಭೂಮಿಯಲ್ಲಿ ಸಂಪತ್ತನ್ನು ಹೊಂದಿದ ವೀರನು, ಅರಿಕರಿಶಿರವನ್ನು ಸೀಳಿದವನು ಎಂತಲೂ ಇವನ ಪತ್ನಿ ಪಟ್ಟಮಹಾದೇವಿಯಾಗಿದ್ದಳು. ಇವಳಿಗೆ ಧರಣಿಯನ್ನಾಳುವ ಬಲ್ಲಾಳ ಜನಿಸಿದನು ಎಂದು ಶಾಸನದಲ್ಲಿ ತಿಳಿದುಬರುತ್ತದೆ. ರಾಜನ ವೈಭವೀಕರಣ ಶಾಸನಗಳಲ್ಲಿ ಕಾಣುತ್ತದೆಯೇ ವಿನಃ ಸ್ತ್ರೀಯಾದವಳ ಬಗೆಗಿನ ಯಾವ ಮಾಹಿತಿಯೂ ಈ ಶಾಸನದಿಂದ ದೊರೆಯುವುದಿಲ್ಲ. ಪುರುಷ ಸಮಾಜ ತನ್ನ ರಾಜಪ್ರಭುತ್ವದ ಮಹೋನ್ನತಿಯಲ್ಲಿ ತನ್ನ ಹಿತಾಸಕ್ತಿಗನುಗುಣವಾಗಿ ತನಗೆ ಬೇಕಾದಂತೆ ಶಾಸನಗಳನ್ನು ರಚಿಸಿಕೊಂಡಿದ್ದಾನೆ. ರಾಣಿಯಾದವಳು ಅವನಿಗೆ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಕೈಜೋಡಿಸುವುದಕ್ಕೆ, ತಮ್ಮ ಆಸೆ, ಆಕಾಂಕ್ಷೆ, ಬಯಕೆಗಳನ್ನು ಈಡೇರಿಸಿಕೊಳ್ಳುವುದಕ್ಕೆ, ತಮ್ಮ ವಂಶಪಾರಂಪರ್ಯ ಮುಂದುವರಿಸುವುದಕ್ಕಾಗಿ, ವಂಶದ ಕುಡಿಯನ್ನು ಹೆರುವುದಕ್ಕೆ ಮಾತ್ರ ಅವಳಿಗೆ ಮಹಾರಾಣಿಯ ಪಟ್ಟ, ಉಳಿದ ಅಧಿಕಾರಗಳೆಲ್ಲ ಸಂಪೂರ್ಣ ಗೌಣವಾಗಿ ಬಿಡುತ್ತವೆ.

ಚಿತ್ರದುರ್ಗ ಬೆಟ್ಟದ ಮೇಲೆ ಶ್ರೀಂಗಾರ ತೋಟದಲ್ಲಿ ಗೋಪಾಲ ಕ್ರಿಷ್ಣ ದೇವರ ಹೊಂಡಕ್ಕೆ ದಕ್ಷಿಣದ ಕಡೆ ಶಾಸನವೊಂದು ದೊರೆತಿದೆ.[೧೨] ಈ ಶಾಸನದಲ್ಲಿ ಹೊಯ್ಸಳ ಚಕ್ರವರ್ತಿಯಾದ ವಿನಯಾದಿತ್ಯನಿಂದ ಯಜೆ್ಯಂಗದೇವ, ಇವನಿಂದ ನರಸಿಂಹ ಚಕ್ರವರ್ತಿ, ಇವನ ಮಗ ಬಲ್ಲಾಳಭೂಪ ಇವನ ಮಗ ಶ್ರೀ ನರಸಿಂಹರಾಯ, ಇವನ ಮಗ ಶ್ರೀ ವೀರ ಸೋಮೇಶ್ವರ ಈತನ ಪತ್ನಿ 'ಬಿಜ್ಜಲಾರಾಣಿ' ಇವರಿಬ್ಬರಿಗೂ ಮಗನಾದ ಶ್ರೀ ನಾರಸಿಂಹ ಜನಿಸುತ್ತಾನೆ. ಇವನ ಮಗನೇ ವೀರಬಲ್ಲಾಳ. ಹೊಯ್ಸಳರ ಚಕ್ರವರ್ತಿಗಳ ವಂಶದ ವಿವರವನ್ನು ಶಾಸನ ಒದಗಿಸುತ್ತದೆ. ಆದರೆ ಅವರೆಲ್ಲರ ಪತ್ನಿಯರಾರು ಅವರು ನಿರ್ವಹಿಸಿದ ಕರ್ತವ್ಯಗಳೇನು ಎಂಬುದರ ಬಗೆಗಿನ ಮಾಹಿತಿ ಈ ಶಾಸನದಲ್ಲಿ ದೊರೆಯುವುದಿಲ್ಲ. ಅಲ್ಲದೆ ಈ ಶಾಸನದ ಕಾಲದ ಬಗ್ಗೆ ಯಾವ ಮಾಹಿತಿಯೂ ಶಾಸನದಲ್ಲಿ ದೊರೆಯುವುದಿಲ್ಲ.

ಕ್ರಿ.ಶ.೧೨೮೬ರ ಶಾಸನವೊಂದು ಚಿತ್ರದುರ್ಗ ಬೆಟ್ಟದ ಮೇಲೆ ಹಿಡಿಂಬೇಶ್ವರ ದೇವಾಲಯದ ಒಳಗೆ ದೊರೆತಿದೆ. ಈ ಶಾಸನದಲ್ಲಿ ಹೊಯ್ಸಳ ದೊರೆ ಸೋಮೇಶ್ವರ ಚಕ್ರವರ್ತಿಗೆ ಬಿಜ್ಜಲರಾಣಿ ಇದ್ದಳೆಂದು ತಿಳಿಸುತ್ತದೆ. ಶ್ರೀ ಸೋಮೇಶ್ವರ ಚಕ್ರಿಗಂ ವರ ಜಯಶ್ರೀ ಬಿಜ್ಜಲಾರಾಣಿಗಂ......[೧೩] ಈ ಶಾಸನದಲ್ಲಿಯೂ ಸಹ ರಾಜಯವನ್ನಾಳಲು, ತನ್ನ ಗಂಡನ ನಂತರ ಅಧಿಕಾರವಹಿಸಿಕೊಳ್ಳಲು ಪುತ್ರನನ್ನು ಹೆರುವ ಯಂತ್ರವಾಗಿ ಮಾತ್ರ ರಾಣಿ ಗಮನಸೆಳೆಯುತ್ತಾಳೆ.

ಕ್ರಿ.ಶ.೧೨೦೬ರ ಶಾಸನವು ಚಿತ್ರದುರ್ಗ ತಾಲೂಕು ಗಂಜಿಗಟ್ಟೆ ಗ್ರಾಮದ ಬಳಿ ಪಾಂಡುರಂಗ ಬೆಟ್ಟದ ಮೇಲೆ ಇರುವ ಜನ್ನೇಶ್ವರ ದೇವಾಲಯದ ಮುಂದೆ ದೊರೆತಿದೆ. ಹೊಯ್ಸಳ ರಾಣಿಯಾದ ಪಟ್ಟಮಾದೇವಿ ಕೋಮಳತನ್ಮಧ್ಯೆವಿಲೋಳ ಲೋಚನೆಲಸತ್ ಶ್ರೀಂಗಾರ ವಾರಾಸಿಯೋಚಲೆಗಂ ಯಾದವ ಚಕ್ರವರ್ತ್ತಿನೆಗಳ್ದಂ ಬಲ್ಲಾಳ ಭೂಪಾಳಕಂ......[೧೪] ಪಟ್ಟಮಾದೇವಿಯಾದ ಯೋಚಲೆಗೆ ಬಲ್ಲಾಳ ಚಕ್ರವರ್ತಿ ಜನಿಸುತ್ತಾನೆ. ಇವನ ಪತ್ನಿ 'ಪದ್ಮಲದೇವಿ' ಎಂಬ ಉಲ್ಲೇಖ ಶಾಸನದಲ್ಲಿ ದೊರೆಯುತ್ತದೆ.

ಕ್ರಿ.ಶ.೧೨೮೬ರ ಶಾಸನವೊಂದು ಚಿತ್ರದುರ್ಗ ತಾಲೂಕು ಹುಲಿಗುಂದ ಗ್ರಾಮದ ಅಂಕಲೆ ಮಠದ ಪಂಚಲಿಂಗ ದೇವರ ಗುಡಿಯಲ್ಲಿ ದೊರೆಯುತ್ತದೆ.[೧೫] ಈ ಶಾಸನದಲ್ಲಿ ಹೊಯ್ಸಳ ಚಕ್ರವರ್ತಿ ವೀರ ಸೋಮೇಶ್ವರನ ಪತ್ನಿ ಬಿಜ್ಜಲಾ ರಾಣಿ ಎಂಬ ಉಲ್ಲೇಖ ಶಾಸನದಲ್ಲಿದೆ. ಚಿತ್ರದುರ್ಗಜಿಲ್ಲೆಯ ಚಿಕ್ಕಮಧುರೆ ಶಾಸನದಲ್ಲಿ ಸಿಂಗಪೋತರಾಜನು ನೊಳಂಬರಿಗೆ ೧೦೦೦ ನಿರ್ಗುಂದ ಆಳುತ್ತಿದ್ದನು. ಇವನ ಪತ್ನಿ ನೊಳಂಬೆಗೆ ಮಹಾದೇವಿ ಅರಸ ಮತ್ತು ಪೆರ್ಮಾನಡಿ ಎಂಬ ಮಕ್ಕಳಿದ್ದರು. ರಾಜನಿಗೆ ನೊಳಂಬೆಯಲ್ಲದೆ ಮತ್ತೊಬ್ಬ ಪತ್ನಿಯಿದ್ದಳು. ಒಂದು ಗ್ರಾಮದ ಅಧಿಕಾರ ವಹಿಸಿಕೊಡುವುದರ ಮೂಲಕ ಈ ಇಬ್ಬರನ್ನು ಆಂತರಿಕ ಕಲಹದಿಂದ ದೂರವಿಡುವ ಪ್ರಯತ್ನ ರಾಜನದ್ದಾಗಿದೆ.[೧೬]

ಕ್ರಿ.ಶ.೯೬೮ರ ಶಾಸನವೊಂದು ಚಿತ್ರದುರ್ಗ ತಾಲೂಕು ಬೇವಿನಹಳ್ಳಿ ಗ್ರಾಮದಲ್ಲಿರುವ ಆಂಜನೇಯ ದೇವಾಲಯದ ಪ್ರಾಕಾರದಲ್ಲಿ ದೊರೆತಿದೆ.[೧೭] ಈ ಶಾಸನದಲ್ಲಿ ಚಾಳುಕ್ಯ ವಂಶದ ದೊರೆ ಕೊಟ್ಟಿಗದೇವ ಮಾನ್ಯಖೇಟದಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಇವನ ಮಗ ವಿಕ್ರಮಾದಿತ್ಯ ಇವನ ಮಗ ಪಿಳ್ಳಿಯಯ್ಯ ಇವನ ಮಗ ಕೊಂಕಣದೇವ. ಇವನ ಮಗ ರೇವಣನಾಗಿದ್ದನು. ಇವನ ಪತ್ನಿ ಬಿಕ್ಕಿಯಣ್ಣಂ ಮಾತೆ(ಗೆ)ಸತ್ಪುತ್ರನಾ.....ಎಂದು ಉಲ್ಲೇಖಿಸುತ್ತದೆ. ಈ ಶಾಸನವು ರೇವಣನ ಮಗನ ತಾಯಿ 'ಬಿಕ್ಕಿಯಣ್ಣಂ' ಎಂದು ಉಲ್ಲೇಖಿಸುತ್ತದೆ.

ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕು ಹೊಳಲ್ಕೆರೆ ಪಟ್ಟಣದ ಶಂಕರ ದೇವಾಲಯದ ಒಳಗಡೆ ಗೋಡೆಯಲ್ಲಿ ಶಾಸನವೊಂದು ದೊರೆತಿದೆ.[೧೮] ಇದರ ಕಾಲದ ಬಗ್ಗೆ ಶಾಸನದಲ್ಲಿ ಎಲ್ಲಿಯೂ ತಿಳಿದುಬರುವುದಿಲ್ಲ. ಈ ಶಾಸನದ ಪಾಠಾಂತರಗಳು ಸಾಕಷ್ಟು ತ್ರುಟಿತಗೊಂಡಿವೆ. ಈ ಶಾಸನವು ಹೊಯ್ಸಳ ದೊರೆ ನರಸಿಂಹನ ಪತ್ನಿ ಪೇಚಲದೇವಿ ಎಂತಲೂ ಬಲ್ಲಾಳನ 'ರಾಣಿ ಪದ್ಮಲದೇವಿ' ಎಂತಲೂ ಉಲ್ಲೇಖಿಸುತ್ತದೆ.

ಕ್ರಿ.ಶ.೧೧೧೧ರ ಶಾಸನವೊಂದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯ ಉತ್ತರ ಶಾನುಭೋಗ ಕೃಷ್ಣಪ್ಪನವರ ತೋಟದ ಬೇಲಿಯಲ್ಲಿ ದೊರೆತಿದೆ.[೧೯] ಇದರಲ್ಲಿ ಹೊಯ್ಸಳ ಚಕ್ರವರ್ತಿ ಬಲ್ಲಾಳನ ರಾಣಿ ಪದ್ಮಲ ಮಹಾದೇವಿ ಎಂಬ ಹೆಸರಿನ ಉಲ್ಲೇಖವಿದೆ. ಅಲ್ಲದೆ ಈ ಶಾಸನ ಸಾಕಷ್ಟು ತ್ರುಟಿತಗೊಂಡಿದೆ.

ಇದೇ ಸ್ಥಳದಲ್ಲೇ ಮತ್ತೊಂದು ಶಾಸನ ದೊರೆತಿದ್ದು ಈ ಶಾಸನ ಹೆಚ್ಚು ತ್ರುಟಿತಗೊಂಡಿದೆ. ಇದರಿಂದಾಗಿ ಈ ಶಾಸನದ ಕಾಲದ ಬಗ್ಗೆ ತಿಳಿಯುವುದಿಲ್ಲ. ಹೊಯ್ಸಳ ವಂಶದ ಅರಸನೊಬ್ಬನ ಪತ್ನಿ "ಮಹಾದೇವಿ"[೨೦] ಎಂಬ ಹೆಸರಿನ ಉಲ್ಲೇಖವಿದೆ.

ಚಿತ್ರದುರ್ಗ ಜಿಲ್ಲೆಯ, ಹೊಸದುರ್ಗ ತಾಲೂಕು, ಬಾಗೂರು ಹೋಬಳಿಯ ಮತ್ತೋಡು ಗ್ರಾಮದ ನೇರ್ಲಕೆರೇ ನರಸಮ್ಮನಿಂದ ಬಂದ ತಾಮ್ರಶಾಸನವು ೫ ಪತ್ರಗಳಿಂದ ಕೂಡಿದೆ. ಇದು ನಾಗರಾಕ್ಷರದಲ್ಲಿದೆ. ಇದರ ಕಾಲದ ಬಗ್ಗೆ ಮಾಹಿತಿ ಶಾಸನದಲ್ಲಿ ದೊರಕುವುದಿಲ್ಲ. ಈ ಶಾಸನದಲ್ಲಿ ವಿಜಯನಗರದ ಅರಸು ವೀರನರಸಿಂಹನ ಉಲ್ಲೇಖ ಮತ್ತು ಶ್ರೀ ವಿರೂಪಾಕ್ಷ ದೇವರ ಉಲ್ಲೇಖವಿದೆ. ಈ ಕಾರಣದಿಂದಾಗಿ ಇದು ವಿಜಯನಗರದ ಅರಸರ ಕಾಲದ್ದೆಂದು ಹೇಳಬಹುದು. ಈ ಶಾಸನದ ಮೊದಲ ಪತ್ರದಲ್ಲಿ "ಶ್ರೀ ದೇವಯಾನಿಪತೆ, ದೇವಕಿನಂದನಾ..... ಕೌಸಲ್ಯಾ ಶ್ರೀಸುಮಿತ್ರಯೋಃ........"[೨೧]

ನಳನಹುಶರ ವಂಶಾವಳಿಯನ್ನು ಹೇಳುವಾಗ ಶಾಸನದಲ್ಲಿ ಮೇಲಿನ ಮಾತುಗಳು ಕಾಣಿಸಿಕೊಳ್ಳುತ್ತವೆ. 'ದೇವಯಾನೀಪತೇಃ' ಎಂಬ ಮಾತುಗಳನ್ನು ಗಮನಿಸಿದರೆ ಇದು ಯಯಾತಿಯ ಪತ್ನಿಯ ಹೆಸರಿನ ಉಲ್ಲೇಖವಾಗಿದೆ. ಪುರಾಣದ ಕಾಲದಿಂದಲೂ ಪ್ರತಿಯೊಂದು ಕ್ಷೇತ್ರದಲ್ಲೂ

ಸ್ತ್ರೀಯರ ಜೀವನ ತೆರೆಯ ಮರೆಯದ್ದಾಗಿದೆ. ಅದರಲ್ಲೂ ರಾಜರ ಆಳ್ವಿಕೆಗಳ ಕಾಲದಲ್ಲಂತೂ ಧಾರ್ಮಿಕ ವಿಧಿಗಳಲ್ಲಿ ಅಲ್ಲಲ್ಲಿ ರಾಜನೊಂದಿಗೆ ಸ್ತ್ರೀಯರ ಸಹಭಾಗಿತ್ವ ಕಂಡುಬರುತ್ತದೆ. ಆದರೂ ಇನ್ನುಳಿದ ಕ್ಷೇತ್ರಗಳಲ್ಲಿ ಸ್ತ್ರೀಯರ ಸಹಭಾಗಿತ್ವ ಅತ್ಯಂತ ವಿರಳವಾಗಿ ಗೋಚರಿಸುತ್ತದೆ. ಅಲ್ಲದೆ ರಾಜಕೀಯ ಕ್ಷೇತ್ರದಲ್ಲಿಯೇ ರಾಣಿಯರಿಗೆ ಹೆಸರಿಗೆ ಮಾತ್ರ ಪಟ್ಟ, ಪಟ್ಟದರಾಣಿ ಉಳಿದೆಲ್ಲಾ ಜೀವನವನ್ನು ಪರದೆಯ ಒಳಗಡೆ ದಾಸ್ಯಭರಿತ ಜೀವನವನ್ನು ನಡೆಸುತ್ತಿದ್ದರು. ರಾಜನೊಂದಿಗೆ ರಾಣಿಯಾಗಿ ಮಾತ್ರ ಇರಬೇಕಿತ್ತೇ ವಿನಃ ಅಧಿಕಾರವೆಲ್ಲ ಪುರುಷಪ್ರಧಾನ ಸಮಾಜದ ಕೇಂದ್ರ ಬಿಂದುವಾದ ರಾಜನಲ್ಲಿಯೇ ಕೇಂದ್ರಿಕೃತವಾಗಿರುತ್ತಿತ್ತು. ಈ ಸಮಾಜ ಹೆಣ್ಣನ್ನು ಅಸಹಾಯಕತೆಯ ಪ್ರತಿರೂಪ, ದ್ವಿತೀಯ ದರ್ಜೆಯವಳು ಎಂಬಂತೆಯೇ ಕಾಣಿಸುತ್ತಾ ಬಂದಿದೆ. "ನಗೋ ಹೆಂಗಸರನ್ನು ನೆಚ್ಚಬೇಡ, ಅಳುವ ಗಂಡಸನ್ನು ನಂಬಬೇಡ" ಎಂಬ ಗಾದೆ ಮಾತ್ತೊಂದು ನಮ್ಮಲ್ಲಿ ರೂಢಿಯಲ್ಲಿದೆ. ಅದರಂತೆ ಹೆಣ್ಣೆಂದರೆ ಅವಳಿಗೆ ಅಳು ಭೂಷಣವೆಂಬಂತೆ ನಮ್ಮ ಸಮಾಜ ಹೆಣ್ಣನ್ನು ಕಾಣುತ್ತಿದೆ. ಹೆಣ್ಣು ಸಹನಾಶೀಲಳು. ಅವಳು ಭೂಮಿತಾಯಿ, ದೇವತೆ, ಹೆಣ್ಣಿಗೆ ನಗು ಭೂಷಣ, ನಗು ಅವಳಿಗೆ ಒಡವೆ ಎಂದೆಲ್ಲ ಕವಿಗಳು ಹೆಣ್ಣಿನ ಬಗೆಗಿನ ವೈಭವೀಕರಣದ ಮಾತುಗಳನ್ನು ಬರೆದರೂ ಅವುಗಳೆಲ್ಲ ಕಥೆ, ಕವನ, ಕಾದಂಬರಿಗಳಲ್ಲಷ್ಟೆ. ಅವುಗಳೆಲ್ಲವೂ ಸಮಾಜಕ್ಕೆ ಬಂದಾಗ ಶೂನ್ಯವಾಗಿ ಬಿಡುತ್ತವೆ. ಹೆಣ್ಣು ಯಾವಾಗಲೂ ಹೀಗೆಯೇ ಇರಬೇಕು ಎಂಬ ಚೌಕಟ್ಟನ್ನು ಇಂದಿಗೂ ಸಮಾಜ ವಿಧಿಸುತ್ತಲೇ ಬಂದಿದೆ. 'ದೇವಕಿನಂದನಾ' ಎಂಬ ಮಾತುಗಳು ಕೃಷ್ಣನ ಬಗ್ಗೆ ಹೇಳುತ್ತವೆ. ಮಗನನ್ನು ಹೆರುವ ಯಂತ್ರವಾಗಿ ಹೆಣ್ಣು ಕಾಣಿಸುವುದು ಸಹಜವಾಗಿಯೇ ಶಾಸನಗಳ ತುಂಬೆಲ್ಲಾ ಉಲ್ಲೇಖವಾಗಿರುವುದು ಕಂಡುಬರುತ್ತದೆ. 'ಕೌಶಲ್ಯ ಶ್ರೀ ಸುಮಿತ್ರಯೋ' ಎಂಬ ಮಾತುಗಳು ರಾಮಾಯಣದ ಶ್ರೀರಾಮನ ತಂದೆ ದಶರಥನ ಇಬ್ಬರು ಪತ್ನಿಯರ ಬಗೆಗಿನ ಉಲ್ಲೇಖವಾಗಿದೆ. ರಾಜನೆಂದರೆ ಅವನ ಆಳ್ವಿಕೆಗೊಳಪಟ್ಟ ಪ್ರದೇಶದ 'ಸರ್ವಾಧಿಕಾರಿ' ಎಂದರೆ ತಪ್ಪಾಗಲಾರದು. ಕಾರಣ ಅವನಿಗೆ ಮನಬಂದ ಹೆಣ್ಣುಗಳೆಲ್ಲ ಅವನ ಸೊತ್ತೇ ಆಗಿರುತ್ತಿದ್ದವು. ಅವನು ಎಷ್ಟು ಜನ ಸ್ತ್ರೀಯರನ್ನು ಬೇಕಾದರೂ ವಿವಾಹವಾಗ ಬಹುದಿತ್ತು. ಪುರುಷನ ಪಾಲಿಗೆ ಹೆಣ್ಣೆಂದರೆ ಒಂದು ವಸ್ತುವಷ್ಟೆ ಎಂಬಂತೆ ಭಾವಿಸಿದಂತಿದೆ.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕು ನೀರಗುಂದದಲ್ಲಿ ಶಾಸನವೊಂದು ದೊರೆತಿದೆ.[೨] ಇದರಲ್ಲಿ ಹೊಯ್ಸಳದೊರೆ ಶ್ರೀವೀರ ನರಸಿಂಹದೇವರ ಉಲ್ಲೇಖವಿದೆ. ನೀರಗುಂದದ ಸಿದ್ಧನಾಥ ದೇವರ ಆಸ್ಥಾನಿಕ ನಲ್ಲಜೀಯನ ಮಗ ಸಿದ್ಧಜೀಯನು ಸ್ವರ್ಗಸ್ಥನಾಗುತ್ತಾನೆ. ಆಗ ಹೊಯ್ಸಳ ಅರಸಿ ಪಟ್ಟಮಹಾದೇವಿಯರ ಮಗ ಚೋಳಯ್ಯ ಇವನ ಮಗ ವಿಶ್ವನಾಥ ಇವನ "ಹೆಣ್ಣು ಮಗಳು, ಗಂಡುಮಕ್ಕಳು ಸಿದ್ದನಾಥದೇವರ ಅಷ್ಟಭೋಗ ತೇಜಸ್ವಾಮ್ಯ"ಕ್ಕೆ ದಾನ ನೀಡಿದರೆಂದು ತಿಳಿದುಬರುತ್ತದೆ. ಆ ಹೆಣ್ಣುಮಕ್ಕಳ ಹೆಸರಿನ ಉಲ್ಲೇಖವಾಗಲೀ ಶಾಸನದ ಕಾಲದ ಉಲ್ಲೇಖವಾಗಲೀ ನಮಗೆ ಶಾಸನದಲ್ಲಿ ದೊರೆಯುವುದಿಲ್ಲ.

“ಹೊಸದುರ್ಗ ತಾಲೂಕು ಬಾಗೂರು ಹೋಬಳಿಯ ‘ಮಳಲಿ’ ಎಂಬ ಗ್ರಾಮದ ಜೋಡಿದಾರ ರಾಮಭಟ್ಟರಿಂದ ತಾಮ್ರ ಶಾಸನವೊಂದು ದೊರೆತಿದೆ.”[೨೩] ಈ ತಾಮ್ರಶಾಸನವು ೫ ಪತ್ರಗಳಿಂದ ಕೂಡಿದೆ. ಅಲ್ಲದೆ ಈ ಶಾಸನ ನಾಗರಾಕ್ಷರದಲ್ಲಿದೆ. E.C.XI ಹೊಳಲ್ಕೆರೆ ೯೪ರ ಶಾಸನದ ಅಂಶಗಳೇ ಈ ಶಾಸನದಲ್ಲಿ ದೊರೆಯುತ್ತವೆ. ಇಲ್ಲಿಯೂ ಕಾಲದ ಉಲ್ಲೇಖವಿಲ್ಲ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕು ಐಮಂಗಳ ಹೋಬಳಿ ವದ್ದೀಕೆರೆ ಗ್ರಾಮದ ಸಿದ್ದೇಶ್ವರ ದೇವಾಲಯದ ದಕ್ಷಿಣ ದಿಕ್ಕಿನ ಪ್ರಾಕಾರದಲ್ಲಿ ಒಂದು ಶಾಸನ ದೊರೆತಿದೆ. ಈ ಶಾಸನದಲ್ಲಿ “ಮಳಲದೇವಿ”[೨೪] ಎಂಬ ಹೆಸರಿನ ಉಲ್ಲೇಖವಿದೆ. ಆದರೆ ಈಕೆ ಯಾರೆಂಬುದರ ಬಗ್ಗೆ ಶಾಸನ ತಿಳಿಸುವುದಿಲ್ಲ. ಅಲ್ಲದೆ ಇವಳು ಕೈಗೊಂಡ ಕಾರ್ಯಗಳೇನು ಎಂಬುದರ ಬಗ್ಗೆಯೂ ಮಾಹಿತಿ ದೊರೆಯುವುದಿಲ್ಲ. ಅಲ್ಲದೆ ಶಾಸನ ಯಾರ ಕಾಲಕ್ಕೆ ಸೇರಿದೆ ಎಂದು ತಿಳಿದುಕೊಳ್ಳಲು ಕಾಲದ ಉಲ್ಲೇಖವೂ ಶಾಸನದಲ್ಲಿ ದೊರೆಯುವುದಿಲ್ಲ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕು ತಳುಕು ಹೋಬಳಿ ಓಬಳಾಪುರದ ಸಿದ್ಧರಾಮೇಶ್ವರ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿ ಶಾಸನವೊಂದು ದೊರೆತಿದೆ. ಈ ಶಾಸನದಲ್ಲಿ ಶಾಸನದ ಕಾಲದ ಬಗ್ಗೆ ಉಲ್ಲೇಖವಿಲ್ಲ. ಆದರೆ ಈ ಶಾಸನವು ಚಾಲುಕ್ಯದೊರೆ ಜಗದೇಕಮಲ್ಲನ ಕಾಲದ್ದೆಂಬುದು ಶಾಸನದಿಂದ ತಿಳಿದುಬರುತ್ತದೆ. ಚಾಲುಕ್ಯ ಜಗದೇಕಮಲ್ಲನು ಚೋಳರ ಮಹಾಮಂಡಳೇಶ್ವರರಾದಾಗ ಮಲ್ಲದೇವ ಎಂಬ ಚೋಳ ಮಹಾರಾಜರ ಹಿರಿಯ ಅರಸಿ ‘ಬಲ್ಲಿದೇವಿ’ಯು ಸಿರಿವೊಳಲಕೆಱೆಯನ್ನು ಆಳುತ್ತಿದ್ದಳು. ಆಗ ‘ಕೆಱೆಯಕಿಬ್ಬಿಯ ಶ್ರೀ ಕಲಿದೇವರಿಗೆ ಸ್ನಾನ ನಿವೇದ್ಯರ್ಕ್ಕಂ ತೇಜೋ ರಾಸಿ ಪಂಡಿತರಕಾಲಂ ಕರ್ಚ್ಚಿ ಧಾರಾಪೂರ್ವ್ವಕಂ”[೨೫] ಆಗಿ ಗದ್ದೆ ಮತ್ತು ದೇವರ ಮುಂದೆ ಎರಡು ಖಂಡುಗ, ಆರುಮತ್ತರು ಭೂಮಿಯನ್ನು ದಾನವಾಗಿ ನೀಡಿದಳೆಂದು ಶಾಸನದಿಂದ ತಿಳಿಸುತ್ತದೆ. ಇದೇ ಊರಿನ ಉತ್ತರಕೋಟೆಯ ಕೆಳಗೆ ಗ್ರಾಮ ನಿವೇಶನದಲ್ಲಿ ಒಂದು ಶಾಸನ ದೊರೆತಿದೆ. ಈ ಶಾಸನದಲ್ಲಿಯೂ ಕಾಲದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಅಲ್ಲದೆ ಯಾರ ಕಾಲದ್ದೆಂಬುದು ತಿಳಿದುಬರುವುದಿಲ್ಲ. ಕಾರಣ ಶಾಸನದ ಅಕ್ಷರಗಳು ತ್ರುಟಿತಗೊಂಡಿವೆ. ‘ಅರಸಿ’ ಎಂಬ ಶಬ್ದ ಶಾಸನದಲ್ಲಿ ಉಲ್ಲೇಖವಾಗಿದೆ.

ಸ್ತ್ರೀಯೊಬ್ಬಳ ಆಳ್ವಿಕೆಯನ್ನು ತಿಳಿಸುವ ಶಾಸನವಿದು ಎಂಬ ವಿಚಾರ ಸಮಾಧಾನ ತರಿಸುವ ಸಂಗತಿಯೇ ಆಗಿದೆ. ಸ್ತ್ರೀಯರು ಅವಕಾಶ ಸಿಕ್ಕರೆ ತಮ್ಮ ಕರ್ತವ್ಯವನ್ನು ಸಮರ್ಥವಾಗಿ ನಿರ್ವಹಿಸಬಲ್ಲರು. ಆದರೆ ಅಂತಹ ಅವಕಾಶಗಳು ಸ್ತ್ರೀಯರಿಗೆ ಸಿಗುತ್ತಿದ್ದುದು ಅತ್ಯಂತ ವಿರಳದ ಸಂಗತಿಯಾಗಿದೆ. ಸ್ತ್ರೀಯರು ಆಳ್ವಿಕೆ ನಡೆಸುವ ಅನಿವಾರ್ಯ ಸ್ಥಿತಿಗೆ ಕೆಲವು ಕಾರಣಗಳಲ್ಲಿ ಮುಖ್ಯವಾಗುತ್ತವೆ.

* ರಾಜ್ಯದ ಆಳ್ವಿಕೆ ನಡೆಸುತ್ತಿದ್ದ ರಾಜ ಯುದ್ಧದ ಸಂದರ್ಭದಲ್ಲೋ ಅನಾರೋಗ್ಯದಿಂದ ಮಡಿದಾಗಲೋ ಅನಿವಾರ್ಯವಾಗಿ ರಾಣಿ ಅಧಿಕಾರಕ್ಕೆ ಬರುತ್ತಿದ್ದಳು.
* ಮಕ್ಕಳು ಅಪ್ರಾಪ್ತವಯಸ್ಕರಿರುವಾಗ ಅಧಿಕಾರ ವಹಿಸಿಕೊಳ್ಳುತ್ತಿದ್ದಳು.
* ರಾಜ್ಯವನ್ನಾಳಲು ಉತ್ತರಾಧಿಕಾರಿಗಳು ಯಾರು ಇಲ್ಲದ ಸಂದರ್ಭ, ಜೊತೆಗೆ ಪತಿ ಮರಣಿಸಿದ್ದರೆ, ಪತಿಯು ಅನಾರೋಗ್ಯದಿಂದ ನರಳುತ್ತಿದ್ದರೆ ಅಧಿಕಾರ ವಹಿಸಿಕೊಳ್ಳಲಾಗುತ್ತಿತ್ತು.
* ವಿಶೇಷ ಸಂದರ್ಭವೆಂದರೆ ಸಹಜವಾಗಿಯೇ ರಾಜನು ಮಹಾತ್ವಾಕಾಂಕ್ಷೆ ಹೊಂದಿದವನಾಗಿರುತ್ತಿದ್ದನು. ತನಗೆ ಪ್ರಿಯವಾದುದನ್ನು ತಾನು ಅನುಭವಿಸಬೇಕೆಂಬ ಹಂಬಲ ಹೊಂದಿರುತ್ತಿದ್ದನು. ಇದರಿಂದ ಸಹಜವಾಗಿಯೇ ಇಬ್ಬರು, ಮೂವರು ಪತ್ನಿಯರನ್ನು ವಿವಾಹವಾದ ಸಂದರ್ಭಗಳೇ ಹೆಚ್ಚು. ಭವಿಷ್ಯ ಇವರಲ್ಲಿ ಹೊಂದಾಣಿಕೆ ಬಾರದ ಸಂದರ್ಭದಲ್ಲಿ ಸವತಿ ಮತ್ಸರ ಹೆಚ್ಚಾಗುತಿತ್ತು. ಇಂತಹ ಆಂತರಿಕ ಕಲಹಗಳನ್ನು ಬಗೆಹರಿಸಲು ತನಗೆ ಸಂಬಂಧಿಸಿದ ಕೆಲವು ಪ್ರದೇಶಗಳ ಆಳ್ವಿಕೆ ನೋಡಿಕೊಳ್ಳಲು ತನ್ನ ಪತ್ನಿಗೆ ಅಧಿಕಾರವಹಿಸಿ ಕೊಡುತ್ತಿದ್ದನು. ಕೆಲವೊಮ್ಮೆ ರಾಜನು ತಾನು ಆಳ್ವಿಕೆ ನಡೆಸಲು ಆ ಪ್ರದೇಶ ಬಹುದೂರವಿದ್ದಾಗ ಅದರ ಉಸ್ತುವಾರಿ ಸಾಧ್ಯವಾಗದಿದ್ದ ಸಂದರ್ಭ ಬಂದೊದಗುತ್ತಿತ್ತು. ಅಂತಹ ಸಂದರ್ಭದಲ್ಲಿ ತನ್ನ ಹಲವಾರು ಹೆಂಡತಿಯರಲ್ಲಿ ಒಬ್ಬರನ್ನು ಆಡಳಿತ ನಿರ್ವಹಣೆಯ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳಲು ನೇಮಿಸುತ್ತಿದ್ದನು.

ಚಿತ್ರದುರ್ಗ ಜಿಲ್ಲೆ, ಮೊಳಕಾಲುಮೂರು ತಾಲೂಕು, ದೇವಸಮುದ್ರದ ಹೋಬಳಿ, ಸಿದ್ದಾಪುರ ಗ್ರಾಮದ ಬ್ರಹ್ಮಗಿರಿ ಬೆಟ್ಟದಲ್ಲಿರುವ ತ್ರಿಶಂಕೇಶ್ವರ ದೇವಸ್ಥಾನದ ರಂಗಮಂಟಪದಲ್ಲಿ ಒಂದು ಶಾಸನ ದೊರೆತಿದೆ. ಈ ಶಾಸನದ ಕಾಲದ ಬಗ್ಗೆ ತಿಳಿದುಬರುವುದಿಲ್ಲ. ಹೊಯ್ಸಳ ಚಕ್ರವರ್ತಿ "ವೀರಸೋಮೇಶ್ವರನ ಪತ್ನಿ ಬಿಜ್ಜಲದೇವಿ"[೨೬]ಯ ಉಲ್ಲೇಖ ಶಾಸನದಲ್ಲಿದೆ. ಶಾಸನದ ತುಂಬೆಲ್ಲ ಬಿಜ್ಜಲದೇವಿಯ ಪತಿ ಮತ್ತು ಮಗನ ವೈಭವೀಕರಣವೇ ಕಂಡುಬರುತ್ತದೆ. ಆದರೆ ಬಿಜ್ಜಲದೇವಿಯ ಹೆಸರನ್ನು ಬಿಟ್ಟರೆ ಇವಳ ಬಗೆಗಿನ ಯಾವ ಮಾಹಿತಿಯೂ ಶಾಸನದಲ್ಲಿ ದೊರಕುವುದಿಲ್ಲ. ಈ ಕಾಲವನ್ನು ಹೇಳುವ ಅಕ್ಷರಗಳು ಶಾಸನದಲ್ಲಿ ತ್ರುಟಿತಗೊಂಡಿವೆ.

ಕ್ರಿ.ಶ.೯೬೧ರ ಶಾಸನವೊಂದು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕು ಪರಶುರಾಮಪುರ ಹೋಬಳಿ ರಾಮಸಮುದ್ರ ಗ್ರಾಮದ ಜಟ್ಟಂಗ ರಾಮೇಶ್ವರ ಬೆಟ್ಟದಲ್ಲಿ ನಾಗರ ಪಡೆಗುಂಡಿನಲ್ಲಿ ದೊರೆತಿದೆ. ಇದು ಈ ಸ್ಥಳದ ಎರಡನೇ ಶಾಸನವಾಗಿದೆ. ಈ ಶಾಸನವು ರಾಮಾಯಣದ ದಶರಥ ಮಗ ಶ್ರೀರಾಮನ ಪತ್ನಿಯಾದ "ಸೀತೆಯಂ ರಾವಣನುಂಯೆ ಜಟಾಯುಕಾದಿ ಸತ್ತಲ್ಲಿ ರಾಮ ಪ್ರತಿಷ್ಠೆಗೆಯ್ದು...."[೨೭] ಸೀತೆಯನ್ನು ಅಪಹರಿಸಿದ ಸಂದರ್ಭವನ್ನು ನೆನಪಿಗೆ ತರುವ ಶಾಸನ ಇದಾಗಿದೆ. ಸುಂದರವಾದ ಹೆಣ್ಣುಗಳೆಲ್ಲವನ್ನು ಮನಸ್ಸಿನಲ್ಲಿಯಾದರೂ ಆಸೆಪಡುವ ಸ್ವಭಾವ ಪುರುಷನದು. ಅಂತೆಯೇ ರಾವಣನೂ ಸಹ ಸೀತೆಯನ್ನು ಮೋಹಿಸುತ್ತಾನೆ.

ಅಲ್ಲದೆ ರಾಮನಿಲ್ಲದ ವೇಳೆಯಲ್ಲಿ ಅವಳನ್ನು ಅಪಹರಿಸುತ್ತಾನೆ. ಹೆಣ್ಣನ್ನು ವಸ್ತುವೆಂಬಂತೆ ಭಾವಿಸಿ ಅವಳನ್ನು ಪಡೆಯಲೆಂದು ಯುದ್ಧ ನಡೆಸಿದ ಪ್ರಸಂಗಗಳು ರಾಮಾಯಣ ನಡೆದ ಕಾಲದಿಂದಲೇ ರೂಢಿಯಲ್ಲಿದ್ದವೆಂಬುದಕ್ಕೆ ಈ ಶಾಸನ ಸಾಕ್ಷಿಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು(ತಾಲೂಕು) ಹೋಬಳಿ ನುಂಕೆ ಗ್ರಾಮದ ಮಲ್ಲಿಕಾರ್ಜುನ ದೇವಾಲಯದ ಹಿಂದೆ ಹುಟ್ಟುಗುಂಡಿನ ಪಶ್ಚಿಮದ ಕಡೆ ಶಾಸನವೊಂದು ದೊರೆತಿದೆ. ಈ ಶಾಸನದ ಕಾಲ ಕ್ರಿ.ಶ.೯೮೮ ಎಂದು ತಿಳಿದುಬರುತ್ತದೆ. ಈ ಶಾಸನದಲ್ಲಿ "ಶ್ರೀಮದಜವರ್ಮ್ಮರಸನುಂ ಮಾಳಿಯೆಬ್ಬರಸಿಯುಂ..."[೨೮] ಜವರ್ಮ್ಮರಸ ಮತ್ತು ಮಾಳಿಯೆಬ್ಬರಸಿಯರು ಸ್ವಸ್ತಿ ಸಕನ್ರಿಪಕಾಲಾತೀತ ಸಂವತ್ಸರಸತಂಗ ೯೧೦ನೆಯ ಸರ್ವಜಿತ್ಸಂವರದ ಪುಶ್ಯಮಾಸ ಅಮವಾಸೆ ಗ್ರಹಣದಂದು ಗಜಿಯಕಪ್ಪಡಯರ ಕಾಲಂ ಕರ್ಚ್ಚಿ ಧಾರಾಪೂರ್ವಕವಾಗಿ ಮಾಡಿಬಿಟ್ಟ ವೃತ್ತಿ ಎಪ್ಪತ್ತರ ಬಳಿಯ ಎಡೆಯೂರ ಗ್ಯುಯ್ಯಲಿನಲ್ಲಿ ತನ್ನ ಪ್ರತಿಷ್ಠೆ ಮಾಡಿಸಿದಳೆಂದು ಶಾಸನ ತಿಳಿಸುತ್ತದೆ. ಅಲ್ಲದೆ ಲುಂಕೇಶ್ವರ ದೇವರಿಗೆ ತುಂಬುರ ಬೆಳೆದ ಬೋಗಿನಲ್ಲಿ ಎಡೆಯೂರ ಹೊಲದೊಳಗೆ ಹನ್ನೆರಡು ಪನ್ನಾಯಕೊಳ ಗದ್ದೆಯನ್ನು ದಾನವಾಗಿ ಬಿಟ್ಟಳೆಂದು ಶಾಸನ ತಿಳಿಸುತ್ತದೆ.

ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲೂಕು, ಮಾರಿಕಣಿವೆ ಅಣೆಯ ಸೇತುವೆಯ ಎಡಮಂಟಪದಲ್ಲಿ ಆಳೆತ್ತರದ ಅಮೃತಶಿಲೆಯ ಸುಂದರವಾದ ಶಾಸನ ದೊರೆತಿದೆ. ಈ ಶಾಸನವು ನಾಲ್ವಡಿ ಕೃಷ್ಣರಾಜ ಒಡೆಯರು ಮಹಾತಟಾಕವನ್ನು ತನ್ನ ತಾಯಿಯವರಾದ ಶ್ರೀವಾಣಿವಿಲಾಸ ಸನ್ನಿಧಾನ ಅವರ ಆಜ್ಞೆಯ ಮೇರೆಗೆ ಕಟ್ಟಿಸಿದರೆನ್ನಲಾಗಿದೆ.

ಹೊಸದುರ್ಗ ತಾಲೂಕು ಹೆಗ್ಗೆರೆಯ ಶಾಸನವೊಂದರಲ್ಲಿ ಬಸದಿಯ ಅಷ್ಟವಿಧದ ಅರ್ಚನೆಗಾಗಿ ಹಾಗೂ ಋಷಿಗಳ ಆಹಾರಕ್ಕಾಗಿ ಶಾಂತಲದೇವಿಯಪತಿ ಬಿಟ್ಟಿದೇವನು ತನ್ನ ಶ್ರೇಯಸ್ಸಿಗಾಗಿ ೧೦೮೩ ಪ್ರಜೆಗಳಿಂದ ಬರುತ್ತಿದ್ದ ಸುಂಕವನ್ನು ಬಿಟ್ಟುಕೊಟ್ಟನು. ಈ ಶಾಸನದ ಕಾಲದ ವಿವರ ಲಭ್ಯವಾಗುವುದಿಲ್ಲ.

ಮಕ್ಕಳದೇವರ ಮಠದ ಕ್ರಿ.ಶ.೧೭೩೮ರ ತಾಮ್ರಶಾಸನವು[೨೯] ಕಳಲೆ ನಂಜರಾಜಯ್ಯರು ತಮ್ಮ ಮಾತೃಶ್ರೀ ಮೀನಾಕ್ಷಮ್ಮನವರ ಉಮಾಮಹೇಶ್ವರ ಪ್ರೀತ್ಯರ್ಥವಾಗಿ ದಾನ ನೀಡಿದರು. ಅದರಂತೆ ಚಿತ್ರದುರ್ಗ ಮಠದ ಧರ್ಮೋಪಯುಕ್ತತೆಗೆ ಹುಲಿಕಲ್ಲ ಕೃಷ್ಣರಾಜ ಗೌಡನಿಂದ ಕ್ರಯದ ಮೂಲಕ ಪಡೆದುಕೊಂಡ ಹೊನ್ನಪುರ ಗ್ರಾಮವನ್ನು ಬಸವರಾಜ ಪುರವೆಂದು ಪುನರ್ನಾಮಕರಣ ಮಾಡಿದರು. ಅಲ್ಲದೆ ಲಿಂಗ ಮುದ್ರೆ ಕಲ್ಲು ಸ್ಥಾಪಿಸಿ ಸದರಿಮ–ಕ್ಕೆ ಕೊಟ್ಟೆವು ಎಂದು ತಿಳಿಸಿರುವುದು ಶಾಸನದಲ್ಲಿ ಕಂಡುಬರುತ್ತದೆ.

ಮೇಲ್ಕಾಣಿಸಿದ ರಾಣಿಯರ ಬಗೆಗಿನ ಉಲ್ಲೇಖಿತ ಶಾಸನಗಳನ್ನು ಗಮನಿಸಿದರೆ ರಾಣಿಯರು ಅರಸನ ಪತ್ನಿಯರಾಗಿ ಕಾಣುತ್ತಾರೆ. ಅಲ್ಲದೆ ವಂಶೋದ್ಧಾರಕರನ್ನು ಹೆರುವ ಯಂತ್ರವಾಗಿ ಕಂಡುಬರುತ್ತಾರೆ. ಪುರುಷ ಮೇಲುಗೈ ಸಾಧಿಸಿದ ಈ ಸಮಾಜ ವ್ಯವಸ್ಥೆಯಲ್ಲಿ ಹೆಣ್ಣು ಪುರುಷನ ಎಲ್ಲ ಬಯಕೆಗಳನ್ನು ಈಡೇರಿಸುವ ಸಾಧನವಾಗಿಯಷ್ಟೇ ಕಾಣಿಸುತ್ತಾಳೆ.

ಒಂದು ವೇಳೆ ಹೆಣ್ಣಿಗೆ ಅಧಿಕಾರ ದೊರೆತರು ಪುರುಷ ವ್ಯವಸ್ಥೆಯ ಎದುರು ಹೆಚ್ಚು ಕಾಲ ಉಳಿಯುವ ಸಾಧ್ಯತೆಗಳು ಕಡಿಮೆ ಇರುತ್ತವೆ. ಅಂದಿನ ರಾಣಿಯರ ಅಧಿಕಾರಕ್ಕೆ ಸಂಬಂಧಿಸಿದಂತೆ ಕೆಲವೊಮ್ಮೆ ಮಾತ್ರ ಅಧಿಕಾರ ದೊರೆತು ಸಮರ್ಥವಾಗಿ ಕಾರ್ಯನಿರ್ವಹಿಸಿದ ಸಂದರ್ಭಗಳು ನಮ್ಮ ಇತಿಹಾಸದಲ್ಲಿ ಅಲ್ಲೊಂದು ಇಲ್ಲೊಂದು ದೊರೆಯುವುದುಂಟು. ಸ್ತ್ರೀಯರು ಕೆಲವೊಂದು ದೈಹಿಕ ಸಮಸ್ಯೆಗಳಿಂದ ಬಳಲುತ್ತಾರೆ ನಿಜ. ಆಗೆಂದ ಮಾತ್ರಕ್ಕೆ ಅವರು ದುರ್ಬಲರಲ್ಲ. ಅವರ ಸಹನೆ ಅಸಹಾಯಕತೆಯಲ್ಲ, ಆದರೆ ಸಮಾಜ ಆಗೆಂದೇ ಭ್ರಮಿಸಿದೆ. ಇಂದಿಗೂ ರಾಜಕೀಯ ವ್ಯವಸ್ಥೆಯಲ್ಲಿ ಸರ್ಕಾರ ತಾರತಮ್ಯವನ್ನು ಎಸಗುತ್ತಿದೆ. ಮಹಿಳೆಯರು ಮೀಸಲಾತಿ ಎಂದು ಭಾಷಣಗಳಲ್ಲಿ ಮಾತಿಗಾಗಿ ಮಾತನಾಡಿ ರಾಜಕಾರಣಿಗಳು ಮುಗಿಸಿಬಿಡುತ್ತಾರೆ. ಇಂದಿಗೂ ಮಹಿಳೆಯರಿಗೆ ಶೇ.೫೦% ರಷ್ಟು ಸ್ಥಾನವನ್ನು ರಾಜಕೀಯದಲ್ಲಿ ನೀಡಲಾಗಿಲ್ಲ. ಶೇ.೩೩% ರಷ್ಟು ನೀಡಲಾಗಿದೆ ಎಂದು ಹೇಳಿದಾಗಲೂ ಅದು ಸಂಪೂರ್ಣವಾಗಿ ತಲುಪುತ್ತಿಲ್ಲ. ಎಷ್ಟೋ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಗೆದ್ದ ಮಹಿಳೆಯರ ಸ್ಥಾನವೆಲ್ಲಾ ಕೇವಲ ಸಹಿಗಷ್ಟೆ ಆಗಿರುತ್ತದೆ. ಉಳಿದೆಲ್ಲಾ ಕಾರ್ಯಾಭಾರ ಪುರುಷನದೇ ಆಗಿರುತ್ತದೆ. ಪುರುಷನ ಸದಾ ಸೇವೆಗೆ ಹೆಣ್ಣಿನ ಜೀವನ ಮುಡುಪಾಗುತ್ತಿದೆ.

ಕೆಲವೊಂದು ಮಹಿಳೆಯರು ತಮ್ಮ ಅಧಿಕಾರದ ಅವಧಿಯಲ್ಲಿ ಹಲವಾರು ದೇವಾಲಯಗಳಿಗೆ ದಾನ, ದತ್ತಿಗಳನ್ನು ನೀಡಿ ಶಾಸನಗಳನ್ನು ಕೆತ್ತಿಸಿದ್ದಾರೆ. ಇದು ಅವರು ಧಾರ್ಮಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಬಿಂಬಿಸುತ್ತದೆ.

ಶಾಸನಗಳಲ್ಲಿ ಸ್ತ್ರೀಯರ ವೈವಾಹಿಕ ಪ್ರಸಂಗ

ಶಾಸನಗಳನ್ನು ಗಮನಿಸಿದಾಗ ಸ್ತ್ರೀಯರ ವೈವಾಹಿಕ ಸಂಬಂಧಗಳು ಬಹುತೇಕ ಅವರ ಇಚ್ಛೇಗನುಸಾರವಾಗಿ ನಡೆಯುತ್ತಿರಲಿಲ್ಲ. 'ಸ್ವಯಂವರ' ಪದ್ಧತಿಗಳು ನಡೆದಿರುವ ಉಲ್ಲೇಖಗಳು ರಾಜಮನೆತನಗಳಲ್ಲಿ ಸಿಗಬಹುದು. ಆದರೆ ಹೆಚ್ಚಾಗಿ ಸ್ತ್ರೀಯರ ವೈವಾಹಿಕ ಜೀವನ ರಾಜಕೀಯ ತಂತ್ರಗಳಲ್ಲಿ ಬೆರೆತು ಹೋಗುತಿತ್ತು. ಅರಸರು ತಮ್ಮ ಸ್ವಹಿತಾಸಕ್ತಿ ಮಹತ್ವಾಕಾಂಕ್ಷೆಗಳಿಗೆ ತಮ್ಮ ಮಕ್ಕಳನ್ನು ಅವರಿಗೆ ಇಷ್ಟವಿರುತಿತ್ತೊ ಇಲ್ಲವೋ ತಮ್ಮಿಚ್ಛೆ ಬಂದವರಿಗೆ ಕೊಟ್ಟು ವಿವಾಹ ಮಾಡುತ್ತಿದ್ದರು.

ಕ್ರಿ.ಶ.೮ನೇ ಶತಮಾನದ ಶಾಸನವೊಂದು ಹೊಸದುರ್ಗ ತಾಲೂಕು ನೀರಗುಂದದಲ್ಲಿ ದೊರೆತಿದೆ. ಇದರಲ್ಲಿ ರತ್ನಪುರಿ(ಲಕ್ಕವಳ್ಳಿಯ ಬಳಿ) ದೇಶದ ಸೋಮಶೇಖರ, ಚಿತ್ರಶೇಖರ ಎಂಬ ಇಬ್ಬರು ಸಹೋದರರು ಸೌಂದರ್ಯಕ್ಕೆ ಹೆಸರಾದ ನೀರಗುಂದದ ರಾಜಕುಮಾರಿ ರತ್ನವತಿಯನ್ನು ವಿವಾಹವಾಗಲು ಬಯಸಿದರು. ತಮ್ಮ ಬಯಕೆಯನ್ನು ಗುಪ್ತವಾಗಿ ಬಂದು ರಾಜನಿಗೆ ತಿಳಿಸಿದರು. ಆಗ ರಾಜನು ಪಟ್ಟಣದ ಹೊರಗೆ ಸಿಂಹವೊಂದು ಪಟ್ಟಣದ ಜನರಿಗೆ ತೊಂದರೆ ಕೊಡುತ್ತಿರುವುದಾಗಿ ತಿಳಿಸಿದನು. ಅಲ್ಲದೆ ಅದನ್ನು ಕೊಂದವರಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡುವುದಾಗಿ ತಿಳಿಸಿದನು. ಇವರಿಬ್ಬರು ರಾಜಕುಮಾರರು ೪೫ ದಿನಗಳ ಕಾಲ ನೀಲವತಿ ಪಟ್ಟಣದ ನರ್ತಕಿಯ ಮನೆಯಲ್ಲಿ ಆಶ್ರಯ ಪಡೆಯುತ್ತಾರೆ. ಸಿಂಹವನ್ನು ಕೊಂದು ಬಾಲವನ್ನು ಕತ್ತರಿಸಿ ತಮ್ಮ ಬಳಿಯಲ್ಲಿ ಇಟ್ಟುಕೊಳ್ಳುತ್ತಾರೆ. ಸತ್ತು ಬಿದ್ದ ಸಿಂಹವನ್ನು ಕಂಡ ಜಾಡಯಾಲಿಯೊಬ್ಬನು ಅದರ ನಾಲಿಗೆಯನ್ನು ತುಂಡರಿಸಿಕೊಂಡು ರಾಜನಿಗೊಪ್ಪಿಸಿದನು. ತಾನೇ ಸಿಂಹವನ್ನು ಕೊಂದೆ ಎಂದು ಅರಸನಿಗೆ ತಿಳಿಸಿ ರಾಜಕುಮಾರಿಯನ್ನು ವಿವಾಹವಾಗಲು ಸಿದ್ಧನಾಗುತ್ತಾನೆ. ಈ ವಿಷಯ ತಿಳಿದ ರಾಜಕುಮಾರರು ಅರಸನ ಬಳಿ ಹೋಗಿ ನಡೆದ ವೃತ್ತಾಂತವನ್ನು ತಿಳಿಸಿದರು. ಆಗ ಅರಸನು ರತ್ನವತಿಯನ್ನು ಚಿತ್ರಶೇಕರನಿಗೆ ಕೊಟ್ಟು ವಿವಾಹ ಮಾಡುತ್ತಾನೆ.

ಪ್ರಬಲನಾದ ಅರಸ ತನ್ನ ಎದುರಾಳಿ ಎಂದು ರಾಜನಾದವನಿಗೆ ತಿಳಿದುಬಂದರೆ ಅವನು ತಕ್ಷಣ ಸಂಧಾನ ಮಾಡಿಕೊಳ್ಳುತ್ತಿದ್ದನು. ತನ್ನ ಮಗಳನ್ನು ಕೊಟ್ಟು ವಿವಾಹ ಮಾಡುವುದರ ಮೂಲಕ ತನ್ನ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಿದ್ದನು. ಆದರೆ ವಿಧಿಯಿಲ್ಲದೆ ಹೆಣ್ಣು ಆಹಾರವಾಗಬೇಕಿತ್ತು. ಅಲ್ಲದೆ ಪ್ರಬಲ ಅರಸನಿಗೆ ಎಷ್ಟು ಜನ ಪತ್ನಿಯರಿದ್ದರೂ ಸಹ ವೈವಾಹಿಕ ಸಂಬಂಧ ಬೆಳೆಸುತ್ತಿದ್ದರು. ಅಲ್ಲದೆ ಸಾಮರ್ಥ್ಯವುಳ್ಳ ರಾಜನು ವಿವಾಹದ ವಯಸ್ಸನ್ನು ದಾಟಿದ್ದರೂ ಸಹ ದುರ್ಬಲರಾದ ಅರಸರು ತಮ್ಮ ಮಕ್ಕಳನ್ನು ಕೊಟ್ಟು ವಿವಾಹ ಮಾಡುವುದರೊಂದಿಗೆ ವೈವಾಹಿಕ ಸಂಬಂಧ ಬೆಳೆಸುತ್ತಿದ್ದರು. ಚಿತ್ರದುರ್ಗದ ಪಾಳೇಗಾರ ಅರಸು ತಿಮ್ಮಣ್ಣನಾಯಕನು ತನ್ನ ಮಗಳು ಹೊನ್ನವ್ವನನ್ನು ಉಚ್ಚಂಗಿದುರ್ಗದ ಬಳವಳಿಯೊಂದಿಗೆ ದಾದಾನಾಯಕನಿಗೆ ಕೊಟ್ಟು ವಿವಾಹ ಮಾಡುತ್ತಾನೆ.

ದುರ್ಗದ ದಂಡು ರಾಯದುರ್ಗ ಮುತ್ತಿದಾಗ ಅಲ್ಲಿನ ಅರಸ ಬೊಮ್ಮಣ್ಣ ಶರಣು ಬರುತ್ತಾನೆ. ಆಗ ದುರ್ಗದ ದೊರೆ ಚಿಕ್ಕಣ್ಣ ನಾಯಕನು ಅವನ ಮಗಳು ಮಲ್ಲವ್ವನನ್ನು ಕೊಟ್ಟು ವಿವಾಹ ಮಾಡಿ ರಾಯದುರ್ಗವನ್ನು ಬಿಟ್ಟುಕೊಡುತ್ತಾನೆ.

ಹೊಸದುರ್ಗ ತಾಲೂಕು ಮತ್ತೋಡನ್ನು ಆಳ್ವಿಕೆ ಮಾಡುತ್ತಿದ್ದ ಅರಸನಿಗೆ ಹಾಲಪ್ಪನಾಯಕ, ಸಿದ್ದಪ್ಪನಾಯಕರೆಂಬ ಮಕ್ಕಳಿದ್ದರು. ಈ ಇಬ್ಬರು ಮಕ್ಕಳಲ್ಲಿ ಕಿರಿಯ ಮಗ ಸಿದ್ದಪ್ಪನಿಗೆ ಪಟ್ಟ

ದೊರೆಯುತ್ತದೆ. ಹಿರಿಯ ಮಗನಾದ ಹಾಲಪ್ಪ ನಾಯಕನು ದುರ್ಗದವರ ಮೊರೆ ಹೋಗಿ ತನ್ನ ತಮ್ಮನನ್ನು ಅಧಿಕಾರಕ್ಕಾಗಿ ಸೆರೆಯಲ್ಲಿಡಿಸುತ್ತಾನೆ. ಸೆರೆಯಲ್ಲಿದ್ದ ಸಿದ್ದಪ್ಪನಾಯಕ ಹಿರಿಯ ಮದಕರಿ ನಾಯಕನ ಮಗಳನ್ನು ವಿವಾಹವಾಗುತ್ತಾನೆ. ಭವಿಯಾದ ತನ್ನ ಮಗಳನ್ನು ಸಿದ್ಧಪ್ಪ ವಿವಾಹವಾದುದರಿಂದ ಮದಕರಿನಾಯಕ ಸಿದ್ದಪ್ಪನನ್ನು ಮತ್ತೋಡಿನ ರಾಜನನ್ನಾಗಿ ಮಾಡುತ್ತಾನೆ. ಸಿದ್ಧಪ್ಪ ಭವಿನಾಗತಿಯನ್ನು ವಿವಾಹವಾದಾಗ ಜನರು ಅವಳ ಬಗ್ಗೆ ಅಸಮಾಧಾನಗೊಳ್ಳುತ್ತಾರೆ. ಮತ್ತೋಡಿನ ಮುರುಘಾಮಠಕ್ಕೆ ಬಂದು ಮತಾಂತರ ಹೊಂದುತ್ತಾರೆ.

ಇಂದಿನ ಸಮಾಜದಲ್ಲಿಯೇ ಅಂತರ್ಜಾತಿಯ ವಿವಾಹಗಳಿಗೆ ಮನ್ನಣೆ ದೊರೆಯದ ಅವಧಿಯಲ್ಲಿ, ಅಂದಿನ ಸ್ಥಿತಿ ಯಾವ ಮಟ್ಟದ್ದಿರಬೇಕು. ವಿವಾಹವೆಂಬುದು ಹೇಗಾದರೂ ಜರುಗಲಿ ಅದಕ್ಕೆಲ್ಲ ಬಲಿಪಶುವಾಗುವವಳು ಸ್ತ್ರೀಯೇ ಆಗಿರುತ್ತಾಳೆ. ಪುರುಷ ತನ್ನ ಸ್ವಾರ್ಥ ಸಾಧನೆಗೋಸ್ಕರ ಹೆಣ್ಣನ್ನು ಆಟದ ದಾಳವಾಗಿ ಉಪಯೋಗಿಸಿಕೊಂಡಿದ್ದಾನೆ. ಇಂದಿಗೂ ಅದೇ ರೀತಿಯ ಸಮಾಜ ಮುಂದುವರಿದುಕೊಳ್ಳುತ್ತಲೇ ಬಂದಿದೆ. ಸ್ವಲ್ಪ ಬದಲಾವಣೆಗಳು ಇಂದು ಆಗಿದ್ದರೂ ಸಹ ಸಮುದ್ರದಲ್ಲಿನ ಒಂದು ಮೀನಿನಂತಾಗಿದೆ ಎಂದರೆ ತಪ್ಪಾಗಲಾರದು.

೨.೨. ಅಧಿಕಾರದ ವರ್ಗದ ಸ್ತ್ರೀಯರಾಗಿ ಮಾಂಡಳೀಕ, ಸಾಮಂತ ಸ್ತ್ರೀಯರು

೨.೧. ಮಾಂಡಳೀಕರ ಆಳ್ವಿಕೆಯಲ್ಲಿ ಸ್ತ್ರೀಯರು

ಪ್ರಬಲನಾದ ಅರಸನು ತಾನು ಗೆದ್ದ ಪ್ರದೇಶಗಳನ್ನು ನೋಡಿಕೊಳ್ಳಲು ಹಲವಾರು ಅಧಿಕಾರಿ ವರ್ಗಗಳನ್ನು ನೇಮಿಸುತ್ತಿದ್ದನು. ಅಂತಹ ಅಧಿಕಾರಿ ವರ್ಗಗಳಲ್ಲಿ ಮಾಂಡಳೀಕರು ಪ್ರಮುಖರಾಗಿದ್ದಾರೆ. ಪ್ರಬಲರಾಜನಿಗೆ ಸೋತು ತಾವು ಆಳ್ವಿಕೆ ನಡೆಸುವ ಪ್ರದೇಶದ ಇಂತಿಷ್ಟು ಭಾಗವನ್ನು ಅರಸನಿಗೆ ಸಲ್ಲಿಸಬೇಕಿತ್ತು. ಚಿತ್ರದುರ್ಗವನ್ನು ಪಾಳೇಗಾರ ಸಂತತಿಯವರು ಆಳ್ವಿಕೆ ನಡೆಸುತ್ತಿದ್ದಾಗ ಇವರು ವಿಜಯನಗರದ ಅರಸರ ಮಾಂಡಳೀಕರಾಗಿದ್ದರು.

ಸಂದರ್ಭ ದೊರೆತರೆ ಮಹಿಳೆಯರು ಧೈರ್ಯಶಾಲಿಗಳೆಂಬುದು ವ್ಯಕ್ತವಾಗುತ್ತದೆ. ಅಂತಹ ನಿದರ್ಶನಕ್ಕೆ ಸಾಕ್ಷಿಯಾಗಿ ಚಿತ್ರದುರ್ಗದ ಅರಸರ ಆಳ್ವಿಕೆಯಲ್ಲಿ ದಫೇದಾರಿಕೆ ಕೆಲಸದಲ್ಲಿದ್ದ ಸಜ್ಜೆ ಮುತ್ತೆ ಎಂಬಾತನಿಗೆ ಸಂಬಂಧಿಸಿದೆ. ಇವನ ವಂಶಾವಳಿಯೊಂದು ಮ್ಯಾಸ ನಾಯಕರ ಮಂದಲ ದೊರೆ ಧರಣಿ ಕಾಮನಾಯಕನ ವಿವರವನ್ನು ಒದಗಿಸುತ್ತದೆ. ಈ ವಂಶಾವಳಿಯಲ್ಲಿ "೭ ಮಂದಿ ದೊರೆಗಳು, ೭೭ ಮಂದಿ ಪಾಳೇಗಾರರೊಂದಿಗೆ ೧೦೧ ಮಂದಿ ಕೊಮಾರಿಕೆಯರು ಒಟ್ಟಿಗೆ ಬೇಟೆಯಾಡಲು ಹೋಗುತ್ತಿದ್ದರು"[೩೦] ಎಂದು ತಿಳಿದುಬರುತ್ತದೆ.

ಕ್ರಿ.ಶ.೧೪೧೨ರ ಶಾಸನವು ಚಿತ್ರದುರ್ಗ ಬೆಟ್ಟದ ಮೇಲೆ ಹಿಡಿಂಬೇಶ್ವರ ದೇವಾಲಯದ ಸ್ಥಳದಲ್ಲಿ ದೊರೆತಿದೆ.[೩೧] ವಿಜಯನಗರದ ಅರಸು ಶ್ರೀವೀರ ಪ್ರತಾಪದೇವರಾಯರ

ಮಹಾಮಂಡಳೇಶ್ವರನಾದ ಶ್ರೀವೀರ ಮಲ್ಲಣ್ಣವೊಡೆಯ ರಾಗಿದ್ದರು. ಇವರು ತಮ್ಮ ತಾಯಿ ಮಲ್ಲವೆಯ ಹೆಸರಿನಲ್ಲಿ ಬೆಮ್ಮತ್ತನ ಕಲ್ಲಿಗೆ ಸಲುವ ಮೂಡಣದ ಹಳ್ಳಿಯೊಳಗೆ ಕುಂಚಿಗನ ಹಳ್ಳಿಯನ್ನು ಶ್ರೀ ಹಿಡಿಂಬನಾಥ ದೇವರ ಅಂಗರಂಗ ಭೋಗಕ್ಕೆ ದಾನ ನೀಡಿದರು. ಅಲ್ಲದೆ ಗೋಪುರವನ್ನು ಕಟ್ಟಿಸಿ ತನ್ನ ತಾಯಿ ಮಲ್ಲವೆಗೆ ಪರದಲ್ಲಿ ಒಳ್ಳೆಯದಾಗಲೆಂದು ದಾನ ನೀಡಿದ ವಿವರ ಶಾಸನದಲ್ಲಿದೆ.

ಹೊಳಲ್ಕೆರೆ ತಾಲೂಕು ತಾಳ್ಯ ಹೋಬಳಿ ಹೊರಕೆರೆ ದೇವಪುರದಲ್ಲಿ ಕ್ರಿ.ಶ.೧೭೭೬ರ ಶಾಸನವು ಹಜಾಂ ಮಲ್ಲಯ್ಯನ ಹೊಲದ ಪಶ್ಚಿಮದ ಕಡೆ ದೊರೆತಿದೆ.[೩೨] ಶ್ರೀ ಮಂನ್ಮಹಾ ನಾಯಕಾಚಾರ್ಯರಾದ ಕಾಮಗೆತಿ ಕಸ್ತೂರಿ ಭರಮಣ್ಣನಾಯಕರು ಚಿತ್ರದುರ್ಗವನ್ನು ಆಳುತ್ತಿದ್ದರು. ಮದಕರಿ ನಾಯಕರ ಕುಮಾರ ಕಸ್ತೂರಿ ರಂಗಪ್ಪ ನಾಯಕರು, ಕಾಯಿ ಮದಕರಿ ನಾಯಕರು ಹೊರಕೆರ್ರೆ ರಂಗಧಾಮನ ದಡಿಗೆ, ದಾಸರು ಕಂಗಳ ರಂಗದಸನ ವಂಶದ ಹೊಂನಿ ಕೆಂಬಿ ಮಕ್ಕಳು ದಡಿಗೆ ದಸ್ತರಿಗೆ ಹೊರಕೆರೆ ದೇವಪುರದ ಕಂಸ ಬೆದ್ದಲು ಭೂಮಿಯನ್ನು ದಾನನೀಡಿದ ವಿವರವಿದೆ.

ಕ್ರಿ.ಶ.೧೧೨೪ರ ಶಾಸನವು ಚಳ್ಳಕೆರೆ ತಾಲೂಕು ಪರಶುರಾಮಪುರ ಹೋಬಳಿ ಪರಶುರಾಮ ಪುರ ಗ್ರಾಮದ ಕೆರೇಯೇರಿ ಮೇಲೆ ದೊರೆಯುತ್ತದೆ.[೩೩] ಮಹಾಮಂಡಳೇಶ್ವರರಾದ ಗೋಬೂರ ಅವುಭಳೇಶ್ವರ ಆಳ್ವಿಕೆಯ ಕಾಲದಲ್ಲಿ, ಇವರು ತಮ್ಮ ತಂದೆ ರಾಜಯ್ಯರಿಗೂ ತಮ್ಮ ತಾಯಿ ನರಸಮ್ಮನವರಿಗೂ ಪುಣ್ಯವಾಗ ಬೇಕೆಂದು.... ಚನ್ನಕೇಶವ ದೇವರ ಸನ್ನಿಧಿಯಲ್ಲಿ ಕೋಟೆಯ ಕೆರೆಯ ಹಿರಿಯಕೆರೆಯ ಒಳಗೆ ಹುಲ್ಲು ಬೆಳೆಯುವಂತೆ, ಜಾಗವನ್ನು ಬಿಟ್ಟು ದನಕರುಗಳು ಹುಲ್ಲು ಮೇಯುವಂತೆ, ನೀರು ಕುಡಿಯುವಂತೆ ವ್ಯವಸ್ಥೆ ಮಾಡಿದನೆಂದು ಶಾಸನ ಹೇಳುತ್ತದೆ.

ಕ್ರಿ.ಶ.೧೬೬೫ರ ಶಾಸನವು ಮೊಳಕಾಲ್ಮೂರು ತಾಲೂಕು ಪರಶುರಾಮಪುರ ಹೋಬಳಿ ಸಂತೆಗೋವಿ ಗ್ರಾಮದ ದಿಡಿಗೆ ಈಶ್ವರರೈಯನವರಲ್ಲಿದ್ದ ತಾಮ್ರ ಶಾಸನವಾಗಿದೆ.[೩೪] ಈ ಶಾಸನ ಸಾಕಷ್ಟು ತ್ರುಟಿತವಾಗಿದ್ದು, ನಾಗತಿಯವರು ಎಂಬ ಹೆಸರಿನ ಉಲ್ಲೇಖವಿದೆ.

ಮೊಳಕಾಲ್ಮೂರು ತಾಲೂಕು ಮೊಳಕಾಲ್ಮೂರು ಬೆಟ್ಟದ ಮೇಲೆ ಕೆರೆಯ ಬಳಿ ಬಂಡೆಯಲ್ಲಿ ಶಾಸನವೊಂದು ದೊರೆತಿದೆ.[೩೫] ಕಾಲದ ಬಗ್ಗೆ ಶಾಸನದಲ್ಲಿ ಉಲ್ಲೇಖವಿಲ್ಲ. ಈ ಶಾಸನದಲ್ಲಿ ಶ್ರೀ ಮನ್ಮಹಾನಾಯಕಾಚಾರ್ಯ ಹಟಕಸ್ತೂರಿ ಮಲ್ಲಪ್ಪನಾಯಕನವರ ತಾಯಿ ಲಕ್ಷ್ಮಂಮನಗತಿ ಎಂಬ ಉಲ್ಲೇಖವಿದೆ.

ಚಿತ್ರದುರ್ಗವನ್ನು ಪಾಳೇಗಾರರು ಆಳ್ವಿಕೆ ನಡೆಸಿದ್ದು, ಇವರ ವಂಶದಲ್ಲಿ ಒಟ್ಟು ಆರು ಜನ ನಾಗತಿಯರು ರಾಜ್ಯವನ್ನು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಆಳ್ವಿಕೆ ನಡೆಸಿದ್ದಾರೆ. ಆದರೆ ಅವರ ಹೆಸರುಗಳು ಗೆಜೆಟಿಯರ್‌ಗಳಲ್ಲಿ ದಾಖಲಾಗಿಲ್ಲ. ಇತಿಹಾಸ ಪುರುಷ ನಿರ್ಮಿತವೇ

ಆಗಿರುವುದರಿಂದ ಸ್ತ್ರೀಯರ ಆಳ್ವಿಕೆಯನ್ನು ಮರೆಮಾಚಿರುವ ಸಾಧ್ಯತೆಗಳುಂಟು. ಈ ನಾಗತಿಯರು ಆಳ್ವಿಕೆಯನ್ನಷ್ಟೇ ನಡೆಸದೆ ಬಾವಿ, ತೋಟ, ಅಗ್ರಹಾರಗಳನ್ನು ನಿರ್ಮಿಸಿದರೆಂದು ತಿಳಿದುಬರುತ್ತದೆ.

ಇವರ ಆಳ್ವಿಕೆಯ ಕಾಲದಲ್ಲೂ ವಿವಾಹ, ಬಳುವಳಿ, ಕನ್ಯಾಶುಲ್ಕ, ಬಹುಪತ್ನಿತ್ವ, ಸಂತಾನ, ಸತಿಪದ್ಧತಿ, ಬಲಿದಾನ, ಶವಸಂಸ್ಕಾರ ಮೊದಲಾದ ಆಚರಣೆಗಳು ಕಂಡುಬಂದಂತೆ ತಿಳಿದುಬರುತ್ತದೆ. ಎಲ್ಲ ಸಮಾಜಗಳಂತೆ ಚಿತ್ರದುರ್ಗವನ್ನಾಳಿದ ಅರಸರ ಕಾಲದಲ್ಲೂ ಸ್ತ್ರೀಯರ ಬಗೆಗೆ ಹೆಚ್ಚಾಗಿ ಕೆಟ್ಟ ಸಂಪ್ರದಾಯಗಳೇ ಆಚರಣೆಯಲ್ಲಿದ್ದವೆನ್ನಬಹುದು. ಕೆಲವು ಕಡೆ ನಾಗತಿಯರ ಆಳ್ವಿಕೆಯಲ್ಲಿ ಸ್ತ್ರೀ ಸಹಭಾಗಿತ್ವ ಕಂಡುಬರುತ್ತದೆ. ಮತ್ತೆ ಕೆಲವು ಕಡೆ ಸಂಪೂರ್ಣ ಗೌಣವಾಗಿ ಬಿಡುತ್ತದೆ. ಕೆಟ್ಟ ಆಚರಣೆಗಳಿಗೆ ಶಿಖರ ಪ್ರಾಯವೆಂಬಂತೆ ಕನ್ಯಾಶುಲ್ಕ ತೊತ್ತು, ವೇಶ್ಯಾವೃತ್ತಿ, ಬಹುಪತ್ನಿತ್ವ, ಸತಿ ಆಚರಣೆಗಳ ವಿಜೃಂಭಣೆ ಕಂಡುಬರುತ್ತದೆ. ಅಲ್ಲಲ್ಲಿ ವಿದ್ಯಾಭ್ಯಾಸದ ಚಹರೆ ಕಾಣಿಸಿಕೊಂಡರೂ ಅದು ಸಂಗೀತ, ನೃತ್ಯಕ್ಕೇ ಸೀಮಿತವಾಗಿತ್ತು. ಅಲ್ಪ ಸ್ವಲ್ಪ ಕುದುರೆ ಸವಾರಿ, ಖಡ್ಗ, ಯುದ್ಧ ತರಬೇತಿಯ ಶಿಕ್ಷಣಗಳು ಜಾರಿಯಲ್ಲಿದ್ದುದು ಗೋಚರಿಸುತ್ತದೆ. ಒಟ್ಟಿನಲ್ಲಿ ಸ್ತ್ರೀಯರೂ ರಾಜಕೀಯದಲ್ಲಿ ಆಸಕ್ತಿವಹಿಸಿ ಆಳ್ವಿಕೆ ನಡೆಸಿರುವುದು ಚಿತ್ರದುರ್ಗದಲ್ಲಿ ಕಾಣಿಸಿಕೊಳ್ಳುತ್ತದೆ. ಅಲ್ಪ ಪ್ರಮಾಣದಲ್ಲಿ ಸಾಹಿತ್ಯ ಕ್ಷೇತ್ರಕ್ಕೂ ಸ್ತ್ರೀಯರು ತಮ್ಮ ಕೊಡುಗೆ ನೀಡಿದ್ದರೆಂಬುದು ತಿಳಿದುಬರುತ್ತದೆ.

೨.೨. ಸಾಮಂತರ ಆಳ್ವಿಕೆಯಲ್ಲಿ ಸ್ತ್ರೀಯರು

ವಿಸ್ತಾರವಾದ ಸಾಮ್ರಾಜ್ಯದ ಅಧಿಪತಿ ರಾಜನಾಗಿರುತ್ತಿದ್ದನು. ಅವನ ಕೆಳಗೆ ಮಾಂಡಳೀಕರು ಆಳ್ವಿಕೆ ನಡೆಸುತ್ತಿದ್ದರು. ಇವರ ಕೆಳಗೆ ಆಳ್ವಿಕೆ ನಡೆಸುವವರು ಸಾಮಂತರಾಗಿರುತ್ತಿದ್ದರು. ಚಿಕ್ಕ, ಚಿಕ್ಕ ಪಾಳೇಪಟ್ಟುಗಳನ್ನು ಕಟ್ಟಿಕೊಂಡು ಆಳ್ವಿಕೆ ನಡೆಸಿದ ಸಾಮಂತಧಿಕಾರಿಗಳು ಚಿತ್ರದುರ್ಗದ ಹಲವು ಪ್ರದೇಶಗಳಲ್ಲಿ ಕಂಡುಬರುತ್ತಾರೆ.

ಕ್ರಿ.ಶ.೧೨೦೬ರ ಶಾಸನವು ಚಿತ್ರದುರ್ಗ ಜಿಲ್ಲೆಯ ಗಂಜಿಗಟ್ಟಿ ಗ್ರಾಮದ ಬಳಿ ಪಾಂಡುರಂಗ ಬೆಟ್ಟದ ಮೇಲೆ ಚನ್ನೇಶ್ವರ ದೇವಾಲಯದ ಮುಂದೆ ದೊರೆತಿದೆ.[೩೬] ಹೊಯ್ಸಳ ದೊರೆ ನಾರಸಿಂಹದೇವನ ಸಾಮಂತ ಮಾಚಿದೇವನ ಪತ್ನಿ ಕೆಳ್ಳಲೆಯಾಗಿದ್ದಳು. ಇವರಿಬ್ಬರ ಪುತ್ರ ಬಂಮಿದೇವ ಎಂದು ಶಾಸನ ಉಲ್ಲೇಖಿಸತ್ತದೆ.

ಕ್ರಿ.ಶ.೧೧೮೬ರ ಶಾಸನವು ಚಿತ್ರದುರ್ಗ ತಾಲೂಕು ಗಾರೇಹಟ್ಟಿ ಗ್ರಾಮದ ಮಹೇಶ್ವರ ದೇವಾಲಯದ ಒಳಗಡೆ ದೊರೆತಿದೆ.[೩೭] ಈ ಶಾಸನದಲ್ಲಿ ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲನ ಮಹಾಮಾಂಡಳೀಶ್ವರನಾದ ವಿಜಯ ಪಾಂಡ್ಯದೇವ(ಕಾಮರಸದೇವ)ನೊಳಂಬವಾಡಿ ೩೬೦೦೦ವನ್ನು ಉಚ್ಚಂಗಿ ನೆಲೆವೀಡಿನೊಳು ಆಳುತ್ತಿದ್ದನು. ಇವನ ಮಹಾಸಾಮಂತ ಕಾಮಯ್ಯ ನಾಯಕನು ಬಿಂಮ್ಮಚ್ಚ ನೂರ ನೆಲೆ ವೀಡಿನೊಳು ಆಳುತ್ತಿದ್ದನು. ಇವನ ಮಹಾಸಾಮಂತ ಕಾಮಯ್ಯನಾಯಕನು ಬಿಂಮ್ಮಚ್ಚ ನೂರ ನೆಲೆವೀಡಿನೊಳು ಆಳುತ್ತಿದ್ದನು. ತಂಮ್ಮಜ್ಜನುದಯಾದಿತ್ಯ ನಾಯಕರ

ಹೆಗ್ಗಡೆಮಾಚಯನ ಮಗಳು ಗೋತ್ರ ಪವಿತ್ರೆಯುಂ........ ಇವಳು ಲಿಂಗ ಪ್ರತಿಷ್ಠೆಯ ಮಹಾತ್ಮೆಯನ್ನು ಕೇಳಿ ಲಿಂಗ ಪ್ರತಿಷ್ಠೆಯನ್ನು ಮಾಡಿಸಿದಳು. ಅಲ್ಲದೆ ಕಾಮಯ್ಯ ನಾಯಕನನ್ನು ಬೇಡಿಕೊಂಡು ಸಕವರ್ಷ ೧೧೧೦ಲ ಪ್ಲವಂಗ ಸಂವತ್ಸರ ಅಶ್ವಯುಜ ಶುದ್ಧ ಪೌರ್ಣಮಿ ಸೋಮಗ್ರಹಣದಂದು ಭೂಮಿಯನ್ನು ದಾನನೀಡಿದ ವಿವರವಿದೆ. ತನ್ನ ತಂದೆಯನ್ನು ಅವಳು ಬೇಡಿಕೊಂಡು ದಾನ ನೀಡಿರುವ ವಿವರವು ಅವಳ ಪರಾಧೀನತೆಯನ್ನು ಬಿಂಬಿಸುತ್ತದೆ. ಪುರುಷ ಆಳ್ವಿಕೆಯಲ್ಲಿ ಹೆಣ್ಣಿಗೆ ಯಾವ ವಿಧದ ಸ್ವಾತಂತ್ರ್ಯವೂ ಇರಲಿಲ್ಲವೆಂಬುದನ್ನು ಮಾಚನ ಮಗಳ ಮಾತುಗಳು ನಿರೂಪಿಸುತ್ತವೆ.

ಕ್ರಿ.ಶ.೯೭೮ರ ಶಾಸನವೊಂದು ಚಿತ್ರದುರ್ಗ ತಾಲೂಕು ಬೆನಕನಹಳ್ಳಿಯ ಆಂಜನೇಯ ದೇವಾಲಯದ ಪ್ರಾಕಾರದಲ್ಲಿ ದೊರೆತಿದೆ.[೩೮] ಚಾಳುಕ್ಯ ವಂಶದ ದೊರೆ ಕೊಟ್ಟಿಗದೇವನು ಮಾನ್ಯಖೇಟ ವನ್ನು ಆಳುತ್ತಿದ್ದನು. ಆಗ ಇವನ ಮಗ ವಿಕ್ರಮಾದಿತ್ಯ, ಇವನ ಮಗ ಪಿಳ್ಳಿಮಯ್ಯ, ಇವನ ಮಗ ರೇವಣ ಇವನ ಪತ್ನಿ 'ಬಿಕ್ಕಿಯಣ್ಣಂ'ಳಿಗೆ ಸತ್ಪುತ್ರರೋಪಾದಿಯ ಮಹಾಸಾಮಂತ ಕದಂಬಳಿಗೆ ಸಾವಿರವನ್ನು ಆಳುತ್ತಿದ್ದನು. ಸಾಮಂತನಾದ ಪನ್ನಿಗನ ಸತಿಯ ಬಗ್ಗೆ ಶಾಸನ ಹೀಗೆ ಹೇಳುತ್ತದೆ. ಸಕಳ ಜಗನ್ಮಾತೆ ಗುಣವಂತೆ ಜಕ್ಕಿಸುನ್ದರಿ ನೆಗಟ್ದೆ ಖ್ಯಾಯಾತಿಯಕಾಕಂ ಬಾಟಿಲೊಳ್ಮಾತೆಯೊ ಳೊಳ್ಪೆಸೆಯೆ ಬಸದಿಯಂ ಮಾಡಿಸಿದಳ್ ಶಾಸನವು ಜಕ್ಕಿಸುಂದರಿಯಮ್ಮ ಬಸದಿಯನ್ನು ಕಾಕಂಬಾಳಿನಲ್ಲಿ ಮಾಡಿಸಿದ ಬಗ್ಗೆ ಹೇಳುತ್ತದೆ. ಇವಳು ಗುಣಗಣಾಳಂಕ್ರಿತೆ, ಸಮ್ಯಕ್ತಧವಳೆ, ಸುಜನವೆಡಂಗಿ, ಸಹಜ ಸರಸ್ವತಿ, ವಿಳಾಸ ವಿದ್ಯಾಧರಿ ಎಂದು ಶಾಸನ ಪ್ರಸಂಸಿಸುತ್ತದೆ. ಈಕೆ ಗೈದಿರುವ ಈ ಧಾರ್ಮಿಕ ಸಾಧನೆ ಇಲ್ಲಿ ಅತ್ತಿಮಬ್ಬೆಯನ್ನು ನೆನಪಿಗೆ ತರುತ್ತದೆ. ಜಕ್ಕಿಸುಂದರಿಯಮ್ಮ ಮಾಡಿಸಿದ ಕಾಕಂಬಾಳ ಬಸದಿಗೆ ಇವಳ ಪತಿ ಪಂನ್ನಿಗನು ಸಕ ವರ್ಷ ೮೯೦ನೆಯ ಪ್ರಭವ ಸಂವತ್ಸರದ ಪುಷ್ಯಮಾಸದ ಉತ್ತರಾಯಣ ಸಂಕ್ರಾಂತಿಯಂದು, ಅಷ್ಟೋಪವಾಸದ ಭಟಾರರ ಶಿಷ್ಯರಾದ ರಾಮಚಂದ್ರ ಭಟಾರರಿಗೆ ಅದಲೂರು, ಮಳಗವಾಡಿ ಎಂಬ ಎರಡು ಊರುಗಳಿಗೆ ಐವತ್ತು ಗದ್ಯಾಣ ದಾನ ನೀಡಿದ ವಿವರ ಶಾಸನದಲ್ಲಿದೆ. ದಾನವನ್ನು ನೀಡಿ ಹೆಂಡತಿಯನ್ನು ಪ್ರೋತ್ಸಾಹಿಸಿದ ಕೀರ್ತಿ ಇಲ್ಲಿ ಜಕ್ಕಿ ಸುಂದರಿಯಮ್ಮನ ಪತಿಗೆ ಸಲ್ಲುತ್ತದೆ. ಸ್ತ್ರೀಯೊಬ್ಬಳು ಬಸದಿ ನಿರ್ಮಿಸಿರುವುದು ಸ್ತ್ರೀ ಧಾರ್ಮಿಕ ಕ್ಷೇತ್ರಕ್ಕೆ ನೀಡಿದ ಸಹಭಾಗಿತ್ವವನ್ನು ಸೂಚಿಸುತ್ತದೆ. ಆದರೆ ಅದಕ್ಕೆ ದಾನ ದತ್ತಿ ನೀಡುವ ಅಧಿಕಾರ ಅವಳಿಗಿರುವುದು ಶಾಸನದಲ್ಲಿ ತಿಳಿದುಬರುವುದಿಲ್ಲ. ಅದರ ಹೊಣೆಗಾರಿಕೆಯೆಲ್ಲಾ ಅವಳ ಗಂಡನಲ್ಲೇ ಕೇಂದ್ರೀಕೃತವಾಗಿತ್ತೆಂಬುದು ಸ್ಪಷ್ಟವಾದ ಸಂಗತಿಯಾಗಿದೆ.

ಕ್ರಿ.ಶ.೯೭೪ರ ಶಾಸನವು ಹೊಳಲ್ಕೆರೆ ತಾಲೂಕು ಚಿಕ್ಕಂದವಾಡಿಯ ಊರ ಬಾಗಿಲ ಬಳಿ ದೊರೆತಿದೆ.[೩೯] ಕನ್ನಯ್ಯನೆಂಬುವವನು ಆಡುನೂರು ಎಂಬ ಗ್ರಾಮವನ್ನು ಆಳುತ್ತಿದ್ದನು. ಆಗ ಇವನ ತಾಯಿ ಮಹೇಶ್ವರ ದೇವರ ಪ್ರತಿಷ್ಠೆ ಮಾಡಿಸಿದಳೆಂದು ತಿಳಿದುಬರುತ್ತದೆ. ಕನ್ನಯ್ಯನ ತಾಯಿ ಶ್ರೀಮತ್ ಬಿ.ಯಬ್ಬರಸಿಯ..... ಶಾಸನ ತ್ರುಟಿತವಾಗಿರುವುದರಿಂದ ಹೆಸರು ಸ್ಪಷ್ಟವಾಗಿ

ತಿಳಿದುಬರುವುದಿಲ್ಲ. ಅಲ್ಲದೆ ದಾನ ನೀಡಿದ ವಿವರದ ಬಗ್ಗೆಯೂ ಶಾಸನ ತ್ರುಟಿತವಾಗಿರುವುದರಿಂದ ಗುರುತಿಸಲು ಸಾಧ್ಯವಾಗುವುದಿಲ್ಲ. ಇದೇ ಗ್ರಾಮದ ಇನ್ನೊಂದು ಶಾಸನದಲ್ಲಿ ಕನ್ನಯ್ಯನ ತಾಯಿ ಪೊಲೆಯಬ್ಬೆ ಎಂದಿರುವುದರಿಂದ ಕನ್ನಯನ ತಾಯಿ ಈ ಶಾಸನದಲ್ಲಿ ಪೊಲೆಯಬ್ಬರಸಿ ಇರಬೇಕೆನ್ನಿಸುತ್ತದೆ.

ಕ್ರಿ.ಶ.೯೬೫ರ ಶಾಸನವೊಂದು ಇದೇ ಗ್ರಾಮದಲ್ಲಿ ದೊರೆತಿದೆ. ಈ ಶಾಸನದಲ್ಲಿ "ಕನ್ನಯ್ಯನಬ್ಬೆಗಳ್ ಪೊಲೆಯಬ್ಬೆ"[೪೦] ಎಂಬ ಉಲ್ಲೇಖವಿದೆ. ಇವಳೂ ಕನ್ನೇಶ್ವರ ದೇವಾಲಯಕ್ಕೆ ಗುಂಜೆಯನೂರ ಐವತ್ತನ್ನು ದಾನ ನೀಡಿದ ವಿವರವಿದೆ.

ಕ್ರಿ.ಶ.೧೨೨೦ರ ಶಾಸನವೊಂದು ಹೊಳಲ್ಕೆರೆ ತಾಲೂಕು ಬಿದುರ್ಗ ಹೋಬಳಿ, ಹಿರೇ ಯಮ್ಮಿಗನೂರ ಕಲ್ಲೇಶ್ವರ ದೇವಾಲಯದ ಕೈಸಾಲೆಯಲ್ಲಿ ದಕ್ಷಿಣ ಕಡೆ ಗೋಡೆಯಲ್ಲಿ ದೊರೆತಿದೆ. ಹೊಯ್ಸಳ ನಾರಸಿಂಹ ಚಕ್ರವರ್ತಿಯ ಸಾಮಂತರಾದ ಬಂಮಿಸೆಟ್ಟಿಯ ಪತ್ನಿ "ಗುಣಯುಕ್ತೆ ಕಾಡವೆಗೆ ಪುಟ್ಟಿದ ನಿಂತು...."[೪೧] ಕಾಡವೆ ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೬೮೩ರ ಶಾಸನವು ಹೊಳಲ್ಕೆರೆ ತಾಲೂಕು ರಾಮಗಿರಿ ಹೋಬಳಿ ಗುಂಡ ಸಮುದ್ರ ಗ್ರಾಮದ ಪಟೇಲ್ ಸಿದ್ದಯ್ಯನ ವಶದಲ್ಲಿದ್ದ ತಾಮ್ರಶಾಸನವಾಗಿದೆ.[೪೨] ಶ್ರೀಮಂನ ಮಹಾನಾಯಕಾಚಾರ್ಯರಾದ ಕಾಮಗೆತಿ ಕಸ್ತೂರಿ ಚಿಕ್ಕಪ್ಪ ನಾಯಕರ್ಯೆಯ್ಯನವರು ಬಾಗೂರ ಚರಂತಿ ಚೆನ್ನ ಬಸವಪ್ಪ ದೇವರ ಕುಮಾರ ರುದ್ರಪ್ಪ ದೇವರಿಗೆ ಭೂಮಿಯನ್ನು ಕೊಡಲಾಯಿತು. ಈ ಭೂಮಿಯಾದ ಬಾಗೂರ ಸೀಮೆಗೆ ಸೇರುವ ಹೊಸ ಗ್ರಾಮ ವೀರಾಪುರವನ್ನು ನಮ್ಮ ಊಳಿಗದ ಬೊಕಸ್ತ ಮುದಂಣನ ಮಗಳು ಗಂಗಮ್ಮಳು ರುದ್ರಪ್ಪ ದೇವರಿಗೆ ತಮಗೆ ಅನೇಕ ಧರ್ಮವಾಗಲಿ.... ಎಂದು ಸಹಿರಂಣೋದಕದ ದಾನಧಾರಣ ಪೂರ್ವಕವಾಗಿ ದಾನ ನೀಡಿದರೆಂಬ ವಿವರವಿದೆ.

ಹೊಸದುರ್ಗ ತಾಲೂಕು ಅರೆಹಳ್ಳಿ ಗ್ರಾಮದಲ್ಲಿ ಶಾಸನವೊಂದು ದೊರೆತಿದ್ದು,[೪೩] ಈ ಶಾಸನವು ತಮ್ಮ ಮಾತಾಪಿತೃಗಳಿಗೆ ಒಳ್ಳೆಯದಾಗಲೆಂದು ಹಾಕಿಸಿದ ಶಾಸನವಾಗಿದೆ. ಈ ಶಾಸನದಲ್ಲಿ ಸಂಗಪ ನಾಯಕನ ಪುತ್ರನ ಹೆಸರು ಶಾಸನದಲ್ಲಿ ದೊರೆಯುವುದಿಲ್ಲ. ಕಾರಣ ಶಾಸನ ಸಾಕಷ್ಟು ತ್ರುಟಿತಗೊಂಡಿದೆ. ಅಲ್ಲದೆ ಕಾಲದ ಉಲ್ಲೇಖವೂ ಸಿಗುವುದಿಲ್ಲ. ಸಂಗಪನ ಪುತ್ರ ತಮ್ಮ ಮಾತಾಪಿತೃಗಳಿಗೆ ಶಿವಸಾನಿಧ್ಯವಾಗಲೆಂದು ಅರೆಹಳ್ಳಿಯನ್ನು ದಾನನೀಡಿದ ವಿವರವಿದೆ.

ಕ್ರಿ.ಶ.೧೦೬೫ರ ಶಾಸನವು ಹೊಸದುರ್ಗ ಹೋಬಳಿ ನೀರಗುಂದ ಗ್ರಾಮದ ಸಿದ್ದೇಶ್ವರ ದೇವಾಲಯದ ಬಳಿ ದೊರೆತಿದೆ.[೪೪] ಈ ಶಾಸನದಲ್ಲಿ ಹೊಯ್ಸಳದೊರೆ ವೀರಬಲ್ಲಾಳನ ಪಾದಾರಾಧಕ ರಾದ ದೇವಾಂಡಸೆಟ್ಟಿಯ ಉಲ್ಲೇಖವಿದೆ. ಇವನ ಮಗ ದೇವಿಸೆಟ್ಟಿಯಾಗಿದ್ದು, ಇವನ ಪತ್ನಿ ಮಲಾಂಗನೆ ಎಂದು ಶಾಸನ ತಿಳಿಸುತ್ತದೆ.

ಹೊಸದುರ್ಗ ತಾಲೂಕು ಬಾಗೂರು ಹೋಬಳಿ ಚಿಕ್ಕಯಗಟಿ ಗ್ರಾಮದ ಈಶ್ವರ ದೇವಾಲಯದ ಪೂರ್ವದಲ್ಲಿ ಶಾಸನವೊಂದು ದೊರೆತಿದೆ.[೪೩] ಹೊಯ್ಸಳದೊರೆ ಪ್ರತಾಪ ಚಕ್ರವರ್ತಿಯು ಆಳ್ವಿಕೆ ನಡೆಸುವಾಗ ನಲ್ಲೆಸೆಟ್ಟಿ ಅರಸನ ಪಾದಾರಾಧಕನಾಗಿದ್ದನು. ನಲ್ಲೆ ಸೆಟ್ಟಿಯ ತನೂಜೆಯೆ ದೇವಿಯೆತಿತ್ತವಲ್ಲವೇ..... ಗುಣ್ಪುಮತಿಣ್ಪುಮನೆಂತುಪೋಲಿಪೆಂ। ಗುರುಕುಚತುಂಗೆ ದಾನಗುಣಭದ್ರ ಭುದಾಶ್ರಿತೆತಾ.... ಅಲ್ಲದೆ ಅವಳ ನುಡಿ ಕೃಷ್ಣವೇಣಿಯಂಬರದಂತೆ ಎಂದು ಶಾಸನ ವರ್ಣಿಸುತ್ತದೆ. ಆದರೆ ಶಾಸನ ಸಾಕಷ್ಟು ತ್ರುಟಿತವಾಗಿರುವುದರಿಂದ ಅವಳ ಹೆಸರಾಗಲೀ ಕಾಲದ ಬಗ್ಗೆಯಾಗಲಿ ತಿಳಿದುಬರುವುದಿಲ್ಲ.

ಕ್ರಿ.ಶ.೧೪೧೭ರ ಶಾಸನವು ಹಿರಿಯೂರು ತಾಲೂಕು ಧರ್ಮಪುರ ಹೋಬಳಿ ಸೋಮೇರ ಹಳ್ಳಿಯ ಸೋಮೇಶ್ವರ ದೇವಾಲಯದಲ್ಲಿ ದೊರೆತಿದೆ.[೪೬] ಈ ಶಾಸನದಲ್ಲಿ ಚಿಕ್ಕದೇವನ ತಾಯಿ ಕಾಮಾಯಿ ಎಂಬ ಉಲ್ಲೇಖವಿದೆ. ತನ್ನ ತಾಯಿಗೆ ಪುಣ್ಯವಾಗಲೆಂದು ದಾನ ನೀಡಿದ ವಿವರ ಶಾಸನದಲ್ಲಿರಬಹುದು. ಆದರೆ ಸ್ಪಷ್ಟವಾಗಿ ತಿಳಿದುಕೊಳ್ಳಲು ಶಾಸನ ತ್ರುಟಿತಗೊಂಡಿದೆ.

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲೂಕು ದೇವಸಮುದ್ರದ ಹೋಬಳಿ ಸಿದ್ಧಾಪುರ ಗ್ರಾಮಕ್ಕೆ ವಾಯುವ್ಯ ದಿಕ್ಕಿನ ವೆಂಕಟರಮಣ ದೇವಾಲಯದ ಗದ್ದೇಗುಂಡಿನ ಮೇಲೆ ಶಾಸನವೊಂದು ದೊರೆತಿದೆ.[೪೭] ಶಾಸನದ ಕಾಲದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಈ ಶಾಸನದಲ್ಲಿ ಹೊಯ್ಸಳ ಚಕ್ರವರ್ತಿ ವೀರಬಲ್ಲಾಳನು ಜಯಗಿರಿ ಎಂಬ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದನು. ಆಗ ಹುಲಿವಾನದ ಸಾಮಂತ ಸಿವೋದ ನಾಯಕನಾಗಿದ್ದನು. ಇವನ ತಾಯಿ ಹೊನ್ನವೆನಾಯಕಿ ಸ್ವರ್ಗಸ್ಥೆ.....ಯಾದರೆ ಸಿಡಿತಲೆಯನ್ನು ಕೊಡುವೆನೆಂದು ಹರಕೆ ಹೊತ್ತು ಅದರಂತೆ ಸಿಡಿತಲೆ ಕೊಟ್ಟ ವಿವರ ಶಾಸನದಲ್ಲಿದೆ. ಇದೇ ಗ್ರಾಮದ ಯಮ್ಮೇತಮ್ಮನ ಗುಂಡ್ಲಬಳಿ ಗುಡ್ಡದಲ್ಲಿ ಬಂಡೆ ಮೇಲೆ ಕೆತ್ತಿದ ಅಶೋಕನ ಶಾಸನಗಳಲ್ಲಿ ಮಾತಾ-ಮಾತಾ ಎಂಬ ಪದಗಳ ಉಲ್ಲೇಖ ದೊರೆಯುತ್ತದೆ.

ಮೇಲ್ಕಾಣಿಸಿದ ಎಲ್ಲಾ ಶಾಸನಗಳನ್ನು ಅವಲೋಕಿಸಿದಾಗ ಸ್ತ್ರೀಯಾದವಳ ಕಾಣಿಕೆ ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದೆ ಎಂಬುದು ಸ್ಪಷ್ಟವಾಗುತ್ತದೆ. ಅವರೇ ದಾನ ದತ್ತಿಗಳನ್ನು ನೀಡುವ ಅಧಿಕಾರ ಹೊಂದಿದ ಸಂಖ್ಯೆ ಅತಿವಿರಳವೆನ್ನಬಹುದು. ಪುರುಷನಿಂದ ಕೇಳಿ, ಬೇಡಿ, ದತ್ತಿ ನೀಡಿದ ಉದಾಹರಣೆಗಳೂ ದೊರೆಯುತ್ತವೆ. ಅಲ್ಲದೇ ಪುರುಷರೇ ಹೆಚ್ಚು ದಾನ ನೀಡಿದ ಪ್ರಸಂಗಗಳು ಶಾಸನದಿಂದ ತಿಳಿದುಬರುತ್ತವೆ. ನಮ್ಮ ಸಮಾಜ 'ಮಾತೃದೇವೋಭವ ಪಿತೃದೇವೋಭವ, ಆಚಾರ್ಯ ದೇವೋಭವ, ಅತಿಥಿ ದೇವೋಭವ' ಎಂಬ ಮಾತುಗಳಲ್ಲಿ ನಂಬಿಕೆಯನ್ನಿಟ್ಟಿರುವುದ ರಿಂದಲೇ ಶಾಸನದಲ್ಲಿ ಹಲವು ಕಡೆ ಮಾತಾಪಿತೃಗಳ ಹೆಸರಲ್ಲಿ ದಾನ ನೀಡಿದ ವಿವರಗಳಿವೆ. ಶಾಸನಗಳು ಮಹಿಳೆಯರನ್ನು ಸ್ವಲ್ಪದೂರ ಕುದುರೆಯನ್ನು ಮುಂದೆ ಬಿಟ್ಟು ಹಿಂದೆ ಲಗಾಮು ಹಿಡಿದು ಎಳೆಯುವಂತೆ ಪುರುಷ ಸಮಾಜ ಸ್ತ್ರೀಯರನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದೆ.

೨.೩. ಶಾಪಾಶಯಗಳಲ್ಲಿ ಸ್ತ್ರೀಯರು

ಕಲ್ಲು ಮೊದಲಾದ ಬಂಡೆಗಳ ಮೇಲೆ ನಾಶವಾಗಬಾರದೆಂದು ಕೆತ್ತಿಸಿದ ಬರಹಗಳು ಶಾಸನಗಳಾಗುತ್ತವೆ. ಮಾನವರು ತಾವು ಮಾಡಿದ ಕಾರ್ಯಗಳು ಮುಂದಿನ ಪೀಳಿಗೆಯವರಿಗೆ ತಿಳಿಯಲೆಂದು, ತಾನು ನಿರ್ಮಿಸಿದ ಗುಡಿ-ಗುಂಡಾರ ಮೊದಲಾದ ಸಾಮಾಜಿಕ, ಧಾರ್ಮಿಕ ಕಾರ್ಯಗಳನ್ನು ಶಾಶ್ವತವಾಗಿಡಲು ಬಯಸಿದರು. ಅಲ್ಲದೆ ಅವುಗಳಿಗೆ ದಾನ ದತ್ತಿಗಳನ್ನು ನೀಡಿದುದರ ಉಲ್ಲೇಖವನ್ನು ಬರೆದಿಡಲು ಮುಂದಾಗಿ, ತಾನು ಮಾಡಿದ ಕಾರ್ಯಗಳನ್ನು ಬರವಣಿಗೆಯಲ್ಲಿ ಶಿಲೆಗಳ ಮೇಲೆ ಬರೆಯಲು ಪ್ರಾರಂಭಿಸಿದನು. ಇದನ್ನು ರಕ್ಷಿಸುವ ಸಲುವಾಗಿ ರಕ್ಷಿಸಿದ ಜನರಿಗೆ ಆಗುವ ಪುಣ್ಯದ ಬಗ್ಗೆ, ಅದನ್ನು ಹಾಳು ಮಾಡಿದರೆ ಆಗುವ ಹಾನಿಯನ್ನು ಬರೆಸಿಡಲು ಪ್ರಾರಂಭಿಸಿದನು. ಈ ಕಲ್ಪನೆ ಇಂದಿನ ಕಾಲದ ಕೆಲವು ಹಳ್ಳಿಗಳಲ್ಲಿಯೂ ಶಾಸನದ ಬಗ್ಗೆ ವಿಚಾರಿಸಿದರೆ ಅದನ್ನು ಓದಿದರೂ ಕೂಡ ದೋಷ ಬರುತ್ತದೆ. ಎಂಬ ಮಾತುಗಳು ಕೇಳಿ ಬರುತ್ತವೆ. ನಮ್ಮ ಧರ್ಮ, ಸಂಪ್ರದಾಯಗಳಲೆಲ್ಲ ಪಾಪ-ಪುಣ್ಯದ ಕಲ್ಪನೆಗಳು ಭಾರತೀಯರಲ್ಲಿ ಹೇರಳವಾಗಿ ಬೇರು ಬಿಟ್ಟುಕೊಂಡಿವೆ. ಧರ್ಮವನ್ನು ಏಕೆ ಗಳಿಸಬೇಕು ಎಂಬುದರ ಬಗ್ಗೆ ಶಾಸನ ಹೀಗೆ ಹೇಳುತ್ತದೆ.

> ಅನಿತ್ಯಾನಿ ಶರೀರಾಣೀ ವಿಭವೋನೈವ ಶಾಸ್ವತಂ
> ಅನಿತ್ಯಂ ಸನ್ನಿಹಿತಂ ಮೃತ್ಯುಃ ಕರ್ತವ್ಯಂ ಧರ್ಮಸಂಗ್ರಹಃ॥[೪೮]

"ಅಶಾಶ್ವತವಾದ ಈ ಶರೀರಕ್ಕೆ ಐಶ್ವರ್ಯವು ಶಾಶ್ವತವಲ್ಲ. ಮೃತ್ಯು ಯಾವಾಗ ಬೇಕಾದರೂ ಬರುತ್ತದೆ. ಅದರಿಂದ ಧರ್ಮಸಂಗ್ರಹ ಕಾರ್ಯವನ್ನು ಮಾಡು."[೪೯] ಧರ್ಮವನ್ನು ರಕ್ಷಿಸಬೇಕು ಎಂಬ ವಿಚಾರ ಒಮ್ಮತವಾದುದು. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಹೆಣ್ಣನ್ನು ಪೂಜ್ಯನೀಯ ಭಾವದಿಂದ ಕಾಣಲಾಗುತ್ತಿದೆ. ಅಲ್ಲದೆ 'ಮಾತೃದೇವೋಭವ, ಪಿತೃದೇವೋಭವ'ದ ಕಲ್ಪನೆಗಳಿವೆ. ಶಾಸನಗಳನ್ನು ಹಾಳು ಮಾಡಿದವರಿಗೆ ನೈತಿಕ ಶಿಕ್ಷೆ ವಿಧಿಸಬೇಕು ಸರಿ. ಆದರೆ ಶಾಸನಗಳನ್ನು ನಿರ್ಮಿಸಿದವರು ಬಹುತೇಕ ಮಂದಿ ಪುರುಷರೇ ಆಗಿದ್ದಾರೆ. ಜೊತೆಗೆ ಪುರುಷ ಪ್ರಧಾನ ನೆಲೆಯಿಂದಲೇ ಬಂದವರಾಗಿದ್ದಾರೆ. ಶಾಪಾಶಯಗಳಲ್ಲಿ ಸ್ತ್ರೀಯರನ್ನೆ ಶಾಪವಾಚಿ ಪದಗಳಿಗೆ ಬಳಸಲಾಗಿದೆ. ಇದನ್ನು ಗಮನಿಸಿದರೆ ಅಂದಿನ ಸಮಾಜ ಸ್ತ್ರೀಯರ ಬಗೆಗೆ ಹೊಂದಿದ್ದ ಗೌರವಭಾವಗಳು ಎಂತಹವುಗಳು ಎಂಬುದು ತಿಳಿದುಬರುತ್ತವೆ. ಅಶೋಕನ ಕಾಲದವರೆಗೂ ಶಾಸನಗಳಲ್ಲಿ ಶಾಪಗಳು ಕಂಡುಬರುವುದಿಲ್ಲ. ಕಾರಣ ದಾನದ ಪ್ರಸ್ತಾಪದ ಶಾಸನಗಳು ಅಶೋಕನ ಕಾಲದಲ್ಲಿ ಅತ್ಯಂತ ವಿರಳವಾಗಿದ್ದವು. ಕ್ರಿ.ಶ.ಎರಡನೇ ಶತಮಾನದ ನಂತರ ಶಾಪಾಶಯಗಳು ಅಲ್ಪ ಪ್ರಮಾಣದಲ್ಲಿ ಪ್ರಾರಂಭವಾಗಿ ಹೇರಳವಾಗಿ ಬೆಳೆದುನಿಂತವು.

ಸಾಮಾನ್ಯವಾಗಿ ಶಾಸನಗಳನ್ನು ರಚಿಸುತ್ತಿದ್ದವರು, ಪೋಷಿಸುತ್ತಿದ್ದವರು, ಹಾಳು ಮಾಡುತ್ತಿದ್ದವರು ಪುರುಷರೇ ಆಗಿರುತ್ತಿದ್ದರು. ಆದರೆ ಸ್ತ್ರೀಯರನ್ನೆ ಹಿಂದಿಟ್ಟುಕೊಂಡು ಅವಾಚ್ಯ ಶಬ್ದಗಳಿಂದ ಶಾಪ ಹಾಕಲಾಗುತಿತ್ತು. ಪೆಣ್ಬುಯ್ಯಲಿನಲ್ಲಿ ಪೆಂಡಿರ ಆರ್ತನಾದ ಕೇಳದವನು, ತಂದೆ–ತಾಯಿಯರನ್ನು ವಾರಣಾಸಿಯಲ್ಲಿ ಕೊಂದವನು. ತಾಯ್ಗೆ ತಂಗೆಗವಳಿಪಿದವಂ(ತಾಯಿ, ತಂಗಿಗೆ ಆಸೆಪಡುವವ), ತನ್ನ ಹೆಂಡತಿಯನ್ನು ಹೊಲೆ ಮಾದಿಗರಿಗೆ ಕೊಡುವವ, ತಂದೆಯನ್ನು ಕೊಂದು ತಾಯ ಕೈ ಹಿಡಿದವನ ಗತಿಗೆ ಹೋಹರು. ಗಂಡು ಕತ್ತೆಯ ಶಿಶ್ನವನ್ನು ತಾನು ತನ್ನ ಹೆಂಡತಿ, ತಾಯಿ ತಂದೆಯವರು ತಿಂದವರು, ತಂಗಿಯ ಕೈ ಹಿಡಿದವ, ತಂಮ ತಾಯಿಗೆ ತಪಿದೋನು, ತನ್ನ ಬಸುರಲಿ ಬಂದ ಮಗಳನೂ ತಾನೇ ಮದುವೆಯಾಗಲಿ, ಮಾತಾ–ಪಿತೃಗಳ ತಿಂದವ ಕಡಿದಾಕೆಯಯೇರಿದ, ತನ್ನ ಹೆಂಡತಿಯನ್ನು ತನ್ನ ಸಮಾನನಾದ ಇನ್ನೊಬ್ಬನಿಗೆ ನೀಡಿದಂತೆ, ಶಾಸನ ಹಾಳು ಮಾಡಿದವ ಹೆಂಡತಿ ತಾಯಿ ಸಮ, ಹೆಂಡತಿಯನ್ನು ತನ್ನ ಕುದುರೆ ಮೋಹಿಸುವವನಿಗೆ ನೀಡುವುದು, ಕೆಲವೊಂದು ಶಾಸನಗಳು ಹೆಣ್ಣನ್ನು ಸುಕ್ರುತವೆಂದು ಕರೆದಿವೆ. ಅಲ್ಲದೆ ಸುಕ್ರುತವನ್ನು ಅನ್ಯಜಾತಿಗೆ ಕೊಟ್ಟವ. ಹೆಂಡತಿಯನ್ನು ಕೆಲಸದ ಆಳಿಗೆ ನೀಡಿದವ ತಮ್ಮ ತಾಯಿ ತಂಗಿಯನ್ನು ಕೆಡಿಸಿದವರು, ತಮ್ಮ ತಾಯಿ ತಾವು ಸುಂದಿಸುವರು, ಹೆತ್ತ ತಾಯಿ ಮೈತನವ ಮಾಡಿದವರು, ಹೆಂಡತಿಯನ್ನು ಕೊಡೆಯಿಡಿಯುವವನಿಗೆ ಕೊಟ್ಟವ ಎಂಬ ಇತ್ಯಾದಿ ಅವಾಚ್ಯ ಶಬ್ದಗಳನ್ನು ಶಾಸನಗಳಲ್ಲಿ ಬಳಸಲಾಗಿದೆ. ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ ತನ್ನ ಜವಾಬ್ದಾರಿ ನಿರ್ವಹಿಸುವ ಹೆಣ್ಣನ್ನು ಶಾಪಾಶಯಗಳಿಗಾಗಿ ಪುರುಷ ಸಮಾಜ ಹೇಗೆ ಬಳಸಿಕೊಂಡಿದೆ ಎಂಬುದು ನಿಜಕ್ಕೂ ವಿಶಾದದ ಸಂಗತಿಯೇ ಸರಿ.

ಕ್ರಿ.ಶ.೧೩೫೬ರ ಚಿತ್ರದುರ್ಗದ ಶಾಸನವೊಂದರಲ್ಲಿ “ಮಾತೆ ಮಾತಾಪಿತುರ್ಗ್ಗಳೆಲ್ಲವಂ ಎಪ್ಪತ್ತ ಏಳು ಕೋಟಿವರಷ್ಠ ಬರಂಪುಳುಗೊಂಡ ನರಕದಲಿಕ್ಕಿ.....”[೫೦] ಎಂಬ ಶಾಪವನ್ನು ಬಳಸುತ್ತದೆ. ಕ್ರಿ.ಶ.೧೭೮೧ರ ಚಿತ್ರದುರ್ಗ ಪಟೇಲ್ ಶಂಕರಪ್ಪನ ಬಳಿಯ ತಾಮ್ರಶಾಸನವೊಂದರಲ್ಲಿ “ಸ್ವದತ್ತಾ ಪುತ್ರಿಕಾ ಧಾತ್ರೀ। ಪರದತ್ತಾ ಸಹೋದರೀ ಅಂನ್ಯ ದತ್ತಾಚ ಮಾತಾಚ। ವಿಪುದತ್ತಾವಸುಂಧ್ಧರಾ।”[೫೧] ತಾನು ನೀಡಿದ ಭೂಮಿ ತನ್ನ ಮಗಳಂತೆ, ಪರರು ನೀಡಿದ ಭೂಮಿ ಸೋದರಿಯಂತೆ, ಅನ್ಯರು ನೀಡಿದ್ದು ತಾಯಿಯಂತೆ ಎಂದು ಶಾಸನ ಹೇಳುತ್ತದೆ. ಕ್ರಿ.ಶ.೧೫೩೭ರ ಚಿತ್ರದುರ್ಗದ ಗುಂಟನೂರು ಶಾಸನವೊಂದರಲ್ಲಿ “ಧರ್ಮಕ್ಕೆ ಅಳಿಪಿದರು ತನ್ನ ಮತಾಪಿತೃಗಳನು ಗೋಬ್ರಾಹ್ಮಣರನು ವಾರಣಾಸಿಯಲು ಕೊಂದ ಪಾಪಕೆ ಸಲುವರು...”[೫೨] ತಂದೆ ತಾಯಿಗಳನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಹೋಗುತ್ತಾರೆ ಎಂದು ಶಾಸನ ತಿಳಿಸುತ್ತದೆ. ಕ್ರಿ.ಶ.೧೫೬೮ರ ಹೊಳಲ್ಕೆರೆಯ ಗೋಪಾಲಕೃಷ್ಣ ದೇವಾಲಯದ ತಾಮ್ರಶಾಸನವೊಂದರಲ್ಲಿ “ಸ್ವದತ್ತಾ ಪುತ್ರಿಕಾ ಧಾತ್ರೀ। ಪಿತ್ರುದತ್ತಾಸಹೋದರೀ। ಅನ್ಯದತ್ತಾಮಾತ್ತಾ ಚದತ್ತಾ ಭೂಮಿ

ಪರಿತ್ಯಜೇತ್ತು..."[೫೩] ತಾನು ನೀಡಿದ ಭೂಮಿ ಮಗಳಂತೆ, ತಂದೆ ನೀಡಿದ್ದು ತಂಗಿಯಂತೆ, ಅನ್ಯರು ನೀಡಿದ್ದು ತಾಯಿಯಂತೆ. ಆದ್ದರಿಂದ ದಾನದ ಭೂಮಿಯನ್ನು ಬಿಟ್ಟು ಬಿಡು ಎಂದು ಶಾಸನ ಹೇಳುತ್ತದೆ. ಕ್ರಿ.ಶ.೧೫೨೮ರ ಹೊಳಲ್ಕೆರೆ ತಾಲೂಕು ದುಮ್ಮಿ ಶಾಸನವೊಂದರಲ್ಲಿ "ತಂದೆ ತಾಯಿ ಶ್ರೀ ಗುರು ಗೋಬ್ರಾಂಹ್ಮ.... ವಾರಣಾಸಿಲಿ ಕೊಂದ ಪಾಪಕ್ಕೆ ಹೋಹರು...."[೫೪] ಎಂದು ತಿಳಿಸುತ್ತದೆ. ಕ್ರಿ.ಶ.೧೫೫೯ರ ಇದೇ ಊರಿನ ಇನ್ನೊಂದು ಶಾಸನವೊಂದರಲ್ಲಿಯೂ ತಂದೆತಾಯನು ಶ್ರೀ ಗುರುವನು ವಾರಣಾಸಿಯಲಿ ಕೊಂದ ಪಾಪಕ್ಕೆ ಹೋಹರು.....[೫೫] ಎಂದು ಹೇಳುತ್ತದೆ. ಕ್ರಿ.ಶ.೧೫೫೯ರ ಇದೇ ಊರಿನ ಮತ್ತೊಂದು ಶಾಸನದಲ್ಲಿಯೂ "ತಂದೆ ತಾಯಿ ಸಹಕೊಂದ ಪಾತಕಕೆ ಹೋಹರು....."[೫೬] ಎಂದಿದೆ. ಹೊಳಲ್ಕೆರೆ ತಾಲೂಕು ಜಾಜೂರು ಗ್ರಾಮವೊಂದರ ಶಾಸನದಲ್ಲಿ "ತಂದೆ ತಾಯಿ ವಡಹುಟ್ಟದರಿಗಳಿಪಿದ ಹಾಗೆ...."[೫೭] ಅಂದರೆ ತನ್ನ ತಾಯಿ ತನ್ನ ಒಡಹುಟ್ಟಿದವರನ್ನು ಮೋಹಿಸಿದಂತೆ ಎನ್ನಲಾಗಿದೆ. ಕ್ರಿ.ಶ.೧೫೧೬ರ ಹೊಳಲ್ಕೆರೆಯ ಬೇಚಿರಾಕ್ ತ್ಯಾಗದ ಹಳ್ಳಿಯ ಶಾಸನವೊಂದರಲ್ಲಿ "ತಂದೆ ತಾಯಿ ವಾರಣಾಸಿಯಲಿ ಕೊಂದ ಪಾಪಕೆ ಹೋಹರು....."[೫೮] ಎಂದಿದೆ. ಹೊಳಲ್ಕೆರೆಯ ಗುಂಡ(ಭೀಮ) ಸಮುದ್ರ ಗ್ರಾಮದ ಶಾಸನವೊಂದರಲ್ಲಿ "ತಂಮ ತಾಯಿಗೆ ತಪಿದಹಾಗೆಯಂದು...."[೫೯] ಕ್ರಿ.ಶ.೧೬೪೯ರ ಹೊಳಲ್ಕೆರೆ ತಾಲೂಕು ಭೀಮಸಮುದ್ರದ ಪಟೇಲ ಸಿದ್ದಯ್ಯನ ವಶದಲ್ಲಿದ್ದ ೨ನೇ ತಾಮ್ರ ಶಾಸನದಲ್ಲಿ "ಸ್ವದತ್ತಾ ಪುತ್ರಿಕಾಧಾತ್ರೀ ಪಿತೃ ಧಾತಾ ಸಹೋದರಿ ಅನ್ಯದತಾಚ ಮಾತಾ ಚದತದಾನಂ ಪರಿತ್ಯಜೇ...."[೬೦] ಕ್ರಿ.ಶ.೧೫೪೬ರ ಹೊಳಲ್ಕೆರೆ ತಾಲೂಕು ಬಾಗೂರು ಗ್ರಾಮವೊಂದರ ಶಾಸನದಲ್ಲಿ "ತಂದೆತಾಯನು ವಾರಣಾಸಿಯಲಿ ವಧಿಸಿದ ಪಾಪಕೆಹೋಹರು....."[೬೧] ಇದೇ ಗ್ರಾಮದ ಕ್ರಿ.ಶ.೧೫೨೦ರ ಶಾಸನವೊಂದರಲ್ಲಿ "ತಂಮ್ಮ ತಾಯಿಗೆ ತಪಿದರು ತಂಮ್ಮ ತಂದೆ ತಂಮ್ಮ ತಾಯಿ ತಂಮ್ಮ ಗುರು ತಂಮ್ಮ ದಯಿವಗೋಉಬ್ರಾಂಹ್ಮರುಗಳನು ವಾರಣಾಸಿಯ ಗಂಣೆಯ ತಡಿಯಲ್ಲಿ ಕೊಂದ ಪಾಪಕಕ್ಕೆ ಹೋಹರು...."[೬೨] ಅದೇ ಗ್ರಾಮದ ಕ್ರಿ.ಶ.೧೫೫೪ರ ಶಾಸನವೊಂದರಲ್ಲಿ "ತಂಮ ತಂದೆ ತಾಯನು ವಾರಣಾಸಿಯಲಿ ಕೊಂದ ಪಾಪಕ್ಕೆ ಹೋಹರು..."[೬೩] ಕ್ರಿ.ಶ.೧೫೨೩ರ ಅದೇ ಗ್ರಾಮದ ಶಾಸನವೊಂದರಲ್ಲಿ "ಅವರ ಹೆಂಡಿರನೂ ಇ ಬಾಗುರ ಹೊಲೆ ಮಾದಿಗರಿಗೆ ಕೊಟ್ಟವರು ಮಂ....."[೬೪] ಕ್ರಿ.ಶ.೧೫೩೫ರ ಹೊಸದುರ್ಗ ತಾಲೂಕು ಕಲ್ಲಕೆರೆ ಗ್ರಾಮದ ಶಾಸನವೊಂದರಲ್ಲಿ "ತಮ್ಮ ತಂದೆ ತಾಯಿಗಳ ವಾರಣಾಸಿಯಲಿ ಕೊಂದ ಪಾಪಕೆ ಹೋಹರು...."[೬೫] ಕ್ರಿ.ಶ.೧೫೯೬ರ ಹಿರಿಯೂರು ತಾಲೂಕು ಕಾನ್ಬೆಹಳ್ಳಿ ಗ್ರಾಮವೊಂದರ ಶಾಸನದಲ್ಲಿ "ತಂಮ ತಾಯಿ ತಂದೆಯ ಕಾಶೀಲಿ ವಧಿಸಿದೋರೂ....."[೬೬] ಕ್ರಿ.ಶ.೧೫೭೦ರ ಹಿರಿಯೂರು ತಾಲೂಕು ಚಿಕ್ಕಕರ್ಪೂರಕಟ್ಟೇಗ್ರಾಮದ ಶಾಸನವೊಂದರಲ್ಲಿ "ತಂಮ ತಂದೆ ತಾಯ ವಾರಣಾಸಿಯಲಿ ಕೊಂದ ಪಾಪಕೆ ಹೋಹರು....."[೬೭] ಕ್ರಿ.ಶ.೧೫೫೩ರ ಚಳ್ಳಕೆರೆ ತಾಲೂಕು ದೊಡ್ಡ ಉಳ್ವರ್ತೆ

ಗ್ರಾಮದ ಶಾಸನವೊಂದರಲ್ಲಿ "ತಂಮ ತಾಯಿ ತಂದೆಯ ವಾರಣಾಸಿಯಲಿ ಕೊಂದ ಪಾಪಕ್ಕೆ....."[೧೮] ಕ್ರಿ.ಶ.೧೧೨೪ರ ಚಳ್ಳಕೆರೆ ತಾಲೂಕು ಪರಶುರಾಮಪುರ ಹೋಬಳಿ ಪರಶುರಾಮಪುರ ಶಾಸನವೊಂದರಲ್ಲಿ "ತಮ್ಮ ತಾಯಿ ತಂದೆ ವಾರಣಾಸಿಯಲ್ಲಿ ವಧಿಸಿದ ಪಾಪಕ್ಕೆ ಹೋಹರು......"[೧೯] ಕ್ರಿ.ಶ.೧೭೩೮ರ ಚಳ್ಳಕೆರೆ ತಾಲೂಕು ಅದೇ ಗ್ರಾಮದ ಶಾಸನವೊಂದರಲ್ಲಿ "ಸ್ವದತ್ತಾ ಪುತ್ರಿಕಾಧಾತ್ರೀ ಪಿತೃದತ್ತಾ ಸಹೋದರೀ ಅಂನ್ಯದತ್ತಾ ಸ್ವಮತಾಚವಿಪ್ರವತ್ತಾ ವಸುಂಧರಾ..."[೨೦] ಕ್ರಿ.ಶ.೧೫೫೩ರ ಚಳ್ಳಕೆರೆಯ ಕಾಮಸಮುದ್ರದ ಶಾಸನವೊಂದರಲ್ಲಿ "ತಂದೆತಾಯ.... ಸಿಯಲಿ ಕೊಂದ ಪಾಪಕೆ ಹೋಹರು..."[೨೧] ಕ್ರಿ.ಶ.೧೫೭೯ರ ಚಳ್ಳಕೆರೆ ತಾಲೂಕು ಸಾಯ್ಗೊಂಡನಹಳ್ಳಿ ಗ್ರಾಮವೊಂದರ ಶಾಸನದಲ್ಲಿ "ತಾಯಿ ತಂದೆಯ ವಾರಣಾಸಿಯಲಿ ಕೊಂದ ಪಾಪಕ್ಕೆ ಹೋಹರು...."[೨೨] ಕ್ರಿ.ಶ.೧೫೫೮ರ ಚಳ್ಳಕೆರೆಯ ಅದೇ ಗ್ರಾಮದ ಶಾಸನವೊಂದರಲ್ಲಿ "ಮಾತಾಪಿತೃರನೂ ಗೋಬ್ರಾಹ್ಮರ.... ಕಾಶೀಲಿಕೊಂದ ಪಾಪಕೆ ಹೋಹರು....."[೨೩] ಮೊಳಕಾಲ್ಮೂರು ತಾಲೂಕು ಸಿದ್ದಾಪುರ ಗ್ರಾಮವೊಂದರ ಶಾಸನದಲ್ಲಿ "ತಂಮತಂದೆಯ ತಾಯಿಗಳ ವಾರಣಾಸಿಯಲೂ ವಧಿಸಿದ ಪಾಪಕೆ....."[೨೪] ಕ್ರಿ.ಶ.೧೫೪೯ರ ಮೊಳಕಾಲ್ಮೂರು ಶಾಸನವೊಂದರಲ್ಲಿ "ತಂಮ ತಂದೆ ತಾಯಿಗಳ ವಾರಣಾಸಿಯಲು ಕೊಂದ ಪಾಪಕೊ..... ತಂಮ ತಾಯವೊಡಹುಟ್ಟಿದರನೂ.... ಕೊಂದ ಪಾಪಕೆ ಹೋಹರು...."[೨೫] ಕ್ರಿ.ಶ.೧೪೩೪ರ ಮೊಳಕಾಲ್ಮೂರು ತಾಲೂಕು ರಾಮಸಾಗರ ಗ್ರಾಮದ ೨ನೇ ತಾಮ್ರಶಾಸನವೊಂದರಲ್ಲಿ "ತಮ್ಮ ತಾಇತಂದೆಗೆ ತಪ್ಪಿದವರು ಗುರು ದ್ರೋಹಿಗಳು....."[೨೬]

ಹೆಣ್ಣೆಂದರೆ ಬಹು ಹಿಂದಿನಿಂದಲೂ ಪಣಕ್ಕಿಡುವ ಆಟದ ವಸ್ತುವಾಗಿ ಬಿಟ್ಟಿದ್ದಾಳೆ. ಅವಳನ್ನು ಪುರುಷ ಸಮಾಜ ಆಟದ ದಾಳದಂತೆ ಬಳಸಿಕೊಳ್ಳುತ್ತಿದೆ. ಇಂದಿಗೂ ಎಷ್ಟೋ ಉದಾಹರಣೆಗಳು ನಮ್ಮ ಸಮಾಜದಿಂದ ಹೊರತಾಗಿಯೇನೂ ಉಳಿದಿಲ್ಲ. ದ್ವಾಪರಯುಗದಲ್ಲಿ ಧರ್ಮರಾಯ ಧರ್ಮವನ್ನು ಉಳಿಸಲು ತನ್ನ ಹೆಂಡತಿಯನ್ನು ಪಣಕ್ಕಿಡುತ್ತಾನೆ. ಶಾಸನಗಳಲ್ಲಿ ಶಾಪಾಶಯದ ಕಾಲದಲ್ಲಿ ಶಾಪಗಳನ್ನು ಬರೆಸುವಾಗ ಹೆಣ್ಣೇ ನೆನಪಿಗೆ ಬಂದಿರಬೇಕೆನ್ನಿಸುತ್ತದೆ. ಮೇಲೆ ತಿಳಿಸಿದ ಎಲ್ಲಾ ಶಾಸನಗಳೂ ಸಹ ಹೆಣ್ಣನ್ನು ಬಳಸಿಕೊಂಡೇ ಅವಾಚ್ಯ ಶಬ್ದಗಳನ್ನು ಸಿದ್ಧಪಡಿಸಿವೆ ಎನ್ನಿಸುತ್ತದೆ. ಹೆಣ್ಣನ್ನು ಶಾಪಗಳಿಗೆ ಬಳಸುವ ಸಮಾಜ ಪುರುಷವಾಚಿ ಶಬ್ದಗಳನ್ನೇಕೆ ಹೆಚ್ಚಾಗಿ ಬಳಸಲಿಲ್ಲ ಎಂದು ಪ್ರಶ್ನೆ ಹಾಕಿದರೆ, ಅವರು ಪುರುಷ ಪ್ರಧಾನ ನೆಲೆಯಲ್ಲೇ ಉತ್ತರಿಸುತ್ತಾರೆ. ಅಲ್ಲಲ್ಲಿ ರಾಜರುಗಳು ತಮ್ಮನ್ನು ಪರನಾರೀಸೋದರರು, ಹೆಣ್ಣು ಪೂಜ್ಯನೀಯಳು ಎಂದೆಲ್ಲಾ ಹೇಳುತ್ತಾರೆ. ಆದರೆ ಅವಳನ್ನು ಹೊಗಳುತ್ತಲೇ ಅವಳನ್ನು ಪಾತಾಳಕ್ಕೆ ತುಳಿಯುವ ಕೆಲಸವನ್ನು ಸಮಾಜ ಮಾಡುತ್ತಿದೆ. 'ಲಕ್ಷ್ಮೀವಲ್ಲಭ' ಎಂದು ರಾಜರು ಹೇಳಿಕೊಂಡಿರುವುದು ಕಂಡುಬರುತ್ತದೆ. ಪುರುಷರನ್ನು ವೈಭವೀಕರಿಸುವುದಕ್ಕೂ ಬೇರೆಯವರನ್ನು ನಿಂದಿಸುವುದಕ್ಕೂ ಹೆಣ್ಣೆ ಆಹಾರವಾಗಿ ಬಿಡುತ್ತಾಳೆ.

೨.೪. ಸಾಮಾನ್ಯ ವರ್ಗದ ಸ್ತ್ರೀಯರು

ಶಾಸನಗಳಲ್ಲಿ ಸ್ತ್ರೀಯರ ಸಹಭಾಗಿತ್ವವನ್ನು ಗಮನಿಸಿದರೆ ಸ್ತ್ರೀಯರ ಉಲ್ಲೇಖಗಳು ವಿರಳವಾಗಿ ಗೋಚರಿಸುತ್ತವೆ. ಅಲ್ಲಲ್ಲಿ ಸಾಮ್ರಾಜ್ಯವನ್ನಾಳುವ ರಾಜನ ಪತ್ನಿಯರ ಉಲ್ಲೇಖಗಳು, ಅಧಿಕಾರ ವರ್ಗದ ಪುರುಷರ ಪತ್ನಿಯರ ಉಲ್ಲೇಖಗಳು ದೊರೆಯುತ್ತವೆ. ಆದರೂ ಇವರ ಪಾತ್ರಗಳೂ ಶಾಸನದಲ್ಲಿ ಸಂಪೂರ್ಣ ಗೌಣವಾಗಿ ಮಕ್ಕಳನ್ನು ಹೆರುವ ಯಂತ್ರಕ್ಕೆ, ಕೆಲವೊಂದು ಧಾರ್ಮಿಕ ಕಾರ್ಯಗಳಿಗೆ ಸೀಮಿತವಾಗಿ ಬಿಡುತ್ತವೆ. ಚಿತ್ರದುರ್ಗದಲ್ಲಿ ದೊರೆತ ವಿಜಯನಗರದ ಅರಸರ ಕಾಲದ ಶಾಸನದಲ್ಲಿ "ವೀರಕಂಪಿಲರಾಯನ(ಕ್ರಿ.ಶ.೧೩೫೬–೧೩೭೭) ಹೆಸರಿನ ಬಗ್ಗೆ ತಿಳಿಸುತ್ತದೆ. ಇವನ ತಂದೆ ಬುಕ್ಕ ದೇವಾಯಿ ಇವನ ರಾಣಿಯಾಗಿದ್ದಳು ಗಂಗಾದೇವಿ ರಚಿಸಿದ "ಮಧುರ ವಿಜಯಂ" ಅಥವಾ ವೀರ ಕಂಪಿಲರಾಯ ಚರಿತೆ ಇವನನ್ನು ಕುರಿತುದಾಗಿದೆ."[೭೭] ಹೀಗೆ ರಾಜಮನೆತನದ ಸ್ತ್ರೀಯರ ಸಹಭಾಗಿತ್ವ ಅತ್ಯಲ್ಪವಾದರೂ ಶಾಸನಗಳಲ್ಲಿ ಕಾಣಿಸುತ್ತದೆ. ಆದರೆ ಸಾಮಾನ್ಯ ವರ್ಗದವರ ಪಾಲಿಗಂತು ಶಾಸನಗಳು ನಿಜಕ್ಕೂ ಸಂಪೂರ್ಣ ಮೌನವಹಿಸಿವೆ. ಹಾಗಾದರೆ ಸಾಮಾನ್ಯ ಮಹಿಳೆಯರು ಶಾಸನಗಳಲ್ಲಿ ಉಲ್ಲೇಖವಾಗಿಲ್ಲವೆ ಎಂಬ ಪ್ರಶ್ನೆ ಹಾಕಿಕೊಂಡರೆ ಈ ಪ್ರಶ್ನೆಗೆ ಉತ್ತರಿಸುವುದು ಕಷ್ಟಕರ ಸಂಗತಿಯೇ ಆಗಿದೆ. ಸಾಮಾನ್ಯವರ್ಗದ ಮಹಿಳೆಯರ ಉಲ್ಲೇಖ ಶಾಸನದಲ್ಲಿ ಸಿಗುವುದು ಬೆರಳೆಣಿಕೆಯಷ್ಟು ಮಾತ್ರ. ಇದರಲ್ಲಿಯೇ ಅವರು ರಾಣಿಯರಂತೆ ದೇವಾಲಯ, ಬಸದಿಗಳನ್ನು ನಿರ್ಮಿಸಿ ದೊಡ್ಡ ಮೊತ್ತದ ದಾನ ನೀಡದಿದ್ದರೂ ತಮ್ಮ ಕೈಲಾದಷ್ಟು ಸೇವೆಯನ್ನು ಸಮಾಜಕ್ಕೆ ನೀಡಿದ್ದಾರೆ. ಇತಿಹಾಸ ನಿರ್ಮಾಣವೆಂಬುದು ಕೇವಲ ರಾಜರಾಣಿಯರದ್ದೇ ಆಗಿರುವುದಿಲ್ಲ. ಅದು ಸಾಮಾನ್ಯ ವರ್ಗದ ಜನರನ್ನೂ ಒಳಗೊಂಡಿರುತ್ತದೆ.

ಸ್ತ್ರೀಯರಿಗೆ ಸಹಜವಾಗಿಯೇ ಇತರರ ದುಃಖ, ದುಮ್ಮಾನಗಳಿಗೆ ನೆರವಾಗುವ ಮನಸ್ಥಿತಿ ಮೈಗೂಡಿಕೊಂಡಿರುತ್ತದೆ. ಅದು ಸಂದರ್ಭ ಬಂದಾಗಲೇ ಹೊರಬರುವ ಸಾಧ್ಯತೆಗಳುಂಟು. ಸ್ತ್ರೀಯಾದವಳು ಸಮಾಜದಲ್ಲಿ ಪುರುಷ ನಿರ್ಮಿತ ಮಿತಿಗಳಲ್ಲಿಯೇ ನಿಂತು ಅಲ್ಲಲ್ಲಿ ತನ್ನ ಕಾರ್ಯಚಟುವಟಿಕೆಗಳನ್ನು ಕೈಗೊಂಡಿದ್ದಾಳೆ. ಸಾಮಾನ್ಯ ಮಹಿಳೆಯರು ತಮಗೆ ದೊರೆತ ಅಲ್ಪಮಟ್ಟಿನ ಆರ್ಥಿಕತೆಯಲ್ಲಿಯೇ ಸಾಮಾಜಿಕ ಕಳಕಳಿಯಿಂದ ತಮಗೆ ಕೈಗೆಟುಕುವಷ್ಟು ಕಾರ್ಯಗಳನ್ನು ನಿರ್ವಹಿಸಿದ್ದಾರೆ.

ಹೊಳಲ್ಕೆರೆ ತಾಲೂಕು ತಾಳ್ಯ ಹೋಬಳಿ ನುಲೇನೂರು ಗ್ರಾಮದ ನಾರಣದೇವರ ಹೊಲದಲ್ಲಿ ಶಾಸನವೊಂದು ದೊರೆತಿದೆ. ಈ ಶಾಸನದಲ್ಲಿ "ಬೆನಕ್ಕನಮಗ.... ಖಲೋಜಿ"[೭೮] ಸಾಮಾನ್ಯವಾಗಿ ರಾಜರು ನಡೆಸುತ್ತಿದ್ದ ಯುದ್ಧಗಳಲೆಲ್ಲ ಭಾಗವಹಿಸಿ ಯುದ್ಧ ಮಾಡುತ್ತಿದ್ದ ವೀರರೆಲ್ಲಾ ಸಾಮಾನ್ಯ ವರ್ಗದವರೇ ಆಗಿರುತ್ತಿದ್ದರು. ಅಂತಹ ವೀರನನ್ನು ಕಳೆದುಕೊಂಡಾಗ ಸಾಮಾನ್ಯವರ್ಗದ ವೀರನ ತಾಯಿ, ತಂಗಿ, ಅಕ್ಕ, ಪತ್ನಿ, ಮಕ್ಕಳೇ ಹೆಚ್ಚಿನ ದುಃಖ ಅನುಭವಿಸುತ್ತಿದ್ದರು.

ಸತಿಸಹಗಮನವೂ ಸಹ ಹೆಚ್ಚಾಗಿ ಸಾಮಾನ್ಯವರ್ಗಗಳಲ್ಲಿ ನಡೆದಿರುವುದು. ಆದರೆ ಅವರಿಗಾಗಿ ನಡೆಸಿದ ಶಾಸನಗಳ ಸಂಖ್ಯೆ ವಿರಳವೆನ್ನಬಹುದು.

ಹೊಳಲ್ಕೆರೆ ತಾಲೂಕು ತಾಳ್ಯಹೋಬಳಿ ಹೊರಕೆರೇ ದೇವಪುರದ ಕೆರೇ ಕೋಡಿ ಬಳಿ ಇರುವ ಶಾಸನವೊಂದರಲ್ಲಿ "ಹೊರಕೆರ್‍ಯೆಯತನ ಮಹಬಿಸಿ ಕೇತನ ಮಗಳು ಹೊನಿ....."[೭೯] ಎಂಬವಳು ಧರಿಗೆ ಸೇವೆಗೆ ಭೂಮಿಯನ್ನು ದಾನನೀಡಿದ ವಿವರವಿದೆ. ರಾಣಿಯರು ಮಾಡಿದಂತೆ ದೊಡ್ಡ ದಾನದ ಸೇವೆಗಳನ್ನು ಸಾಮಾನ್ಯ ಮಹಿಳೆಯರಿಗೆ ಮಾಡಲಾಗದೇ ಹೋದರೂ ತನ್ನ ಕೈಗೆಟುಕುವ ಆರ್ಥಿಕತೆಗೆ ಅನುಸಾರವಾಗಿ ದಾನ ನೀಡಿದ ವಿವರವಿದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ತಳುಕು ಹೋಬಳಿ ದೊಡ್ಡ ಉಳ್ವರ್ತೆ ಗ್ರಾಮದ ಕೆರೆ ಕೆಳಗೆ ದಕ್ಷಿಣ ಕೋಡಿ ಬಳಿ ಶಾಸನವೊಂದು ದೊರೆತಿದೆ. ಈ ಶಾಸನದಲ್ಲಿ ಕಂಭಯ್ಯ ಮತ್ತು ನಾಗಬ್ಬೆಯರ ಮಗ 'ಮಾರೆಯ್ಯ' ತುಱುಗೊಳಲ್ಲಿ...."[೮೦] ಕಾದಿಯಡಿದನೆಂಬ ವಿವರವಿದೆ. ಮೊದಲೇ ಮೇಲೆ ತಿಳಿಸಿದಂತೆ ಅಧಿಕಾರಿ ವರ್ಗದವರ ಸ್ವಾರ್ಥ ಮಹಾತ್ವಾಕಾಂಕ್ಷೆಗಳಿಂದ ಸಾವಿನ ಹಂಚಿಗೆ ಬಲಿಯಾಗುತ್ತಿದ್ದವರು ಸಾಮಾನ್ಯವರ್ಗದವರಾಗಿರುತ್ತಿದ್ದರು. ಜೀವನ ಪೂರ್ತಿ ವಿಧವೆಯರಾಗಿ ಸಂಪ್ರದಾಯಸ್ಥ ಸಮಾಜದಲ್ಲಿ ಬದುಕಲಾರದೆ ಪತಿಯೊಂದಿಗೆ ಸಹಗಮನ ಮಾಡುತ್ತಿದ್ದವಳು ಕೆಳವರ್ಗದ ಮಹಿಳೆಯಾಗಿರುತ್ತಿದ್ದಳು. ನೋವು, ಹಿಂಸೆ, ಸಂಕಟಗಳಿಗೆ ಸಮಾಜ ನಿರ್ಮಿಸಿದ ಎಲ್ಲಾ ಕಾನೂನು ಕಟ್ಟಳೆಗಳಿಗೆ ಆಹಾರವಾಗುತ್ತಿದ್ದುದು ಈ ಮಹಿಳೆಯೇ ಆಗಿರುತ್ತಿದ್ದಳು. ಹೆಣ್ಣಾದವಳು ಸದಾ ಪುರುಷನನ್ನು ಆಶ್ರಯಿಸಿ ಬದುಕಬೇಕೆಂಬ ದಾರುಣ ಸ್ಥಿತಿಯಿಂದ ಅವಳು ಅವನೊಂದಿಗೆ ತನ್ನ ಪ್ರಾಣ ಕಳೆದುಕೊಳ್ಳಬೇಕಿತ್ತು.

ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರಿನ ಕ್ರಿ.ಶ.೧೬೬೫ರ ಪರಶುರಾಮ ಪುರ ಹೋಬಳಿ ಸಂತೆಗೋವಿ ಗ್ರಾಮದ ಶಾಸನವೊಂದು ಸಾಕಷ್ಟು ತ್ರುಟಿತವಾಗಿದೆ.[೮೧] ಈ ಶಾಸನದಲ್ಲಿ ತಳವಾರ ದೇವರಮನೆ ಗುಡ್ಡಿನಾಯಕನ ಮಗಳು ತಿಂಮವೆ... ಎಂದು ತಿಳಿದುಬರುತ್ತದೆ. ಇವಳ ಕಾರ್ಯವೇನು ಎಂಬುದರ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಸಾಮಾನ್ಯವರ್ಗ ಅದರಲ್ಲೂ ತಳಸಮುದಾಯದ ಸ್ತ್ರೀಯರ ಸ್ಥಿತಿ ಅತ್ಯಂತ ಭೀಕರ ಚಿಂತಾಜನಕವಾಗಿರುತಿತ್ತು. ಸಾಮಾನ್ಯ ವರ್ಗದವರು ಹೆಚ್ಚಾಗಿ ದೈವದಲ್ಲಿ ನಂಬಿಕೆ ಹೊಂದಿದವರು. ಇವರು ತಮಗೆ ಅನಾರೋಗ್ಯ ಬಂದಾಗ, ಮಕ್ಕಳಾಗದೇ ಹೋದಾಗ, ಮಕ್ಕಳ ಮದುವೆ ಮೊದಲಾದ ಸಂದರ್ಭದಲ್ಲಿ ದೇವರಿಗೆ ಹರಕೆ ಹೊತ್ತು ದೇವರಿಗೆ ದಾನ ನೀಡಿದ ಉದಾಹರಣೆಗಳೇ ಹೆಚ್ಚಾಗಿರುತ್ತಿದ್ದವು. ಮಕ್ಕಳ ಹರಕೆ ಸಾಮಾನ್ಯವಾಗಿ ಕಂಡುಬರುತ್ತದೆ. ಸಾಮಾನ್ಯ ವರ್ಗದವರಿಗೆ ಮಕ್ಕಳೇ ಆಸ್ತಿ, ಸಂಪತ್ತು ಎಲ್ಲವೂ ಅವರೇ ಆಗಿರುತ್ತಾರೆ. ಮಕ್ಕಳ ಸಂಭ್ರಮ ಅವರಿಗೆ ಅತ್ಯಂತ ಹರ್ಷದಾಯಕ ಸಂಗತಿಯಾಗಿರುತ್ತದೆ.

ಚಿತ್ರದುರ್ಗ ಜಿಲ್ಲೆ ಪಂಡರಳ್ಳಿ ಬಳಿಯ ರಂಗನಾಥಸ್ವಾಮಿ ಬೆಟ್ಟದ ಬಂಡೆಗಳಿಂದ ತುಂಬಿದ ಸ್ಥಳದಲ್ಲಿ ಶಾಸನವೊಂದು ದೊರೆತಿದೆ. ಇದನ್ನು ರೈಸ್ ೧೯೦೨ರಲ್ಲಿ ಪ್ರಕಟಿಸಿದ್ದಾರೆ. ರೈಸ್ ಇದರ ಕಾಲವನ್ನು ಕ್ರಿ.ಶ.೫೦೦ ಎಂದಿದ್ದಾರೆ. ಆದರೆ ಪ್ರೊ.ಬಿ.ರಾಜಶೇಖರಪ್ಪನವರು ಕ್ರಿ.ಶ.೭-೮ನೇ ಶತಮಾನಕ್ಕೆ ಸೇರಿರಬಹುದು ಎಂದು ಅಭಿಪ್ರಾಯ ಪಡುತ್ತಾರೆ. ಕಾರಣ ಈ ಶಾಸನ ಚಾಲುಕ್ಯ ಲಿಪಿಗೆ ನಿಕಟವಾಗಿದೆ ಎನ್ನುತ್ತಾರೆ. ಸ್ತ್ರೀಯೊಬ್ಬಳು ಶಾಸನವನ್ನು ಬರೆಸಿರುವುದು ಶಾಸನದಲ್ಲಿ ಕಂಡುಬರುತ್ತದೆ.

೧ "ಸ್ವಸ್ತಿ ಶ್ರೀ ಚನ್ದಿಯಮ್ಮರಸ ದೇರ್ವರ್ಗ್ಗೆ ಮಣ್ಣಂ ಕೊಟ್ಟ ಸುರ್ಟಟ್ಗ್ಲ್ಲಾಡುಂ ಪಿಟ್ಟರ್ಗೆಜೆಪನ್ನೆರಡುಂ

೨ ಗಾಮುಣ್ಡಪ್ರಜೆ ಸಕ್ಷಿವೋವ ಕಾವಾಳಿಗ ಭಟಾರರ್ಪಡೆ ದೊರ್ಮ್ಮಣ್ಣಮ್

೩ ಇ ದತ್ತಿಯಾನಟಿದೋಂ ಪಞ್ಚ ಮಹಾಪಾತಕನಕ್ಕುಮ್

೪ ಬಪುಭಿರ್ವ್ವಸುಧಾ ಭುಕ್ತ್ವಾರಾಜಭಿಸ್ಸರ ರಾಜಭಿಃ

೫ ಯಸ್ಯಯಸ್ಯಾಯದಾ ಭೂಮಿ ತಸ್ಯ ತಸ್ಯ ತದಾಪಲಂ

೬ ಶ್ರೀ ಬಿಜೋಬೆ"[೮೨]

ಶ್ರೀಬಿಜೋಬೆ ಎಂಬವಳು ಶಾಸನ ಹಾಕಿಸಿ ದಾನ ನೀಡಿದ ವಿವರ ಶಾಸನದಲ್ಲಿ ಕಂಡುಬರುತ್ತದೆ. ಈಕೆ ಯಾವ ವರ್ಗಕ್ಕೆ ಸೇರಿದ್ದಾಳೆ ಎಂಬ ವಿವರದ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಶಾಸನದಲ್ಲಿಯೂ ಕಾಲದ ಬಗೆಗಿನ ಉಲ್ಲೇಖ ಲಭ್ಯವಾಗುವುದಿಲ್ಲ. ಅದೇನೇ ಇದ್ದರೂ ಸ್ತ್ರೀಯೊಬ್ಬಳು ಶಾಸನ ಹಾಕಿಸಿರುವ ಸಂಗತಿ ಚಿತ್ರದುರ್ಗಕ್ಕೆ ಹೆಮ್ಮೆಯ ಸಂಗತಿಯಾಗಿದ್ದು, ಚಿತ್ರದುರ್ಗದ ಪ್ರಾಚೀನ ಹೆಸರನ್ನು ಒಳಗೊಂಡಿರುವ ಶಾಸನ ಇದಾಗಿದೆ.

ಶಾಸನಗಳ ವಿಚಾರಕ್ಕೆ ಬಂದಾಗ ಸಾಮಾನ್ಯ ಮಹಿಳಾವರ್ಗದ ಕಾರ್ಯಚಟುವಟಿಕೆಗಳು ತೀರಾ ವಿರಳವಾಗುತ್ತವೆ. ಅವರ ದೈನಂದಿನ ಬದುಕಿನ ಜಂಜಾಟದಲ್ಲಿಯೇ ಅವರು ಮುಳುಗಿ ಹೋಗುವ ಸಂದರ್ಭಗಳೇ ಹೆಚ್ಚು. ಅಲ್ಲದೆ ಪುರುಷ ಸಮಾಜ ಹೆಣ್ಣಿಗೆ ಕುಟುಂಬ, ಮಕ್ಕಳ ಲಾಲನೆ-ಪಾಲನೆ, ಪೋಷಣೆ, ಕೃಷಿ-ಕಾರ್ಯ ಮೊದಲಾದ ಸೀಮಿತ ಕಾರ್ಯಗಳಿಗೆ ಗೆರೆ ಕೊರೆದು ಬಂಧಿಸಿ ಬಿಟ್ಟಿದೆ. ತನ್ನ ನೋವು ಸಂಕಟದಲ್ಲೇ ಬೆಂದು ಅನ್ನವಾಗುತ್ತಿರುವ ಸ್ತ್ರೀಯರು ಅವರದೇ ಆದ ಪ್ರಪಂಚದಲ್ಲಿ ಜೀವಿಸುತ್ತಿದ್ದಾರೆ. ಇಂತಹ ವೇಳೆಯಲ್ಲಿ ಅವಳು ಶಾಸನಗಳಲ್ಲಿ ಬರೆಯಿಸುವಷ್ಟು ಸಮಾಜದಲ್ಲಿ ಕಾರ್ಯನಿರ್ವಹಿಸುವುದೆಂದರೆ ಅದು ತುಂಬಾ ದೂರದ ಸಂಗತಿಯೇ ಆಗಿರುತ್ತದೆ. ಈ ವರ್ಗದ ಸ್ತ್ರೀಯರು ದೇವಾಲಯದ ಗುಡಿಗುಂಡಾರಗಳನ್ನು ಸ್ವಚ್ಛಗೊಳಿಸುವಲ್ಲೋ ರಾಣಿಯರ ಸೇವಕಿಯರಾಗಿಯೋ, ಕಾಣಿಸುವುದೇ ಹೆಚ್ಚಿನ ಸಂಖ್ಯೆಯದಾಗಿರುತ್ತದೆ.

ಇದುವರೆಗೂ ಹೆಣ್ಣಿನ ಬಗೆಗೆ ಸಾಮಾಜಿಕ ಚಿಂತನೆಗಳು ನಡೆದು ಬಂದಿದ್ದು, ಹೆಣ್ಣಿನ ಸಮಸ್ಯೆಗಳನ್ನು ಗುರುತಿಸಿವೆಯೇ? ಎಂದು ಪ್ರಶ್ನೆ ಹಾಕಿಕೊಂಡರೆ ಸಮಸ್ಯೆಗಳನ್ನು ಗುರುತಿಸಿಲ್ಲವೆಂದಲ್ಲ. ಆದರೆ ಅವುಗಳಿಗೆ ಇಂದಿಗೂ ಪುರುಷ ಸಮಾಜ ಸೈಂದಾತಿಕ ಪರಿಹಾರವನ್ನು ಒದಗಿಸುವ ಪ್ರಯತ್ನಕ್ಕೆ ಕೈಹಾಕುತ್ತಿಲ್ಲ. ಸಾಮಾನ್ಯವರ್ಗದ ಸ್ತ್ರೀಯರ ಜೀವನ ಇಂದಿಗೂ ಕತ್ತಲ ಕೋಣೆಯಿಂದ ಬೆಳಕಿಗೆ ಬಂದಿರುವುದು ವಿರಳದ ಸಂಗತಿಯೇ ಸರಿ. ಬಾಯಿಮಾತಿನಲ್ಲಿ ಮಾತ್ರ ಹೆಣ್ಣಿಗೆ ಸ್ವಾತಂತ್ರ್ಯ ಸಮಾನತೆ ದೊರೆತಿದೆ ಎಂದು ಮಾತನಾಡುತ್ತಾರೆ. ಆದರೆ ಸ್ತ್ರೀಯರ ಮುನ್ನಡೆ ಪುರುಷರ ಬಾಯಿಮಾತಿನಲ್ಲೆ ಜಗಳವಾಡುತ್ತಾ ಕುಳಿತು ಬಿಟ್ಟಿದೆ. ಹೆಚ್ಚಿನ ಅವಶ್ಯಕತೆಗಳೇನು? ಅವಳ ಆಂತರ್ಯದಲ್ಲೇನಿದೆ. ಅವಳ ಹಂಬಲ, ಬಯಕೆಗಳೇನು ಎಂಬುದನ್ನು ಯಾರು ಹುಡುಕುವ ಪ್ರಯತ್ನವನ್ನು ಮಾಡಿ ಪುರೈಸುವ ಹೊಣೆಗಾರಿಕೆ ಹೊರುತ್ತಿಲ್ಲ. ಕುಟುಂಬದಲ್ಲೆ ಸ್ತ್ರೀ ಬಂಧಿಯಾಗುತ್ತಲೇ ಬರುತ್ತಿದ್ದಾಳೆ. ಸಾಮಾನ್ಯವರ್ಗದ ಸ್ತ್ರೀಯರು ಇನ್ನಾದರು ಕುಟುಂಬದ ಬೇಲಿಯಿಂದ ಸ್ವಲ್ಪವಾದರೂ ಹೊರಬಂದು ಶಿಕ್ಷಣ ಪಡೆದು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಬೇಕಿದೆ.

೨.೫. ಸಾಮಾನ್ಯ ವರ್ಗದ ಮಹಿಳೆಯಾಗಿ ಓಬವ್ವ

ಚಿತ್ರದುರ್ಗ ಎಂದಾಕ್ಷಣ ನಮ್ಮ ನೆನಪಿಗೆ ಬರುವುದು ಧೀರ ಮಹಿಳೆ ಓಬವ್ವ. ಈಕೆ ಯಾವ ರಾಜಕೀಯದಲ್ಲಿಯೂ ಪಾಲ್ಗೊಳ್ಳದವಳು. ಅಲ್ಲದೆ ಯಾವ ಅರಸರ ಪತ್ನಿಯೂ ಆಗಿರದ, ಯಾವ ಸಾಮ್ರಾಜ್ಯಕ್ಕೂ ರಾಣಿಯಲ್ಲದವಳು. ಒಬ್ಬ ಸಾಮಾನ್ಯ 'ಬೇಡ ಕುಲ' ಅದರಲ್ಲೂ ತಳಸಮುದಾಯವೊಂದರ ಹೆಣ್ಣು ತನ್ನ ನೆಲಕ್ಕಾಗಿ, ಸ್ವಾಮಿನಿಷ್ಠೆಗಾಗಿ ತೋರಿದ ಧೈರ್ಯ, ದಿಟ್ಟ ನಿಲುವು ನಿಜಕ್ಕೂ ಶ್ಲಾಘನೀಯವಾದುದು. ಒಬ್ಬ ಪಹರೆ ಕಾಯುವವನ ಮಡದಿಯಾಗಿ ಅವಳು ತೋರಿದ ಸಾಹಸ, ಆ ಸಮಯಕ್ಕೆ ಅವಳಿಗೆ ಹೊಮ್ಮಿದ ಸ್ಫೂರ್ತಿಯ ಚಿಲುಮೆ, ತ್ಯಾಗ ಮೊದಲಾದ ಗುಣಗಳು ಇಂದಿಗೂ ಕರ್ನಾಟಕದ ಮೂಲೆ-ಮೂಲೆಯಲ್ಲಿರುವ ಜನರ ಬಾಯಲ್ಲಿ ಹರಿದಾಡುವಂತದ್ದಾಗಿದೆ.

ಇವಳು ಕಿತ್ತೂರಿನ ರಾಣಿ ಚೆನ್ನಮ್ಮಳಂತೆ ರಾಣಿಯಾಗಿ ಸಿಂಹಾಸನ ಅಲಂಕರಿಸಿದವಳಲ್ಲ. ಆದರೂ ಸಹ ಇಂದಿಗೂ ಚಾರಿತ್ರಿಕ ವೀರ ವನಿತೆಯರ ಸಾಲಿನಲ್ಲಿರಿಸಿ ಇವಳ ಧೀರೋದಾತ್ತ ದಿಟ್ಟ ನಿಲುವನ್ನು ಪ್ರಶಂಸಿಸಲಾಗಿದೆ. ಚಿತ್ರದುರ್ಗವನ್ನಾಳಿದ ನಾಯಕರ ಇತಿಹಾಸದಲ್ಲಿ ಇವಳು ಎಸಗಿದ ಸಾಹಸದ ಬಗೆಗೆ ಇವಳ ಚರಿತ್ರೆಯನ್ನಾಧರಿಸಿ ಕೆಲವು ಕೃತಿಗಳಲ್ಲಿ ಪ್ರಸ್ತಾಪಿಸಲಾಗಿದೆ.

ಓಬವ್ವೆ ಎಂಬ ಸಾಮಾನ್ಯ ವರ್ಗದ ಮಹಿಳೆಯು ಚಿತ್ರದುರ್ಗವನ್ನಾಳಿದ ಕೊನೆಯ ದೊರೆ ರಾಜಾವೀರ ಮದಕರಿನಾಯಕನ ಆಳ್ವಿಕೆಯಲ್ಲಿ ಕಾಣಿಸಿಕೊಳ್ಳುತ್ತಾಳೆ. ಈ "ಅರಸನು ಕ್ರಿ.ಶ.೧೭೫೪-೧೭೭೯ರ ವರೆಗೆ ಅಧಿಕಾರ ನಡೆಸಿದವನಾಗಿದ್ದನು."[೮೩] ಇವನ ಆಳ್ವಿಕೆಯ ಅವಧಿಯಲ್ಲಿ ಹೈದರ್ ಅಲಿಯು ಚಿತ್ರದುರ್ಗವನ್ನು ಮುತ್ತಿದನು. ಆಗ ಇವನ ಸೈನಿಕರು ಕೋಟೆಯ ಕಳ್ಳಗಂಡಿಯಲ್ಲಿ

ಗುಪ್ತವಾಗಿ ಒಳಗಡೆ ನುಗ್ಗಲು ಯತ್ನಿಸುತ್ತಿದ್ದರು. ಪತಿ ಊಟ ಮಾಡುತ್ತಿರುವಾಗ ಆಕಸ್ಮಿಕವಾಗಿ ನೀರು ತರಲು ಬಂದ ಓಬವ್ವ ಅದನ್ನು ಕಂಡಳು. ಮರದ ಒನಕೆಯನ್ನಿಡಿದು ಶತ್ರು ಸೈನ್ಯವನ್ನು ಸದೆ ಬಡಿದಳು. ದುರ್ಗಕ್ಕೆ, ರಾಜನಿಗೆ ಜಯವನ್ನು ತಂದುಕೊಟ್ಟಳು. ಅಲ್ಲದೆ ಕೆಲವರು ಶತ್ರು ಸೈನ್ಯ ನಾಶಪಡಿಸುತ್ತ ಹೈದರನ ಸೈನಿಕನ ಕತ್ತಿಯಿಂದ ಹತಳಾದಳೆಂದು ತಿಳಿಸುತ್ತಾರೆ. ಮತ್ತೆ ಕೆಲವರು ಅವಳು ಅಲ್ಲೇ ಪ್ರಜ್ಞೆ ತಪ್ಪಿ ಬಿದ್ದಿದ್ದಳೆಂದು ಹೇಳುತ್ತಾರೆ. ಬಿದ್ದಿದ್ದ ಅವಳನ್ನು ಅರಮನೆಗೆ ಕರೆತಂದು ಉಪಚರಿಸಿದಂತೆಯೂ ಮತ್ತೆ ಕೆಲವು ದಿನಗಳವರೆಗೆ ಬದುಕಿದ್ದಳೆಂದು ತಿಳಿದುಬರುತ್ತದೆ. ಆದರೆ ಇವಳ ಬಗ್ಗೆ ತಿಳಿದುಕೊಳ್ಳಲು ಯಾವ ಶಾಸನಗಳೂ ದೊರೆಯುವುದಿಲ್ಲ. ಆದರೆ ಕೈಫಿಯತ್ತು ಮತ್ತು ರಹದಾರಿ ಪತ್ರಗಳು ಓಬವ್ವನ ಬಗ್ಗೆ ಹೇಳುತ್ತವೆ. ಓಬವ್ವೆಯ ಘಟನೆಯನ್ನು ಕುರಿತು ಹಲವಾರು ವಿದ್ವಾಂಸರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಎಂ.ಎಸ್.ಪುಟ್ಟಣ್ಣನವರು "ಓಬಬ್ಬ ಅಥವ ಓಬಿಯು ಚಿತ್ರದುರ್ಗ ಬಳಿಯ ಅಗಸನಕಲ್ಲು ಗ್ರಾಮದವಳು. ಚಿತ್ರದುರ್ಗ ಕೋಟೆಯ ಕಳ್ಳಗಂಡಿಯಲ್ಲಿ ನುಗ್ಗಲೆತ್ನಿಸಿದ್ದ ಶತ್ರು ಸೈನಿಕರನ್ನು ಹಿಮ್ಮೆಟ್ಟಿಸುವ ತನ್ನ ಸಾಹಸದಲ್ಲಿ ಅವರಿಂದ ಹತ್ಯೆಗೀಡಾದಳು, ಆಕೆಯಿಂದ ಕೊಲ್ಲಲ್ಪಟ್ಟ ಶತ್ರು ಸೈನಿಕರ ಸಂಖ್ಯೆ ೨೦೦ ರಿಂದ ೩೦೦ ಎಂದು ತಿಳಿದುಬರುತ್ತದೆ."[೮೪]

"ಇತಿಹಾಸ ಸಂಶೋಧಕ ಹುಲ್ಲೂರು ಶ್ರೀನಿವಾಸ ಜೋಯಿಸರನ್ನು ಒಳಗೊಂಡಂತೆ ಹಲವಾರು ಲೇಖಕರು ಇದೇ ಸಂಗತಿಯನ್ನು ನಾನಾ ರೀತಿಯಲ್ಲಿ ಬರೆದು ಪ್ರಕಟಿಸಿದ್ದಾರೆ. ಅಲ್ಲದೆ ತನ್ನ ಸಾಹಸದ ನಂತರವೂ ಬದುಕಿದ್ದಳೆಂದೂ ದುರ್ಗದ ಅರಸನು ಈಕೆಯನ್ನು ಸನ್ಮಾನಿಸಿ ಗೌರವಿಸಿದ್ದನೆಂಬುದನ್ನು ವ್ಯಕ್ತಪಡಿಸಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ ಚಲವಾದಿ ಪಂಗಡದ ಓಬವ್ವೆಯನ್ನು ಬೇಡ ಜನಾಂಗದ ಮಹಿಳೆ ಎಂಬುದಾಗಿ ತಪ್ಪಾಗಿ ದಾಖಲಿಸಿರುವುದೂ ಉಂಟು ಎಂದು ಮತ್ತೆ ಕೆಲವರು ಅಭಿಪ್ರಾಯ ಪಡುತ್ತಾರೆ.

ಮತ್ತೆ ಕೆಲವರು ಈಕೆಯ ಅಸ್ತಿತ್ವವನ್ನು ಶಂಕಿಸಿರುವರು. ಇಡೀ ನಾಡಿನಲ್ಲೇ ಮನೆ ಮಾತಾಗಿರುವ ಓಬವ್ವನ ಬಗ್ಗೆ ಚರಿತ್ರೆಯ ದಾಖಲೆಗಳಾಗಲಿ, ಜನಪದ ಸಾಹಿತ್ಯವಾಗಲೀ, ಈವರೆಗೂ ದೊರೆತಿಲ್ಲವೇಕೆ? ಎಂಬ ಪ್ರಶ್ನೆಯನ್ನು ಮುಂದೊಡ್ಡಿರುವರು."[೮೫]

ಪ್ರಸ್ತುತ ಈ ಪ್ರಯತ್ನದಲ್ಲಿ ಓಬವ್ವೆಯ ಘಟನೆಯ ಚಾರಿತ್ರಿಕ ವಿವೇಚನೆಯನ್ನು ಈ ಕೆಳಗಿನ ಕೆಲವು ಪ್ರಶ್ನೆಗಳ ಪರಿಶೀಲನೆಯೊಡನೆ ಕೈಗೊಳ್ಳಳಾಗಿದೆ.

ಓಬವ್ವೆ ಚಾರಿತ್ರಿಕ ವ್ಯಕ್ತಿಯೇ? ಚಿತ್ರದುರ್ಗದ ಕೋಟೆಯಲ್ಲಿ ಓಬವ್ವೆ ತೋರಿದಳೆನ್ನಲಾದ ಸಾಹಸ ವಾಸ್ತವವೆ? ಚಿತ್ರದುರ್ಗ ಕೋಟೆಯಲ್ಲಿ ಈಗಲೂ ತೋರಿಸಲಾಗುವ ಕಲ್ಲು ಪೊಟರೆ ಅಥವಾ ಕಳ್ಳಗಂಡಿಯೊಡನೆ ಕಲ್ಪಿಸಲಾಗಿರುವ ಓಬವ್ವೆಯ ಸಂಬಂಧ ಸಮರ್ಥನೀಯವೇ? ಓಬವ್ವಳ ಅಂತ್ಯ ಹೇಗಾಯಿತು? ಎಂಬ ಪ್ರಶ್ನೆಗಳಿಗೆ ನಮಗೆ ಈ ಕೆಳಗಿನ ಆಕರಗಳು ಲಭ್ಯವಾಗುತ್ತವೆ.

ಚಿತ್ರದುರ್ಗ ನಾಯಕ ಅರಸರಿಗೆ ಸಂಬಂಧಿಸಿದ ದಾಖಲೆಯೊಂದು ಈ ರೀತಿ ನಿರೂಪಿಸುತ್ತದೆ.

೨.೧. "…..ಶತ್ರುಗಳು ದುರ್ಗಕ್ಕೆ ಪಶ್ಚಿಮ ದಿಕ್ಕಿನ ಕಡೆ ಮೊಕ್ಕಾಂ ಮಾಡಿ ವಂದಾನೊಂದು ರಾತ್ರಿ ಸರುವತ್ತಿನಲ್ಲಿ ಹುಚ್ಚಂಗಮ್ಮನ ಹೊಂಡದ ವೋಣಿ ಹಿಡಿದು ದಿಡ್ಡಿಯಲ್ಲಿ ವಬ್ಬೊಬ್ಬರಾಗಿ ಹೋಗ ಬೇಕೆಂತ ಯತ್ನಿಸುತ್ತಿರುವಲ್ಲಿ ಆ ದಿಡ್ಡಿ ಬಾಗಿಲ ಪಹರೆಗೆ ನೇಮಿಸಿದ ಹೊಲೆಯರವನು ಪಹರೆಗೆ ಹೋಗಬೇಕು ಜಾಗ್ರತೆ ವೂಟಕ್ಕೆ ಬಡಿಸೆನಲಾಗಿ ಆ ಸಮಯದಲ್ಲಿ ಯಿದ್ದ ಅನ್ನ ಮೊಸರುಯಿಟ್ಟು ವುಣ್ಣಿಸುತ್ತಿರಲಾಗಿ ಜನರು ಬರುವಂತೆ ಶಬ್ದವು ಅವನ ಹೆಂಡತಿಗೆ ಕೇಳಿಸಿ ಬರುವಲ್ಲಿ ಆಗ ಆಕೆಯು ಹೊರಗೆ ಹೋಗಿ ಚೆನ್ನಾಗಿ ನೋಡುವಲ್ಲಿ ಶತ್ರು ಪಕ್ಷದವರು ವಳಗೆ ಬರಬೇಕಂತ ಪ್ರಯತ್ನಿಸುತ್ತಿರುವುದು ಅರಿತು ಗಂಡನಿಗೆ ಹೇಳಿದ ಕೂಡ್ಲೆ ಅನ್ನ ಬಿಟ್ಟು ಬರುವನು. ಅದರ ಪಾಪವು ನನಗೆ ಬರುವುದು ಸುಮ್ಮನೆಯಿದ್ದರೆ ರಾಜ ದ್ರೋಹ ಮಾಡಿದಂತೆ ಆಗುವುದೆಂದು ಯೋಚಿಸಿ ತನ್ನ ಸಾಹಸಯಿದ್ದಷ್ಟು ಪ್ರಯತ್ನಿಸುವೆನು. ಅಷ್ಟರಲ್ಲಿ ಗಂಡನೆ ಬರುವನೆಂದು ವಂದು ವನಕೆ ಹಸ್ತದಲ್ಲಿ ಪಿಡಿದು ದಿಡ್ಡಿ ಬಾಗಿಲಿಗೆ ವೋರೆಯಾಗಿ ನಿಂತು ವೀರಗಚ್ಚೆ ಹಾಕಿ ಆ ಬಾಗಿಲು ವಬ್ಬೊಬ್ಬ ಬರುವಷ್ಟುಯಿತ್ತು. ಹೀಗಿರಲಾಗಿ ವಬ್ಬನು ತಲೆ ತೂರಿಸಿದ ಕೂಡಲೇ ಮುಸಲದಿಂದ ತಲೆಗೆ ತನ್ನ ಶಕ್ತಿಯಿದ್ದಷ್ಟು ಪೆಟ್ಟುಹಾಕಲು ಆ ಪೆಟ್ಟಿಗೆ ತಲೆ ಹೊಡೆದು ಸಾಯುವನು. ಆ ಶವವನ್ನು ಕಾಲುಹಿಡಿದು ತನ್ನ ಕಡೆ ಯಳ ಹಾಕುವುದು. ಯೀ ರೀತಿ ತಲೆಯಿಟ್ಟವರನ್ನೆಲ್ಲಾ ಕೊಲ್ಲುತ್ತಾ ನೂರಾರು ಮಂದಿಯನ್ನು ರಾಶಿ ಹಾಕಿದಳು. ಯೀ ಕಡೆ ಶತೃ ಪಕ್ಷದವರಿಗೆ ಅನುಮಾನ ತೋರಿ ವಳಗೆ ಹೊಕ್ಕವರೆಲ್ಲ ವಬ್ಬರೂ ಹಿಂದುರುಗಲಿಲ್ಲ, ವಳಗಿನ ಮರ್ಮ ತಿಳಿಯದಂತಾಯ್ತು. ಯಿದು ಯೇಮೋಣೋ ಮೋಸವಿರುತ್ತೆಂತ ಸೂಕ್ಷ್ಮೆಯಿಂದ ವಳಗಿನ ಕೃತ್ಯವನ್ನಿರಿತು ಪಲಾಯನವಾಗುವಷ್ಟಕ್ಕೆ ಯೀಕೆ ಗಂಡನು ವೂಟ ಮಾಡಿ ತನ್ನ ಸ್ತ್ರೀಯರಿಗೆ ಬಾಗಿಲು ಭದ್ರಹಾಕು. ಶತ್ರುಗಳು ಬರುವರಾಗಿದ್ದಾರೆಂತ ಹೇಳಿದ್ದಕ್ಕೆ ಪ್ರತಿ ಜವಾಬು ಯಿಲ್ಲದ್ದನ್ನು ಕಂಡು ಹೊರಗೆಲ್ಲಾ ಹುಡುಕಿ ಯೀ ನಿಶೆಯಲ್ಲಿ ಯಲ್ಲಿಗೆ ಹೋದಳೋ ಯಿರದ ನಿಜಸ್ಥಿತಿ ನಾಳೆ ತಿಳಕೊಂಡರೆ ಬಂದೀತು ಯಿದು ಸಮಯವಲ್ಲ ಪಹರೆಗೆ ಹೋಗ ಬೇಕಂತ ಜಾಗ್ರತೆಯಲ್ಲಿ ದಿಡ್ಡಿಬಾಗಿಲ ಬಳಿ ಬರುತ್ತಾ ಹೆಣದ ರಾಶಿಗಳನ್ನು ಮುಸಲದ ಶಬ್ದವನ್ನು ಕೇಳಿ ಗಾಬರಿಯಾಗಿ ತನ್ನ ಭಾರ್ಯಳು ಯಿರುವ ಸ್ಥಿತಿಯನ್ನು ನೋಡಿ ಭಯಪಟ್ಟು ಗದ್ದಲ ಮಾಡಲಾಗಿ ಶತ್ರುಗಳೆಲ್ಲಾ ವೋಡಿ ಹೋದರು. ನಂತರ ನಡೆದ ವರ್ತಮಾನ ಗಂಡನಿಗೆ ಹೇಳಿ ತನ್ನ ತಪ್ಪು ಕ್ಷಮಿಸೆಂದು ಬೇಡಿಕೊಳ್ಳಲಾಗಿ ಪರಮಾನಂದದಿಂದ ಅದೇ ಸ್ಥಿತಿಯಿಂದಲೇ ಗಂಡಹೆಂಡಿರು ದೊರೆಯ ಬಳಿಗೆ ಹೋಗಿ ನಡದ ಸಮಾಚಾರ ಅರಿಕೆ ಮಾಡಿಕೊಳ್ಳಲಾಗಿ ರಾಜನು ಸ್ತ್ರೀಯಳ ಸಾಹಸಕ್ಕೆ ಆನಂದಭರಿತನಾಗಿ ವಸ್ತ್ರಾಭರಣಗಳನ್ನು ತರಿಸಿ ಮುಂದಿಡಲು ಯಿವುಗಳು ಆಶಾಶ್ವತವಾದವು ನನ್ನ ಹೆಸರಿನ ಮೇಲೆ ಆ ಸ್ಥಳದಲ್ಲಿ ದೊಡ್ಡದಾಗಿ ಬಾಗಿಲು ಕಟ್ಟಿಸಿ ವರ್ಷಕ್ಕೊಮ್ಮೆ ತನ್ನವರಿಂದ ಪೂಜೆ ಮಾಡಿಸುತ್ತಾ ಬರಬೇಕಂತ ಪ್ರಾರ್ಥಿಸಲಾಗಿ ಅರಸು ಸಂತೋಷಪಟ್ಟು ಬಾಗಿಲು ಕೋಟೆ

ಸಹ ಕಟ್ಟಿಸಿ ವನಿಕೆಗಂಡಿ ಬಾಗಲೆಂತ ಹೆಸರಿಡಿಸಿ ಅಲ್ಲಿ ಆ ಸ್ತ್ರೀಯಳ ರೂಪು ಕೆತ್ತಿಸಿ ಗಂಡ ಹೆಂಡರಿಗೆ ಯಿನಾಮುಕಿಲ್ಲತ್ತು ಕೊಡಿಸಿದನು."[೮೬]

೨.೨. ಚಿತ್ರದುರ್ಗ ಕಡೆಯ ಅರಸ ರಾಜಾವೀರಮದಕರಿನಾಯಕನ ಸೋದರ ಸಂಬಂಧಿ ದೊಡ್ಡ ಮದಕರಿನಾಯಕನ ಖಾಸಾವಂಶಸ್ಥರೂ ಚಿತ್ರದುರ್ಗ ತಾಲೂಕು ಭರಮಸಾಗರದ 'ಅಂಬಾ ವಿಲಾಸ'ದ ನಿವಾಸಿಯೂ ಆಗಿದ್ದ ಬಿಚ್ಚುಗತ್ತಿ ದೊಡ್ಡಮದಕರಿನಾಯಕ(ಬಿ.ಡಿ.ಮದಕರಿ ನಾಯಕ)ರು ಚಿತ್ರದುರ್ಗದ ಚಲವಾದಿ ಮತಸ್ಥರಿಗೆ ತಮ್ಮ ಸ್ವಹಸ್ತದಿಂದ ಬರೆದುಕೊಟ್ಟ ರಹದಾರಿ ಪತ್ರದಲ್ಲಿ ಈ ಮೇಲೆ ಪ್ರಸ್ತಾಪಿಸಿದ ದಾಖಲೆಯಲ್ಲಿಯ ಅಂಶಗಳನ್ನೇ ಪ್ರಸ್ತಾಪಿಸಿದ್ದಾರೆ.[೮೭]

ಕೈಫಿಯತ್ತುಗಳಲ್ಲಿ 'ಒನಕೆ ಕಿಂಡಿ ಬಾಗಿಲು' ಉಲ್ಲೇಖಗಳು ಕಂಡುಬರುತ್ತವೆ. ಇಂದಿಗೂ 'ಒನಕೆಕಿಂಡಿ–ಓಬಳಗಂಡಿ–ಓಬವ್ವನ ಕಿಂಡಿ'ಎಂದು ಜನಪ್ರಿಯವಾಗಿದೆ. ಚಿತ್ರದುರ್ಗ ನಾಯಕ ಅರಸರು ನೀಡಿರುವ ನಿರೂಪ ಅಧಿಕಾರ ಪತ್ರದಲ್ಲೂ ಓಬವ್ವಳ ವಂಶದ ಬಗ್ಗೆ ಹೇಳಲಾಗಿದೆ. ಓಬವ್ವನ ಪ್ರತಿಮೆಯೊಂದನ್ನು ದೆಹಲಿಯ ವೃತ್ತವೊಂದರಲ್ಲಿ ಅನಾವರಣಗೊಳಿಸಲಾಗಿದೆ. ಚಿತ್ರದುರ್ಗದಲ್ಲಿ ೧೯೯೦ರಲ್ಲಿ ಒನಕೆ ಓಬವ್ವ ಕ್ರೀಡಾಂಗಣವನ್ನು ಸ್ಥಾಪಿಸಲಾಗಿದೆ. ಮಹಿಳೆಯರಿಗಾಗಿಯೇ ಚಿತ್ರದುರ್ಗದಲ್ಲಿ ೧೯೯೪ರಲ್ಲಿ ಒನಕೆ ಓಬವ್ವ ಮಹಿಳಾ ಸಹಕಾರಿ ಬ್ಯಾಂಕ್ ಸ್ಥಾಪಿಸಲಾಗಿದೆ. ಒನಕೆ ಓಬವ್ವ ಹೆಸರಿನ ದಕ್ಷಿಣ ವಲಯದ ಪಂದ್ಯಾವಳಿಗಳಲ್ಲಿ ಕ್ರೀಡಾ ಪಟುಗಳಿಗೆ ಶ್ರೇಷ್ಠ ಪ್ರಶಸ್ತಿಯನ್ನು ೧೯೯೧ಕ್ಕೂ ಮುನ್ನವೇ ಪ್ರದಾನ ಮಾಡಲಾಗುತಿತ್ತು.

ಒಟ್ಟಿನಲ್ಲಿ ಸಾಮಾನ್ಯ ಮಹಿಳೆಯಾಗಿ ಓಬವ್ವ ದಿಟ್ಟತನದಿಂದ ಹೋರಾಡಿ ತನ್ನ ನೆಲಕ್ಕಾಗಿ ತನ್ನ ಪ್ರಾಣತ್ಯಾಗ ಮಾಡಿದ್ದಾಳೆ ಎಂಬ ಮಾತುಗಳು ಇಂದಿಗೂ ಜನಜನಿತವಾಗಿವೆ. ಸಂದರ್ಭ ಬಂದೊದಗಿದಾಗ ಹೆಣ್ಣಾದವಳು ಎಂತಹ ದಿಟ್ಟ, ಧೀರ ಕಾರ್ಯವನ್ನು ಕೈಗೆತ್ತಿಕೊಂಡು ಯಶಸ್ವಿಗೊಳಿಸುವುದಕ್ಕೆ ಓಬವ್ವ ಸಾಕ್ಷಿಯಾಗುತ್ತಾಳೆ. ಪುರುಷ ನಿರ್ಮಿತ ಇತಿಹಾಸ ಹೆಣ್ಣನ್ನು ದುರ್ಬಲಳು, ಭಾವನಾಜೀವಿ, ದೈಹಿಕ ಸಾಮರ್ಥ್ಯವಿಲ್ಲದವಳು ಎಂದೆಲ್ಲಾ ಚಿತ್ರಿಸಿದೆ. ಆದರೆ ಅಂತಹ ಚಿತ್ರಣಕ್ಕೆ ಓಬವ್ವಳ ಇತಿಹಾಸ ಪರದೆ ಎಳೆಯುತ್ತದೆ. ಪುರುಷ ಸಮಾಜ ಹೆಣ್ಣಿನ ಸಾಮರ್ಥ್ಯವನ್ನು ಮರೀಚಿಕೆ ಮಾಡಿ ತನ್ನ ಇತಿಹಾಸವನ್ನು ಕಟ್ಟಿಕೊಂಡಿದೆ. ತಾಯ್ನೆಲಕ್ಕಾಗಿ, ಅನ್ನದ ಋಣಕ್ಕಾಗಿ ಹೋರಾಡಿದ ಓಬವ್ವಳ್ಳ ಸಾಹಸ ಅಜರಾಮರವಾದುದಾಗಿದೆ.

೨.೬. ಸಾಮಾನ್ಯ ವರ್ಗದ ಸ್ತ್ರೀಯಾಗಿ ಹೆಳವನಕಟ್ಟೆ ಗಿರಿಯಮ್ಮ

ಪುರುಷ ಪ್ರಧಾನ ಸಮಾಜದ ಆರಂಭದಿಂದಲೂ ಸ್ತ್ರೀಯರನ್ನು ತಳಸಮುದಾಯದ ಶೂದ್ರರನ್ನು ಕಂಡಂತೆ ಸಮಾಜ ಕಾಣುತ್ತಾ ಬಂದಿದೆ. ಸಮಾಜ ಬಹಿರಂಗವಾಗಿಯೇ ಶೂದ್ರರನ್ನು ಶೋಷಿಸಿದರೆ ಹೆಣ್ಣಾದವಳನ್ನು ಅವಳ ಕುಟುಂಬ ವರ್ಗವೇ ಅಸ್ಪೃಶ್ಯಳಂತೆ ನಡೆಸಿಕೊಳ್ಳುತ್ತಿದೆ. ಸ್ತ್ರೀಯರಿಗೆ ಸಮಾಜ ಹಲವಾರು ನೈತಿಕ ಕಟ್ಟುಪಾಡುಗಳನ್ನು ವಿಧಿಸುತ್ತಾ ಬಂದಿದೆ. ಕಟ್ಟುಪಾಡುಗಳನ್ನು

ಮೀರಿ ಒಂದೆಜ್ಜೆ ಮುಂದೆ ಬಂದು ಸಾಧನೆಗೈದ ಮಹಿಳೆಯರಲ್ಲಿ ಹೆಳವನಕಟ್ಟೆ ಗಿರಿಯಮ್ಮನವರ ಸಾಧನೆ ಅಮೋಘವಾದುದು.

ಅಕ್ಕಮಹಾದೇವಿಯ ತರುವಾಯ ಕಾಣಸಿಗುವ ಅಪರೂಪದ ಪ್ರತಿಭೆ ಗಿರಿಯಮ್ಮನದು. ವಿದ್ವತ್ಪೂರ್ಣ ಸಾಲಿನಲ್ಲಿ ನಿಲ್ಲುವ ವಿರಳ ವಿದ್ವಂಮಣಿಯರಲ್ಲಿ ಗಿರಿಯಮ್ಮ ಒಬ್ಬಳಾಗಿದ್ದಾಳೆ. ದಾಸಪಂಥದಲ್ಲಿ ಕಾಣಿಸಿಕೊಳ್ಳುವ ಈಕೆ ಅಕ್ಕಮಹಾದೇವಿಯ ನಂತರದ 'ಕವಯತ್ರಿಯಾಗಿ ಗುರುತಿಸಲ್ಪಡುತ್ತಾಳೆ. ಇವಳ ಹುಟ್ಟೂರು "ಧಾರವಾಡ(ಇಂದು ಹಾವೇರಿ)ಜಿಲ್ಲೆಯ ರಾಣಿಬೆನ್ನೂರು. ತಂದೆ ಬಿಷ್ಟಪ್ಪ ಜೋಯಿಸ. ಇವರು ಸ್ಮಾರ್ತ ಬ್ರಾಹ್ಮಣ ಮನೆತನಕ್ಕೆ ಸೇರಿದವರಾಗಿದ್ದರು. ಈಕೆಯ ಗಂಡನ ಮನೆ ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲೂಕಿನ(ಇಂದು ದಾವಣಗೆರೆ ಜಿಲ್ಲೆ) ಮಲೆಬೆನ್ನೂರು. ಶಾನುಭೋಗ ಕೃಷ್ಣಪ್ಪನ ಮಗ ತಿಮ್ಮಪ್ಪನೊಂದಿಗೆ ವಿವಾಹವಾಗಿದ್ದಳು."[೮೮]

ಇವಳ ತವರುಮನೆಯ ಆರಾಧ್ಯದೈವ ಮೈಲಾರ ಲಿಂಗೇಶ್ವರ. ಆದರೆ ಹರಿಹರರಿಬ್ಬರನ್ನು ಭಕ್ತಿಯಿಂದ ಆರಾಧಿಸುವ ಭಾಗವತ ಮಾರ್ಗದವಳಾಗಿದ್ದಳು. ಸದಾ ಆಕೆಯ ಮನಸ್ಸು ಆಧ್ಯಾತ್ಮದ ಗುಂಗಿನಲ್ಲೆ ಕಾಲಕಳೆಯುತ್ತಿದ್ದುದರಿಂದ ಅಕ್ಕಮಹಾದೇವಿಯಂತೆ ವೈವಾಹಿಕ ಜೀವನಕ್ಕೆ ವಿದಾಯ ಹೇಳಿದಳು. ನಂತರ ಕೊಮಾರನ ಹಳ್ಳಿ ಬಳಿಯ 'ಹೆಳವನಕಟ್ಟೆ' ಎಂಬ ಕೆರೆಯ ಕಟ್ಟೆಯ ಮೇಲಿರುವ ರಂಗನಾಥಸ್ವಾಮಿಯ ಆರಾಧಕಳಾದಳು. ಗಿರಿಯಮ್ಮನ ಲೌಖಿಕ ಜೀವನದ ವಿದಾಯದಿಂದ ಆಕೆಯ ಪತಿ ಮರುವಿವಾಹವಾಗುತ್ತಾನೆ. ಬ್ರಾಹ್ಮಣ ಕುಟುಂಬವೊಂದರಲ್ಲಿ ಜನಿಸಿ ಅಲ್ಲಿಯ ಕಟ್ಟುಪಾಡುಗಳನ್ನು ಕಟ್ಟಿ ಮೂಲೆಯಲ್ಲಿಟ್ಟು, ರಂಗನಾಥನ ಭಜನೆ, ಕೀರ್ತನೆ ಹಾಗೂ ಧ್ಯಾನ ಇತ್ಯಾದಿಗಳಲ್ಲಿ ಮಗ್ನಳಾದಳು. ಹಲವಾರು ಸ್ಥಳಗಳಿಗೆ ಯಾತ್ರೆ ಕೈಗೊಂಡು ಭೇಟಿ ನೀಡಿದ ದೇವಾಲಯದ ಬಗೆಗೆ ಕೀರ್ತನೆ ರಚಿಸಿದಳೆಂದು ತಿಳಿದುಬರುತ್ತದೆ. ಕೆಲವು ಆಧ್ಯಾತ್ಮಿಕ ಗುರುಗಳು ಹೆಳವನಕಟ್ಟೆಗೆ ಬಂದು ಗಿರಿಯಮ್ಮನನ್ನು ಭೇಟಿ ಮಾಡಿದರೆನ್ನಲಾಗಿದೆ. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನ "ಕಮ್ಮಾರಗಟ್ಟೆ" ಎಂಬ ಊರಿನ ಬಳಿ ತುಂಗಾನದಿಯ ಪ್ರವಾಹದಲ್ಲಿ ತನ್ನ ಕೊನೆಯುಸಿರೆಳೆದಳೆಂದು ಹೇಳಲಾಗುತ್ತದೆ. ಕೆಲವರು ತಮ್ಮ ಕೊನೆಯ ಜೀವನವನ್ನು ಗಿರಿಯಮ್ಮ ಹಂಪಿಯಲ್ಲಿ ಕಳೆದಳೆಂದು ಹೇಳುವುದುಂಟು.

ಹೆಣ್ಣನ್ನು ತಾತ್ಸಾರ ಮನೋಭಾವದಿಂದ ನೋಡುತ್ತಿದ್ದ ಅಂದಿನ ಸಮಾಜದಲ್ಲಿ ಗಿರಿಯಮ್ಮ ಅಂದು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಪಾರವಾದುದು. "ಚಂದ್ರಹಾಸನ ಕಥೆ, ಲವಕುಶರ ಕಾಳಗ(ಪಟದಸಂಧಿ), ಉದ್ದಾಳಿನ ಕಥೆ, ಸೀತಾ ಕಲ್ಯಾಣ, ಕೃಷ್ಣಕೊರವಂಜಿ ಹಾಗೂ ಶಂಕರಗಂಡನ ಹಾಡು"[೮೯] ಎಂಬ ಮೊದಲಾದ ಕಥನ ಕಾವ್ಯಗಳನ್ನು ರಚಿಸಿದ್ದಾಳೆ. ಅಲ್ಲದೆ ಇವಳು "ಗಿಳಿಪಾರಿಜಾತ ಮತ್ತು ಕಾಳೀಯಮರ್ದನ"[೯೦]ಗಳೆಂಬ ಕಥನ ಕಾವ್ಯಗಳನ್ನು ರಚಿಸಿದಳೆಂದು ಹೇಳಲಾಗಿದೆ. ಆದರೆ ದುರಾದೃಷ್ಟವೆಂದರೆ ರಚನೆಯಾದ ಗೀತೆಗಳಾವುವು ದೊರೆಯುವುದಿಲ್ಲ. "ಹೆಳವನಕಟ್ಟೆ ರಂಗ"[೯೧] ಎಂಬ ಅಂಕಿತ ನಾಮದೊಂದಿಗೆ ಕೀರ್ತನೆಯೋಪಾದಿಯ ಹಾಡುಗಳನ್ನು ರಚಿಸಿದ್ದಾಳೆ

ಎಂದು ತಿಳಿದುಬರುತ್ತದೆ. ಹಾಡಿನಲ್ಲಿ ಈಕೆ ತೋರಿರುವ ವಿನಯ, ವಿನಮ್ರತೆಗಳು ಅವಳ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಗಳಾಗಿವೆ. ರಂಗನಾಥನಲ್ಲಿ "ನೀನು ಆಡಿಸಿದಂತೆ ನಾನು ಹಾಡುವೆ"[೬೨] ಎಂದು, ತನ್ನಲ್ಲಿ ಕಾವ್ಯರಚಿಸುವ ಪಾಂಡಿತ್ಯ ಪ್ರೌಢಿಮೆಗಳಿಲ್ಲವೆಂದು ತನ್ನ ಸರಳ ವ್ಯಕ್ತಿತ್ವ ತೋರಿಸಿದ್ದಾಳೆ. ಈಕೆಯ ಕಾವ್ಯರಚನೆಯ ಶೈಲಿ ತೀರಾ ಸರಳವಾದುದು. ಗಾತ್ರದ ಪ್ರಮಾಣವೂ ಸಹ ತೀರ ಕಡಿಮೆ. ಸರಳ ಭಾಷಾಶೈಲಿಯಿಂದ ಕೂಡಿದ್ದು, ಜನಸಾಮಾನ್ಯರಿಗೆ ಅರ್ಥವಾಗುವಂತಿದೆ.

ಹೆಣ್ಣಾದವಳು ಶಿಕ್ಷಣವನ್ನು ಪಡೆಯಲು 'ಅನರ್ಹಳು' ಎಂದು ನಿಂದಿಸುವ ಕಾಲದಲ್ಲಿ ಸಾಹಿತ್ಯವನ್ನು ರಚಿಸಿದ್ದಾಳೆ. ಅಲ್ಲದೆ ಸಂಪ್ರದಾಯ, ಕಟ್ಟುಪಾಡು, ಕಟ್ಟಳೆಗಳು, ನೀತಿ–ನಿಯಮ, ನಿಷ್ಠೆ ಹಾಗೂ ಮಡಿ–ಮೈಲಿಗೆಗಳಿಂದ ಹೆಣ್ಣನ್ನು ಕಟ್ಟಿಕೂರಿಸಿದ್ದ ಕಾಲವದು. ಇಂತಹ ಕುರುಡು ಆಚರಣೆಗಳಿಂದ ಹೊರಬಂದು ಅವೆಲ್ಲವನ್ನು ಮೆಟ್ಟಿ ನಿಂತು ಇಟ್ಟ ದಿಟ್ಟ ಹೆಜ್ಜೆ ಶ್ಲಾಘನೀಯವಾದುದು.

ಗಿರಿಯಮ್ಮನ ಕಾಲ

ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ತನ್ನದೇ ಆದ ಕಾಣಿಕೆಯನ್ನು ನೀಡಿದ ಗಿರಿಯಮ್ಮನ ಕಾಲದ ಬಗ್ಗೆ ಎಲ್ಲಿಯೂ ಮಾಹಿತಿ ದೊರೆಯುವುದಿಲ್ಲ. ತನ್ನ ಸಾಹಿತ್ಯ ಕೃತಿಗಳಲ್ಲಾಗಲೀ, ಹಾಡುಗಳಲ್ಲಾಗಲೀ ಆಕೆ ತನ್ನ ಕಾಲದ ಬಗ್ಗೆ ಹೇಳಿಕೊಂಡಿಲ್ಲ. ಈಕೆಯ ಕಾಲದ ಬಗ್ಗೆ ಖಚಿತ ಮಾಹಿತಿ ದೊರೆಯದ ಕಾರಣ "ಕೆಲವು ವೃತ್ತಾಂತಗಳನ್ನಧರಿಸಿ ವಿದ್ವಾಂಸರು ೧೮ನೇ ಶತಮಾನದ ಪೂರ್ವಭಾಗದಲ್ಲಿ ಬದುಕಿ ಬಾಳಿರಬೇಕೆಂದು ಅಭಿಪ್ರಾಯ ಪಡುತ್ತಾರೆ."[೬೩]

ಗಿರಿಯಮ್ಮನ ಬಗೆಗೆ ಹೇಳುವ ವೃತ್ತಾಂತವೊಂದು "ಗೋಪಾಲಕೃಷ್ಣರು ಹರಿದಾಸರಲ್ಲಿ ಒಬ್ಬರಾಗಿದ್ದು ಇವಳಿಗೆ ಮಂತ್ರಗಳನ್ನು ಉಪದೇಶಿಸಿ ಶಿಷ್ಯಳನ್ನಾಗಿ ಸ್ವೀಕರಿಸಿದರು. ಅಲ್ಲದೆ ಉಡುಪಿಗೆ ಯಾತ್ರೆ ಹೋಗುವಾಗ ಮಲೇಬೆನ್ನೂರಿಗೆ ಬಂದು ಗಿರಿಯಮ್ಮನಿಗೆ ಬಾಲಗೋಪಾಲನ ಒಂದು ಸುಂದರ ಮೂರ್ತಿಯನ್ನು ಪ್ರಸಾದವಾಗಿ ನೀಡಿ ಮುದ್ರಿಕೆಯನ್ನು ಕೊಟ್ಟರೆಂದು ಹೇಳಲಾಗಿದೆ. ಈ ಮುದ್ರಿಕೆಯಲ್ಲಿ 'ಹೆಳವನಕಟ್ಟೆ ರಂಗ' ಎಂಬ ಅಂಕಿತದೊಂದಿಗೆ ಕೀರ್ತನೆ ರಚಿಸಿದಳೆನ್ನಲಾಗಿದೆ."[೬೪] ಈ ದಾಸರ ಕಾಲ ಕ್ರಿ.ಶ.೧೭೧೭. ಮೇಲಿನ ವೃತ್ತಾಂತದ ಆಧಾರದ ಮೇಲೆ ಕ್ರಿ.ಶ.೧೭೧೭ ರಿಂದ ಈಚೆಗೆ ಬದುಕಿ ಬಾಳಿರಬೇಕು ಎನ್ನಲಾಗಿದೆ. ಮತ್ತೆ ಕೆಲವರು ಕ್ರಿ.ಸು.೧೭೫೦ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ."[೬೫] ಮಂತ್ರಾಲಯ ಸ್ವಾಮಿಗಳಾದ ಸುಮತೀಂದ್ರ ನಾಡಿಗರು ಮಲೇಬೆನ್ನೂರಿಗೆ ಬಂದಾಗ ಅವಳು ಬಂಜೆ ಎಂಬ ಕಾರಣಕ್ಕೆ ಸ್ವಾಮಿಗಳ ದರ್ಶನಕ್ಕೆ ಅವಳನ್ನು ಬಿಡುವುದಿಲ್ಲ. ಆಗ ಸ್ವಾಮಿಗಳೇ ಅವರ ಬಳಿ ಅವಳನ್ನು ಕರೆದರು. ಅಲ್ಲದೆ ದರ್ಶನ ಭಾಗ್ಯವನ್ನು ಕರುಣಿಸಿದರು. "ಶ್ರೀಕೃಷ್ಣನೇ ಅವಳ ಭಕ್ತಿಗೆ ಒಲಿದು ತಾನೆ ಮಗನಾಗಿರುವಾಗ ಆಕೆ ಅಪುತ್ರವತಿ ಹೇಗಾಗಲು ಸಾಧ್ಯ? ಎಂದು ತೀರ್ಥಕೊಟ್ಟರು."[೬೬] ಅವರ ಬಳಿ ಇದ್ದ ಶ್ರೀರಾಮ ಮೂರ್ತಿ ಕಂಡು ತಕ್ಷಣ ಕೀರ್ತನೆಯನ್ನು ಹಾಡಿದಳೆನ್ನಲಾಗಿದೆ. ಈ ಹಾಡುಗಳಲ್ಲಿ ಒಂದು ಪದ್ಯವನ್ನಿಲ್ಲಿ ಗಮನಿಸಬಹುದು.

"ಮದನ ಕೋಟಿ ಮೋಹನಾಂಗ। ಮಾಧವ ಪುಣ್ಯಚರಿತ।
ಕರುಣ ಕೃಪಾಂಗ ಹೆಳವನಕಟ್ಟೆ ನಿಲಯ ವೆಂಕಟ ಶ್ರೀರಂಗ
ಸದಾನಂದ ಸುಮತೀಂದ್ರ ಹೃದಯ ಪಂಜಕ ಭೃಂಗ।
ಕದನ ವಿಕ್ರಮ ಬಾಹು ಕೋದಂಡ ಧೃತ ಸೀತಾ।"[೯೭]

ಈ ಘಟನೆಯನ್ನಾಧರಿಸಿ ಸುಮತೀಂದ್ರ ಸ್ವಾಮಿಗಳ ಕಾಲ "ಕ್ರಿ.ಶ.೧೬೯೨–೧೭೨೫ ಇದನ್ನಾಧರಿಸಿ ೧೭೨೫–೫೦"[೯೮] ಇರಬಹುದೆನ್ನಲಾಗಿದೆ. ಗಿರಿಯಮ್ಮ ಗೋಪಾಲಸ್ವಾಮಿಗಳನ್ನು ಭೇಟಿ ಮಾಡಿದಳು ಎಂಬುದಕ್ಕೆ ದಾಖಲೆಗಳು ಲಭ್ಯವಾಗುವುದಿಲ್ಲ. ಆದರೆ ಸುಮತೀಂದ್ರ ಸ್ವಾಮಿಗಳ ಭೇಟಿಯ ಬಗ್ಗೆ ತಿಳಿಯಲು ಕೀರ್ತನೆಗಳು ದೊರೆತಿವೆ.

ಗಿರಿಯಮ್ಮನ ಬಗ್ಗೆ ಹೇಳುವ ಅಪ್ರಕಟಿತ ಶಾಸನವೊಂದಿದೆ. ಅದು ಚಿತ್ರದುರ್ಗ ಜಿಲ್ಲೆಯ ಜಗಳೂರು ತಾಲೂಕಿನ ಕಸಬಾ ಹೋಬಳಿ(ಇಂದಿನ ದಾವಣೆಗೆರೆ ಜಿಲ್ಲೆ) ಬಿದರಕೆರೆಯಿಂದ ಪಶ್ಚಿಮಕ್ಕೆ ಸು.೨ ಕಿ.ಮೀ. ದೂರದಲ್ಲಿರುವ ದ್ಯಾಮವ್ವನ ಹಳ್ಳಿಯಲ್ಲಿದೆ.

ಈ ಗ್ರಾಮದ ಪಶ್ಚಿಮ ಭಾಗದಲ್ಲಿ ಇತ್ತೀಚೆಗೆ ಜೀರ್ಣೋದ್ಧಾರವಾಗಿರುವ ಪುಟ್ಟ ಆಂಜನೇಯ ಸ್ವಾಮಿ ದೇವಾಲಯದ ಎದುರಿಗೆ ಒಂದು ಗೋವಿನ ಮರದ ಬುಡದಲ್ಲಿ ದೊರೆತಿದೆ. ಈ ಶಾಸನ ಕನ್ನಡಲಿಪಿಯಿಂದ ಕೂಡಿದ್ದಾಗಿದೆ. ಈ ಶಾಸನ "ಕ್ರಿ.ಶ.೧೭೧೧ ಮಾರ್ಚ್ ೨೩ರದ್ದಾಗಿದೆ. ಈ ಶಾಸನದಲ್ಲಿ ಭರಮಣ್ಣನಾಯಕರು ಕುಂಭಕೋಣೆ ಮಠದ ಸುಮತೀಂದ್ರ ಸ್ವಾಮಿಗಳಿಗೆ ಅವರು ಪೂಜಿಸುತ್ತಿದ್ದ ರಘುಪತಿ ದೇವರ ಸೇವೆಗೆ ಕಣುಕುಪ್ಪಿ ಸೀಮೆಯ ಬಿದರಕೆರೆ ಹೊಲಬಿನ ಚಕ್ಕಣ್ಣನ ದೇಮವ್ವನಹಳ್ಳಿ ಗ್ರಾಮವನ್ನು ಸರ್ವಮಾನ್ಯವಾಗಿ ದಾನ ಕೊಟ್ಟರೆನ್ನಲಾಗಿದೆ."[೯೯]

ಈ ಶಾಸನವನ್ನು ಭರಮಣ್ಣನಾಯಕರು ಹಾಕಿಸಿದ್ದು, ಕ್ರಿ.ಶ.೧೬೮೯ ರಿಂದ ೧೭೨೧ರ ಅವಧಿಯವರೆಗೆ ಚಿತ್ರದುರ್ಗವನ್ನಾಳಿದ್ದಾರೆ. ಇವರ ಆಳ್ವಿಕೆಯ ಅವಧಿಯಲ್ಲಿ ಇಂದು ಮಂತ್ರಾಲಯವೆಂದು ಕರೆಯುವ ಕುಂಭಕೋಣೆ ಮಠದ ಸುಮತೀಂದ್ರರು ಚಿತ್ರದುರ್ಗಕ್ಕೆ ಎರಡು ಬಾರಿ ಭೇಟಿ ನೀಡಿದ್ದರೆನ್ನಲಾಗಿದೆ. ಮೊದಲ ಭೇಟಿ ೧೭೦೦ರಲ್ಲಿ ಬಂದರೆಂದು, ಎರಡನೇ ಭೇಟಿ ಈ ಶಾಸನದ ಕಾಲವೆನ್ನಲಾಗಿದೆ. ಇವರು ಚಿತ್ರದುರ್ಗಕ್ಕೆ ಎರಡನೇ ಬಾರಿ ಬಂದಾಗ ಗಿರಿಯಮ್ಮನನ್ನು ಭೇಟಿ ಮಾಡಿದ್ದರೆಂಬುದು ಮೇಲೆ ತಿಳಿಸಿದ ಎಲ್ಲಾ ದಾಖಲೆಗಳಿಂದ ತಿಳಿದುಬರುತ್ತದೆ.

ಸಾಮಾನ್ಯವರ್ಗದ ಸ್ತ್ರೀಯರು ಅನುಭವಿಸುತ್ತಿದ್ದ ಎಲ್ಲ ಸಂಕಟಗಳಿಂದ ಗಿರಿಯಮ್ಮ ಹೊರ ಉಳಿದಿಲ್ಲ. ಆದರೆ ಹೆಣ್ಣನ್ನು ಕಡೆಗಣಿಸಿ ಪುರುಷ ತನ್ನ ಸರ್ವಾಧಿಕಾರ ನಡೆಸುತ್ತಿದ್ದ ಕಾಲದಲ್ಲಿ ಹೆಣ್ಣು ಎಲ್ಲಾ ಬಂಧನಗಳಿಂದ ಹೊರಬಂದು ಸಾಧನೆಯ ಹಾದಿ ಹಿಡಿದದ್ದು ನಿಜಕ್ಕೂ ವಿಸ್ಮಯ ತರಿಸುವ ಸಂಗತಿ. ಸ್ತ್ರೀ ಪುರುಷರಿಗಿಂತ ಯಾವ ಕ್ಷೇತ್ರದಲ್ಲೂ ಹಿಂದುಳಿದಿಲ್ಲ. ಆದರೆ ಪುರುಷ ಸಮಾಜ ಅವಕಾಶಗಳಿಂದ ವಂಚಿಸಿ ಮಹಿಳೆಯರ ಪ್ರತಿಭೆಯನ್ನು ಕಾಲಗರ್ಭದಲ್ಲಿ ಉದುಗಿಸಿಟ್ಟಿದೆ ಎಂದರೆ ತಪ್ಪಾಗಲಾರದು.

ಅಡಿಟಿಪ್ಪಣಿ

೧. ಶಂಕರ್‌ರಾವ್ ಚ.ನ., ಮಹಿಳಾ ಅಧ್ಯಯನ, ಪು.೧೨೬

೨. ಅದೇ, ಪು.೧೨೭

೩. ಅದೇ, ಪು.೧೩೧

೪. ಅದೇ, ಪು.೧೩೫

೫. ಅದೇ, ಪು.೧೩೫

೬ ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೩೬೩

೭ ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು, ರಾಜಕೀಯ ಚಿತ್ರ, ಪು.೧೭

೮. ಅದೇ, ಪು.೬

೯. ಅದೇ, ಪು.೧೦೫

೧೦. E.C.Vol.XI ಚಿತ್ರದುರ್ಗ ೧

೧೧. ಅದೇ, ೪

೧೨. ಅದೇ, ೬

೧೩. ಅದೇ, ೧೨

೧೪. ಅದೇ, ೨೩

೧೫. ಅದೇ, ೩೨

೧೬. E.C.Vol.XI, ಚಳ್ಳಕೆರೆ, ೩೩

೧೭. E.C.Vol.XI, ಚಿತ್ರದುರ್ಗ ೭೪

೧೮. E.C.Vol.XI, ಹೊಳಲ್ಕೆರೆ ೪

೧೯. ಅದೇ, ೧೪

೨೦. ಅದೇ, ೧೩

೨೧ ಅದೇ, ೯೪

೨೨. ಅದೇ, ೧೨೨

೨೩. ಅದೇ, ೧೩೨

೨೪. E.C.Vol.XI, ಹಿರಿಯೂರು ೧೨

೨೫. E.C.Vol.XI, ಚಳ್ಳಕೆರೆ ೨೧

೨೬. E.C.Vol.XI, ಮೊಳಕಾಲ್ಮೂರು ೨೦

೨೭. ಅದೇ, ಮೊಳಕಾಲ್ಮೂರು ೨೭

೨೮. ಅದೇ, ೪೦

೨೯. ಪ್ರೊ.ಲಕ್ಷ್ಮಣ್ ತೆಲಗಾವಿ, **ಎಪ್ಪತ್ತೇಳು ಪಾಳೇಗಾರರ,** ಪು.೧೨

೩೦. E.C.Vol.XI, ಚಿತ್ರದುರ್ಗ ೧೪

೩೧. E.C.Vol.XI, ಹೊಳಲ್ಕೆರೆ ೫೪

೩೨. E.C.Vol.XI, ಚಳ್ಳಕೆರೆ ೩೫

೩೩. E.C.Vol.XI, ಮೊಳಕಾಲ್ಮೂರು ೨೫

೩೪. ಅದೇ, ೩೭

೩೫. E.C.Vol.XI, ಚಿತ್ರದುರ್ಗ ೨೩

೩೬. ಅದೇ, ೩೩

೩೭. ಅದೇ, ೭೪

೩೮. ಅದೇ, ೨೯

೩೯. ರಾಜಶೇಖರಪ್ಪ, **ಇತಿಹಾಸ ಕಥನ,** ಪು.೧೪೮-೧೪೯

೪೦. E.C.Vol.XI, ಚಿತ್ರದುರ್ಗ ೩೩

೪೧. E.C.Vol.XI, ಹೊಳಲ್ಕೆರೆ ೫೬

೪೨. ಅದೇ, ೮೦

೪೩. ಅದೇ, ೧೦೧

೪೪. ಅದೇ, ೧೨೧

೪೫. ಅದೇ, ೧೭೪

೪೬. E.C.Vol.XI, ಹಿರಿಯೂರು ೫೨

೪೭. E.C.Vol.XI, ಮೊಳಕಾಲ್ಮೂರು ೧೧

೪೮. ದೇವರಕೊಂಡಾರೆಡ್ಡಿ, **ಕರ್ನಾಟಕ ಶಾಸನಗಳಲ್ಲಿ ಶಾಪಾಶಯ,** ಪು.೧

೪೯. ಅದೇ, ಪು.೨

೫೦. E.C.Vol.XI, ಚಿತ್ರದುರ್ಗ ೩

೫೧. ಅದೇ, ೭೧

೫೨. ಅದೇ, ೪೫

೫೩. ಅದೇ, ೭

೫೪. E.C.Vol.XI, ಹೊಳಲ್ಕೆರೆ ೧೭

೫೫. ಅದೇ, ೨೦

೫೬. ಅದೇ, ೨೧

೫೭. ಅದೇ, ೬೩

೫೮. ಅದೇ, ೭೦

೫೯. ಅದೇ, ೭೯

೬೦. ಅದೇ, ೮೧

೬೧. ಅದೇ, ೧೧೦

೬೨. ಅದೇ, ೧೧೧

೬೩. ಅದೇ, ೧೧೨

೬೪. ಅದೇ, ೧೨೦

೬೫. ಅದೇ, ೧೨೫

೬೬. E.C.Vol.XI, ಹಿರಿಯೂರು ೭೯

೬೭. ಅದೇ, ೩೫

೬೮. E.C.Vol.XI, ಚಳ್ಳಕೆರೆ ೯

೬೯. ಅದೇ, ೮೫

೭೦. ಅದೇ, ೩೮

೭೧. ಅದೇ, ೪೫

೭೨. ಅದೇ, ೪೬

೭೩. ಅದೇ, ೪೭

೭೪. E.C.Vol.XI, ಮೊಳಕಾಲ್ಮೂರು ೮

೭೫. ಅದೇ, ೯

೭೬. ಅದೇ, ೩೨

೭೭. ದೇವರಕೊಂಡಾರೆಡ್ಡಿ(ಸಂ), ಶಾಸನ ಅಧ್ಯಯನ, ಪು.೨೨–೨೩

೭೮. E.C.Vol.XI, ಹೊಳಲ್ಕೆರೆ ೪೫

೭೯. ಅದೇ, ೫೩

೮೦. E.C.Vol.XI, ಚಳ್ಳಕೆರೆ ೪

೮೧. E.C.Vol.XI, ಮೊಳಕಾಲ್ಮೂರು ೨೫

೮೨. E.C.Vol.XI, ಚಿತ್ರದುರ್ಗ ೨೪

೮೩. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗದ ಒನಕೆ ಓಬವ್ವ: ಒಂದು ಚಾರಿತ್ರಿಕ ವಿವೇಚನೆ, ಪು.೧

೮೪. ಅದೇ, ಪು.೨

೮೫. ಅದೇ, ಪು.೩

೮೬. ಅದೇ, ಪು.೨-೩

೮೭. ಅದೇ, ಪು.೩-೪

೮೮. ಪ್ರೊ, ರಾಜಶೇಖರಪ್ಪ ಬಿ., ಇತಿಹಾಸಕಥನ, ಪು.೧೮೩

೮೯. ಅದೇ, ಪು.೧೮೪

೯೦. ಅದೇ, ಪು.೧೮೪

೯೧. ಅದೇ, ಪು.೧೮೪

೯೨. ಅದೇ, ಪು.೧೮೪

೯೩. ಅದೇ, ಪು.೧೮೫

೯೪. ಅದೇ

೯೫. ಅದೇ

೯೬. ಅದೇ

೯೭. ಅದೇ

೯೮. ಅದೇ, ಪು.೧೮೬

೯೯. ಅದೇ, ಪು.೧೮೭

ಅಧ್ಯಾಯ ಮೂರು

ಶಾಸನಗಳಲ್ಲಿ ಅಂಗಭೋಗ ಮತ್ತು ರಂಗಭೋಗದ ಸ್ತ್ರೀಯರು

೩.೧. ಅಂಗಭೊಗ ಮತ್ತು ರಂಗಭೋಗ

೩.೨. ರಂಗಭೋಗದ ಸೂಳೆಯರ ವಿಧಗಳು

೩.೩. ಪಾವುಳ

೩.೪. ದೇವದಾಸಿ ಪದ್ಧತಿ

ಅಧ್ಯಾಯ ಮೂರು

ಶಾಸನಗಳಲ್ಲಿ ಅಂಗಭೋಗ ಮತ್ತು ರಂಗಭೋಗದ ಸ್ತ್ರೀಯರು

ಮಾನವ ಅಭಿವೃದ್ಧಿ ಹೊಂದುವ ಪೂರ್ವದಲ್ಲಿ ಕಾಡಿನಲ್ಲಿ ಮರದ ಪೊದೆ, ಕಲ್ಲಿನ ಪೊಟರೆಗಳಲ್ಲಿ ವಾಸಿಸುತ್ತಿದ್ದನು. ಆ ವೇಳೆಯಲ್ಲಿ ಪ್ರಕೃತಿಯಲ್ಲಿ ಸಂಭವಿಸುವ ಹಲವಾರು ಘಟನೆಗಳು ಆದಿ ಮಾನವನಿಗೆ ಭಯ, ಭಕ್ತಿಯನ್ನುಂಟು ಮಾಡಿರಬೇಕು. ಪ್ರಕೃತಿ ವಿಕೋಪ, ಭೀಕರ ಮಳೆ, ಸುಂಟರಗಾಳಿ, ಗುಡುಗು, ಸಿಡಿಲು, ಭೂಕಂಪ, ಗ್ರಹಣ, ಮಿಂಚು ಮೊದಲಾದ ಘಟನೆಗಳು ಅವನಲ್ಲಿ ದಿಗಿಲು ಮೂಡಿಸಿರಬೇಕು. ಅಲ್ಲದೆ ಭಯಗೊಂಡ ಮನುಷ್ಯ ಪ್ರಕೃತಿಯ ಅಂಶಗಳಲ್ಲೆ ದೈವತ್ವ ಅಡಗಿದೆಯೆಂದು ಭಾವಿಸಲಾರಂಭಿಸಿದನು. ತನಗಿಂತ ಮಿಗಿಲಾದ ಪ್ರಬಲ ಶಕ್ತಿಯೊಂದಿದೆ ಎಂದುಕೊಂಡು ತನ್ನ ಕಲ್ಪನೆಯಂತೆಯೇ ಪ್ರಕೃತಿಯನ್ನು ಆರಾಧಿಸುತ್ತಾ ಅಚೇತ ಶಕ್ತಿಯೊಂದಿದೆಯೆಂದು ತನ್ನ ದಿಗ್ಭ್ರಮೆ, ಆತಂಕ, ಭಯ, ದುಃಖ, ದುಗುಡುಗಳನ್ನು ದೂರಮಾಡಿಕೊಳ್ಳಲು ಸೃಷ್ಟಿಸಿಕೊಂಡ ರೂಪವೇ ದೇವರು, ದೈವವಾಗಿದೆ. ದೇವರು ಹುಟ್ಟಿಕೊಂಡ ನಂತರ ಕಾಲಕ್ರಮೇಣ ಅದಕ್ಕೆ ಪೂಜೆ, ಪುನಸ್ಕಾರ, ನೈವೇದ್ಯ, ಅರ್ಚನೆ, ದೇವಾಲಯ, ಗುಡಿ, ಗುಂಡಾರಗಳ ರಚನೆ ಆರಂಭಗೊಂಡಿತು. ಆಯಾಯ ದೇವಾಲಯಗಳಿಗೆ ಅವುಗಳದ್ದೆ ಆದ ಧರ್ಮ, ರಕ್ಷಾ ಕವಚದಂತಾಗಿ ರೂಪುಗೊಂಡಿತು. ಇಂದು ನಮ್ಮ ದೇಶ ಧರ್ಮವನ್ನೆ ಉಸಿರಾಗಿಸಿಕೊಂಡ ದೇಶವೆಂಬ ಮಾತನ್ನು ಮರೆಯುವಂತಿಲ್ಲ. ನಮ್ಮ ಹಿಂದೂ ಧರ್ಮದಲ್ಲಿ ಆಹಾರ, ಅಭಯ, ಭೈಷಜ್ಯ, ಶಾಸ್ತ್ರ, ದಾನಗಳಿಗೆ ದೇವಾಲಯಗಳು ಕೇಂದ್ರ ಬಿಂದುಗಳಾಗುತ್ತಾ ಬಂದವು. ಕಾರಣ ಮಾನವ ಅಭವೃದ್ಧಿ ಹೊಂದಿದಂತೆಲ್ಲ ಆ ಅಭಿವೃದ್ಧಿಗೆ ಕಾರಣ ದೈವವೆಂದು ಭಾವಿಸಿ ಹೆಚ್ಚು ಹೆಚ್ಚು ದಾನದತ್ತಿಗಳನ್ನು ಕೊಡಲು ಆರಂಭಿಸಿದ್ದು.

ಸಮೃದ್ಧಿ ಹೆಚ್ಚಾದಂತೆಲ್ಲಾ ದೇವಾಲಯಗಳಿಗೆ ದಾನ, ದತ್ತಿ, ನೀಡುವುದಲ್ಲದೆ ದೇವಾಲಯದಲ್ಲಿ ಅರ್ಚಕ, ಪುರೋಹಿತ ಸೇವಕರೆಂಬ ಮೊದಲಾದ ದೇವಾಲಯ ನಿರ್ವಹಣೆಯ ಅಧಿಕಾರಿ

ವರ್ಗ ಪ್ರಾರಂಭವಾಯಿತು. ಜೊತೆಗೆ ನೃತ್ಯ, ಕಲೆ, ಶಿಲ್ಪಕಲೆ, ಸಂಗೀತ, ಚಿತ್ರಕಲೆಯನ್ನು ಪ್ರೋತ್ಸಾಹಿಸುವ ಕೇಂದ್ರಗಳಾದವು.

೩.೧. ಅಂಗಭೋಗ ಮತ್ತು ರಂಗಭೋಗ

ಈ ಪದದ ಹೆಸರೇ ಸೂಚಿಸುವಂತೆ ದೇವಾಲಯದ ಗರ್ಭಗುಡಿಯ ಒಳಗಡೆ ಇರುವ ದೇವರ ಶಿಲ್ಪಕ್ಕೆ ಮುಟ್ಟಿ ತೊಳೆಯುವುದರಿಂದ ಮೊದಲುಗೊಂಡು ಪ್ರತಿನಿತ್ಯದ ಪೂಜಾ ವಿಧಾನವೇ ಅಂಗಭೋಗವೆನ್ನಬಹುದು. ಆಚಮನ, ಆದ್ವಾನದಿಂದ ಮೊದಲುಗೊಂಡು ಮಹಾ ಮಂಗಳಾರತಿಯವರೆಗಿನ ಎಲ್ಲಾ ಪೂಜೆಯ ವಿಧಿ ವಿಧಾನಗಳನ್ನು ಅಂಗಭೋಗ ಒಳಗೊಂಡಿರುತ್ತದೆ.

"ಅಂಗಭೋಗ ಸಂಧ್ಯಾಪೂಜೆ, ನಂದಾದೀವಿಗೆ ನೈವೇದ್ಯ ದೇವರ ನೈಮಿತ್ತಿಕ ದಿವ್ಯಾಂಗ ಭೋಗ, ತ್ರಿಕಾಲ ನೈವೇದ್ಯ, ಧೂಪ ದೀಪ ನೈವೇದ್ಯಕಂ, ಅಂಗಭೋಗಕ್ಕಂ, 'ಅಂಗಭೋಗ ತ್ರಿಕಾಲ ನೈವೇದ್ಯ ನಂದಾ ದೀವಿಗೆ' ಇತ್ಯಾದಿ ಶಾಸನಗಳ ಉಲ್ಲೇಖಗಳಿಂದ ಅಂಗಭೋಗವು ಬೆಳಗಿನ ಪೂಜೆಗೆ ಮಾತ್ರ ಸಂಬಂಧಿಸಿದ್ದು, ಮಹಾ ಮಂಗಳಾರತಿಯೊಂದಿಗೆ ಮುಗಿಯುತ್ತದೆ. ಮತ್ತು ಉಳಿದ ಸಮಯದ ಪೂಜೆಗಳಲ್ಲಿ ಸ್ನಾನ ಇತ್ಯಾದಿ ಭೋಗಗಳನ್ನು ಹೊರತುಪಡಿಸಿ, ಧೂಪ, ದೀಪ, ನೈವೇದ್ಯ, ಸಮರ್ಪಣೆ ಇರುತ್ತದೆ."[೧]

ಅಂಗಭೋಗವು ಗರ್ಭಗುಡಿಯ ಕಾರ್ಯವೈಖರಿಗಳಿಗೆ ಸಂಬಂಧಿಸಿದರೆ ರಂಗಭೋಗವು ಗರ್ಭಗುಡಿಯ ನಂತರದ ಅಥವಾ ಮುಂದಿನ ಮಂಟಪವಾಗಿರುತ್ತದೆ. ಅಂಗಭೋಗ ಅರ್ಚನೆ, ನೈವೇದ್ಯ, ಪೂಜೆ, ಪುನಸ್ಕಾರಕ್ಕೆ ಸಂಬಂಧಿಸಿದರೆ ಈ ಸೇವೆಗಳ ನಂತರದ ಸೇವೆ ರಂಗಭೋಗವಾರುತ್ತದೆ "ಇದು ಒಂದು ವೇದಿಕೆಯ ಮೇಲೆ ಒಬ್ಬ ಅಥವಾ ಅನೇಕ ಕಲಾವಿದ/ಕಲಾವಿದೆಯರಿಂದ ಪ್ರಸ್ತುತವಾಗುತ್ತಿದ್ದ 'ದೃಶ್ಯಕಲಾ' ಸೇವೆಯಾಗಿರುತ್ತದೆ."[೨]

ಭರತಮುನಿಯು ತನ್ನ ನಾಟ್ಯಶಾಸ್ತ್ರದಲ್ಲಿ "ದೇವಾಲಯದ ನರ್ತಕಿ ಮತ್ತು ರಾಜನ ಆಸ್ಥಾನದ ನರ್ತಕಿಯನ್ನು ಹೊರತುಪಡಿಸಿ ಉಳಿದವರು ದುಡ್ಡಿಗಾಗಿ ಎಲ್ಲಿ ಬೇಕಾದರೂ ನರ್ತನ ಮಾಡುತ್ತಾರೆ ಎಂದೂ, ಅವರನ್ನು ವೇಶ್ಯೆಯರು" ಎಂದು ಕರೆಯಲಾಗುತ್ತದೆ ಎಂದು ಹೇಳುತ್ತಾನೆ."[೩]

ರಂಗಭೋಗ ಸೇವೆಯು ದೇವಾಲಯಗಳಲ್ಲಿ ಬೆಳೆದುದರ ಬಗ್ಗೆ ಖಚಿತವಾದ ಯಾವ ಆಧಾರಗಳೂ ದೊರಕುವುದಿಲ್ಲ. ಅರಮನೆಯಲ್ಲಿ ನರ್ತಿಸುತ್ತಿದ್ದ 'ರಾಜನರ್ತಕಿಯರಿಂದ ಪ್ರಾರಂಭವಾಗಿ ಕ್ರಮೇಣ ದೇವಾಲಯದಲ್ಲಿ ಬೆಳವಣಿಗೆ ಹೊಂದಿರಬೇಕೆಂಬ ಹಿನ್ನಲೆಯಲ್ಲಿ ಡಾ.ಎ.ಎಸ್.ಅಳ್ತೇಕರರು ಹೀಗೆ ಹೇಳುತ್ತಾರೆ "ದೇವಾಲಯಗಳಲ್ಲಿ ನರ್ತನಕ್ಕೆ ನರ್ತಕಿಯರನ್ನು ಬಿಡುವುದು ಸಾಮಾನ್ಯವಾಗಿ ಪ್ರಪಂಚದ ಎಲ್ಲ ಪ್ರಾಚೀನ ದೇಶಗಳಲ್ಲೂ ನಡೆದುಕೊಂಡು ಬಂದಿರುವ ಪದ್ಧತಿ. ಈಜಿಪ್ಟ್‌ನ 'ಓಸಿರಿಸಿ' ಮತ್ತು 'ಇಸಿರಿಸಿ' ದೇವಾಲಯ ನರ್ತಕರಿಂದ ತುಂಬಿಹೋಗಿದ್ದವು. ಗ್ರೀಸ್ ದೇಶದ

ಕೂರಿಂತ್‌ನಲ್ಲಿ ಸಾವಿರಾರು ಸ್ತ್ರೀಯರು 'ವೀನಸ್' ದೇವತೆಗೆ ತಮ್ಮನ್ನು ತಾವೇ ಅರ್ಪಿಸಿಕೊಂಡಿದ್ದರು. ಹೆರ್‌ಬ್ರೂಸ್ ಮತ್ತು ಬ್ಯಾಬಿಲೋನಿಯಗಳಲ್ಲಿ ಕೂಡ ಈ ಸಂಪ್ರದಾಯವಿತ್ತೆಂದು ತಿಳಿದುಬರುತ್ತದೆ."[೪]

ಪ್ರಾರಂಭದಲ್ಲಿ ದೇವಾಲಯಗಳು ಅಭಿವೃದ್ಧಿ ಹೊಂದುವವರೆಗೂ ಅಂದರೆ ಆರ್ಥಿಕವಾಗಿ ಸದೃಢಗೊಂಡು, ಪ್ರಾಬಲ್ಯತೆ ಪಡೆದುಕೊಂಡ ನಂತರ, ದೇವಾಲಯಗಳಲ್ಲಿ ದೇವರಿಗೆ ಪೂಜೆ ಸಲ್ಲುವ ಸಮಯದಲ್ಲಿ ಗೀತ ಗಾಯನ, ನೃತ್ಯ, ವಾದ್ಯಗಳು ಮೊಳಗಿದರೆ ಆಕರ್ಷಕವಾಗಿರುತ್ತದೆಂಬ ಭಾವದಿಂದ ಕಲಾ ರಸಿಕನಾದ ಮನುಷ್ಯ ಇವುಗಳನ್ನು ಆರಂಭಿಸಿಕೊಂಡು ಬಂದಿರಬಹುದೆನ್ನಿಸುತ್ತದೆ. ಸಾಮಾನ್ಯವಾಗಿ ಜನ ಸಾಮಾನ್ಯರೆಲ್ಲರೂ ಕಲೆಗೆ ಸಂಬಂಧಿಸಿದ ಕಾರ್ಯಗಳನ್ನು ಮಾಡಲಾಗುತ್ತಿರಲಿಲ್ಲ. ಅದಕ್ಕೆಂದೇ ತರಬೇತಿ ಹೊಂದಿದ ವರ್ಗವೊಂದಿರುತ್ತಿತ್ತು. ಸಾಮಾನ್ಯವಾಗಿ "ಪ್ರಾಚೀನ ಕಾವ್ಯ ಸಾಹಿತ್ಯಗಳಲ್ಲಿ 'ವೇಶ್ಯೆ'ಯರಿಂದ ವೇಶ್ಯೆಯರಿಗಾಗಿ ಇರುವ ಕಲೆಗಳೆಂಬ ವಿವರಣೆಗಳು ಹೆಚ್ಚು ದೊರೆಯುತ್ತವೆ."[೫]

ಪ್ರಾಚೀನ ಸಂದರ್ಭದಲ್ಲಿ ವೇಶ್ಯೆಯರೆಂದರೆ ಅದು ಇಂದಿನ ವೇಶ್ಯೆ ಅರ್ಥಕ್ಕೆ ಸಮಾನವಾದುದಲ್ಲ. ಅಂದು ವೇಶ್ಯೆಯರೆಂದರೆ ಹಣಕ್ಕಾಗಿ ವ್ಯಾಪಾರ ನಡೆಸುವವರಾಗಿರಲಿಲ್ಲ. ತಮ್ಮ ಜೀವನವನ್ನು ಸಾಗಿಸಲು ಗೌರವಾಧಾರಗಳಿಂದ ಬದುಕುತ್ತಿದ್ದರಲ್ಲದೆ, ಕಲೆಗಾಗಿಯೇ ತಮ್ಮ ಜೀವನವನ್ನು ಅರ್ಪಣೆ ಮಾಡುತ್ತಿದ್ದವರಾಗಿದ್ದರು.

ಅಂದು ನೃತ್ಯ ನಡೆಸುತ್ತಿದ್ದವರು ವೇಶ್ಯೆಯರೆಂದು ತಿಳಿದುಬಂದರೂ ಸಹ ಅವರಿಗೆ ಕಡ್ಡಾಯವಾಗಿ ದೇವಾಲಯದಲ್ಲೇ ನರ್ತನ ಮಾಡಬೇಕೆಂಬ ನಿಯಮಗಳಿರುವುದು ಅಂದಿನ ಸಮಾಜದಲ್ಲಿ ರೂಢಿಯಲ್ಲಿರುವುದು ಕಂಡುಬರುವುದಿಲ್ಲ. ಇದನ್ನು ಗಮನಿಸಿದರೆ ಕಲೆಗೆ ಸಂಬಂಧಿಸಿದ ವಿಷಯದಲ್ಲಿ ಸ್ತ್ರೀಯರಿಗೆ ಸ್ವಲ್ಪಮಟ್ಟಿನ ಸ್ವಾತಂತ್ರ್ಯವಿತ್ತೇನೋ ಎನ್ನಿಸುತ್ತದೆ. ಕಾರಣ ಅಂದಿನ ನೃತ್ಯಗಾರ್ತಿಯರು ದೇವಾಲಯದಲ್ಲಿ ನರ್ತಿಸಲು ಇಚ್ಛಿಸದವರು ರಾಜನರ್ತಕಿಯರಾಗಿಯೋ, ಅರಸನ ಆಸ್ಥಾನದ ನರ್ತಕಿಯರಾಗಿಯೋ, ರಾಜನ ಆಸ್ಥಾನದಲ್ಲಿ ನರ್ತಿಸುತ್ತಿದ್ದರು. ಮತ್ತೆ ಕೆಲವರು ರಾಣಿಯರಿಗೆ ನಾಟ್ಯ ಕಲಿಸುವುದನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡು ರಾಣಿಯರ ಸೇವಕಿಯರಾಗಿ ಕಾರ್ಯನಿರ್ವಹಿಸುತ್ತಿದ್ದರು.

"ಕೆಲವೊಮ್ಮೆ ಕೆಲವು ನರ್ತಕಿಯರು ದೇವರ ಸೇವೆಗೆಂದು ತಮ್ಮ ಕಲೆಯನ್ನು ಸಮರ್ಪಿಸಿ ದೇವರ ಮುಂದೆ ಮಾತ್ರ ತಮ್ಮ ನರ್ತನವನ್ನು, ಕಲಿತ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಅಂತಹವರನ್ನು ದೇವಾಲಯದ ನರ್ತಕಿ ಎಂದು ಕರೆದಿರುವುದು ತಿಳಿದುಬರುತ್ತದೆ."[೬] ವಾತ್ಸಾಯನನು ಕಾಮಶಾಸ್ತ್ರದಲ್ಲಿ "ರಾಜನರ್ತಕಿಯರನ್ನು, ವೇಶ್ಯೆಯರನ್ನು ೩೧ ರೀತಿಯಲ್ಲಿ ವಿಂಗಡಿಸಿ ೧೦ನೇ ವರ್ಗವನ್ನು 'ದೇವತಾ' ಎಂದು ಹೇಳಿ ಈಕೆ ಸುಂದರಿಯೂ ತನ್ನ ಹಿಡಿತದಲ್ಲಿ ತಾನಿರುವವಳೂ ಎಂದು ತಿಳಿಸುತ್ತಾನೆ."[೭]

ದೇವಾಲಯಗಳ ಆರಂಭದಿಂದಲೂ ದೇವಾಲಯಗಳಲ್ಲಿ ನರ್ತಿಸುತ್ತಿದ್ದವರು ವೇಶ್ಯೆಯರು ಎಂದು ತಿಳಿದುಬರುತ್ತದೆ. ಅವರು ವ್ಯಾಪಾರೀಕರಣಗೊಂಡವರು ಅಲ್ಲವೆಂಬುದು ಸ್ಪಷ್ಟ ಸಂಗತಿಯಾಗಿದೆ. "೧೫ನೇ ಶತಮಾನದ ವೇಳೆಗಾಗಲೇ ದೇವಾಲಯದಲ್ಲಿ ನರ್ತಿಸುವವರನ್ನು ದೇವದಾಸಿಯರೆಂದು ಕರೆಯುತ್ತಿದ್ದರೆಂದು ತಿಳಿದುಬರುತ್ತದೆ. ಡಾ.ಚಿದಾನಂದ ಮೂರ್ತಿಯವರು 'ಕನ್ನಡ ಶಾಸನಗಳಲ್ಲಿ ಎಲ್ಲಿಯೂ ದೇವದಾಸಿ ಪದ ಬಂದಿಲ್ಲ. ಅದರ ಬದಲು 'ಸೂಳೆ' ಎಂಬ ಶಬ್ದ ಬರುವುದೇ ಹೆಚ್ಚು. ಪಾತ್ರ ಎಂಬುದೂ ದೇವದಾಸಿಯನ್ನೇ ಸೂಚಿಸುತ್ತದೆ. ಸೋಮೇಶ್ವರನ ಅಭಿಲಾಷಿತಾರ್ಥ ಚಿಂತಾಮಣಿಯಲ್ಲಿ(ಕ್ರಿ.ಶ.೧೧೨೯-೩೦) ದೇವಸ್ಥಾನಗಳಿಗೆ ಕೊಡಬೇಕಾದ ವಸ್ತುಗಳಲ್ಲಿ 'ದಾಸಿಕೆ'ಯರನ್ನು ಹೆಸರಿಸಿದೆ. 'ಗ್ರಾಮಸ್ತಥಾ ಭೂಮಿದಾರ್ಸಿಕಾದ್ಯ ವಿಭೂಷಣಂ' ಇಲ್ಲಿ ದಾಸಿಕಾ ಎಂದರೆ 'ದೇವದಾಸಿ' ಎಂದರ್ಥ."[೮]

ಹಿಂದೂಧರ್ಮದ ಶ್ರೇಷ್ಠ ಗ್ರಂಥಗಳೆನಿಸಿದವುಗಳಲ್ಲಿ ಒಂದಾದ ಪುರಾಣಗಳು ಬಹುತೇಕ ದೇವರ ಆರಾಧನೆಯ ವಿವರಗಳನ್ನೊಳಗೊಂಡಿದ್ದು, ಗರ್ಭಗುಡಿಯಲ್ಲಿ ದೇವರನ್ನು ಪೂಜಿಸುವ ವೇಳೆಯಲ್ಲಿ ಸಂಗೀತ, ವಾದ್ಯಗಳನ್ನು ಮೊಳಗಿಸಲು ಸ್ತ್ರೀಯರನ್ನು ನೇಮಿಸಿಕೊಳ್ಳಬೇಕು ಮತ್ತು ಅವರಿಗೆ ಭೂಮಿಯ ರೂಪದಲ್ಲೋ, ಹಣದ ರೂಪದಲ್ಲೋ ಜೀವನ ಸಾಗಿಸಲು ಇಂತಿಷ್ಟು ಭಾಗವನ್ನು ಅವರಿಗಾಗಿ ನಿಗದಿಗೊಳಿಸುವುದರ ಬಗ್ಗೆ ಪುರಾಣಗಳು ಸೂಚಿಸುತ್ತವೆ. "ಸೂರ್ಯ ಲೋಕವನ್ನು ಪಡೆಯಲು ಸೂರ್ಯ ದೇವಸ್ಥಾನಕ್ಕೆ ಹಲವು ವೇಶ್ಯೆಯರನ್ನು ದಾನವಾಗಿ ಕೊಡುವುದೇ ಉತ್ತಮ ಮಾರ್ಗ ಎಂದು ಭವಿಷ್ಯಪುರಾಣ ತಿಳಿಸುತ್ತದೆ. ಹ್ಯೂಯೆನ್‌ತ್ಸಾಂಗನು ಕ್ರಿ.ಶ.೭ನೇ ಶತಮಾನದಲ್ಲಿ ಮುಲ್ತಾನ್ ಎಂಬಲ್ಲಿ ಸೂರ್ಯ ದೇಗುಲದಲ್ಲಿ ಗಾಯಕಿಯರನ್ನು ಕಂಡಂತೆ ಹೇಳುತ್ತಾನೆ. ಕಾಶ್ಮೀರದಲ್ಲಿ ಕ್ರಿ.ಶ.೭ನೇ ಶತಮಾನದಲ್ಲಿ ಈ ಸಂಪ್ರದಾಯವಿತ್ತೆಂದು ರಾಜತರಂಗಿಣಿಯಿಂದ ತಿಳಿದುಬರುತ್ತದೆ. ಗುಜರಾತಿನ ಸೋಮನಾಥ ದೇವಾಲಯದಲ್ಲಿ ೫೦೦ ನರ್ತಕಿಯರು ಇದ್ದಂತೆ, ರಾಜರಾಜನು ತಂಜಾವೂರಿನಲ್ಲಿ ದೇವಾಲಯವೊಂದನ್ನು ಕಟ್ಟಿದ್ದಾನೆ. ದೇವಸ್ಥಾನದ ಸೇವೆಗೆ ೪೦೦ ನರ್ತಕಿಯರನ್ನು ಒದಗಿಸಿದನೆನ್ನಲಾಗಿದೆ. ಈ ಸಂಪ್ರದಾಯವನ್ನು ಬ್ರಾಹ್ಮಣರು ವಿರೋಧಿಸಿದರೂ ರಾಜರು ಒತ್ತಾಯಪೂರ್ವಕವಾಗಿ ಇದನ್ನು ಜಾರಿಗೆ ತಂದರು"[೯] ಎನ್ನಲಾಗಿದೆ.

ಹಿಂದೂ ಸಂಪ್ರದಾಯದಲ್ಲಿ ದೇವರನ್ನು 'ಅಥಿತಿ' ಎಂದು ಭಾವಿಸಿ, ಆತನನ್ನು ಅಥಿತಿ ಸತ್ಕಾರ ಮಾಡುವಂತೆ ಆಮಂತ್ರಿಸುವ ಪರಂಪರೆ ಇಂದಿಗೂ ನಮ್ಮಲ್ಲಿ ರೂಢಿಯಲ್ಲಿದೆ. ಹಲವಾರು ವ್ರತಗಳನ್ನು ಆಚರಿಸುವ ವೇಳೆಯಲ್ಲಿಯೂ ದೇವರನ್ನು ಪ್ರಾರ್ಥಿಸಿ, ಪೂಜಿಸುವ ಕಾರ್ಯಗಳಿವೆ. ದೇವರು ಭಕ್ತಿ, ವಿನಯಗಳಿಂದ ಕರೆದರೆ ಬಂದು ತಮ್ಮ ಆತಿಥ್ಯ ಸ್ವೀಕರಿಸುತ್ತಾನೆಂಬ ನಂಬಿಕೆ ಇಂದಿಗೂ ಕೆಲವು ಸಂಪ್ರದಾಯವಾದಿಗಳಲ್ಲಿ ಭದ್ರವಾಗಿ ಬೇರೂರಿದೆ.

ವೈದಿಕ ಪರಂಪರೆಯಲ್ಲಿ ದೇವರಿಗೆ ಅವಿಸ್ಸು ನೀಡಲು ಯಜ್ಞಯಾಗಾದಿಗಳನ್ನು ಮಾಡಲಾಗುತ್ತಿತ್ತು. "ಯಜ್ಞಗಳ ಪ್ರಾಯೋಗಿಕ ರೂಪದ ನಿರ್ವಾಹಕ ಕ್ರಮಗಳಲ್ಲಿ ಬರುವ ಬ್ರಹ್ಮೋದ್ಯಗಳು, ಸುಬ್ರಹ್ಮಣ್ಯಾದಿ ಋತ್ವಿಜರ ಸಾಮಗಾನ ವಿಧಾನ, ಮಹಾವ್ರತದಲ್ಲಿ ಮಾರ್ಜಾಲೀ ಕನ್ಯೆಯರ ನೃತ್ಯ, ಸೋಮವಿಕ್ರಯ ಕಾಲದ ನಾಟಕೀಕರಣ, ಅಶ್ವಮೇಧ, ಯಾಗಾದಿಗಳಲ್ಲಿ ಬರುವ ಋತ್ವಿಕ್ಜನ ಮತ್ತು ಅಂಬೆ, ಅಂಬಾಲಿಕಾದಿ ಸ್ತ್ರೀಯರ ಸಂವಾದ ಮುಂತಾದವು ನಾಟ್ಯಾಂಶಗಳು ರಕ್ತೋಷ್ಣೀಷಧಾರಣ ಪರಸ್ಪರ ಮಂಡಲ ನೃತ್ಯ, ಯಜಮಾನನು ಯುಗಾಂತ್ಯದಲ್ಲಿ ಸ್ವರ್ಗಾರೋಹಣವನ್ನು ನಿರೂಪಿಸುವ ನರ್ತನ, ಕರ್ಕರಿ–ಆಘಾತೀ–ಭೃತ್ನಿ–ಬಾಕುರ–ನಾಳೀ–ಕ್ಷೋಣೀ ಗರ್ಗರ–ವೇಯು–ವೀಣಾ–ಕಾಂಡಲೀಣಾ–ವಿಚೋರ. ದುಂದುಭಿಪಟಹ–ಪಣವ–ಮೃದಂಗ–ಭೂಮಿ. ದುಂದುಭಿ–ಅಪಾಘಾಟಲಿಕ–ತಂಬಲವೀಣಾ. ತಾಲುಕವೀಣಾ ತೂಣವ ವೀಣಾ–ಶತತಂತ್ರೀ ಗೋಧಾಮೀಣಾ–ಶಂಕ–ನಾಡಿ–ಕಪಿಲಶೀಷಣಿ ಮುಂತಾದ ವಾದ್ಯಗಳ ಬಳಕೆ. 'ನೃತ್ಯ–ಗೀತ–ವಾದಿತ್ರ' ಸಂಗತಿಗಳನ್ನು ಪರಿಶೀಲಿಸಿದಾಗ ದೇವಾಲಯಗಳ 'ಉತ್ಸವ ಪ್ರಕೃತಿ' ಯಜ್ಞ ಮೂಲವೆಂಬುದು ಸ್ಪಷ್ಟವಾಗುತ್ತದೆಂದು"[೧೦] ಡಾ.ಶತಾವಧಾನಿ ಆರ್.ಗಣೇಶ್ ಹೇಳುತ್ತಾರೆ.

ಮೇಲೆ ತಿಳಿಸಿದ ಎಲ್ಲಾ ವಾದ್ಯ, ಗೀತೆ, ನೃತ್ಯಾದಿ ಅಂಶಗಳು ದೇವರಿಗೆ ಸಂತೃಪ್ತಿ ತರುತ್ತವೆಂಬ ಭಾವದಿಂದ ಮಾಡಲಾಗುತ್ತಿತ್ತೆನ್ನಿಸುತ್ತದೆ. ಪೂಜೆಗಾಗಿ ದೇವರನ್ನು ಆಹ್ವಾನಿಸಿ ಪೂಜೆ ಮಾಡುವ ಅರ್ಚಕ ತಾನು ಮೊದಲು ಸ್ವಚ್ಛವಾಗಿ ಕೈ ಕಾಲು ತೊಳೆದು, ಸ್ನಾನ ಇತ್ಯಾದಿಗಳನ್ನು ಮುಗಿಸಿ ಅನಂತರ ಆತ್ಮ ಶುದ್ಧಿಯಿಂದ ದೇವರ ಹೆಸರು ಸ್ಮರಿಸುತ್ತಾ, ಮೂರು ಬಾರಿ ಆಚಮನ ಮಾಡಿ ತರುವಾಯ ಮೂರ್ತಿರೂಪದಲ್ಲಿರುವ ದೇವರಿಗೆ ನೀರಿನಿಂದ ಅಭ್ಯಂಜನ ಮಾಡಿಸುವ ವಿಧಾನ ಪ್ರತಿನಿತ್ಯದ್ದು. ವಿಶೇಷ ದಿನಗಳಲ್ಲಿ ಹಾಲು, ತುಪ್ಪ, ಮೊಸರು, ಎಳನೀರು, ಗಂಧ, ಅರಿಶಿಣ, ಕುಂಕುಮ, ಜೇನುತುಪ್ಪ ಮೊದಲಾದ ದ್ರವ್ಯಗಳಿಂದ ಅಭಿಷೇಕ ಮಾಡಲಾಗುತ್ತದೆ. ನಂತರ ವಸ್ತ್ರಾಲಂಕಾರ ಮಾಡಿ, ಯಜ್ಞೋಪವೀತ ಹಾಕಿ ಅರಿಶಿಣ, ಕುಂಕುಮ, ಗಂಧಗಳಿಂದ ಲೇಪನ ಮಾಡಿ ಬಿಲ್ವಪತ್ರೆ, ಇತರೆ ಹೂವುಗಳಿಂದ ಅಲಂಕರಿಸಿ ಕರ್ಪೂರ, ಊದುಬತ್ತಿ, ಲೋಬಾನಗಳಿಂದ ಆರತಿಮಾಡಿ ದೀಪ ಹಚ್ಚಿ ಪೂಜಿಸಿ, ಆಹಾರ ನೈವೇದ್ಯ ಮಾಡಿ ದೇವರಿಗೆ ತೂಗು ಮಂಚದ ಮೇಲೆ ಕೂರಿಸುವವರೆಗಿನ ಎಲ್ಲಾ ಕಾರ್ಯಗಳು ಅಂಗಭೋಗಕ್ಕೆ ಸಂಬಂಧಿಸುತ್ತವೆ. ಅಂಗಭೋಗದ ಸ್ತ್ರೀಯರು ಅರ್ಚಕ ಅಥವಾ ಪುರೋಹಿತನಿಗೆ ದೇವರನ್ನು ತೊಳೆಯಲು ನೀರು ತರುವುದು, ದೇವರ ಮೈಯಿಂದ ವಿಸರ್ಜಿಸಿದ ಹೂ ಮೊದಲಾದ ವಸ್ತುಗಳನ್ನು ಹೊರಗೆಸೆಯುವ, ಪೂಜಾ ಸಾಮಗ್ರಿಗಳನ್ನು ತಯಾರು ಮಾಡುವ, ಪ್ರತಿನಿತ್ಯದ ಪೂಜೆಗೆ ಹೂ ಜೋಡಿಸುವ ಹೀಗೆ ಹಲವಾರು ಕಾರ್ಯಗಳನ್ನು ನಿರ್ವಹಿಸಬೇಕಿತ್ತು. ಅಂಗಭೋಗ ಪೂಜೆಯ ನಂತರ "ತಾಂಬೂಲ ನೀಡಿ, ಪ್ರದಕ್ಷಿಣೆ ಮಾಡಿ, ನಮಸ್ಕರಿಸಿ, ಸ್ತುತಿಸಿ, ಪುರಾಣ ಪಠಣ ಮಾಡುತ್ತಾ ಛತ್ರ ಸೇವೆ, ಚಾಮರ ಸೇವೆಗಳನ್ನು ಮಾಡಿ ಶಯ್ಯೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಸಂಗೀತ, ನೃತ್ಯ,

ವಾದ್ಯ ಇತ್ಯಾದಿ ಸೇವೆಗಳಿಂದ ತೃಪ್ತಿಪಡಿಸುವುದೇ ನಿತ್ಯ ಸೇವಾ ವಿಧಿಯ ಕ್ರಮಗಳಾಗಿರುತ್ತವೆ. ಇವು ರಂಗಭೋಗಕ್ಕೆ ಸಂಬಂಧಿಸುತ್ತವೆ."[೧೧]

ವೇದದ ಆರು ಅಂಗಗಳಲ್ಲಿ ಒಂದಾದ ಗಾಂಧರ್ವ ವೇದದಲ್ಲಿ ನೃತ್ಯ, ಸಂಗೀತ, ವಾದ್ಯ ಇವೇ ಮೊದಲಾದ ಸಾಹಿತ್ಯ ಸೇವೆಗಳು ಕಂಡುಬರುತ್ತವೆ. ಇವುಗಳನ್ನೇ ಶಾಸನದಲ್ಲಿ 'ರಂಗಭೋಗ' ಸೇವೆಗಳೆಂದು ಕರೆಯಲಾಗುತ್ತದೆ.

ಶಾಸನಗಳಿಂದ ತಿಳಿದುಬರುವಂತೆ ಎಲ್ಲಾ ದೇವಾಲಯಗಳಲ್ಲಿಯೂ ರಂಗಭೋಗದ ಸೇವೆಗಳು ಕಂಡುಬರುವುದಿಲ್ಲ. ಕಾರಣ ಜನಪ್ರಿಯತೆ ಹೊಂದಿದ ದೇವಾಲಯಗಳು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಕೆಲವು ದೇವಾಲಯಗಳಲ್ಲಿ ಮಾತ್ರ ಕಾಣಿಸಿಕೊಳ್ಳಬಹುದು. ಅಂಗಭೋಗದ ಸೇವೆ ಎಲ್ಲ ದೇವಾಲಯಗಳಲ್ಲಿಯೂ ಪ್ರತಿನಿತ್ಯ ನಡೆಯುವ ಕ್ರಿಯೆಯಾಗಿರುತ್ತದೆ. ಇದರ ಸೇವೆಯನ್ನು ದೇವಾಲಯದ ಅರ್ಚಕನೊಬ್ಬನೇ ಯಾರ ಸಹಾಯವೂ ಇಲ್ಲದೆ ನಿರ್ವಹಿಸಬಹುದು. ಇಂದಿಗೂ ಪ್ರತಿಯೊಂದು ಊರುಗಳಲ್ಲಿಯೂ ಇರುವ ಎಲ್ಲಾ ದೇವಾಲಯಗಳಿಗೂ ಆ ದೇವಾಲಯದ ದೇವರನ್ನು ಪೂಜಿಸುವ ಪುರೋಹಿತ ಅಥವಾ ಪೂಜಾರಿಗೆ ಇಂದಿಗೂ ಇಂತಿಷ್ಟು ಭೂಮಿಯನ್ನು ದತ್ತಿಯಾಗಿ ನೀಡಿರುವುದು ಕಂಡುಬರುತ್ತದೆ. ಕೆಲವು ಹಳ್ಳಿಗಳಲ್ಲಿ ಅದು ವಂಶಪಾರಂಪರ್ಯವಾಗಿ ಮುಂದುವರಿದುಕೊಂಡು ಬಂದಿದೆ. ಮತ್ತೆ ಕೆಲವು ದೇವಾಲಯಗಳನ್ನು ಸರ್ಕಾರ ತನ್ನ ಸ್ವಾಧೀನಕ್ಕೆ ಒಳಪಡಿಸಿಕೊಂಡಿದ್ದು, ಪ್ರತಿ ತಿಂಗಳು ದೇವಾಲಯದ ಅರ್ಚಕನಿಗೆ ಇಂತಿಷ್ಟು ಹಣವನ್ನು ನಿಗದಿಪಡಿಸಿ ಸಂಬಳ ನೀಡುತ್ತಿದೆ. ಸರ್ಕಾರದ ಸ್ವಾಧೀನದ ಎಲ್ಲಾ ದೇವಾಲಯಗಳಲ್ಲಿ ಭಕ್ತಾದಿಗಳು ಹರಕೆ ಹೊತ್ತು ಕಾಣಿಕೆ ನೀಡುವ ಕಾಣಿಕೆ ಹುಂಡಿ ಸರ್ಕಾರಕ್ಕೆ ಸೇರಲ್ಪಡುತ್ತದೆ. ಸರ್ಕಾರದ ಸ್ವಾಧೀನದಿಂದ ಹೊರತಾಗಿರುವ ದೇವಾಲಯಗಳ ಕಾಣಿಕೆ ಹುಂಡಿಯ ಹಣವನ್ನು ದೇವಾಲಯದ ಜೀರ್ಣೋದ್ಧಾರಕ್ಕೆ ಬಳಸಲಾಗುತ್ತದೆ.

ರಂಗಭೋಗದ ಸೇವೆಯು ಅಂಗಭೋಗ ಸೇವೆಯಷ್ಟು ಸುಲಭವಾದುದಲ್ಲ. ಕಾರಣ ರಂಗಭೋಗದ ಸೇವೆ ಒಬ್ಬರಿಂದಲೇ ನಡೆಯುವಂತದ್ದಲ್ಲ. ಅದು ಹಲವಾರು ವ್ಯಕ್ತಿಗಳಿಂದ ಸೇರಿ ನಡೆಯುವಂತದ್ದು. ಜೊತೆಗೆ ವಿಶೇಷ ಸೌಲಭ್ಯಗಳ ಅಗತ್ಯತೆ ರಂಗಭೋಗಕ್ಕಿರುತ್ತದೆ. ರಂಗಭೋಗ ನೃತ್ಯ ಗೀತಾದಿ ವಾದ್ಯಗಳಿಂದ ಕೂಡಿದ್ದು, ನರ್ತಕರು, ಸಂಗೀತಕಾರರು ಮೊದಲಾದವರಿಂದ ಮಾತ್ರ ಪೂರ್ಣಗೊಳ್ಳುವ ಕ್ರಿಯೆಯಾಗಿರುತ್ತದೆ. ದೇವಾಲಯಗಳು ಸಾಕಷ್ಟು ಹರವಿನಿಂದ ಕೂಡಿರಬೇಕು. ಜೊತೆಗೆ ಸಾಕಷ್ಟು ಹೇರಳವಾಗಿ ಆರ್ಥಿಕ ನೆರವು ದೇವಾಲಯಗಳಿಗಿದ್ದಾಗ ಮಾತ್ರ ರಂಗಭೋಗ ಸೇವೆ ಯಶಸ್ವಿಯಾಗುತ್ತದೆ. ವಿಶೇಷವಾಗಿ ಸಮೃದ್ಧಿ ಹೊಂದಿದ ದೇವಾಲಯಗಳಲ್ಲಿ ಮಾತ್ರವೇ ಈ ರಂಗಭೋಗದ ಸೇವೆ ಕಾಣಿಸಿಕೊಳ್ಳುತ್ತದೆ. ಅಲ್ಲದೆ ರಾಜವರ್ಗದವರು, ಮಾಂಡಳೀಕರು, ಸಾಮಂತ ವರ್ಗದವರು ಹೆಚ್ಚಾಗಿ ಈ ಸೇವೆಗೆ ದಾನನೀಡಿದ ವಿವರಗಳು ಶಾಸನದಲ್ಲಿ ದೊರೆಯುತ್ತವೆ.

ಕ್ರಿ.ಶ.೧೩೫೫ರ ಶಾಸನವು ಚಿತ್ರದುರ್ಗ ಬೆಟ್ಟದ ಮೇಲೆ ಸಂಪಿಗೆ ಸಿದ್ದೇಶ್ವರ ದೇವಾಲಯದ ಬಾಗಿಲಲ್ಲಿದ್ದು. ಇದರಲ್ಲಿ ಬುಕ್ಕರಾಯನ ಮಾಂಡಳೀಕನಾದ ಅಳಿದ ಸಾಇನಾಯ್ಕ. ಇವನ ಮಗ 'ಮಲ್ಲಿನಾಥ' ಎಂಬವನು, ಬೆಂಮತ್ತನ ಕಲ್ಲಸಿದ್ಧನಾಥ ದೇವರಿಗೆ ಕಲ್ಲವುಪ್ಪರಿಗೆಯನ್ನು ಎತ್ತಿಸಿ ಆ ದೇವರಿಗೆ "ಯಿಧರ್ಮ್ಮ ಅಚಂದ್ರಾರ್ಕ್ಕಸ್ಥಾಇಯಾಗಿ ಪುರೋದ್ಧಿಗೆ ಸಲುವಂತಾಗಿ ಆ ಸಿದ್ಧ ದೇವರ ಅಂಗರಂಗಭೋಗ ದೀಪ್ತಿ ಅಮೃತಪಡಿ ನಡವಂತಾಗಿ...."[೧೨] ಸಿದ್ಧನಾಥದೇವರ ಅಂಗಭೋಗ ರಂಗಭೋಗಕ್ಕೆಂದು ಬೆಮ್ಮತ್ತಕಲ್ಲ ನಾಡಿನ ಚಿಕ್ಕಪುರವನ್ನು ಜೀರ್ಣೋದ್ಧಾರ ಮಾಡಿ, ಆ ಚತುಸ್ಸೀಮೆಯಲ್ಲಿ ಬರುವ ನಿಧಿ, ನಿಕ್ಷೇಪ, ಹೊದಿಕೆ, ತದಿಕೆ, ಕಾಣಿಕೆಗಳನ್ನು ಕಡ್ಡಾಯವಾಗಿ ಬಿಟ್ಟುಕೊಡಬೇಕೆಂದು ಶಾಸನ ತಿಳಿಸುತ್ತದೆ.

ಕ್ರಿ.ಶ.೧೩೫೬ರ ಶಾಸನವು ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರ ದೇವಾಲಯದ ಬಾಗಿಲಿನ ಎರಡನೇ ಶಾಸನವಾಗಿದ್ದು,[೧೩] ಪೂರ್ವ-ಪಶ್ಚಿಮ ಸಮುದ್ರಾಧಿಪತಿ ಎನಿಸಿದ ವೀರಶ್ರೀ ಬುಕ್ಕರಾಯನು ಹೊಯಿಸಣ ದೇಶವನ್ನು ಆಳುತ್ತಿರುವಾಗ ತುರಗ, ಸೇವುಣ, ತೆಲುಂಗ, ಪಾಂಡ್ಯ, ಹೊಯ್ಸಳ ದಳಗಳಿಗೆಲ್ಲ ಮಹೋನ್ನತಿವೆತ್ತ ಮಂಡಳೀಶ್ವರನಾದ ಗೋಂಟೆ ಸಾಯ್ಯನ ಕುಮಾರ ಮಲ್ಲಿನಾಥನು ಬೆಂಮ್ಮತ್ತ ಕಲ್ಲನ್ನು ಆಳುತ್ತಿದ್ದನು. ಈತನು ಸ್ವಸ್ತಿ ಶ್ರೀ ಮತು ಸಖ ವರುಷ ೧೨೭೮ನೆಯ ದುರ್ಮುಖಿ ಸಂವತ್ಸರದ ಆಷಾಡ ಬಹುಳ ತದಿಗೆ ಗುರುವಾರ ಬೆಂಮತ್ತನ ಕಲ್ಲ ಸಿದ್ಧನಾಥ ದೇವರಿಗೆ ಕಲ್ಲವುಪ್ಪರಿಗೆಯನ್ನು ಎತ್ತಿಸಿ, ಕಲ್ಲಿನ ಕೆಲಸದ ಉಯ್ಯಾಲೆಯನ್ನು ಎತ್ತಿಸಿ ಆ ದೇವರ ಮೇಲಣ ಶಿಖರ ಪ್ರತಿಷ್ಠೆಯನ್ನು ಮಾಡಿಸಿ ಯಿಧರ್ಮ್ಮ ಅಚಂದ್ರಾರ್ಕ್ಕ ಸ್ಥಾಯಿಯಾಗಿ ಪುರವಿದ್ಧಿಗೆ ಸಲುವಂತಾಗಿ ಆಸಿದ್ಧನಾಥದೇವರ ಅಂಗ ರಂಗಭೋಗ ದಈಪ್ತಿ ಅಮೃತಪಡಿ ನಡವಂತಾಗಿ.... ಸಿದ್ಧನಾಥ ದೇವರ ಅಂಗಭೋಗ, ರಂಗಭೋಗಕ್ಕೆ ಬೆಂಮತ್ತನ ಕಲ್ಲನಾಡಿನ ಮುಸುವಡಿಯ ಪುರವನ್ನು ಜೀರ್ಣೋದ್ಧಾರ ಮಾಡಿಸಿ ಅದರ ಚತುಸ್ಸೀಮೆಯ ಮುಂದಿನ ಪೂರ್ವದಲ್ಲಿರುವ ಕೇತನ ಖಂಡಿಯ ಕಲ್ಲು, ಮುಸುವಡಿಯ ಖಂಡಿಯ ಲಿಂಗಮುದ್ರೆಯ ಕಲ್ಲು, ಗೊಂಡವನ ಹಳ್ಳಿಯ ತೆಂಕಣ ಹೊಲಮೇರೆಯ ಲಿಂಗ ಮುದ್ರೆ ಕಲ್ಲು, ಗೊಂಡಮಸ ಹಳ್ಳಿಯ ಪಡುವಣ ಹೊಲದ ಲಿಂಗಮುದ್ರೆ ಕಲ್ಲುಗಳ ಚತುಸ್ಸೀಮೆಯೊಳಗಿನ ಅಕ್ಷೀಣಿ, ಆಗಾಮಿ, ನಿಧಿ, ನಿಕ್ಷೇಪ, ಜಲಪಾಶಾಣ, ಸಿದ್ಧಸಾಧ್ಯಸಿದ್ಧಾಯ, ಹೊದಿಕೆ, ಹದಿಕೆ, ಕಾಣಿಕೆ, ಕಂದಾಯಗಳನ್ನು ದಾನವಾಗಿ ನೀಡಲಾಯಿತು ಎಂದು ಶಾಸನ ತಿಳಿಸುತ್ತದೆ.

ಕ್ರಿ.ಶ.೧೩೨೮ರ ಶಾಸನವು ಚಿತ್ರದುರ್ಗ ಬೆಟ್ಟದ ಸಂಪಿಗೆ ದೇವಾಲಯದ ಒಳಗೋಡೆಗೆ ನಿಲ್ಲಿಸಿದ್ದು,[೧೪] ಈ ಶಾಸನದಲ್ಲಿ ಹೊಯ್ಸಳ ಚಕ್ರವರ್ತಿಯಾದ ಶ್ರೀ ಸೋಮೇಶ್ವರ ಮತ್ತು ಬಿಜ್ಜಲಾರಾಣಿಯರ ಮಗ ನರಸಿಂಹ ಇವನ ಪತ್ನಿ ಪಟ್ಟಮಹಾದೇವಿ ಇವರಿಬ್ಬರ ಪುತ್ರನೇ ಬಲ್ಲಾಳ. ಇವನಿಗೆ ಸರ್ವಜ್ಞ ಚೂಡಾಮಣಿ, ಮಲೆರಾಜರಾಜಂ, ಮಲಪರೊಳು ಗಂಡ, ಗಂಡಭೇರುಂಡ, ಸಹಾಯಸೂರಂ ಕದನ ಪ್ರಚಂಡ, ಏಕಾಂಗವೀರ ಎಂಬ ಬಿರುದುಗಳಿದ್ದವೆಂದು

ಈ ಶಾಸನ ತಿಳಿಸುತ್ತದೆ. ಇವನ ಆಳ್ವಿಕೆಯಲ್ಲಿ ಇವನ ಮಹಾಪ್ರಧಾನ ಬಲ್ಲಪ್ಪ ದಂಡನಾಯಕ, ಕುರುಸಿಂಗೆಯ ದಂಡನಾಯಕರು, ಉಂಣಾ ಮಲೆಯ ಪಟ್ಟಣದ ನೆಲೆವೀಡಿನೊಳು ಸುಖದಿಂದ ರಾಜ್ಯವಾಳುತ್ತಿರುವಾಗ, ಸಕ ಸಂವತ್ಸರದ ೧೨೫೦ನೆಯ ವಿಭವ ಸಂವತ್ಸರದ ಸ್ರವಣ ಬ ೧೦ ಸೋಮವಾರದಂದು ಬೆಂಬಮತ್ತೂರ ಕಲ್ಲಿನ ಬಲ್ಲಪದಂಡಾಯಕ ಮತ್ತು ಕುರುಸಿಂಗೆಯ ದಂಡನಾಯಕರು ತಮ್ಮ ತಂದೆ ಬೇಬದಂಡನಾಯಕನ ಹೆಸರಿನಲ್ಲಿ ಲಿಂಗ ಪ್ರತಿಷ್ಠಾಪನೆಯನ್ನು ಮಾಡಿಸಿ ಬೇಬನಾಥ ದೇವರ ಅಮೃತಪಡಿ ಅಂಗ ರಂಗಭೋಗ ಗೋಸುಗಂ ಅಷ್ಟಭೋಗ ತೇಜಸ್ವಾಯ್ಯನಿಧಿ ನಿಕ್ಷೇಪಸಿದ್ಧಸಾಧ್ಯ ಜಲಪಾಸಾಣ ಸಹಿತ ಧಾರಾಪೂರ್ವಕ ದಿಂ ದಾನವಾಗಿ ಕೊಟ್ಟೆವು.....ಎಂದು ಹೇಳುತ್ತದೆ. ಹೊಯ್ಸಳ ಚಕ್ರವರ್ತಿ ಬಲ್ಲಾಳನ ಕೈಯಿಂದ ಬೆಂಮತೂರ ಕಲ್ಲವೃತ್ತಿಯೊಳಗೆ ಬೆಂಣೆದೊಣೆ ಪ್ರದೇಶವನ್ನು ದಾನವಾಗಿ ಪಡೆದು ಈ ಪ್ರದೇಶವನ್ನು ಬಲ್ಲಪ್ಪ ಮತ್ತು ಕುರುಸಿಂಗೆ ದಂಡನಾಯಕರು ಬೇಬನಾಥ ದೇವರ ಅಂಗಭೋಗ ರಂಗಭೋಗಕ್ಕೆ ದಾನ ನೀಡಿದ ವಿವರ ಶಾಸನದಲ್ಲಿದೆ.

ಕ್ರಿ.ಶ.೧೪೧೨ರ ಶಾಸನವು ಚಿತ್ರದುರ್ಗ ಬೆಟ್ಟದ ಮೇಲೆ ಹಿಡಿಂಬೇಶ್ವರ ದೇವಾಲಯ ಸ್ಥಳದ ಮತ್ತೊಂದು ಗೋಡೆಯಲ್ಲಿದೆ.[೧೫] 'ಅರಿರಾಯ ವಿಭಾಡ', 'ಚತುಸಮುದ್ರಾಧಿಪತಿ' ಎಂಬ ಬಿರುದುಗಳಿಸಿದ ವಿಜಯನಗರ ಸಾಮ್ರಾಜ್ಯದ ಅರಸು ಶ್ರೀ ವೀರ ಪ್ರತಾಪ ದೇವರಾಯರ ಮಹಾಮಂಡಳೇಶ್ವರನಾದ ವೀರ ಮಲ್ಲಣ್ಣವೊಡೆಯರು ತನ್ನ ತಾಯಿ ಮಲ್ಲವೆಗೆ ಪರದಲ್ಲಿ ಸುಕ್ರುತವಾಗಲಿ ಎಂದು ಬೆಂಮ್ಮತ್ತನ ಕಲ್ಲಿಗೆ ಸಲುವ ಆ ಮೂಡಣ ಹಳ್ಳಿಗಳೊಳಗಣ ಕುಂಚಿಗನ ಹಳ್ಳಿಯನ್ನು ಅಷ್ಟಭೋಗ ತೇಜಸ್ವಾಂಮ್ಯ ಸಹಿತವಾಗಿ ನಿರುಪದಿಕ ಧರ್ಮವಾಗಿ ಆಚಂದ್ರಾರ್ಕ್ಕ ಸ್ಥಾಯಿಯಾಗಿ ಸರ್ವ್ವಮಾಂನ್ಯವಾಗಿ ಸರ್ವ್ವಬಾದೆ ಪರಿಹಾರಾರ್ಥ್ಥವಾಗಿ ಶ್ರೀ ಹಿಡಿಂಬನಾಥ ದೇವರ ಅಂಗ ರಂಗ ವೈಭವಕ್ಕೆಯೇಕ ಭೋಗದ ಪುರವಾಗಿ ತತ್ಪುಕ್ರುತೋ ಪಾರ್ಜ್ಜಿತ....... ಜೊತೆಗೆ ಗೋಪುರವನ್ನು ಸಹ ಕಟ್ಟಿಸಿ, ಕುಂಚಿಗನ ಹಳ್ಳಿಯಾದ ಮಲ್ಲಪುರವನ್ನು ದಾನವಾಗಿ ನೀಡಿದ ವಿವರ ಶಾಸನದಲ್ಲಿ ಕಂಡುಬರುತ್ತದೆ.

ಕ್ರಿ.ಶ.೧೨೦೬ರ ಶಾಸನವು ಚಿತ್ರದುರ್ಗ ತಾಲೂಕು ಗಂಜಿಗಟ್ಟೆ ಗ್ರಾಮದ ಬಳಿ ಪಾಂಡುರಂಗ ಬೆಟ್ಟದ ಮೇಲೆ ಜನ್ನೇಶ್ವರ ದೇವಾಲಯದ ಮುಂದಿದೆ.[೧೬] ಈ ಶಾಸನದಲ್ಲಿ ಹೊಯ್ಸಳ ಚಕ್ರವರ್ತಿ ನಾರಸಿಂಗದೇವನ ಸಾಮಂತ, ಮಾಚಿದೇವನ ಪ್ರಿಯ ಪುತ್ರನೆನಿಸಿದ ಮಾರೆಯನಾಯಕನ ಆಳ್ವಿಕೆಯ ಸಂದರ್ಭದಲ್ಲಿ ಹೊಳಲಕೆರೆ ನಾಡನ್ನು ರಾಜಧ್ಯಕ್ಷ ವಾಮನ ಕ್ರಮಿತರು ಆಳ್ವಿಕೆ ನಡೆಸುತ್ತಿದ್ದರು. ಸಕ ವರ್ಷ ೧೧೨೮ ಕ್ರೋಧನ ಸಂವತ್ಸರ ಚೈತ್ರ ಶುದ್ಧ ಪೌರ್ಣಮಿ ಸೋಮವಾರ ಸಂಕ್ರಮಣ ವ್ಯತೀಪಾತದಿಂದ ಕೂಡಿದ ಶುಭದಿನದಲ್ಲಿ ಚಿಕ್ಕ-ಚಿಕ್ಕ ಊರುಗಳನ್ನು ಆಳುತ್ತಿದ್ದ ಮುಖ್ಯ ಗಾವುಂಡ ಪ್ರಭುಗಳೆಲ್ಲರೂ ಶ್ರೀಮತ್ ಧರ್ಮೇಶ್ವರ ದೇವರಂಗಭೋಗ ರಂಗಭೋಗ ಖಂಡ ಸ್ಫುಟಿತ ಜೀರ್ಣೋದ್ಧಾರಕ್ಕಂ ನಾಗಭೂಷಣ ಪಂಡಿತರ ಪಾದರ್ಚ್ಚನಂ ಮಾಡಿ ಸರ್ವ್ವಭಾದಾ

ಪರಿಹಾರಮಾಗಿ ಧಾರಾಪೂರ್ವಕಂ ಮಾಡಿ ಬಿಟ್ಟ.....ಧರ್ಮೇಶ್ವರ ದೇವರ ಅಂಗಭೋಗ ರಂಗಭೋಗಕ್ಕೆ ಹುಲಿಕೆರೆಯ ಕೆಲವು ಭಾಗಗಳನ್ನು ದಾನ ನೀಡಿದ ವಿವರ ಶಾಸನದಿಂದ ತಿಳಿದುಬರುತ್ತದೆ.

ಚಿತ್ರದುರ್ಗ ತಾಲೂಕು ಗೊಡಬನಾಳು ಗ್ರಾಮದ ಕಲ್ಲಿನಾಥ ದೇವಾಲಯದ ದಕ್ಷಿಣದ ಕಡೆಯಿದೆ. ಇದರಲ್ಲಿ "ಅಂಗರಂಗಾದಿಭೋಗಾರ್ಥಂ ಲಿಂಗ ಮುದ್ರಯಾ...."[೧೭] ಕಲ್ಲಿನಾಥದೇವರ ಅಂಗಭೋಗರಂಗಾದಿ ಸೇವೆಗಳಿಗೆ ದಾನ ನೀಡಿದ ವಿವರ ಈ ಶಾಸನದಲ್ಲಿ ಕಂಡುಬರುತ್ತದೆಯಾದರು ಶಾಸನದ ಕಾಲದ ಬಗ್ಗೆ ಶಾಸನದಲ್ಲಿ ಉಲ್ಲೇಖವಿರುವುದು ವ್ಯಕ್ತವಾಗುವುದಿಲ್ಲ.

ಕ್ರಿ.ಶ.೧೨೮೬ರ ಶಾಸನವು ಚಿತ್ರದುರ್ಗ ತಾಲೂಕು ಹುಲಿಗುಂದ ಗ್ರಾಮದ ಅಂಕಲೆ ಮಠದ ಪಂಚಲಿಂಗ ದೇವರ ಗುಡಿಯಲ್ಲಿದೆ.[೧೮] ಈ ಶಾಸನದಲ್ಲಿ ಹೊಯ್ಸಳ ಚಕ್ರವರ್ತಿ ನಾರಸಿಂಹನ ದಂಡನಾಯಕ ಪೆರುಮಾಳೆ ಎಂಬುವವನು ಶಕ ವರುಷ ೧೨೦೮ ಸಂದ ವರ್ತ್ತಮಾನ ಬ್ಯಯ ಸಂ ೧ ಚಯಿತ್ರ ಶು ೧೦ ಬ್ರದಂದು. ಶ್ರೀ ಧರ್ಮೇಶ್ವರ ದೇವರು ಭೀಮೇಶ್ವರ ದೇವರು ಶ್ರೀ ಅರ್ಜುನೇಶ್ವರ ದೇವರು ಶ್ರೀ ಲುಂಕೇಶ್ವರ ದೇವರು ಶ್ರೀ ಸಹದೇವೇಶ್ವರ ದೇವರು ಯಿಂತೀ ಪಂಚಲಿಂಗ ದೇವರೊಳಗಾದ ದೇವರುಗಳ ಅಂನದಟ್ಟನ ತ್ರಿಕಾಲದ ಪೂಜಾಪುನಸ್ಕಾರ ಅಮ್ರುತಪಡಿ ಅಂಗಭೋಗ ರಂಗ ಭೋಗ..... ಈ ಪಂಚಲಿಂಗ ದೇವರುಗಳ ಅಂಗಭೋಗ ರಂಗಭೋಗಕ್ಕೆಂದು ಎಸಗೂರಿನ ಎಲ್ಲಾ ಕ್ಷೇತ್ರಗಳನ್ನು ದಾನ ನೀಡಿದನೆಂದು ಶಾಸನ ತಿಳಿಸುತ್ತದೆ.-

ಚಿತ್ರದುರ್ಗ ತಾಲೂಕು ಗಾರೇಹಟ್ಟಿ ಗ್ರಾಮದ ಚೋಳೇಶ್ವರ ದೇವಾಲಯದ ಒಲಗೆ ನಟ್ಟ ಶಾಸನವಾಗಿದೆ.[೧೯] ಚಾಲುಕ್ಯ ಚಕ್ರವರ್ತಿ ತ್ರಿಭುವನ ಮಲ್ಲದೇವರು ಜಯಂತೀಪುರವನ್ನಾಳುತ್ತಿರುವಾಗ ಇವನ ಮಹಾಮಂಡಳೇಶ್ವರನಾದ ಪಾಣ್ಡ್ಯದೇವರು ನೊಳಂಬವಾಡಿ ೩೬೦೦೦ ಆಳುತ್ತಿದ್ದನು. ಇವನ ಮಹಾಸಾಮಂತ ಉದಯಾದಿತ್ಯನು ಹರಹಟ ಹನ್ನೆರಡು, ಜಗಳವೂರ ಎಳ್ಪತ್ತು, ಹಡುವಗರೆ ಐನೂರು, ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆಯಿಂದ ಬೆಮ್ಮಚನೂರನ್ನು ಆಳುತ್ತಿದ್ದನು. ಆಗ ಧರ್ಮಕಥಾ ಪ್ರಸಂಗದಿಂದ ಲಿಂಗ ಮಹಾತ್ಮೆಯನ್ನು ಕೇಳಿ ಭಕ್ತಿಯಿಂದ ಲಿಂಗಷ್ಟೆಯನ್ನು ಮಾಡಿದನು. ಅಲ್ಲದೆ ಕಲ್ಲದೇಗುಲವನ್ನು ನಿರ್ಮಿಸಿದನು. ಶ್ರೀ ಚೋಳೇಶ್ವರ ದೇವರಂಗಭೋಗಕ್ಕಂ ಸ್ನಾನ ನಿವೇದ್ಯಕ್ಕಂ ಚೈತ್ರ ಪವಿತ್ರಕ್ಕಂ.....ಚಾಳುಕ್ಯ ವಿಕ್ರಮಕಾಲದ ೪೮ನೆಯ ಸೋಭಕ್ರಿತು ಸಂವತ್ಸರದ ವೈಶಾಖ ಶುದ್ಧ ೩ ಬೃಹಸ್ಪತಿ ಸಂಕ್ರಾಂತಿ ವ್ಯತೀಪಾತಂ ಕೂಡಿದಂದು. ಹಡುವಗೆರೆ ಐನೂರುರೊಳಗೆ ಕಂಪಣಂ, ಚೂಳುಂಗಲ್ಲು ಎಳ್ಪತ್ತರ ಬಿಳಿಯ ಬಾಡಂ, ತಳವ್ರಿತ್ತಿ ಹೊಸ ಗೆರೆಯ ಕೆಳಗೆ ಬಿದ್ದಗದ್ದೆ ೪೦೦೦ ಎಲೆಯ ಹೆಟುಂಗೆ ಎಲೆ ೧೦೦ ಅಡಕೆಯ ಹೇಟುಂಗೆ ಅಡಕೆ ೩೦ ಎಣ್ಣೆಯ ಕೊಡಕ್ಕೆ ಎಣ್ಣೆ ಮಾನ ೧ ದಾನಗಳನ್ನು ನೀಡಿದರೆಂದು ಶಾಸನ

ತಿಳಿಸುತ್ತದೆ. ಆದರೂ ಶಾಸನ ರಚನೆಯಾದ ಕಾಲ ಯಾವುದು ಎಂದು ಶಾಸನಲ್ಲಿ ದಾನನೀಡಿದ ವರ್ಷದ ಉಲ್ಲೇಖ ಸಿಗುವುದಿಲ್ಲ.

ಕ್ರಿ.ಶ.೧೨೧೭ರ ಶಾಸನವು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಹೊಳಲಕೆರೆಯ ಶಂಕರದೇವಾಲಯದ ಒಳ ಗೋಡೆಯ ಒಂದನೇ ಶಾಸನವಾಗಿದೆ.[೨೦] ಈ ಶಾಸನವು ಅಲ್ಲಲ್ಲಿ ತ್ರುಟಿತಗೊಂಡಿದ್ದು, ಇದರಲ್ಲಿ ಸಕವರ್ಷ ೧೧೩೯ನೆಯ ಶಶ್ವರ ಸಂವತ್ಸರದ ಪುಷ್ಯಶುದ್ಧ ಉತ್ತರಾಯಣ ಸಂಕ್ರಮಣ ವ್ಯತೀಪಾತ ಸೋಮಗ್ರಹಣ ದಂದು ಹೊಳಲ್ಕೆರೆಯ "ಶ್ರೀ ಸ್ವಯಂಭು ಕಲಿದೇವರಂಗಭೋಗ ರಂಗಭೋಗ ಖಂಡ ಸ್ಫುಟಿತ ಜೀರ್ಣೋದ್ಧಾರಕ್ಕಂ ಕೋಡಿಹಳ್ಳೀಯ ದಳ್ಳಿಯಂ ಸರ್ಬ್ಬಬಾಧಾಪರಿಹಾವಾಗಿ.....ದಾನ ನೀಡಿದ ವಿವರ ಶಾಸನದಲ್ಲಿದೆ.

ಕ್ರಿ.ಶ.೧೫೬೮ರ ಶಾಸನವು ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆಯ ಗೋಪಾಲಕೃಷ್ಣ ದೇವಾಲಯದ ತಾಮ್ರ ಶಾಸನದ ನಕಲಾಗಿದೆ.[೨೧] ರಾಜೆ ಶ್ರೀ ತಿರುಮಲ ರಾಜೈಯ ದೇವರ ಆಳ್ವಿಕೆಯಲ್ಲಿ ಶ್ರೀ ಕಾಮಗೆತ್ತಿ ಕಸ್ತೂರಿ ಮದಕರಿನಾಯಕರು ಹೊಳಲ್ಕೆರೆಯ ಶ್ರೀ ವೇಣುಗೋಪಾಲ ಕೃಷ್ಣಸ್ವಾಮಿ ದೇವರ "ಅಂಗರಂಗ ವೈಭವ"ಕ್ಕೆ ಮಲ್ಲಾಪುರಿ ಗ್ರಾಮವನ್ನು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷಂಗಳು ೧೪೯೦ನೆಯ ವಿಭವ ಸಂವತ್ಸರದ ಜೇಷ್ಠ ಶು.೫ ಮಂಗಳವಾರ ದಾನ ನೀಡಲಾಯಿತು ಎಂಬ ವಿವರ ಶಾಸನದಲ್ಲಿದೆ.

ಕ್ರಿ.ಶ.೧೪೮೩ರ ಶಾಸನವು ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲೂಕು ಮಾಳೇನಹಳ್ಳಿ ರಂಗನಾಥ ದೇವಾಲಯದ ಕೈಸಾಲೆಯಲ್ಲಿ ದಕ್ಷಿಣ ಕಡೆ ಕಂಬದಲ್ಲಿದೆ.[೨೨] ಈ ಶಾಸನದಲ್ಲಿ ಮಹಾಮಂಡಳೇಶ್ವರನಾದ ತಿಂಮಯ್ಯ ದೇವ ಚೌಡ ಮಹಾ ಅರಸುಗಳು ನುಲೇನೂರು ಸ್ಥಳದ ಮಾಳೇನಹಳ್ಳಿಯ "ತಿರುಮಲದೇವರ ಅಂಗರಂಗ ಭೋಗ ನಯಿವೇದ್ಯ...." ಕೆಂದು ಶಾಲಿವಾಹನ ಶಕವರುಷ ಸಾ ೧೪೦೫ನೆಯ ಶೋಭಕ್ರುತು ಸಂವತ್ಸರದ ಕಾರ್ತಿಕ ಶು ೧೫ರಲ್ಲಿ ದಾನ ನೀಡಿದರೆಂದು ಶಾಸನ ಹೇಳುತ್ತದೆ. ಆದರೆ ಏನನ್ನು ದಾನ ನೀಡಿದೆ ಎಂಬ ವಿವರ ಶಾಸನದಲ್ಲಿ ದೊರೆಯುವುದಿಲ್ಲ. ಕಾರಣ ಶಾಸನದ ಮುಂದಿನ ಸಾಲುಗಳ ಬರವಣಿಗೆ ದೊರೆಯುವುದಿಲ್ಲ. ಇದೇ ಗ್ರಾಮದ ಆಗ್ನೇಯ ದಿಕ್ಕಿನಲ್ಲಿ ಶಾನುಭೋಗರ ಹೊಲದಲ್ಲಿ ಬಿದ್ದಿರುವ ಶಾಸನವೊಂದು ದೊರೆತಿದೆ. ಇದರ ಪಾಠಾಂತರಗಳು ಅಲ್ಲಲ್ಲಿ ತ್ರುಟಿತಗೊಂಡಿವೆ. ಈ ಶಾಸನವು ಅಂಗಭೋಗದ ಜೀರ್ಣೋದ್ಧಾರಕ್ಕೆ ದಾನ ನೀಡಿದ ಶಾಸನವಾಗಿದೆ. ಯಾರು ಯಾವ ದೇವರ ದೇವಾಲಯಕ್ಕೆ ದಾನ ನೀಡಿದರೆಂಬುದರ ಬಗ್ಗೆ ಸ್ಪಷ್ಟ ಮಾಹಿತಿ ಸಿಗುವುದಿಲ್ಲ.

ಕ್ರಿ.ಶ.೧೨೨೦ರ ಶಾಸನವು ಹೊಳಲ್ಕೆರೆ ತಾಲೂಕು ಚಿತ್ರದುರ್ಗ ಹೋಬಳಿ ಹಿರೇಹೆಮ್ಮಿಗನೂರ ಕಲ್ಲೇಶ್ವರ ದೇವಾಲಯದ ಕೈಸಾಲೆಯಲ್ಲಿ ದಕ್ಷಿಣ ಕಡೆಗೋಡೆಯಲ್ಲಿ ದೊರೆತಿದೆ.[೨೩] ಈ ಶಾಸನದ ಕಾಲ ಹೊಯ್ಸಳರ ಆಳ್ವಿಕೆಯ ಅವಧಿಯಾಗಿದೆ. ಅಂದಿನ ಬಿದುರ್ಗ ಹೋಬಳಿಯ ಸುತ್ತಲಿನ

ಸಮಸ್ತ ಪ್ರಭುಗಾವುಂಡಗಳು ಅಧಿಕಾರಿ ರಾಘವದೇವ ಪಂಪಯ್ಯರು ಸಕವರುಷ ೧೧೪೨ನೆಯ ವಿಕ್ರಮ ಸಂವತ್ಸರದ ಜೇಷ್ಠದ ಅಮವಾಸೆ ಸೋಮವಾರ ಸೋಮಗ್ರಹಣದಂದು ಹಿರಿಯ ಹೆಮ್ಮಿಗನೂರ ಶ್ರೀ ಸ್ವಯಂಭು ಕಲಿದೇವರ ಅಂಗಭೋಗ ರಂಗಭೋಗ ಪಾತ್ರ ಪಾವುಳ ಚೈತ್ರ ಪವಿತ್ರ ಸ್ಫುಟಿತ ಜೀರ್ಣೋದ್ಧಾರ.....ಕ್ಕೆಂದು ನಂದೀ ಹಳ್ಳಿಯನ್ನು ದಾನ ನೀಡಿದ ವಿವರ ಶಾಸನದಲ್ಲಿದೆ.

ಚಿತ್ರದುರ್ಗ ಜಿಲ್ಲೆ ಹೊಳಲಕೆರೆ ತಾಲೂಕು ಬಿದುರ್ಗ ಹೋಬಳಿ ಗುಂಜಿಗನೂರು ಈಶ್ವರ ದೇವಾಲಯದ ಹಿಂದೆ ಶಾಸನ ನೆಟ್ಟಿದೆ.[೨೨] ಈ ಶಾಸನದಲ್ಲಿ ಚಾಳುಕ್ಯ ತ್ರಿಭುವನ ಮಲ್ಲನು ನೊಳಂಬವಾಡಿ ೩೬೦೦೦ ಆಳುತ್ತಿದ್ದಾಗ ಮಹಾಮಂಡಳೇಶ್ವರರಾದ ಗಂಗರಸರು ಆಳ್ವಿಕೆ ನಡೆಸುತ್ತಿದ್ದರು. ಗುಂಜಿಗನೂರಿನ ಪ್ರಭುಗಾವುಂಡಗಳಾದ ಕುಂಬಾರ ಬಮ್ಮಣಂರು ವೀರವ್ರತವನ್ನು ಕೈಗೊಂಡು "ಪ್ರತಿಷ್ಠೆಯಂ ಮಾಡಿಸಿದ ಕುಂಬೇಶ್ವರ ದೇವರಂಗಭೋಗಕ್ಕಂನನ್ದಾದೀ() ಗೆಗಂ ನಿವೇದ್ಯಕ್ಕಂ ಸರ್ವ್ವಬಾಧಾ ಪರಿಹಾರಕ್ಕಾಗಿ.... ಅರಕೆರೆಯ ಕೆಲವು ಭಾಗಗಳನ್ನು ದಾನ ನೀಡಿದ ವಿವರ ಶಾಸನದಲ್ಲಿದೆ. ಆದರೆ ಶಾಸನದ ಕಾಲ ಯಾವುದೆಂದು ತಿಳಿದುಬರುವುದಿಲ್ಲ.

ಕ್ರಿ.ಶ.೧೫೪೦ರ ಶಾಸನವು ಹೊಳಲ್ಕೆರೆ ತಾಲೂಕು ಬಿದುರ್ಗ ಹೋಬಳಿ ಕಡೂರು ಗ್ರಾಮಕ್ಕೆ ಉತ್ತರದಲ್ಲಿರುವ ಗುಡ್ಡದ ಪಾರ್ಶ್ವದಲ್ಲಿ ವೀರಭದ್ರ ದೇವಸ್ಥಾನಕ್ಕೆ ಆಗ್ನೇಯ ಬಂಡೆಯ ಮೇಲಿದೆ.[೨೩] ಈ ಶಾಸನದಲ್ಲಿ ವೀರ ಪ್ರತಾಪ ಶ್ರೀ ಅಚ್ಚುತರಾಯನು ವಿದ್ಯಾನಗರವೆಂಬ ಮಹಾಪಟ್ಟಣವನ್ನು ಸಿಂಹಾಸನ ರೂಢನಾಗಿ ಆಳುತ್ತಿರಲು ಪೆನುಗೊಂಡೆಯ ವೀರಪ್ಪ ಅಯ್ಯನವರಿಗೆ ಬಿಟ್ಟಂತಹ ಬಾಗೂರು ಸೀಮೆಯ ಒಳಗೆ ಪಾಂಢಿ ದೇಶಕ್ಕೆ ಸೇರುವ ಸಕಲ ಸೀಮೆಯ ಸ್ಥಳ ಕಡೂರು ಆಗಿತ್ತು. ವೀರಭದ್ರ ದೇವರಿಗೆ ಅಮ್ರುತಪಡಿ ನಂದಾದೀಪಿ ಅಂಗರಂಗವಯಿಭೋಗಕೆ ಸಮರ್ಪಿಸ್ತೆಉ ಎಂದು ಕೊಟಕಡೂರ ಧಾರ್ಮಸಶನ..... ಕಡೂರಿನ ವೀರಭದ್ರದೇವರ ಅಂಗಭೋಗ ರಂಗಭೋಗಕ್ಕೆ ಕಡೂರ ಚತುಸ್ಸೀಮೆಯಾದ ಮೂಡಲು ಜಾಜೂರಿನಿಂದ ಪಡುವಲು, ತೆಂಕಲಗಂಡು ಮಾಳೇನಹಳ್ಳಿಯಿಂದ ಬಡುಗಲು, ಪಡುವಲು ಅಭ ಸಮುದ್ರದಿಂದ(ಭೀಮಸಮುದ್ರ) ಮೂಡಲು, ಬಡಗಲು ನಾರಾಯಣಪುರದಿಂದ ತೆಂಕಲು, ಇವೇ ಮೊದಲಾದ ಚತುಸ್ಸೀಮೆಯ ನಿಧಿ, ನಿಕ್ಷೇಪ, ಜಲ, ಪಾಷಣ, ಅಕ್ಷೀಣ, ಆಗಾಯಿಸಿದ್ಧ, ಸಾಧ್ಯಗಳೆಂಬ ಅಷ್ಟಭೋಗವನ್ನು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೪೬೨ನೇ ಸರ್ವರಿ ಸಂವತ್ಸರದ ಮಾರ್ಗಶಿರ ಶುದ್ಧ ೧೦ರಂದು ದಾನ ನೀಡಿದ ವಿವರ ಶಾಸನದಿಂದ ತಿಳಿದುಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕು ಹೊಸದುರ್ಗ ಹೋಬಳಿ ಮತ್ತೋಡು ಗ್ರಾಮದ ನೇರ್ಲಕೆರೇ ನರಸಮ್ಮನಿಂದ ಬಂದ ತಾಮ್ರಶಾಸನವು ನಾಗಾರಾಕ್ಷರದಲ್ಲಿದ್ದು, ರಂಗ ತೃಟಿತವಾಗಿದೆ. ಅದನ್ನು ನಿರ್ಮಿಸುವ ಸಲುವಾಗಿ ದಾನ ನೀಡಿದ ವಿವರವಿದೆ. ಈ ಶಾಸನದ ಕಾಲದ ಬಗ್ಗೆ ತಿಳಿದುಬರುವುದಿಲ್ಲ.

ಕ್ರಿ.ಶ.೧೫೫೧ರ ಶಾಸನವು ಹೊಸದುರ್ಗ ತಾಲೂಕು ಬಾಗೂರು ಹೋಬಳಿಯಲ್ಲಿ ಕೇಶವ ದೇವಾಲಯದ ಪ್ರಾಕಾರದಲ್ಲಿ ನೆಟ್ಟ ಶಾಸನವಾಗಿದೆ.[೨೬] ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ೧೪೭೬ನೆಯ ರಾಕ್ಷಸ ಸಂವತ್ಸರದ ಪುಷ್ಯ ಬ ಆದಿವಾರ ಮಕರ ಸಂಕ್ರಾಂತಿ ಪುಣ್ಯ ಕಾಲದಲ್ಲಿ ಶ್ರೀ ವೀರ ಪ್ರತಾಪ ಸದಾಶಿವರಾಯ ಮಹಾರಾಯರು ಹಡಪದ ಬೊಮ್ಮನಾಯಕರ ಮಕ್ಕಳು ಕೃಷ್ಣಪ್ಪನಾಯಕರಿಗೆ ಪುಣ್ಯವಾಗಲೆಂದು ಭಾಗ್ಯಪುರದ ಚೆನ್ನಿಗರಾಯ ದೇವರಿಗೆ ಗೋಪಂಣೊಡೆಯರು ಮಾಡಿಸಿದ ಸೇವೆ. ಮಧುರೆಯ ಗ್ರಾ ೧ ಅರಳಿ ಹಳ್ಳಿಯ ಗ್ರಾ ೧ ಹಾದರಿ ಕಟ್ಟೆಯ ಗ್ರಾಮ ೧ ಈ ಮೂರು ಗ್ರಾಮಗಳನ್ನು ಚೆನ್ನಿಗರಾಯ ದೇವರ ಅಂಗಭೋಗ ರಂಗಭೋಗಕ್ಕೆ ದಾನವಾಗಿ ನೀಡಿದ ವಿವರ ಶಾಸನದಲ್ಲಿ ದೊರೆಯುತ್ತದೆ.

ಕ್ರಿ.ಶ.೧೦೯೪ರ ಶಾಸನವು ಹೊಸದುರ್ಗ ತಾಲೂಕು ಬಾಗೂರು ಹೋಬಳಿ ಚಿಕ್ಕಯಗಟಿ ಗ್ರಾಮದ ಚೆನ್ನಕೇಶವ ದೇವಾಲಯದ ಮುಂದೆ ಇದೆ.[೨೭] ಈ ಶಾಸನದಲ್ಲಿ ಹೊಯ್ಸಳರ ಪಾದಾರಾಧಕರಾದ ನಲ್ಲೆಸೆಟ್ಟಿಯರು ದೇಮೇಶ್ವರ ದೇವರ ಅಂಗರಂಗಭೋಗಕ್ಕಂ ಖಂಡ ಸ್ಫುಟಿತ ಜೀರ್ಣೋದ್ಧಾರ ನಂದದೀವಿಗೆ ಚೈತ್ರಪವಿತ್ರರೋಹಣ..... ಮೊದಲಾದವುಗಳಿಗೆ ಮಾವಿನ ಕೆರೆಯ ಕೆಲವು ಭಾಗಗಳನ್ನು ದಾನನೀಡಿದ ವಿವರ ಶಾಸನದಲ್ಲಿದೆ.

ಕ್ರಿ.ಶ.೧೦೬೫ರ ಶಾಸನವು ಹೊಸದುರ್ಗ ತಾಲೂಕು ನೀರಗುಂದ ಗ್ರಾಮದ ಸಿದ್ದೇಶ್ವರ ದೇವಾಲಯದಲ್ಲಿ ದೊರೆಯುತ್ತದೆ.[೨೮] ಈ ಶಾಸನದಲ್ಲಿ ಚಟೆಯ ನಾಯಕರು ಶ್ರೀ ಸಿದ್ಧನಾಥ ದೇವರಂಗ ಭೋಗಕ್ಕಂ ಸ್ನಾನ ನಿವೇದ್ಯಕ್ಕಂ ಚೈತ್ರ ಪವಿತ್ರಾರೋಹಣಕ್ಕಂ ಜೀರ್ಣೋದ್ಧಾರಕ್ಕವಾಗಿ ಬಿಟ್ಟ.... ದಾನವೆಂದರೆ ಹಿರಿಕೆರೆಯ ಕೆಳಗಿನ ಕೆಲವು ಭಾಗಗಳನ್ನು ದಾನ ನೀಡಿದ ವಿವರವಿದೆ. ಹೊಸದುರ್ಗ ತಾಲೂಕು ಬಾಗೂರು ಹೋಬಳಿ ಮಳಲಿ ಗ್ರಾಮದ ಜೋಡಿದಾರ ರಾಮಭಟ್ಟರ ಬಳಿ ದೊರೆತ ತಾಮ್ರಶಾಸನದಲ್ಲಿ ೫ ಪತ್ರಗಳಿದ್ದು, ನಾಗರಾಕ್ಷರದಿಂದ ಕೂಡಿದೆ. ಇದರಲ್ಲಿ "ಚತ್ತುರಂಗ ಪ್ರಕರ ಖರರಜಃ"[೨೯] ದೇವಾಲಯದ ರಂಗದ ಬಗ್ಗೆ ಹೇಳಿರಬಹುದುದೆನ್ನಿಸುತ್ತದೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು ತಳುಕು ಹೋಬಳಿ ಓಬಳಾಪುರ ಗ್ರಾಮದ ಸಿದ್ಧರಾಮೇಶ್ವರ ದೇವಸ್ಥಾನದ ದಕ್ಷಿಣ ದಿಕ್ಕಿನಲ್ಲಿ ಒಂದು ಶಾಸನವಿದ್ದು,[೩೦] ಈ ಶಾಸನದಲ್ಲಿ ಚಾಳುಕ್ಯ ಚಕ್ರವರ್ತಿ ಜಗದೇಕ ಮಲ್ಲನು ಕಲ್ಯಾಣವನ್ನು ಆಳ್ವಿಕೆ ನಡೆಸುತ್ತಿರುವಾಗ ಸಿರಿವೊಳಲ ಶ್ರೀರಾಮದೇವರ ಪ್ರತಿಷ್ಠೆಯಪ್ಪ ಶ್ರೀರಾಮೇಶ್ವರ ದೇವರಂಗ ಭೋಗ ರಂಗ ಸ್ಪುಟಿತ ಜೀರ್ಣೋದ್ಧಾರಕ್ಕಂ ಸ್ನಾನ ನಿವೇದ್ಯಕ್ಕಂ ಪೋಧನರಾಹಾರದಾನಕ್ಕಂ ಉದ್ಯೋಗ ರಾಮಿಯ ಪಂಡಿತರ ಕಾಲಂ ಕರ್ಚ್ಚಿಧಾರಾ ಪೂರ್ವ್ವಕಂ ಮಾಡಿ.... ಕೊಟ್ಟ ದಾನವೆಂದರೆ ಸಿರಿವೊಳಲಕೆರೆಯ ಕೆಳಗೆ ಮೊದಲ್ಗಾಲದ ಗದ್ದೆಯ ಹನ್ನೆರಡು ಖಂಡುಗದ ಬಯಲು ಮೊದಲಾದುದನ್ನು ದಾನನೀಡಿದ ವಿವರ ಶಾಸನದಲ್ಲಿದೆ. ಆದರೆ ಕಾಲದ ಬಗ್ಗೆ ತಿಳಿದುಬರುವುದಿಲ್ಲ.

ಕ್ರಿ.ಶ.೧೦೬೪ರ ಶಾಸನವು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕು ಪರಶುರಾಮಪುರ ಹೋಬಳಿ ರಾಮಸಾಗರ ಗ್ರಾಮದ ಜಟ್ಟಂಗ ರಾಮೇಶ್ವರ ಬೆಟ್ಟದ ಮೇಲೆ ಸೂರ್ಯನ ಗುಡಿಗೆ ದಕ್ಷಿಣ ಭಾಗದ ಗೋಡೆಯಲ್ಲಿದೆ.[೩೧] ಚಾಳುಕ್ಯ ದೊರೆ ವಿಜಯಾದಿತ್ಯನು ನೊಳಂಬವಾಡಿ ೩೬,೦೦೦ ಆಳುತ್ತಿರುವಾಗ ಕಂಪಿಲಿಯ ನೆಲೆವೀಡಿನೊಳು ಸುಖದಿಂದ ಆಳುವಾಗ ಶಕವರ್ಷ ೯೮೬ನೆಯ ಕ್ರೋಧಿ ಸಂವತ್ಸರದ ವೈಶಾಖ ಪುಣ್ಯಸೋಮವಾರ ದಿನದಂದು ಗ್ರಹಣ ನಿಮಿತ್ತವಾಗಿ ಶ್ರೀ ರಾಮೇಸ್ವರ ದೇವರ್ಗ್ಗೆ ನೈವೇದ್ಯಕ ಕಂಟಸ್ಪಟಿಕ ಕಂಪಜೆಕ ಅಂಗಭೋಗದ ಸೂಳೆಯರ್ಗ್ಗಮಲ್ಲಿ...... ಅಂಗಭೋಗದ ಸೂಳೆಯರಿ ಗೆಂದು ಕುಣಿಗಲ್ ಮೊದಲಾದ ಪ್ರದೇಶಗಳನ್ನು ದಾನ ನೀಡಲಾಯಿತು ಎಂಬ ವಿವರ ಶಾಸನದಲ್ಲಿದೆ.

ಇದೇ ದೇವಾಲಯದ ತಾಮ್ರಶಾಸನವು ಕ್ರಿ.ಶ.೧೩೮೭ರದ್ದಾಗಿದ್ದು, ಶ್ರೀವೀರ ಭೂಪತಿ ವೊಡೆಯರು ಜಟಾಂಗೀ ರಾಮ ಇದೇವರಿಗೆ ಅಮೃತಪಡಿ ಅಂಗರಂಗ ವೈಭೋಗಕ್ಕೆ ಕೊಟ್ಟ ಧರ್ಮಶಾಸನ....[೩೨] ಈ ದೇವಾಲಯಕ್ಕೆ ರಾಯದುರ್ಗಕ್ಕೆ ಸಲುವ ಕೆಲವು ಪ್ರದೇಶಗಳನ್ನು ಮತ್ತು ರಕ್ಕಂಜೀಯ ಹಳ್ಳಿಯನ್ನು ದಾನ ನೀಡಲಾಯಿತು ಎಂಬ ವಿವರಗಳಿವೆ.

ಶಾಸನಗಳನ್ನು ಅವಲೋಕಿಸಿದಾಗ ತಿಳಿದುಬರುವಂತೆ ಅಂಗಭೋಗದ ಸೇವೆಗೆ ಹೆಚ್ಚಿನ ದಾನದತ್ತಿಗಳು ದೊರೆತಿರುವುದು ಕಂಡುಬರುತ್ತದೆ. ದೇವಾಲಯದ ಹರವು, ವಿಸ್ತೀರ್ಣ, ಅಂತಸ್ತುಗಳಿಗೆ ಅನುಗುಣವಾಗಿ ಮತ್ತು ಆ ದೇವಾಲಯದಲ್ಲಿರುವ ಉಪ ಗರ್ಭಭಾಗಗಳಿಗೆ ಅನುಗುಣವಾಗಿ ಅಂಗಭೋಗದ ಪೂಜೆ ಇನ್ನಿತರ ಕಾರ್ಯಗಳಿಗೆ ಸಹಾಯ ಮಾಡುವ, ವೇಶ್ಯೆಯರ ಸಂಖ್ಯೆ ನಿಗದಿಯಾಗುತ್ತಿತ್ತು. ಮೇಲೆ ವಿವರಿಸಿದ ಎಲ್ಲಾ ಶಾಸನಗಳನ್ನು ಗಮನಿಸಿದರೆ ಅಂಗಭೋಗದ ಸೂಳೆಯರು ಎಷ್ಟು ಜನ ದೇವಾಲಯಗಳಲ್ಲಿ ಇರುತ್ತಿದ್ದರೆಂಬ ಉಲ್ಲೇಖಗಳು ಸಿಗುವುದಿಲ್ಲ. ಆದರೆ ಬಾಗಳಿ, ಬೇತೂರು ಶಾಸನಗಳು ೧೨ ಜನ ಅಂಗಭೋಗದ ಸೂಳೆಯರನ್ನು ದೇವಾಲಯಗಳು ಹೊಂದಿದ್ದವೆಂಬುದನ್ನು ತಿಳಿಸುತ್ತದೆ. ಇದು ಅತ್ಯಂತ ದೊಡ್ಡ ಪ್ರಮಾಣದ ಉಲ್ಲೇಖವೆಂಬುದರಲ್ಲಿ ಎರಡು ಮಾತಿಲ್ಲ. ಕಾರಣ ಅಂಗಭೋಗದ ಕಾರ್ಯಗಳೆಲ್ಲ ಕೆಲವು ಸೀಮಿತ ಕಾರ್ಯಗಳಾಗಿರುತ್ತವೆ. ಅಲ್ಲದೆ ಹೆಚ್ಚಿನ ಕಾರ್ಯವೈಖರಿ ಗರ್ಭಗುಡಿಯಲ್ಲಿ ಜರುಗದ ಕಾರಣ ಅರ್ಚಕನ ಸಹಾಯಕ್ಕೆ ಒಬ್ಬರು ಅಥವಾ ಇಬ್ಬರ ಅಗತ್ಯ ಮಾತ್ರವಿರುತ್ತದೆ.

ಆದರೆ ದಾನಿಗಳ ಸಂಖ್ಯೆ ಹೆಚ್ಚಾಗಿರುವುದು, ಆರ್ಥಿಕ ಸಮೃದ್ಧಿ ಅಧಿಕವಾಗಿರುವುದರಿಂದಲೇ ಅಧಿಕ ಸಂಖ್ಯೆಯ ಸೂಳೆಯರ ಇರುವಿಕೆಯು ಈ ಶಾಸನಗಳಲ್ಲಿ ಕಾಣಿಸಿಕೊಳ್ಳಲು ಕಾರಣವಿರಬೇಕೆನ್ನಿಸುತ್ತದೆ. ಡಾ.ಚೆನ್ನಕ್ಕ ಎಲಿಗಾರ ಅವರು ಕರ್ನಾಟಕದ ಸ್ತ್ರೀ ಸಮಾಜ ಕೃತಿಯಲ್ಲಿ ಅಂಗಭೋಗದ ಸೂಳೆಯರಿಗೆ ತೆರೆದ ಮರೆಯ ಸೂಳೆ, ತೆರೆಯೊಳಗಿನ ಸೂಳೆ, ಪಿರಿಯರವಾಳ ಸೂಳೆ, ಪೆರ್ಗಡೆವಾಳ ಸೂಳೆ, ಪರುಕೆರಗ ಭೋಗದ ಸೂಳೆ ಎಂಬ ಪರ್ಯಾಯ ನಾಮಗಳಿದ್ದವೆಂದು ತಿಳಿಸುತ್ತಾರೆ.

ಅಂಗಭೋಗದ ಸೂಳೆಯರು ನಿರ್ವಹಿಸಿದ ಕಾರ್ಯಗಳೇನು? ಎಂಬ ಉಲ್ಲೇಖಗಳು ನಮಗೆ ಯಾವ ಶಾಸನದಲ್ಲಿಯೂ ದೊರೆಯುವುದಿಲ್ಲ. ಆದರೆ ಅಂಗಭೋಗದ ಕಾರ್ಯಕಲಾಪಗಳಿಗೆ ಸಹಾಯ ಮಾಡುತ್ತಿದ್ದರು ಎಂಬುದು ಅವರ ಇರುವಿಕೆಯಿಂದ ಸ್ಪಷ್ಟವಾಗುತ್ತದೆ.

ರಂಗಭೋಗವು ಗರ್ಭಗುಡಿಯ ಸ್ಥಾಪಿತ ಶಿಲ್ಪದ ಎದುರು ರಂಗಮಂಟಪದಲ್ಲಿ ನಡೆಯುವ ಸೇವೆಯಾಗಿರುತ್ತದೆ. ಭಗವಂತನೆದುರು ನವರಂಗದಲ್ಲಿ ಕಲಾವಿದರು ಭಕ್ತಿ-ಭಾವಗಳಿಂದ ಪರವಶರಾಗಿ ದೇವರನ್ನು ಹಾಡಿ, ಹೊಗಳಿ, ನೃತ್ಯ ಪ್ರದರ್ಶಿಸುತ್ತಾರೆ. ತಮ್ಮ ಭಕ್ತಿಯನ್ನು ಕಲೆಯ ಮೂಲಕ ದೇವರಿಗೆ ಅರ್ಪಿಸುವುದು ರಂಗಭೋಗವಾಗಿರುತ್ತದೆ. ಕ್ರಿ.ಶ.೬ನೇ ಶತಮಾನದಲ್ಲಿ ಪ್ರಾರಂಭಗೊಂಡು ಹತ್ತನೇ ಶತಮಾನದ ವೇಳೆಗೆ ಹೆಚ್ಚು ವ್ಯಾಪಕವಾಗಿ ಬೆಳೆದು ಬಂದಂತೆ ತಿಳಿದುಬರುತ್ತದೆ. ಗರ್ಭಗುಡಿಯ ಮುಂದಿನ ಮಂಟಪವಾದ ನವರಂಗ ಮಂಟಪದಲ್ಲಿ ನಡೆಯುವ ಕಾರ್ಯಗಳನ್ನು ಹಲವಾರು ಸ್ತ್ರೀಯರು ಸೇರಿ ನಿರ್ವಹಿಸುತ್ತಿದ್ದರು. ಶಾಸನಗಳು ರಂಗಮಂಟಪದ ಕಾರ್ಯಗಳನ್ನು ನಿರ್ವಹಿಸುವವರನ್ನು ಸೂಳೆಯರು ಅಥವಾ ವೇಶ್ಯೆಯರೆಂದು ಕರೆದಿವೆ. ಆದರೆ ಇಂದಿನ ವೇಶ್ಯೆಯರಿಗೆ ಅವರನ್ನು ಹೋಲಿಸಲು ಸಾಧ್ಯವಿಲ್ಲ. ಕಾರಣ ಅವರು ಕಲೆಯನ್ನು ತಮ್ಮ ಉಸಿರಾಗಿಸಿಕೊಂಡು ಸಮಾಜದಲ್ಲಿ ಗೌರವಯುತವಾಗಿ ಬಾಳುತ್ತಿದ್ದರು. ಅಂದರೇ ಹಣಕ್ಕಾಗಿ ವೇಶ್ಯಾವೃತ್ತಿ ನಡೆಸುತ್ತಿದ್ದವರು ಅಂದು ಇರಲಿಲ್ಲವೆಂದಲ್ಲ, ಹಣಕ್ಕಾಗಿ ವೃತ್ತಿ ನಡೆಸುವವರು ದೇವಾಲಯದ ವ್ಯಾಪ್ತಿಯಲ್ಲಿ ಬರುವ ಸೂಳೆಯರಲ್ಲವೆಂಬುದು ಸ್ಪಷ್ಟವಾದ ಸಂಗತಿಯಾಗಿದೆ.

ಮೇಲೆ ಗಮನಿಸಿದ ಯಾವ ಶಾಸನಗಳಲ್ಲಿಯೂ ಸೂಳೆಯರು ನಿರ್ವಹಿಸಿದ ಕಾರ್ಯಗಳ ಬಗ್ಗೆ ತಿಳಿದುಬರುವುದಿಲ್ಲ. ಆದರೆ ಸೂಡಿಯ ಅಕ್ಕಾದೇವಿ ನಿರ್ಮಿಸಿದ ಅಕ್ಕೇಶ್ವರ ದೇವಾಲಯ ಮತ್ತು ನಾಗದೇವಯ್ಯ ಕಟ್ಟಿಸಿದ ನಾಗೇಶ್ವರ ದೇವಾಲಯಗಳು ಸೂಳೆಯರು ನಿರ್ವಹಿಸಿದ ಕಾರ್ಯಗಳ ಬಗ್ಗೆ ಹೇಳುತ್ತವೆ.[೩೩] ಇವುಗಳ ಆಧಾರದ ಮೇಲೆ ಡಾ.ಚೆನ್ನಕ್ಕ ಎಲಿಗಾರ ಅವರು ಕರ್ನಾಟಕದ ಸ್ತ್ರೀ ಸಮಾಜ ಕೃತಿಯಲ್ಲಿ ಕಂಬದ ಸೂಳೆಯರು, ಮಾಡದ ಸೂಳೆಯರು, ಚಾಮರದ ಸೂಳೆಯರು, ಪಾತ್ರದ ಸೂಳೆಯರು, ಓಲಗದ ಸೂಳೆಯರೆಂದು ವರ್ಗೀಕರಿಸಿದ್ದಾರೆ.

೩.೨. ರಂಗಭೋಗದ ಸೂಳೆಯರ ವಿಧಗಳು

ಕಂಬದ ಸೂಳೆಯರು

ರಂಗಭೋಗದ ನರ್ತಕಿಯರಲ್ಲಿ ಕಂಬದ ಸೂಳೆಯರು ಒಂದು ಭಾಗವಾಗಿದ್ದು. ದೇವಾಲಯದ ರಂಗಭೋಗದಲ್ಲಿ ಜರುಗುತ್ತಿದ್ದ ನೃತ್ಯ ಮತ್ತಿರ ಸಂದರ್ಭದಲ್ಲಿ ಕಂಬಗಳ ಬಳಿ ಅಲಂಕಾರಕ್ಕಾಗಿ ನಿಲ್ಲುತ್ತಿದ್ದವರು. ಇವರಾಗಿರಬೇಕು ಎಂದು ತಿಳಿದುಬರುತ್ತದೆ. ದೇವಾಲಯದ ಒಳಗಡೆ ಕಂಬಗಳನ್ನು ನಿಲ್ಲಿಸಿ ಕಂಬಗಳಿಗೆ ದಾನ ನೀಡಿದ ವಿವರ ಐತಾಳ ಶಾಸನದಲ್ಲಿದ್ದು, ಆರನೇ ವಿಕ್ರಮಾದಿತ್ಯನ

ರಾಣಿ ಮಲಯವತಿ ಅರಸಿಯು ಕಂಬಗಳನ್ನು ನಿರ್ಮಿಸಿ ದಾನ ನೀಡಿದಳೆಂಬ ವಿವರ ಏತಾಳ ಶಾಸನದಿಂದ ತಿಳಿಯುತ್ತದೆ.

ದಾನವು ಕೆಲವೊಮ್ಮೆ ಒಬ್ಬೊಬ್ಬರಿಗೆ ಪ್ರತ್ಯೇಕವಾಗಿರುತ್ತಿತ್ತು. ಅಥವಾ ಒಟ್ಟಿಗೆ ಸೇರಿಸಿಯಾದರೂ ದಾನ ನೀಡುವ ವ್ಯವಸ್ಥೆ ಇರುತ್ತಿತ್ತು. ಸೂಡಿ ಶಾಸನವು ಬಲವಕ್ಕದೆಡವಕ್ಕದ ಕಂಬದ ಸೂಳೆಯರ್ ನಾಲ್ವರ್ಗ್ಗಂ ಮತ್ತರ್.....[೩೪]ಎಂಬ ಶಾಸನದ ಉಲ್ಲೇಖದ ಮಾತುಗಳು ಕಂಬದ ಸೂಳೆಯರ ಬಗ್ಗೆ ಹೇಳುತ್ತವೆ.

ಮಾಡದ ಸೂಳೆಯರು

ರಂಗಭೋಗದಲ್ಲಿ ಮಾಡದ ಸೂಳೆಯರ ಬಗ್ಗೆ ಶಾಸನದ ಉಲ್ಲೇಖಗಳು ಅತ್ಯಂತ ವಿರಳವಾಗಿ ಕಂಡುಬರುತ್ತವೆ. 'ಮಾಡ' ಎಂಬ ಪದಕ್ಕೆ ಮಹಡಿ ಎಂಬರ್ಥವಿದ್ದು, ದೇವಾಲಯದಲ್ಲಿ ಗರ್ಭಗೃಹದ ಬಾಗಿಲ ಎರಡೂ ಬದಿಯಲ್ಲಿ ಅಲಂಕಾರಕ್ಕಾಗಿ ನಿಲ್ಲುತ್ತಿದ್ದವರು ಮಾಡದ ಸೂಳೆಯರಾಗಿರಬೇಕೆನ್ನಲಾಗಿದೆ. ಸೂಡಿಯ ತ್ರುಟಿತ ಶಾಸನವೊಂದು ದೆಸೆಯ ಮಾಡದ ಸೂಳೆ ನಾಗಲತೆಗೆ ೧೨ ಮತ್ತರು ಭೂಮಿಯನ್ನು ದತ್ತಿಯಾಗಿ ನೀಡಲಾಗಿದೆ ಎಂದು ತಿಳಿಸುತ್ತದೆ.

ಚಾಮರ ಸೂಳೆಯರು

ದೇವಾಲಯದಲ್ಲಿ ದೇವರ ಚಾಮರದ ಸೇವೆ ಮಾಡುವ ಸ್ತ್ರೀಯರು ಇವರಾಗಿರುತ್ತಾರೆ. ಸೂಡಿಯ ಶಾಸನವು "ಬಲವಕ್ಕಡೆಡವಕ್ಕದ" ಕಂಬದ ಸೂಳೆಯರಂತೆ, ಬಲವಕ್ಕದೆಡಕ್ಕದ ಚಾಮರದ ಸೂಳೆಯರ"[೩೫] ಬಗ್ಗೆ ಹೇಳುತ್ತದೆ. ಜಾತ್ರೆ, ಉತ್ಸವಗಳ ಸಮಯದಲ್ಲಿ ಇಂದಿಗೂ, ದೇವರಿಗೆ ಚಾಮರ ಹಿಡಿದುಕೊಳ್ಳುವ ವ್ಯವಸ್ಥೆ ಮುಂದುವರಿದುಕೊಂಡು ಬಂದಿದೆ. ಕೆಲವು ಕಡೆ ಗಂಡಸರೇ ಇಂದು ಚಾಮರ ಹಿಡಿಯುವ ವ್ಯವಸ್ಥೆ ಇದೆ. ಮತ್ತೆ ಕೆಲವು ಕಡೆ ಇಂದಿಗೂ ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳಲ್ಲಿ ಸ್ತ್ರೀಯರೇ ಚಾಮರ ಹಿಡಿಯುತ್ತಾರೆ. ಆದರೆ ಇವರು ಸ್ವ ಇಚ್ಛೆಯಿಂದ ನಿರ್ವಹಿಸಬೇಕು. ಇವರಿಗೆ ಇಂದು ಯಾವ ದಾನ, ದತ್ತಿಗಳನ್ನೂ ಸಹ ಕೊಡಲಾಗುತ್ತಿಲ್ಲ. ಆದರೆ ರೈತರು ತಾವು ಬೆಳೆದ ಕಾಳುಗಳನ್ನು ಸುಗ್ಗಿಯ ವೇಳೆ ಅಲ್ಪಪ್ರಮಾಣದಲ್ಲಿ ಕೊಡುವ ವ್ಯವಸ್ಥೆ ಇಂದಿಗೂ ರೂಢಿಯಲ್ಲಿದೆ. ಜಾತ್ರೆ, ಉತ್ಸವಗಳ ಸಮಯದಲ್ಲಿ ಊರಿನ ಮುಖಂಡರೋ, ಶ್ರೀಮಂತರೋ ಸ್ವಲ್ಪ ಕಾಣಿಕೆ ನೀಡುವ ಪರಿಪಾಠ ಮಾತ್ರ ಇಂದಿಗೂ ರೂಢಿಯಲ್ಲಿದೆ. ಅದು ಪುರುಷರಿರಲಿ ಅಥವಾ ಸ್ತ್ರೀಯರೇ ಇರಲಿ ಸ್ವಲ್ಪ ಹಣ ನೀಡುವ ವ್ಯವಸ್ಥೆ ಇಂದಿಗೂ ಸಾಗಿ ಬಂದಿದೆ.

ಓಲಗದ ಸೂಳೆಯರು

ರಂಗಭೋಗದಲ್ಲಿ ಓಲಗದ ಸೂಳೆಯರು ದೇವರ ಪ್ರೀತ್ಯರ್ಥವಾಗಿ ದೇವರ ನಾಮಸ್ಮರಣೆ, ದೇವರ ಸ್ತುತಿಗಳ ಪರಾಯಣ ಮಾಡುವವರಾಗಿರುತ್ತಾರೆ. ಇವರು ಹಾಡುವವರಾಗಿದ್ದು, ಈ

ಮೂಲಕ ದೇವರಿಗೆ ಸಂಗೀತ ಸೇವೆ ಸಲ್ಲಿಸುತ್ತಾರೆ. ಇವರುಗಳಲ್ಲಿ ವಂಶಿಗ(ಕೊಳಲು ನುಡಿಸುವವರು) ಪರೆಕಾರ(ಹಲಗೆ ಬಡಿಯುವವರು) ಮದ್ದಳೆ(ಬೃದಂಗ ಬಾರಿಸುವವರು) ಎಂಬುವವರಿರುತ್ತಾರೆ. ಪಟ್ಟದ ಕಲ್ಲಿನ ಶಾಸನದ ಗಾಂಧರ್ವ, ಮಣ್ಣೆ ಶಾಸನದ ಗೀತ ವಾದ್ಯ, ನೃತ್ಯ ದಾಖಲೆಗಳು ಸಂಗೀತದ ಇರುವಿಕೆ, ಪರಂಪರೆಯನ್ನು ಹಿಂದಕ್ಕೆ ಕೊಂಡೊಯ್ಯುತ್ತವೆ. ಕಲಿದೇವರ ತೊತ್ತು ನಾವ್ವೆಯ ಮಗಳು ಹಾಡುವ ಕಾಮವ್ವೆಯ.....[೩೬] ಉಲ್ಲೇಖ ಕ್ರಿ.ಶ.೧೦೧೮ರ ಬಾಗಳಿ ಶಾಸನದಲ್ಲಿ ದೊರೆಯುತ್ತದೆ.

ಕಂಬೇಶ್ವರ ದೇವರ ದೇವಾಲಯದ ಓಲಗದ ಸೂಳೆಯರಿಗೆ ೨೪ ಮತ್ತರು ಭೂಮಿಯನ್ನು ದಾನ ನೀಡಲಾಗಿದೆ ಎಂದು ತಿಳಿಸಿರುವುದನ್ನು ಗಮನಿಸಿದರೆ ಅಂದಿನ ಸಮಾಜವು ಕಲೆಗೆ ನೀಡಿದ ಮನ್ನಣೆ ಸ್ಥಾನಮಾನಗಳು ಎಂತಹವುಗಳಾಗಿದ್ದವೆಂಬುದು ತಿಳಿಯುತ್ತದೆ.

ಪಾತ್ರದ ಸೂಳೆಯರು

ದೇವಾಲಯದ ರಂಗಭೋಗದ ಸೇವೆಯಲ್ಲಿ ಬಹುಮುಖ್ಯವಾಗಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದವರು ಪಾತ್ರದವರಾಗಿ ಕಂಡುಬರುತ್ತಾರೆ. ನೃತ್ಯಗೀತಾದಿಗಳಲ್ಲಿ ಪರಿಣಿತಿ ಹೊಂದಿದವರು ಇವರಾಗಿದ್ದರು. ಕಲಾ ಸರಸ್ವತಿ ಎಲ್ಲರಿಗೂ ಸಿದ್ದಿಸುವಳಲ್ಲ. ಕಲೆಯಲ್ಲಿ ಪರಿಣಿತಿ ಹೊಂದಬೇಕಾದರೆ ಅದರ ಹಿಂದೆ ಪ್ರಮಾಣಿಕ ಪ್ರಯತ್ನ, ಪರಿಶ್ರಮವಡಗಿರುತ್ತದೆ. ಅಲ್ಲದೆ ಆಸಕ್ತಿ ಶ್ರದ್ಧೆಯಿಂದ ಕಲಿಯುವ ವಿದ್ಯೆ ಇದಾಗಿರುತ್ತದೆ. ಇಂದಿನ ನೃತ್ಯಗಾರ್ತಿಯರಿಗೆ ಹೋಲಿಸಿದರೆ ಅಂದಿನ ಪಾತ್ರದವರ ನೃತ್ಯಕ್ಕೆ ವಿಶೇಷ ಪ್ರಾತಿನಿಧ್ಯವಿತ್ತೆಂಬುದು ಪಾತ್ರದವರಿಗೆ ನೀಡಿರುವ ದಾನ, ದತ್ತಿಗಳಿಂದ ಶಾಸನದ ಉಲ್ಲೇಖಗಳಿಂದ ತಿಳಿದುಬರುತ್ತದೆ. ಪಾತ್ರದವರು ಸಾಮಾನ್ಯವಾಗಿ ಆ ಊರಿನವರೇ ಆಗಿರುತ್ತಿದ್ದರು. ಅಲ್ಲದೆ ದೇವಾಲಯಕ್ಕೆ ಸಂಬಂಧಿಸಿದ ಊರಿನವರೇ ಪಾತ್ರದವರ ಕಾರ್ಯಗಳನ್ನು ನಿರ್ಧರಿಸುತ್ತಿದ್ದಿರಬೇಕೆಂದು ತಿಳಿದುಬರುತ್ತದೆ. ಪಾತ್ರದವರು ಜೀವನ ಸಾಗಿಸಲು ಊರಿನ ಅಕ್ಕಸಾಲಿ, ಬಡಗಿ, ಕಂಚುಗಾರ, ದತ್ತಿ ಬಿಟ್ಟುಕೊಡಬೇಕಿತ್ತು. ಊರ ವಿಲಾಸಿನೀ ವಿರಚಿತ ನೃತ್ಯ ಗೀತಗಳನ್ನು ಉಲ್ಲೇಖಿಸುವ ಕ್ರಿ.ಶ.೮೦೨ರ ಮಣ್ಣೆ ತಾಮ್ರಪಟವು ಸೂಳೆಯರ ಬಗ್ಗೆ ಸ್ಪಷ್ಟ ಮಾಹಿತಿಯನ್ನೊದಗಿಸುತ್ತದೆ.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕು ಬಾಗೂರು ಹೋಬಳಿ ನೀರಗುಂದ ಗ್ರಾಮದ ಸಿದ್ದೇಶ್ವರ ದೇವಾಲಯದ ಬಳಿ ನೆಟ್ಟ ಶಾಸನವು ಕ್ರಿ.ಶ.೧೦೬೫ರದ್ದಾಗಿದ್ದು,[೩೭] ಹೊಯ್ಸಳ ದೊರೆ ಬಲ್ಲಾಳನ ಪಾದಾರಾಧಕರಾದ ನಲ್ಲೆನೆಟ್ಟಿ ಎಂಬುವವರು ಶ್ರೀ ಸಿದ್ಧನಾಥ ದೇವರಿಗೆ ಪಾತ್ರ ಪಾಉಳಭೋಗಕ್ಕಂ ಮಾಡಿ ಬಿಟ್ಟ ದತ್ತಿ ಬೇವಿನಹಳ್ಳಿ ಹಿರಿಯಕೆಱೆ ಕೆಳಗೆ..... ಸಿದ್ಧನಾಥ ದೇವರಿಗೆ ಹಾಡುವವರರಿಗೆಬೇವಿನ ಹಳ್ಳಿಯ ಹಿರಿಯಕೆಱೆಯ ಕೆಳಗಿನ ಕೆಲವು ಭಾಗಗಳನ್ನು ದಾನ, ದತ್ತಿ ನೀಡಿದ ವಿವರವಿದೆ.

ಕ್ರಿ.ಶ.೧೨೨೦ರ ಶಾಸನವು ಹೊಳಲ್ಕೆರೆ ತಾಲೂಕು ಬಿದುರ್ಗ ಹೋಬಳಿ ಯಮ್ಮಿಗನೂರ ಕಲ್ಲೇಶ್ವರ ದೇವಾಲಯದ ಕೈಸಾಲೆಯ ದಕ್ಷಿಣ ಗೋಡೆಯಲ್ಲಿದೆ.[೩೮] ಹೊಯ್ಸಳರ ಆಳ್ವಿಕೆಯ ಕಾಲದಲ್ಲಿ ಅಂದಿನ ಬಿದುರ್ಗ ಹೋಬಳಿಯ ಸಮಸ್ತ ಪ್ರಭುಗಾವುಂಡಗಳು ಅಧಿಕಾರಿ ರಾಘವ ದೇವಪಂಪಯ್ಯರು ಶ್ರೀ ಸ್ವಯಂಭು ಕಲಿದೇವರ ಅಂಗಭೋಗ ರಂಗಭೋಗ ಪಾತ್ರ ಪಾವುಳ ಚೈತ್ರ ಪವಿತ್ರ ಸ್ಫುಟಿತ ಜೀರ್ಣೋದ್ಧಾರ.....ಕ್ಕೆ ನಂದಿಹಳ್ಳಿಯನ್ನು ದಾನ ನೀಡಿದ ವಿವರಿವಿದೆ.

ಚಿತ್ರದುರ್ಗ ಜಿಲ್ಲೆಯ ಗಾರೇಹಟ್ಟಿ ಗ್ರಾಮದ ಚೋಳೇಶ್ವರ ದೇವಸ್ಥಾನದ ಒಳಗಡೆ ನೆಟ್ಟ ಶಾಸನದಲ್ಲಿ ಚಾಳುಕ್ಯ ಚಕ್ರವರ್ತಿ ತ್ರಿಭುವನ ಮಲ್ಲದೇವರು ಜಯಂತೀ ಪುರವನ್ನು ಆಳುತ್ತಿದ್ದನು. ಇವನ ಮಹಾಮಂಡಳೇಶ್ವರ ಪುಣ್ಯದೇವನಾಗಿದ್ದನು. ಇವನ ಮಹಾಸಾಮಂತ ಉದಯಾದಿತ್ಯನಾಗಿದ್ದನು. ಇವನು ಧರ್ಮಕಥಾ ಪ್ರಸಂಗದಿಂದ ಲಿಂಗಮಹಾತ್ಮೆ ಕೇಳಿ ಕಲ್ಲದೇಗುಲವನ್ನು ಕಟ್ಟಿಸಿದನು. ಅಲ್ಲದೆ "ಶ್ರೀ ಚೋಳೇಶ್ವರದೇವರಂಗಭೋಗಕ್ಕಂ ಸ್ನಾನನೈವೇದ್ಯಕಂ ಚೈತ್ರ ಪವಿತ್ರಕ್ಕಂ ಪಾತ್ರ ಪಾವುಳಕಂ ಪೋಧನರಾಹಾರ ದಾನಕ್ಕಂ ಖಂಡ ಸ್ಫುಟಿತ ಜೀರ್ಣೋದ್ಧಾರಕಂ......"[೩೯] ಹೊಸಗೆರೆಯ ಕೆಳಗಿನ ಕೆಲವು ಭಾಗಗಳನ್ನು ದಾನ ನೀಡಿದ ವಿವರವಿದೆ.

ಚಿತ್ರದುರ್ಗ ಬೆಟ್ಟದ ಮೇಲೆ ಶೃಂಗಾರ ತೋಟದಲ್ಲಿ ಗೋಪಾಲಕೃಷ್ಣದೇವರ ಹೊಂಡಕ್ಕೆ ದಕ್ಷಿಣ ಕಡೆ ಬಿದ್ದಿರುವ ಶಾಸನ ದೊರೆತಿದ್ದು,[೪೦] ಹೊಯ್ಸಳ ವೀರಬಲ್ಲಾಳನ ಅರಮನೆಯ ಮಹಾಪ್ರಧಾನ ರಾಮೆಯ ದಂಡನಾಯಕನಾಗಿದ್ದನು. ಇವನ ಮಗ ಹಿರಿಯಬಲ್ಲಪ್ಪ ದಂಡನಾಯಕನಾಗಿದ್ದು, ಇವನ ಬೆಮ್ಮತ್ತನೂರನ್ನು ಆಳುತ್ತಿದ್ದನು. ಆಗ ಬೆಂಮ್ಮತ್ತನೂರ ಗೋಪಾಳ ದೇವರಿಗೆ ಅಮ್ರಿತಪಡಿ ಅಂಗಭೋಗ ಪಾತ್ರ ಪಾವುಡವೊಳ.......ಗಳಿಗೆ ಬೆಂಮ್ಮತ್ತೂರ ನಾಡಿನ 'ನಗರೇಜಿ' ಎಂಬ ಪ್ರದೇಶವನ್ನು ದಾನ ನೀಡಿದ ವಿವರವಿದೆ. ಹೊಯ್ಸಳ ದೇವಾಲಯಕ್ಕೆ ಸಂಬಂಧಿಸಿದಂತೆ ಮಣಿಗಾರ ಮಾದವ್ವೆ, ಆನೆಯ ಮಾಳವ್ವೆ, ನಾಗವ್ವೆ, ಚಂಗವ್ವೆ, ಗೋಪವ್ವೆ ಪಾತ್ರದ ಚೆಣ್ಣಯನ ದೇವವ್ವೆ, ವಿಸ್ಸವೆ, ಲಖವೆ ಮುಂತಾದ ಹೆಸರುಗಳ ಉಲ್ಲೇಖಿಸಿಗುತ್ತದೆ. ಅಲ್ಲದೆ ನವರಂಗ ಅಥವಾ ರಂಗ ಮಂಟಪದಲ್ಲಿ ಇವರು ತಮ್ಮ ನೃತ್ಯ ಪ್ರದರ್ಶನವನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತದೆ.

ಸೂಳೆಯರು

ಭಾರತೀಯ ಸಮಾಜದಲ್ಲಿ ವೇದಗಳ ಪರಂಪರೆಯಿಂದಲೂ ಸೂಳೆ ಪರಂಪರೆ ಸಾಗಿಬಂದಿದೆ. ಋಗ್ವೇದದಲ್ಲಿ ಸಾಧಾರಣ ಜಾರಾ, ನಟಿಯರು ಕಾಣಿಸುತ್ತಾರೆ. ಇವರು ಅಪ್ಸರೆಯ ವಂಶದವರೆಂದು ಸ್ಕಂದ ಪುರಾಣ ತಿಳಿಸುತ್ತದೆ. ದೇವತೆ ಮತ್ತು ದಾನವರಿಗೆ ಯುದ್ಧ ಜರುಗಿದಾಗ ದೇವರ ಪತ್ನಿಯರು ಮಣಿದು ರಾಕ್ಷಸರ ಬಲತ್ಕಾರಕ್ಕೆ ಮಣಿಯುತ್ತಾರೆ. ಆಗ ದೇವೇಂದ್ರ ನೀವು ಅರಮನೆ

ಮತ್ತು ದೇವಾಲಯಗಳಲ್ಲಿ ಭಕ್ತಿಯಿಂದ ವೇಶ್ಯಾಧರ್ಮವನ್ನು ಅನುಸರಿಸಿ[೪೧] ಎಂದು ಹೇಳುತ್ತಾನೆ ಎಂದು ಮತ್ಸ್ಯಪುರಾಣ ತಿಳಿಸುತ್ತದೆ.

ಚೆನ್ನಕ್ಕ ಎಲಿಗಾರರವರು ಶಾಸನಗಳಲ್ಲಿ ಸ್ತ್ರೀ ಸಮಾಜಕೃತಿಯಲ್ಲಿ ವ್ಯಕ್ತಿ, ಸೂಳೆ, ದೇವಸೂಳೆ, ಸಮಾಜ ಸೂಳೆ ಎಂದು ಹೆಸರಿಸಿದ್ದಾರೆ. ವ್ಯಕ್ತಿ ಸೂಳೆಯರು ವಿವಾಹಿತ ಅಥವಾ ಅವಿವಾಹಿತ ಪುರುಷರೊಂದಿಗೆ ದೈಹಿಕ ಸಂಬಂಧ ಹೊಂದಿರುತ್ತಿದ್ದವರಾಗಿದ್ದರು. ಇವರಲ್ಲಿ ಕೆಲವರು ವಂಶಪಾರಂಪರ್ಯವಾಗಿ ವೃತ್ತಿಯನ್ನು ಅನುಸರಿಸಿಕೊಂಡು ಬರುತ್ತಿದ್ದರು. ಮತ್ತೆ ಕೆಲವರು ವಂಶ ಪಾರಂಪರ್ಯವಾಗಿ ಬಂದವರಲ್ಲದವರಿರು ತ್ತಿದ್ದರು. ಇವರುಗಳಲ್ಲಿ ವಿವಾಹವಾಗದವರು ಇರುತ್ತಿದ್ದರು. ಮತ್ತೆ ಕೆಲವರು ಗಂಡನನ್ನು ಅಗಲಿದವರು ಇರುತ್ತಿದ್ದರು. ಅಲ್ಲದೆ ಗಂಡ ಸತ್ತ ಹೆಂಡತಿಯರೂ ಇರುತ್ತಿದ್ದರು.

ಪುರುಷ ಕೇಂದ್ರಿತ ಸಮಾಜದಲ್ಲಿ ಹೆಣ್ಣು ಪುರುಷನ ಕಪಿಮುಷ್ಠಿಯಲ್ಲಿ ಬಂಧಿತಳಾಗಿರುತ್ತಾಳೆ. ಅವನ ದೌರ್ಜನ್ಯ, ದಬ್ಬಾಳಿಕೆಯಿಂದ ಪ್ರಕೃತಿಯ ಅಂದವಾದ ವಸ್ತುವೆಲ್ಲ ತನ್ನದೆಂಬ ವಿಕೃತಿ ಮನೋಭಾವದವನು. ಪುರುಷನ ಪ್ರತಿಷ್ಠೆಯ ಸಂಕೇತವಾಗಿ ಬಂದ ಈ ವ್ಯವಸ್ಥೆಗೆ ಬಲಿಯಾದ ಹೆಣ್ಣುಗಳೆಲ್ಲ ತಳಸಮುದಾಯದವರೇ ಆಗಿರುತ್ತಿದ್ದರು.

ಹಿಂದಿನಿಂದಲೂ ಈ ವ್ಯವಸ್ಥೆ ಎಲ್ಲಾ ವರ್ಗಗಳಲ್ಲೂ ಮನ್ನಣೆ ಪಡೆದುಕೊಂಡೇ ಸಾಗಿಬಂದಿದೆ. ಮೊದಲು ಈ ವ್ಯವಸ್ಥೆ ರಾಜಮನೆತನದವರಲ್ಲಿ ಮೇಲ್ವರ್ಗದ ಪುರುಷರಲ್ಲಿ ಹೆಚ್ಚಿನ ಪ್ರಮಾಣದಲ್ಲಿತ್ತು. ಆದರೆ ಈ ವ್ಯವಸ್ಥೆಯ ಸುಳಿಯಲ್ಲಿದ್ದವಳು ಸಾಮಾನ್ಯ ವರ್ಗದ ಸ್ತ್ರೀಯಾಗಿರುತ್ತಿದ್ದುದರಿಂದ ಅವಳಿಗೆ ಸಮಾಜದಲ್ಲಿ ಗೌರವ ಮನ್ನಣೆಗಳು ದೊರೆಯುತ್ತಿರಲಿಲ್ಲ.

ರಾಜರ ಆಳ್ವಿಕೆಯಲ್ಲಿ ರಾಜರುಗಳು ಅನ್ಯ ಸಾಮ್ರಾಜ್ಯವನ್ನು ಮುತ್ತಿ ಯುದ್ಧ ಮಾಡಿ, ಆ ಸಾಮ್ರಾಜ್ಯವನ್ನೆಲ್ಲ ವಶಪಡಿಸಿಕೊಳ್ಳುತ್ತಿದ್ದರು. ಆಗ ಅಲ್ಲಿನ ಎಲ್ಲಾ ಸಂಪತ್ತಿನೊಂದಿಗೆ ರಾಜನಿಗೆ ಸ್ತ್ರೀ ಸಂಪತ್ತು ಅವನ ವಶವಾಗುತ್ತಿತ್ತು. ಅಲ್ಲಿನ ಎಲ್ಲಾ ಸ್ತ್ರೀಯರನ್ನು ತನ್ನ ಅರಮನೆಯಲ್ಲಿ ತಂದಿಟ್ಟುಕೊಂಡು ಸೂಳೆಯರನ್ನಾಗಿ ಮಾಡಿಕೊಳ್ಳುತ್ತಿದ್ದನು. ದುರ್ದೈವವೆಂದರೆ ಹೆಣ್ಣಾದವರು ರಾಜನೆಂಬ ಮಾತ್ರಕ್ಕೆ ತನಗಿಷ್ಟವಿರಲಿ ಬಿಡಲಿ ಅವನೊಂದಿಗೆ ಸಂಬಂಧ ಹೊಂದಬೇಕಿತ್ತು.

ಸೂಳೆಯರೊಂದಿಗೆ ಸಂಬಂಧ ಹೊಂದಿದ ಅರಸರಿಗೆ ಶಾಸನಗಳು 'ವಿಟಚಕ್ರವರ್ತಿ, ವೇಶ್ಯಾಭುಂಜಕ, ವಾರವಧೂಜನಕಾಮ ಇತ್ಯಾದಿ ಬಿರುದುಗಳು ಇದ್ದವೆಂದು ತಿಳಿಸುತ್ತವೆ. ಚಿತ್ರದುರ್ಗವನ್ನಾಳಿದ ನಾಯಕರುಗಳು 'ಬಂಗಾರದ ಸಂಬಂಧ' ಹೊಂದಿರುವುದರ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಸೂಳೆಯರು ರಾಜನಿಗೆ ಇಷ್ಟವಾದ ಭೋಗದ ವಸ್ತು. ಆದರೆ ಸೂಳೆಯರನ್ನವನು ಮಡದಿಯರನ್ನಾಗಿ ಮಾಡಿಕೊಳ್ಳಲಾರ. ಅವಳು ಅವನ ತನು, ಮನಗಳಿಗಷ್ಟೆ. ಅರಮನೆಯ ಪಟ್ಟಕ್ಕಲ್ಲ. ಬಾದಾಮಿ ಚಾಲುಕ್ಯ ಮನೆತನಕ್ಕೆ ಸಂಬಂಧಿಸಿದ ಸೂಳೆಯರು ಕರ್ನಾಟಕದ

ಉಲ್ಲೇಖಿತ ಮೊದಲ ರಾಜ್ಯ ವೇಶ್ಯೆಯರೆಂದು ಗುರುತಿಸಲ್ಪಟ್ಟಿದ್ದಾರೆ. ಶಾಸನಗಳು 'ಸೂಳೆಯರ್' ಎಂದು ಕರೆದಿವೆ. ಪೊಡ್ಡಿ, ಬೊಡ್ಡಿ, ಪೊದ್ದಿ, ಪೊಟಿ, ಪೋಟಿ, ಇವು ಸೂಳೆಯರ ವಂಶವನ್ನು ಸೂಚಿಸುವ ಹೆಸರುಗಳಾಗಿದ್ದವು. ಈ ಸೂಳೆಯರು ಒಂದು ಕಡೆ ರಾಜನಿಗೆ ಪ್ರಿಯ ಭೋಗದ ವಸ್ತುವಾದರೆ ಮತ್ತೆ ಕೆಲವು ಕಡೆ ದೇವಾಲಯದ ಕಾರ್ಯಕಲಾಪಗಳಲ್ಲಿ ಭಾಗವಹಿಸಿಯೂ ಇರಬಹುದು. ಚಾಲುಕ್ಯ ಚಕ್ರವರ್ತಿ ಚಂದ್ರಾದಿತ್ಯನ ಪ್ರಿಯಮಹಿಷಿಯಾದ ವಿಜಯಮಹಾದೇವಿಗೆ ಬೊಡಿಪೊದ್ದಿ ಎಂದು ಕರೆಯದಿರುವುದನ್ನು ಗಮನಿಸಿದರೆ ಇವಳು ಸೂಳೆ ಇರಬಹುದೆನ್ನಿಸುತ್ತದೆ. ಇವಳು ಎರಡುದತ್ತಿ ನೀಡಿ ಬಿಂನಪೋಟಿ ವೀರಗಲ್ಲು ನಿಲ್ಲಿಸಿ ದೇವಾಲಯದ ಕಂಬ ನಿರ್ಮಿಸಿದಳೆಂದು ತಿಳಿದುಬರುತ್ತದೆ.

ದೇವಸೂಳೆ

ಸೂಟ್ಗಲ್ ನಾಡು ಎಂದು ಚಿತ್ರದುರ್ಗಕ್ಕೆ ಕರೆಯುತ್ತಾರೆ. ಇದು ಅತ್ಯಂತ ಪ್ರಾಚೀನ ಹೆಸರಾಗಿದೆ. ಈ ಪದ ನಮಗೆ ಚಿತ್ರದುರ್ಗ ತಾಲೂಕು ಗಂಜಿಕಟ್ಟೆ, ಬಳಿಯ ಬೆಟ್ಟದ ಬಂಡೆಯೊಂದರ ಕ್ರಿ.ಶ.ಸು.೫೦೦ ದ್ದೆಂದು ತಿಳಿಸಲಾಗಿದೆ. ಇದು ಪೂರ್ವದ ಹಳಗನ್ನಡವಾಗಿದೆ. ಪ್ರೊ.ರಾಜಶೇಖರಪ್ಪ ನವರು ಇದು ಕ್ರಿ.ಶ.೭ನೇ ಶತಮಾನಕ್ಕೆ ಸೇರಿದೆ ಎನ್ನುತ್ತಾರೆ.

'ಸೂಳೆ'ಯರೆಂದು ಕರೆಯಲ್ಪಡುವ ಸ್ತ್ರೀಯರಿಗೆ ಇಂದಿನ ಸ್ಥಾನಕ್ಕೆ ಹೋಲಿಸಿದರೆ, ಅಂದು ಇಂತಹ ಹೀನ ವೃತ್ತಿ ಅದಾಗಿರಲಿಲ್ಲ. ಅದರಲ್ಲೂ 'ದೇವಸೂಳೆ'ಯರ ಸ್ಥಾನ ಅತ್ಯಂತ ಉಚ್ಚಮಟ್ಟದ್ದಾಗಿತ್ತು. ಆಜನ್ಮ ಪರಿಯಂತ ಅವರು ದೇವರ ನಾಮಸ್ಮರಣೆ ಮಾಡುತ್ತಾ ದೇವರ ಸೇವೆಗೈಯುತ್ತಾ ಭಗವಂತನಿಗಾಗಿ ತಮ್ಮ ಜೀವನವನ್ನು ಮುಡುಪಾಗಿಡುತ್ತಿದ್ದರು. ಕಲೆಯಲ್ಲಿ ಭಗವಂತನನ್ನು ಕಂಡವರಿವರು. ಇವರು ಕೆಲವೊಮ್ಮೆ ವಿವಾಹವೂ ಆಗಬಹುದಿತ್ತು. ಆಗೆಯೇ ಉಳಿಯಲೂ ಬಹುದಿತ್ತು. ಈ ವ್ಯವಸ್ಥೆ ಭಾರತದಲ್ಲಿ ಮಾತ್ರವಲ್ಲ ಈಜಿಪ್ಟ್, ಸಿರಿಯಾ, ಅರೇಬಿಯಾ, ಮಧ್ಯಪ್ರಾಚ್ಯ ದೇವಾಲಯಗಳಲ್ಲೂ ರೂಢಿಯಲ್ಲಿತ್ತು. ದೇವರ, ಜಾತ್ರೆ, ಉತ್ಸವ ಮೊದಲಾದ ಸಂದರ್ಭದಲ್ಲಿ ಹಾಡು, ನೃತ್ಯ, ಉತ್ಸವ ಮೊದಲಾದ ಸಂದರ್ಭದಲ್ಲಿ ಹಾಡು, ನೃತ್ಯ, ಗೀತಾದಿಗಳ ಸೇವೆ ಸಲ್ಲಿಸುವುದು ಇವರ ಕಾರ್ಯಗಳಾಗಿದ್ದವು.

ಸಮಾಜಸೂಳೆ

ಇವರು ಧರ್ಮದ ಹೆಸರಿನಲ್ಲಿ ಜಾತ್ರೆ ಉತ್ಸವಗಳಿಗೆ ಬಂದ ಗಣ್ಯರ ಸೇವೆಗೈಯುತ್ತಿದ್ದವರು. ದೇವಾಲಯದ ಕಾರ್ಯವನ್ನೊರತುಪಡಿಸಿ ಉಳಿದ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿ ಕೊಂಡವರಿವರು. ಚಿತ್ರದುರ್ಗವನ್ನಾಳಿದ ಭರಮಣ್ಣನಾಯಕನು ಈರ್ವರು ಪಟ್ಟಮಹಿಷಿಯರನ್ನು ಹೊಂದಿದ್ದನು(ದೊಡ್ಡಸಿದ್ದವ್ವ ನಾಗತಿ, ಚಿಕ್ಕಸಿದ್ದವ್ವ ನಾಗತಿ) ಅಲ್ಲದೆ ೮ ಜನ ಸ್ತ್ರೀಯರೊಂದಿಗೆ 'ಬಂಗಾರದ ಸಂಬಂಧ ಹೊಂದಿದ್ದನು. ಮರಡವ್ವ, ಮೊಳಕಾಲ್ಮೂರು ತೊದಲ ಭರಮವ್ವನ

ಮಗಳು ಬಸವ್ವ, ಪಾಲವ್ವ, ಹುಚ್ಚವ್ವ, ದ್ಯಾಮವ್ವ, ರಂಗವ್ವ, ಭರಮವ್ವ, ಸಿದ್ಧವ್ವ"[೪೧] ಕೆಲವು ಸೂಳೆಯರು ರಾಜನಿಗಲ್ಲದೆ ಮತ್ತಾರೊಂದಿಗೂ ಸಂಬಂಧ ಹೊಂದದೆ ಅವರು ರಾಜನಿಗೆ ಮಾತ್ರ ನಿಷ್ಠರಾಗಿರುತ್ತಿದ್ದರು. ಹೊಸದುರ್ಗ ತಾಲೂಕು 'ನೀಲವತಿ ಪಟ್ಟಣದಲ್ಲಿ ನೀಲವತಿ ಎಂಬ ನರ್ತಕಿಯ'[೪೨] ಉಲ್ಲೇಖ ದೊರೆಯುತ್ತದೆ. ಮಣಿಮಲ್ಲಾಸುರರೆಂಬ ಪವಾಡ ಪುರುಷರು ಸೂಳೆಮಂಟಪದಲ್ಲಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರೆಂದು ತಿಳಿದುಬರುತ್ತದೆ.

ಸೂಳೆಯರೆಂದು ಕರೆಸಿಕೊಳ್ಳುವ ಹೆಣ್ಣುಮಗಳು ಅಂದು ಧರ್ಮದ ಹೆಸರಿನಲ್ಲಿ ಶೋಷಣೆಗೆ ಒಳಪಟ್ಟಿದ್ದರು. ಸಹಜವಾಗಿ ಹೆಣ್ಣಿಗಿರುವ ಆಸೆ, ಆಕಾಂಕ್ಷೆಗಳನ್ನು ಬದಿಗೊತ್ತಿ ದೇವರ ಹೆಸರಿನಲ್ಲಿ ಶ್ರೀಮಂತರಿಗೆ ತಮ್ಮನ್ನು ತಾವು ಸಮರ್ಪಿಸಿಕೊಳ್ಳಬೇಕಾಗಿತ್ತು. ಪುರುಷಸಮಾಜ ದೇವರೆಂಬ ಹಣೆಪಟ್ಟಿಯನ್ನು ಕಟ್ಟಿ ದೇವರ ಹೆಸರಿನಲ್ಲಿ ಹೆಣ್ಣನ್ನು ತನ್ನ ಉಪಯೋಗಕ್ಕಾಗಿ ಬಳಿಸಕೊಂಡು ಬರುತ್ತಿರುವುದು ಇಂದಿನ ಸಮಾಜದವರೆವಿಗೂ ಸಹ ಬೇರೆಯಾಗಿಲ್ಲ.

ವಿವಾಹಿತ ಸ್ತ್ರೀಯರು ಕುಟುಂಬವೆಂಬ ಬೇಲಿಯಲ್ಲಿ ಬೆಂದು ಹೋದರೆ ಸೂಳೆಯರೆಂಬ ಪಟ್ಟ ಹೊತ್ತು ಸ್ತ್ರೀಯರು ಬಹಿರಂಗವಾಗಿ ದೇವರ ಹೆಸರಿನಲ್ಲಿ ಶೋಷಣೆಗೆ ಒಳಗಾಗುತ್ತಿದ್ದರು. ಯಾವ ಹೆಣ್ಣೂ ಸಹ ಈ ವ್ಯವಸ್ಥೆಯನ್ನು ತನಗೆ ಬೇಕೆಂದುಕೊಂಡು ರೂಪಿಸಿಕೊಂಡದ್ದಲ್ಲ. ಪುರುಷ ಸಮಾಜ ನೀನು ಹೆಣ್ಣು, ಹೆಣ್ಣಾದವಳು ಹೀಗೆಯೇ ಇರಬೇಕು ಎಂಬ ಚೌಕಟ್ಟನ್ನು ಹಾಕಿ ಬಂಧಗಳಿಂದ ಬಂಧಿಸಿದೆ. ಮೇಲುನೋಟಕ್ಕೆ ಸ್ತ್ರೀಯರಿಗೆ ಗೌರವ ಸ್ಥಾನಮಾನಗಳು ದೊರೆತಿದ್ದವೆಂದು ತಿಳಿಸುತ್ತದೆ. ಅಲ್ಲದೆ ಕಲೆ, ನಿಷ್ಠೆ, ದಾನ, ಭಕ್ತಿಗಳಿಂದ ವಿವಾಹಿತ ಸ್ತ್ರೀಯಷ್ಟೇ ಮಾನ್ಯತೆ ಹೊಂದಿದ್ದಳೆಂದು ಸಮಾಜ ಹೇಳಿದರೂ ಹೊಗಳಿಕೆಯಿಂದಲೇ ಅವಳನ್ನು ಪಾತಳಕ್ಕೆ ತುಳಿಯುವ ಹುನ್ನಾರ ಹಿಂದೆಯೇ ನಡೆದಿರುತ್ತದೆ.

ಕ್ರಿ.ಶ.೮೮೮ರ ದಾವಣಗೆರೆ ತಾಲೂಕಿನ 'ಕಾಡಜ್ಜಿ'ಯ ಶಾಸನವೊಂದು ಸೂಳೆಯರ ಬಗೆಗೆ ವಿಸ್ಮಯಕಾರಿ ವಿವರವನ್ನು ನೀಡುತ್ತದೆ.[೪೩] "ಪರಕಯ್ಯ ಎಂಬವ ಮಯ್ದುಮರಸ ಎಂಬ ಅರಸನೊಬ್ಬನ ಸೂಳೆಯ ಪ್ರತಿಷ್ಠಿತ ವಂಶಕ್ಕೆ ಸೇರಿದವನು. ಅಂದರೆ ಅರಸನ ಸೂಳೆ ಕಾಡಜ್ಜಿ. ಅವಳ ಮಗಳು ಅಯ್ಯಬ್ಬೆ ಇವಳ ಮಗಳು ಕಾಡಬ್ಬೆ. ಇವಳ ಮಗಳು ಕಳಿಂಗಬ್ಬೆ, ಇವಳ ಮಗನೇ ಪರಕಯ್ಯ. ಶಾಸನ ಇದನ್ನು ಧರ್ಮ ಸಂತತಿ ಎಂದು ಕರೆದಿದೆ.

೩.೩. ಪಾವುಳ

ರಂಗಭೋಗದ ರಂಗಮಂಟಪದಲ್ಲಿ ನೃತ್ಯಕ್ಕೆ ಸಹಾಯ ಮಾಡುವ ಹಿಮ್ಮೇಳದವರು ಇವರಾಗಿರಬಹುದು. ಭವಿಷ್ಯ ಇದು ಹಾಡುವ ವರ್ಗವಿರಬೇಕು. ಒಟ್ಟಿನಲ್ಲಿ ಈ ವರ್ಗವು ಪಾತ್ರದವರ ಸಹಾಯಕ ವರ್ಗವೆಂದು ತಿಳಿದುಬರುತ್ತದೆ. ಪಾತ್ರದವರೊಂದಿಗೆ ಪಾವುಳದವರಿಗೂ ದಾನ ನೀಡಿದ ವಿವರ ಶಾಸನಗಳಲ್ಲಿ ಕಂಡುಬರುತ್ತದೆ. ಕ್ರಿ.ಶ.೧೦೬೫ರ ಶಾಸನವು ಹೊಸದುರ್ಗ

ತಾಲೂಕು ಬಾಗೂರು ಹೋಬಳಿ ನೀರಗುಂದದ ಸಿದ್ದೇಶ್ವರ ದೇವಾಲಯದ ಬಳಿ ದೊರೆತಿದೆ. ಹೊಯ್ಸಳ ದೊರೆ ಬಲ್ಲಾಳನ ಪಾದಾರಾಧಕ ನಲ್ಲೆಸೆಟ್ಟಿ ಎಂಬವನು ಶ್ರೀ ಸಿದ್ಧನಾಥ ದೇವರ ಪಾತ್ರಪಾಉಳ ಭೋಗಕ್ಕಂ......[೪೪] ಬೇವಿನ ಹಳ್ಳಿಯನ್ನು ದಾನ ನೀಡಿದ ವಿವರವಿದೆ.

ಕ್ರಿ.ಶ.೧೨೨೦ರ ಶಾಸನ ವೊಂದರಲ್ಲಿ ಹೊಯ್ಸಳರ ಕಾಲದಲ್ಲಿ ಆಳ್ವಿಕೆ ನಡೆಸಿದ ಚಿತ್ರದುರ್ಗ ಹೋಬಳಿಯ ಸಮಸ್ತ ಪ್ರಭುಗಾವುಂಡರು ಶ್ರೀ ಸ್ವಯಂಭು ಕಲಿ ದೇವರ ಅಂಗಭೋಗ ರಂಗಭೋಗ "ಪಾತ್ರಪಾವುಳ......"[೪೫] ಕ್ಕೆ ನಂದಿಹಳ್ಳಿಯನ್ನು ದಾನ ನೀಡಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗದ ಗಾರೇಹಟ್ಟಿ ಬಳಿಯ ಚೋಳೇಶ್ವರ ದೇವಾಲಯದ ಒಂದು ಶಾಸನವು "ಶ್ರೀ ಚೋಳೇಶ್ವರ ದೇವರಂಗ ಭೋಗಕ್ಕಂ ಸ್ನಾನ ನೈವೇದ್ಯಕಂ ಚೈತ್ರ ಪವಿತ್ರಕ್ಕಂ ಪಾತ್ರ ಪಾವುಳಕ್ಕಂ....."[೪೬] ಹೊಸಗೆರೆಯ ಕೆಳಗಿನ ಭಾಗಗಳನ್ನು ದಾನ ನೀಡಿದ ವಿವರವಿದೆ.

ಚಿತ್ರದುರ್ಗ ಬೆಟ್ಟದ ಮೇಲೆ ಶೃಂಗಾರ ತೋಟದ ಗೋಪಾಲಕೃಷ್ಣದೇವರ ಹೊಂಡದ ದಕ್ಷಿಣಭಾಗದಲ್ಲಿ ದೊರೆತಿರುವ ಶಾಸನವೊಂದರಲ್ಲಿ "ಗೋಪಾಳ ದೇವರಿಗೆ ಅಮೃತಪಡಿ ಅಂಗಭೋಗ ಪಾತ್ರ ಪಾವುಡವೊಳ...."[೪೭] ಗೆ ಬೆಂಮ್ಮತ್ತೂರ ನಾಡಿನ ನಗರೇಜಿ' ಎಂಬ ಪ್ರದೇಶವನ್ನು ದಾನ ನೀಡಿದ ವಿವರವಿದೆ.

ಪಾತ್ರಪಾವುಳದವರು ದಾನದತ್ತಿಗಳನ್ನು ತಾವು ಪಡೆದುದಲ್ಲದೆ, ಅವರೂ ಸಹ ತಮಗೆ ಕೈಲಾದಷ್ಟು ಪ್ರಮಾಣದ ಒಂದಿಷ್ಟನ್ನು ದಾನ ನೀಡಿರುವುದು ತಿಳಿದುಬರುತ್ತದೆ. ದೇವಾಲಯಕ್ಕೆ ರಂಗಭೋಗದ ಮೂಲಕ ತಮ್ಮ ಸೇವೆ ಸಲ್ಲಿಸುವ ಮೂಲಕ ಜೀವನವನ್ನು ಸಾರ್ಥಕಪಡಿಸಿಕೊಳ್ಳುವ ವರ್ಗ ಇದಾಗಿತ್ತು. ದೇವಾಲಯದಲ್ಲಿ ದೇವಾಲಯಕ್ಕೆ ಇಂತಿಷ್ಟು ಸ್ತ್ರೀಯರೆಂದು ನೇಮಿಸಿ ಅವರ ಮೇಲ್ವಿಚಾರಣೆ ನೋಡಿಕೊಳ್ಳಲು ಅಧಿಕಾರಿಯಂತೆ ಕಾರ್ಯನಿರ್ವಹಿಸುತ್ತಿದ್ದವರನ್ನು ಸೂಳೆವಳವೆಂದು ಕರೆಯುತ್ತಿದ್ದರು. ಅಲ್ಲದೆ ಸೂಳೆಯರು ವಾಸಿಸುತ್ತಿದ್ದ ಪ್ರತ್ಯೇಕ ನಿವಾಸಕ್ಕೆ ಸೂಳೆಗೇರಿ ಎಂದು ಕರೆಯುತ್ತಿದ್ದರು.

ಪ್ರಾರಂಭದ ಸೂಳೆಯರು ದೇವಾಲಯದ ಅಂಗಭೋಗ ರಂಗಭೋಗದ ಕಾರ್ಯಗಳಿಗೆ ತಮ್ಮ ಸೇವೆಗಳನ್ನು ಸಲ್ಲಿಸುತ್ತ ತಮ್ಮ ಜೀವನವನ್ನು ಕಲೆಗೆ ಮೀಸಲಿರಿಸಿದ್ದರು. ಕಾಲಕ್ರಮೇಣ ದೇವಾಲಯದ ಅರ್ಚಕ, ಊರಿನ ಶ್ರೀಮಂತರಿಗೆ ದೇವರ ಹೆಸರಿನಲ್ಲಿ ದೇವರಂತೆ ಇವರೂ ಅತಿಥಿ ಎಂದು ಭಾವಿಸಿ, ಅತಿಥಿ ಸತ್ಕಾರ ಮಾಡುವುದು ಪುಣ್ಯವೆಂದು ಭಾವಿಸಿ ಅವರ ಸೇವೆಗೈದಿರುವುದು ತಿಳಿದುಬರುತ್ತದೆ. ಇಲ್ಲಿಯವರೆಗೂ ಈ ವೃತ್ತಿ ವ್ಯಾಪಾರೀಕರಣಗೊಳ್ಳದೆ ಪವಿತ್ರ ವೃತ್ತಿಯಾಗಿ ಸಮಾಜದಲ್ಲಿ ಕಾಣಿಸಿಕೊಳ್ಳುತ್ತಿತ್ತು. ಗೌರವಾರ್ಥ ಸೇವೆ ಎಂದು ಹುಮ್ಮಸ್ಸಿನಿಂದ ಈ ಕಾರ್ಯವನ್ನು ಅಂದು ಮಾಡಲಾಗುತ್ತಿತ್ತು. ಆದರೆ ಬರಬರುತ್ತಾ ಈ ಪದ್ಧತಿ ಹದಿಮೂರನೆಯ

ಶತಮಾನದ ನಂತರದಲ್ಲಿ ಸ್ವಲ್ಪಮಟ್ಟಿಗೆ ಮಾರ್ಪಾಟಾಗಿ ದೇವಾಲಯಕ್ಕೆ 'ಬಸವಿ' ಬಿಡುವ ಪದ್ಧತಿ ಹರಕೆ ಕಟ್ಟಿಕೊಳ್ಳುವುದರ ಮೂಲಕ ಪ್ರಾರಂಭವಾಯಿತು. "ಸಂಪಿಗೆಯ ಕ್ರಿ.ಶ.೧೩೫೦ರ ಶಾಸನವೊಂದು ಸಿದ್ಧಮಲ್ಲಿಕಾರ್ಜುನ ದೇವರಲ್ಲಿ ಹಾಡುವ ಮಹಾದೇವಿ ಮತ್ತು ತಾಳದ ಮೂಕಜ್ಜಿಯರನ್ನು ದೇವರ ಬಸವಿಯರೆಂದು"[೪೮] ಕರೆಯುತ್ತದೆ. ಕೋಟೇಶ್ವರದ ಕ್ರಿ.ಶ.೧೩೭೭ರ ಶಾಸನವೊಂದು "ಮಠವ ಬೋಹರಿಸುವ ಬಸವಿತ್ತಿಯೊಬ್ಬಳಿಗೆ ದತ್ತಿ ನೀಡಿದುದನ್ನು ಉಲ್ಲೇಖಿಸುತ್ತದೆ."[೪೯]

ಇಂದಿಗೂ ದೇವಾಲಯಗಳಿಗೆ ಎತ್ತನ್ನು 'ಬಸವ' ಬಿಡುವ ಪದ್ಧತಿ ಇದೆ. ಪ್ರಾರಂಭದಲ್ಲಿ ಈ ಪದ್ಧತಿ ವ್ಯಾಪಾರೀಕರಣಗೊಳ್ಳದೆ ಸಾಗುತ್ತಿತ್ತು. ದೇವಾಲಯದ ಕಸ ಗೂಡಿಸುವ, ನೆಲ ತೊಳೆಯುವ, ರಂಗೋಲಿ ಬಿಡಿಸುವ ಕಾರ್ಯಕ್ಕೆ ಈ ವೃತ್ತಿ ಸೀಮಿತವಾಗಿತ್ತು. ನಂತರ ಇವರು ತಮ್ಮ ವೃತ್ತಿಯನ್ನು ವ್ಯಾಪಾರಕ್ಕೆ ತಿರುಗಿಸಿಕೊಂಡರು. ಪುರುಷ ತನ್ನ ಕಾಮಾಂಧತೆಯಿಂದ ವಸ್ತುಗಳ ರೂಪದಲ್ಲೋ, ಹಣದ ರೂಪದಲ್ಲೋ ತನ್ನತ್ತ ಸೆಳೆಯಲಾರಂಭಿಸಿ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳಲಾರಂಭಿಸಿದ ಬಸವಿ ಹೊಂದಿದ ಸ್ತ್ರೀಯರ ವಿವಾಹವಾಗಬಹುದಿತ್ತು. ಆದರೆ ವಿವಾಹವಾಗುವ ಸಾಧ್ಯತೆಗಳು ಕಡಿಮೆ ಎನ್ನಬಹುದು. ಹಣಕ್ಕಾಗಿ ವಿವಾಹಿತ ಸ್ತ್ರೀಯನ್ನು ಆಕೆಯ ಗಂಡನೇ ಬಲವಂತದಿಂದ ಈ ಕೂಪಕ್ಕೆ ತಳ್ಳುವುದು ಪ್ರಾರಂಭವಾಗಿ ಈ ವ್ಯವಸ್ಥೆ ಮತ್ತಷ್ಟು ರೂಪ ಪಡೆದುಕೊಂಡಿತು.

೩.೪. ದೇವದಾಸಿ ಪದ್ಧತಿ

ಈ ವ್ಯವಸ್ಥೆ ನಮ್ಮಲ್ಲಿ ಅಂದಿನಿಂದ ಇಂದಿನವರೆಗೂ ಬೆಳೆದುಬಂದ ಆಚರಣೆಯಾಗಿದೆ. ಈ ವ್ಯವಸ್ಥೆಯ ಉಲ್ಲೇಖ ಶಾಸನಗಳಲ್ಲಿ ದೊರೆಯುವುದು ವಿರಳ. ಈ ವ್ಯವಸ್ಥೆಯ ಹೆಣ್ಣುಗಳು ವಿವಾಹವಾಗಬಹುದಿತ್ತು. ಹಾಗೆಯೇ ಆ ಜೀವ ಪರ್ಯಂತ ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಶ್ರೀಮಂತರ ಸೇವೆಯನ್ನು, ಪೂಜಾರಿ, ಅರ್ಚಕ, ಪುರೋಹಿತರ ಸೇವೆಯನ್ನು ಮಾಡುತ್ತಾ ಜೀವನ ಕಳೆಯಬಹುದಿತ್ತು. ಈ ವ್ಯವಸ್ಥೆ ಕೆಲವೊಮ್ಮೆ ವಂಶ ಪಾರಂಪರ್ಯವಾಗಿ ಬರುತ್ತಿತ್ತು. ಆದರೂ ಒಂದು ವಂಶದವರು ಇದೇ ವೃತ್ತಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂಬ ನಿಯಮಗಳಿರಲಿಲ್ಲ. ಅವರು ತಮ್ಮ ಇಚ್ಛಾನುಸಾರವಾಗಿ ವೃತ್ತಿಯನ್ನು ಆಯ್ದುಕೊಳ್ಳಬಹುದಿತ್ತು. ಕ್ರಿ.ಶ.೧೧೧೩ರ ಶಾಸನವೊಂದು ದೇವದಾಸಿಯರಿಗೆ ಬಿಟ್ಟ ದಾನದ ಬಗ್ಗೆ ವಿವರ ನೀಡುತ್ತದೆ. ದೇವರ ಸೇವೆಗೆಂದು ನೇಮಿಸುತ್ತಿದ್ದ ಇವರು ಅತ್ಯಂತ ರೂಪ, ಲಾವಣ್ಯವತಿಯರಾಗಿರುತ್ತಿದ್ದರು. ನೃತ್ಯ ಗೀತೆಗಳಲ್ಲಿ ಪರಿಣಿತಿ ಪಡೆದಿರುತ್ತಿದ್ದರು. ಎಲ್ಲಾ ಗುಣಗಳನ್ನು ಹೊಂದಿದ ಹೆಣ್ಣು ಸಿಗುವುದು ವಿರಳ. ಆದ್ದರಿಂದ ಇವರನ್ನು ಒಂದು ಸ್ಥಳದಲ್ಲಿ ಉಳಿಸಿಕೊಳ್ಳಬೇಕಾದುದರಿಂದ ಇವರಿಗೆ ಹೆಚ್ಚು ಹೆಚ್ಚು ಹಣ ಕೊಡಬೇಕಾಗುತ್ತಿತ್ತು. ಈ ವ್ಯವಸ್ಥೆಯಲ್ಲಿ

ಸ್ತ್ರೀಯರು ಸ್ವಯಂ ಪ್ರೇರಣೆಯಿಂದ ಬಂದವರಲ್ಲ, ಇವರು ಹೆಚ್ಚು ಹೆಚ್ಚು ಹಣವನ್ನು ಪಡೆದು ಬಂದವರಾಗಿರುತ್ತಿದ್ದರು.

ದಕ್ಷಿಣ ಕರ್ನಾಟಕಕ್ಕಿಂತ ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಇಂದಿಗೂ ಈ ವ್ಯವಸ್ಥೆ ಜೀವ ತುಂಬಿ ಸಾಗಿಬರುತ್ತಿದೆ. ಸೂಡಿ ಗ್ರಾಮದ ನಾಗೇಶ್ವರ ದೇವಾಲಯದಲ್ಲಿ ೧೬ ದೇವದಾಸಿಯರಿದ್ದರೆಂಬುದರ ಬಗ್ಗೆ ತಿಳಿದುಬರುತ್ತದೆ. ಮಹಮದ್ ಘಜನಿ ಕ್ರಿ.ಶ.೧೨೬ರಲ್ಲಿ ಸೋಮನಾಥ ದೇವಾಲಯ ಮುತ್ತಿದಾಗ ಸು.೫೦೦ ಜನ ದೇವದಾಸಿಯರಿದ್ದರೆಂದು, ಅವರು ಹಗಲು ರಾತ್ರಿ ಸಂಗೀತ ಮೊದಲಾದ ಸೇವೆ ಸಲ್ಲಿಸುತ್ತಿದ್ದರೆಂದು ತಿಳಿದುಬರುತ್ತದೆ.

ಒಮ್ಮೊಮ್ಮೆ ಮಕ್ಕಳಾಗದ ಸಂದರ್ಭದಲ್ಲಿ ಕೆಲವರು ದೇವರಿಗೆ ಹರಕೆಯನ್ನು ಕಟ್ಟಿಕೊಳ್ಳುತ್ತಿದ್ದರು. ಹೆಣ್ಣು ಮಗುವಾದರೆ ನಿನಗೆ ದಾನ ನೀಡುತ್ತೇನೆಂದು ಕೇಳಿ ಕೊಳ್ಳುತ್ತಿದ್ದರು. "ಕಾಗೆ ಕೂರುವುದಕ್ಕೂ ಟೊಂಗೆ ಮುರಿಯುವುದಕ್ಕೂ ಸರಿ ಹೋಯಿತು" ಎಂಬಂತೆ ಹೆಣ್ಣು ಮಗು ಜನಿಸಿದರೆ ಇದು ದೇವರ ಮಗು ಎಂಬ ನಂಬಿಕೆಯಿಂದ ಹರಕೆ ಮಾಡಿಕೊಂಡ ದೇವರಿಗೆ ೧೨ ವರ್ಷಗಳ ನಂತರ ಬಿಡುತ್ತಿದ್ದರು. ಅವರು ದೇವಾಲಯದ ಗಣ್ಯರ ಸೇವೆ ಸಲ್ಲಿಸುತ್ತಾ ಕಾಲಕಳೆಯಬೇಕಿತ್ತು.

"ನೆಲ್ಮಲದ ಕಮ್ಮರ ಬೇಡಿ ಎಂಬವ ದೇವರಿಗೆ ಕನ್ಯೆ ದಾನ ಕೊಟ್ಟ ವಿವರವಿದೆ. ನೆಲ್ಮಬ್ಬೆಯ ಕಮ್ಮರಬೇಡಿ ಬಿಚ್ಚರಕೊಂಡನೆಂಬವ ಕನ್ಯೆ ದಾನಮುಂ ಸೂಳಾಗಿಯುಂ ದಾನ ನೀಡಿದ ಇನ್ನೂ ಸೂಳೆಯಾದವರು ಎಲ್ಲಿಯೂ ಹೋಗಬಾರದೆಂಬ ನಿರ್ಬಂಧಗಳು ಪ್ರಾರಂಭವಾಗಿ ಹಳೇಬೀಡಿನ ಶಾಸನವೊಂದರಲ್ಲಿ ಬಳಿಕರ್ವಿಯನಗಯರಮಹರಿ ಎ ಹೋಗದ ಸೂಳೆಯರು ಹೊಶಳೇಸುರದ ಸೂಳೆಯ ಹೋದನು ಪಲರ ಹೋನು"[೫೦] ಎಂಬ ಉಲ್ಲೇಖವಿದೆ. ಈ ಹೊತ್ತಿಗಾಗಲೇ ಅವರ ಮೇಲೆ ನಿರ್ಬಂಧಗಳು ಹೆಚ್ಚಾಗಿರಬೇಕು ಅಥವಾ ಆರ್ಥಿಕ, ಸಾಮಾಜಿಕ, ಧಾರ್ಮಿಕ ಒತ್ತಡ ಅವರ ಮೇಲೆ ಪ್ರಾರಂಭವಾಗಿರಬೇಕೆನ್ನಿಸುತ್ತದೆ.

ಮೋರಿಂಗೆರೆಯ ಗೋವಿಂದೇಶ್ವರ ದೇಗುಲದಲ್ಲಿ "ಸೂಳೆಯರ್ಪ್ಪನ್ನಿರ್ವರೊಳಗೆ ಪಿರಿಯರನು ವಲ್ಲದ ಸೂಳೆಯರ್ಪ್ಪದಿಂ ಬರ್ಗ್ಗೆ ಪತ್ತು ಮತ್ತರ ಸವಕಟ್ಟೆ ನೊಳ್ಮತ್ತರ್ನೂರ್ಱರು"[೫೦] ಭೂಮಿ ಕೊಟ್ಟರು ಎಂಬ ಉಲ್ಲೇಖವಿದೆ.

'ಪಿರಿಯವಲ್ಲದ' ಏನೂ ಅರಿಯದ ಚಿಕ್ಕ ಮಕ್ಕಳನ್ನು ದೇವರ ಸೇವೆಗೆಂದು ಮೀಸಲಿರಿಸುವ ವ್ಯವಸ್ಥೆ ನಿಜಕ್ಕೂ ಅಮಾನವೀಯವಾದುದಾಗಿತ್ತು. ಮಾನವ ಸಮಾಜ ವಯಸ್ಸು ಹೆಚ್ಚಿದಂತೆ ಬುದ್ಧಿ ಬಾಹುಳ್ಯ ವಿಚಲಿತವಾಗಬಹುದೆಂಬ ಉದ್ದೇಶದಿಂದ ಪೂರ್ವನಿಯೋಜಿತವಾಗಿ ರೂಪಿಸುವ ವ್ಯವಸ್ಥೆ ಇದಾಗಿದೆ. ಹದಿಹರೆಯದ ವಯಸ್ಸು ಆಸೆ, ಆಕಾಂಕ್ಷೆ ಭರಿತ ಮನಸ್ಸಿನ ಲೋಕ ಅದರಿಂದ 'Sweet sixteen' ಎನ್ನುತ್ತಾರೆ ಸಹಜವಾಗಿಯೇ ಈ ವಯಸ್ಸಿನಲ್ಲಿ ದೇವರ ಸೇವೆ, ನರ್ತನ, ಗಾಯನವನ್ನು ಸ್ವಲ್ಪ ದೂರ ಸರಿಸುವ ವಯಸ್ಸಾಗಿರುತ್ತದೆ. ಈ ವಯಸ್ಸಿನಲ್ಲಿ ಹೆಣ್ಣನ್ನು

ದೇವಾಲಯಕ್ಕೆ ತಳ್ಳುವುದು ಬಲವಂತದ ಕಾರ್ಯವೇ ಸರಿ. ಆದರೆ ಎಲ್ಲಾ ಸಮಯದಲ್ಲೂ ತಿರಸ್ಕರಿಸುವ ಸಮಯವೇ ಇರುತ್ತಿರಲಿಲ್ಲ. ಹುಟ್ಟಿನಿಂದಲೂ ಅವರಿಗೆ ಆಚಾರ–ವಿಚಾರ, ದೇವರ ಸೇವೆ, ಭಕ್ತಿ, ಆರಾಧನೆ ಮೊದಲಾದ ಸಂಪ್ರದಾಯಗಳನ್ನು ತಿದ್ದಿ ತೀಡಿದ ಹೆಣ್ಣು ಮಕ್ಕಳು ಮೌನವಾಗಿಯೇ ವ್ಯವಸ್ಥೆಯನ್ನು ಸ್ವೀಕರಿಸುತ್ತಿದ್ದರು.

ಪ್ರಾರಂಭದಲ್ಲಿ ಅವರಿಗೆ ಸ್ವಾತಂತ್ರ್ಯವಿದ್ದರೂ ಇದು ಬರುಬರುತ್ತಾ ಬಲವಂತದ ವ್ಯವಸ್ಥೆಯಾಗಿ ರೂಪಗೊಂಡಿತು. ವ್ಯವಹಾರದ ಮಾಧ್ಯಮವಾಗಿ ಬರಬರುತ್ತಾ ಹಣಕ್ಕಾಗಿ ಈ ವ್ಯವಸ್ಥೆ ದುರ್ಬಳಕೆಯಾಗಲಾರಂಭಿಸಿತು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ಹೆಣ್ಣಿನ ಮಾನಸಿಕ, ಶಾರೀರಿಕ, ಸಾಮಾಜಿಕ ಹಿಂಸೆ ನಿರ್ಬಂಧಗಳಿಗೆ ವೇದಿಕೆಯಾಯಿತು.

ನಾಟ್ಯದಲ್ಲಿ ಹೆಣ್ಣಲ್ಲದೆ ಪುರುಷನೂ ಸಹ 'ನಟುವ' ಎಂಬ ಹೆಸರಿನಿಂದ ಕಾಣಿಸಿಕೊಳ್ಳುತ್ತಿದ್ದನು. ಅಂಗಭೋಗ ರಂಗಭೋಗದ ಸೂಳೆಯರ ವಾಸಸ್ಥಳವನ್ನು 'ಸೂಳೆಗೇರಿ' ಎಂದು ಕರೆಯಲಾಯಿತು. ಪ್ರಥಮ ಉಲ್ಲೇಖಿತ ಸೂಳೆಗೇರಿಯ ಶಾಸನವು ಕ್ರಿ.ಶ.೧೦೫೪ರ ಸೂಡಿ ಶಾಸನವಾಗಿದೆ. ಸೂಳೆಯರ ವೃತ್ತಿಯು ವ್ಯಾಪಾರೀಕರಣಗೊಂಡು ಹಣಕ್ಕಾಗಿ ನಡೆಯುವ ವೃತ್ತಿಯಾಗಿ ಪರಿವರ್ತನೆಗೊಂಡಾಗ ಆ ವೃತ್ತಿಗೆ ಸಮಾಜದಲ್ಲಿ ಹೀನಾರ್ಥ ಪ್ರಾಪ್ತಿಯಾಗಲಾರಂಭಿಸಿತು. ಸಾಮಾನ್ಯವಾಗಿ ಕೆಳಸ್ಥರದ ಹೆಣ್ಣುಗಳೇ ಈ ವೃತ್ತಿಯನ್ನು ಅನುಸರಿಸಿದರು. ಸೂಳೆಗಾರಿಕೆ ವೃತ್ತಿಯಾಗಿ ಬೆಳೆದು ನಿಂತ ನಂತರ ಇದಕ್ಕೆ ತೆರಿಗೆ ವಿಧಿಸುವುದು ಪ್ರಾರಂಭವಾಯಿತು. ಮನೆವಣ, ಕನ್ನಡಿವಣ, ಪಿರಿಯರವಣವೆಂಬ ತೆರಿಗೆಗಳು ಆರಂಭಗೊಂಡವು.

ವೇಶ್ಯೆಯರು ನಿತ್ಯ ಸುಮಂಗಲಿಯರಾದ ಕಾರಣ ಕನ್ನಡಿಯ ಬಳಕೆ ಇದ್ದು, ಇದಕ್ಕೆ ಕನ್ನಡಿ ತೆರಿಗೆ ಜಾರಿಗೆ ಬಂದಿರಬೇಕು. ಸೂಳೆ ಸಂತತಿಗೆ ವಿಧಿಸುವ ತೆರಿಗೆ ಮನೆವಣವಾಗಿರುತ್ತಿತ್ತು. ಸೂಳೆಯರಿಗೆ ಕೊಡುವ ದಾನದತ್ತಿಗಳು ಪುನಃ ದೇವಾಲಯವನ್ನು ಸೇರುವ ಉದ್ದೇಶದಿಂದ ಜೊತೆಗೆ ದುಡಿಮೆಯ ವರ್ಗ ಇದಾಗಿದ್ದುದರಿಂದ ತೆರಿಗೆ ವಿಧಿಸಿದ ಸಾಧ್ಯತೆಗಳಿವೆ. ಸೂಳೆಗೇರಿಯಲ್ಲಿ ವಾಸಿಸುತ್ತಿದ್ದ ಸ್ತ್ರೀಯರು ನೃತ್ಯ ಗೀತಾದಿಯಲ್ಲಿ ಪರಿಣತಿ ಹೊಂದಲು ತರಬೇತಿ ಪಡೆಯುತ್ತಿದ್ದ ಸ್ಥಳಕ್ಕೆ 'ನಾಗವಾಸ' ಎಂದು ಕರೆಯುತ್ತಿದ್ದರು.

ಅಂಗಭೋಗ ರಂಗಭೋಗದ ಸೂಳೆಯರ ಪದ್ಧತಿ ಬರಬರುತ್ತಾ ಸಮಾಜ ಸೂಳೆಯರ ಪದ್ಧತಿಯಾಗಿ ಕಾಲಾನಂತರದಲ್ಲಿ ಬದಲಾವಣೆಗೊಳ್ಳಲಾರಂಭಿಸಿತು. ಪ್ರಾರಂಭದಲ್ಲಿ ಅಂಗಭೋಗ ರಂಗಭೋಗದ ಸೂಳೆಯರು ಉಳಿಸಿಕೊಂಡು ಬಂದ ಪಾವಿತ್ರ್ಯತೆ, ಗೌರವಾಧಾರಗಳು ಕಣ್ಮರೆಯಾಗಲಾರಂಭಿಸಿದವು. ದೇವಾಲಯ ಧರ್ಮದ ಹೆಸರಿಗೆ ಸೀಮಿತವಾಗಿದ್ದ ಈ ವ್ಯವಸ್ಥೆ ನಂತರದಲ್ಲಿ ಅದು ಸಮಾಜಕ್ಕೆ ತನ್ನ ಪ್ರವೇಶವನ್ನು ಪ್ರಾರಂಭಿಸಿತು. ದೇವಾಲಯದ ರಂಗಭೋಗ ಅಂಗಭೋಗದ ಸೂಳೆಯರು ಕೆಲವೊಮ್ಮೆ ವಂಶಪಾರಂಪರ್ಯವಾಗಿ ಬರಬೇಕಾದುದರಿಂದ ಇವರಿಗೆ

ಜನಿಸಿದ ಮಕ್ಕಳೆಲ್ಲರೂ ಸೂಳೆಯರೇ ಆಗಬೇಕಿತ್ತು. ಇದರಿಂದಾಗಿ ಇವರ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗಲಾರಂಭಿಸಿತು. ದೇವಾಲಯದ ಅರ್ಚಕನೋ, ಊರ ಶ್ರೀಮಂತನೋ ಮಾತ್ರ ಇವರ ಮೇಲೆ ಕಣ್ಣು ಹಾಯಿಸುತ್ತಿದ್ದರು. ನಂತರದಲ್ಲಿ ಸಾರ್ವಜನಿಕರೂ ಸಹ ಒಬ್ಬೊಬ್ಬರಾಗಿ ಕಣ್ಣು ಹಾಯಿಸ ಲಾರಂಭಿಸಿದರು. ಸೂಳೆಯರ ಸಂಖ್ಯೆ ಹೆಚ್ಚಾದಾಗ ಸಹಜವಾಗಿಯೇ ಅವರ ಕುಂದು-ಕೊರತೆಗಳನ್ನು ದಾನಕೊಟ್ಟ ವಸ್ತು, ಭೂಮಿಯಿಂದಾಗಲೀ ತಣಿಸಿಕೊಳ್ಳಲಾಗದ ಸಂದರ್ಭ ಬಂದೊದಗಿತು. ಒಟ್ಟಿನಲ್ಲಿ ತಮ್ಮ ವೈಯಕ್ತಿಕ ಕಾರಣದಿಂದಲೋ, ಒತ್ತಾಯದಿಂದಲೋ ಇವರು ಹಣವಂತನ ಪಾಲಾಗಲಾರಂಭಿಸಿದರು. ದೇವಾಲಯದ ಜಾತ್ರೆ, ಉತ್ಸವಗಳಲ್ಲಿ ಬರುವ ಭಕ್ತ ಶ್ರೀಮಂತರ ಸೇವೆಯನ್ನು ಮಾಡುತ್ತಾ ಹಣವಂತನ ಸೇವೆಯನ್ನು ಮಾಡಲಾರಂಭಿಸಿದರು. ಪುರುಷನು ತನ್ನ ಕಾಮತೃಷೆಯನ್ನು ಈಡೇರಿಸಿಕೊಳ್ಳಲು ಮಹಿಳೆಯರ ಆದರ್ಶದ ದಿಕ್ಕನ್ನು ತನ್ನ ಸ್ವಾರ್ಥ ಸಾಧ್ಯತೆಗಳಿಗಾಗಿ ಬದಲಿಸಲಾರಂಭಿಸಿದನು. ವಸ್ತುವಿನಂತೆ ಭೋಗಕ್ಕಾಗಿ ಮೀಸಲಾಗುವ ಸ್ಥಿತಿಯನ್ನು ಪುರುಷ ಸಮಾಜ ಸೃಷ್ಟಿಸಿತು. ಕವಿರಾಜಮಾರ್ಗಕಾರನ 'ವರವಾರ ನಾರಿಯೊಳ್ ನೆರೆದೆ' ಎಂಬ ಮಾತು ವೇಶ್ಯೆಗೆ ಸಂಬಂಧಿಸಿರಬೇಕು. ಕ್ರಮೇಣ ಇವು ಸಮಾಜದಲ್ಲಿ ವೇಶ್ಯಾಗೃಹಗಳೆಂದೇ ನಿರ್ಮಾಣವಾಗಿ ರಾಜನೂ ಸಹ ಇವುಗಳ ಮೇಲೆ ಹಿಡಿತ ಹೊಂದಿದಂತೆ ಕಂಡುಬರುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ 'ಗಣಿಕಾಧ್ಯಕ್ಷ' ಎಂಬ ಮಾತಿನ ಉಲ್ಲೇಖ ಕಂಡುಬರುತ್ತದೆ. ಇಂದಿನ ನಾಗರಿಕ ಸಮಾಜದವರೆಗೂ ಈ ವೇಶ್ಯಾಪದ್ಧತಿ ರೂಢಿಯಲ್ಲಿದ್ದು, ಯಾವ ಸ್ತ್ರೀಯರು ತನಗೆ ಬೇಕೆಂದು ಈ ವೃತ್ತಿಗಿಳಿಯಲು ಸಾಧ್ಯವಿಲ್ಲ. ಒಂದು ವೇಳೆ ವೇಶ್ಯಾವೃತ್ತಿಗೆ ಸ್ವಹಿಚ್ಛೆಯಿಂದ ಇಳಿದವರ ಸಂಖ್ಯೆ ತೀರ ವಿರಳ. ದುಶ್ಚಟಗಳಿಗೆ ದಾಸನಾದ, ಹೆಣ್ಣಿನ ಮೇಲೆ ಒಡೆತನ, ಹಿಡಿತ ಸಾಧಿಸಿದ ಹೆಣ್ಣಿನ ತಂದೆಯೋ, ಗಂಡನೋ ತನ್ನ ಆಕಾಂಕ್ಷೆ, ಬಯಕೆಗಳು ತೀರಿದ ನಂತರ ತನ್ನ ಇನ್ನಿತರ ಆರ್ಥಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಪರಪುರುಷರೊಂದಿಗೆ ಬಲವಂತವಾಗಿ ತಳ್ಳಿದ ಉದಾಹರಣೆಗಳು ಸಾಕಷ್ಟಿವೆ. ಈ ವ್ಯವಸ್ಥೆಗೆ ಒಲಿದು ಹೋದ ಹೆಣ್ಣುಗಳಿಗಿಂತ ಒತ್ತಾಯಕ್ಕೆ ಮಣಿದು ಹೋದ ಹೆಣ್ಣಿನ ಸಂಖ್ಯೆಗಳೇ ಹೆಚ್ಚು. ಪುರುಷ ಹೆಣ್ಣನ್ನು ಒಂದು ಭೋಗದ ವಸ್ತುವಿನಂತೆ ಪರಿಗಣಿಸಿ, ಅವಳ ಭಾವನೆಗಳನ್ನು ಕಡೆಗಣಿಸಿದ್ದಾನೆ. ಅವಳ ತಾಳ್ಮೆ, ಮೌನಗಳ ಮೇಲೆ ಸವಾರಿ ಮಾಡುತ್ತಾ ತನ್ನ ಬೇಳೆ ಬೇಯಿಸಿಕೊಳ್ಳುತ್ತಿದ್ದಾನೆ.

ನಮ್ಮ ಸಮಾಜದಲ್ಲಿ ಹೆಣ್ಣಾದವಳು ಒಮ್ಮೆ ಒತ್ತಾಯಕ್ಕೆ ಬಲಿಯಾದವಳು ಮತ್ತೆ ಸಮಾಜದಲ್ಲಿ ಸ್ಥಾನಮಾನಗಳಿಗೆ ಬದ್ಧಳಾಗುವುದಿಲ್ಲ. ಇದರಿಂದ ಅವಳು ಅಸಹಾಯಕಳಾಗಿ ಸಾವಿನ ಹಾದಿಯನ್ನೋ ಅಥವಾ ಮತ್ತದೇ ಪರಪುರುಷನ ಸಹವಾಸದ ದಾರಿಯನ್ನೋ ತುಳಿಯಬೇಕಿತ್ತು. ತನ್ನನ್ನು ತಾನು ಸಾವಿನ ಕೂಪಕ್ಕೆ ತಳ್ಳಿಕೊಳ್ಳಲಾರದ ಎಷ್ಟೋ ಹೆಣ್ಣುಗಳು ವೇಶ್ಯಾ ಜೀವನದಲ್ಲೇ ಮುಂದುವರಿದ ಸಾಧ್ಯತೆಗಳು ಹೆಚ್ಚಾಗಿರುತ್ತಿದ್ದವು. ಸಮಾಜ ಅಂತಹ ಹೆಣ್ಣುಗಳನ್ನು ಕಾಣುವ ರೀತಿ ಬದಲಾಗಬೇಕಿದೆ. ಅವಳನ್ನು ಮನುಷ್ಯಳಂತೆ ಕಂಡು ಅವಳ ಸಮಸ್ಯೆ, ಭಾವನೆಗಳಿಗೆ

ಸ್ಪಂದಿಸುವ ಅಗತ್ಯವಿದೆ. ಆಗ ಮಾತ್ರ ನೊಂದ ಹೆಣ್ಣುಗಳ ಮನಸ್ಸಿಗೆ ಸಾಂತ್ವನ ಸಿಗುತ್ತದೆ. ಇಂದಿಗೂ ಹಲವು ಕಡೆ ಈ ದೇವದಾಸಿ ವ್ಯವಸ್ಥೆ ಅಸ್ತಿತ್ವದಲ್ಲಿರುವುದು ಉತ್ತರ ಕರ್ನಾಟಕದ ಹಲವು ಕಡೆ ಕಂಡುಬರುತ್ತದೆ. ಸರ್ಕಾರ ಈ ವ್ಯವಸ್ಥೆಯನ್ನು ತಡೆಯಲು ದೇವದಾಸಿ ನಿಷೇಧ ಕಾಯ್ದೆಯನ್ನು ೧೯೮೨ರಲ್ಲಿ ಜಾರಿಗೊಳಿಸಿದೆ. ಇದರ ಅನ್ವಯ ಈ ವ್ಯವಸ್ಥೆಗೆ ಪ್ರೋತ್ಸಾಹಿಸುವವರಿಗೆ ೫ವರ್ಷ ಕಾರಗೃಹ, ರೂ.೫೦೦೦ ದಂಡಸಹಿತ ಶಿಕ್ಷೆ ವಿಧಿಸುತ್ತದೆ. ದೇವದಾಸಿಯರು ವಿವಾಹವಾದರೆ ಅವರಿಗೆ ರೂ.೩೦೦೦ ಮಾಸಿಕ ಪ್ರೋತ್ಸಾಹಧನ ನೀಡಲಾಗುತ್ತದೆ. ಇವರ ಮಕ್ಕಳಿಗಾಗಿ ಬೆಳಗಾವಿ ಜಿಲ್ಲೆ ಸವದತ್ತಿಯಲ್ಲಿ ಪ್ರಮಾಣಿತ ಶಾಲೆ ತೆರೆದಿದೆ. ೧೮ ವರ್ಷಗಳ ನಂತರದ ಪುನರ್ವಸತಿಗಾಗಿ ಒಂದು ರಾಜ್ಯ ವಸತಿ ನಿಲಯವನ್ನು ಸರ್ಕಾರ ಸ್ಥಾಪಿಸಿದೆ. ಸ್ತ್ರೀಯರು ಬಡತನ, ದಾರಿದ್ರ್ಯ, ದೈವಿಭಾವನೆ, ತಮ್ಮ ಮುಗ್ಧತೆಯಿಂದ ಈ ಅಂದ ವ್ಯವಸ್ಥೆಗೆ ಬಲಿಯಾಗುತ್ತಿದ್ದಾರೆ. ಸ್ತ್ರೀಯರಿಗೆ ಕಡ್ಡಾಯ ಶಿಕ್ಷಣ ನೀಡಿದಾಗ ಮಾತ್ರ ಸ್ವಲ್ಪ ಮಟ್ಟಕ್ಕಾದರೂ ಅವರ ಸ್ಥಾನಮಾನಗಳು ಹೆಚ್ಚಾಗುವ ಮಟ್ಟಕ್ಕಾದರೂ ಬಂದು ನಿಲ್ಲುವ ಸಾಧ್ಯತೆಗಳಿವೆ.

ಅಡಿಟಿಪ್ಪಣಿ

೧. ಕರುಣವಿಜಯೇಂದ್ರ, **ಕರ್ನಾಟಕ ದೇವಾಲಯಗಳಲ್ಲಿ ರಂಗಭೋಗ ನೃತ್ಯ**, ಪು.೫೬

೨. ಅದೇ, ಪು.೫೮

೩. ಅದೇ, ಪು.೫೯

೪. ಅದೇ, ಪು.೫೮

೫. ಅದೇ, ಪು.೫೮

೬ ಅದೇ, ಪು.೫೯

೭ ಅದೇ, ಪು.೫೯

೮. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಪು.೧೮೦

೯. ಕರುಣ ವಿಜಯೇಂದ್ರ, **ಪೂರ್ವೋಕ್ತ**, ಪು.೫೯-೬೦

೧೦. ಅದೇ, ಪು.೬೦

೧೧. ಅದೇ, ಪು.೬೮

೧೨. E.C.Vol.XI, ಚಿತ್ರದುರ್ಗ ೨

೧೩. ಅದೇ, ೩

೧೪. ಅದೇ, ೪

೧೫. ಅದೇ, ೧೫

೧೬. ಅದೇ, ೨೩

೧೭. ಅದೇ, ೨೯,

೧೮. ಅದೇ, ೩೨,

೧೯. ಅದೇ, ೩೪, ಪು.೨೫

೨೦. E.C.Vol.XI, ಹೊಳಲ್ಕೆರೆ ೪

೨೧. ಅದೇ, ೭

೨೨. ಅದೇ, ೨೪

೨೫. ಅದೇ, ೫೬

೨೬. ಅದೇ, ೬೮

೨೫. ಅದೇ, ೭೧

೨೬. ಅದೇ, ೧೨೨

೨೭. ಅದೇ, ೧೨೩

೨೮. ಅದೇ, ೧೨೧

೨೯. ಅದೇ, ೧೩೨

೩೦. E.C.Vol.XI, ಚಳ್ಳಕೆರೆ ೨೧

೩೧. E.C.Vol.XI, ಮೊಳಕಾಲ್ಮೂರು ೨೯

೩೨. ಶೋಭನಾ ಎಸ್, ಶಾಸನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ, ಪು.೧೬೮

೩೩. EI.XV, P.೮೭

೩೪. EI.XV, P.೮೨

೩೫. SII-i-X-i ಬಾಗಳಿ ೮೦, ಕ.ವಿ.ಶಾ.ಸಂ.೧

೩೬ E.C.Vol.XI, ಹೊಳಲ್ಕೆರೆ ೧೨೧

೩೭. ಅದೇ, ೫೬

೩೮. E.C.Vol.XI, ಚಿತ್ರದುರ್ಗ ೩೪

೩೯. ಅದೇ, ೬

೪೦. ಲಕ್ಷ್ಮಣ್ ತೆಲಗಾವಿ, ಚಿತ್ರದುರ್ಗ ನಾಯಕ ಅರಸರು, ಪು.೬

೪೧. ನಾಗರಾಜ್ ಆರ್.ಬಾಗೂರು, **ಹೊಸದುರ್ಗ ಸುತ್ತ**, ಪು.೮-೯

೪೨. ರಾಜಶೇಖರಪ್ಪ, **ಇತಿಹಾಸ ಕಥನ**, ಪು.೨೪

೪೩. E.C.Vol.XI, ಹೊಳಲ್ಕರೆ ೧೨೧

೪೪. ಅದೇ, ೫೬

೪೫. E.C.Vol.XI, ಚಿತ್ರದುರ್ಗ ૩೪

೪೬. ಅದೇ, ೬

೪೭. E.C.Vol.XI, ಗುಬ್ಬಿ ೭೯

೪೮. SII, ix-ii ೪೧೭, ಕ.ವಿ.ಶಾ.ಸಂ.೧

೪೯. ಚೆನ್ನಕ್ಕ ಎಲಿಗಾರ, **ಕರ್ನಾಟಕ ಸ್ತ್ರೀ ಸಮಾಜ**, ಪು.೬೫

೫೦. ಅದೇ, ಪು.೬೬

ಅಧ್ಯಾಯ ನಾಲ್ಕು

ಮಹಾಸತಿಕಲ್ಲುಗಳಲ್ಲಿ ಸ್ತ್ರೀಯರ ಚಿತ್ರಣ

೪.೧. ಮಾಸ್ತಿಕಲ್ಲುಗಳ ವಿಧಗಳು

೪.೨. ಪೆಣ್ಬುಯಲ್

೪.೩. ಬಹುಪತ್ನಿತ್ವ

ಅಧ್ಯಾಯ ನಾಲ್ಕು

ಮಹಾಸತಿ ಕಲ್ಲುಗಳಲ್ಲಿ ಸ್ತ್ರೀಚಿತ್ರಣ

ಸಂಪ್ರದಾಯ, ಧರ್ಮ, ನಡೆನುಡಿ, ನಂಬಿಕೆ, ನೈತಿಕತೆ, ಆಚಾರ-ವಿಚಾರ, ಪದ್ಧತಿಗಳು, ಆಚರಣೆಗಳು ಮೊದಲಾದ ಜೀವನ ವಿಧಾನಗಳನ್ನು ಜೀವಾಳವನ್ನಾಗಿಸಿಕೊಂಡಿರುವ ಭಾರತದಲ್ಲಿ ಮಹಾಸತಿ ಆಚರಣೆಯೂ ಸಹ ಹೇರಳವಾಗಿ ಬೇರುಬಿಟ್ಟುಕೊಂಡಿದೆ. ಈ ವ್ಯವಸ್ಥೆ ಸಂಪ್ರದಾಯ ಮನೋಭಾವನೆಯಿಂದ ಕೂಡಿದ ಜನರಿರುವ ಭಾರತ ದೇಶದಲ್ಲಿ ಮಾತ್ರವಲ್ಲ, ಚೀನಾ, ಪ್ರಾಚೀನ ಈಜಿಪ್ಟ್, ಯುರೋಪ್ ಮೊದಲಾದ ದೇಶಗಳಲ್ಲಿಯೂ ಪತಿ ಸತ್ತ ನಂತರ ವಿಧವೆಯಾಗುವ ಅವನ ಪತ್ನಿಯನ್ನು ಅವನೊಂದಿಗೆ ಬಲಿಕೊಡುವ ವ್ಯವಸ್ಥೆ ಆಚರಣೆಯಲ್ಲಿತ್ತೆನ್ನಲಾಗಿದೆ.

ಭಾರತದ ಮಟ್ಟಿಗೆ ವೈದಿಕ ಯುಗದ ಆರ್ಯರಲ್ಲಿ ಪ್ರಾಚೀನ ಬೌದ್ಧ ಸಾಹಿತ್ಯದಲ್ಲಿ ಸತಿ ಪದ್ಧತಿ ಕಾಣಸಿಗುವುದಿಲ್ಲವಾದರೂ, ಕ್ರಿ.ಪೂ.೪೦೦ರಲ್ಲಿ ಈ ವ್ಯವಸ್ಥೆ ಉಗಮಗೊಂಡಿರಬೇಕೆಂದು ಹಲವು ವಿದ್ವಾಂಸರ ಅಭಿಮತ. ಆದರೆ ಸ್ತ್ರೀ ಕುಲಧರ್ಮ ವಿರೋಧಿಗಳು, ಪುರುಷ ದೌರ್ಜನ್ಯದ ಕೇಂದ್ರಬಿಂದುಗಳೂ ಆದ ಸ್ಮೃತಿಕಾರ ಮನು ಯಜ್ಞವಲ್ಕ್ಯರು ಸಹಗಮನವನ್ನು ಅಲ್ಲಗಳೆದು "ಅಳಿಯ ಅಲ್ಲ ಮಗಳ ಗಂಡ" ಎಂಬ ಗಾದೆ ಮಾತಿನಂತೆ ಪತಿ ಸತ್ತ ಪತ್ನಿ ಆ ಜೀವ ಪರ್ಯಾಂತ ಕಠಿಣವಾದ ಜೀವನವನ್ನು ಸಾಧಿಸಬೇಕೆಂದಿದ್ದಾರೆ. ಬೃಹಸ್ಪತಿ ಮತ್ತು ಸ್ಮೃತಿಗಳು ಸಹಗಮನ ಮತ್ತು ಕಠಿಣ ಜೀವನ ವಿಧಾನ ಇವುಗಳಲ್ಲಿ ಯಾವುದಾದರೊಂದನ್ನು ಆಯ್ದುಕೊಳ್ಳಲಿ ಎನ್ನುತ್ತವೆ."[೧] ಗರುಡ ಪುರಾಣ, ಬ್ರಾಹ್ಮಣ ಸ್ತ್ರೀಯರಿಗೆ ಮಾತ್ರ ಸತಿಪದ್ಧತಿ ಸಲ್ಲವೆಂದು, ಸತಿ ಪದ್ಧತಿಯನ್ನು ಪ್ರಶಂಸೆ ಮಾಡುತ್ತದೆ. ಜೊತೆಗೆ ಗರ್ಭಿಣಿ ಸ್ತ್ರೀಯರು, ಚಿಕ್ಕ ಮಗುವನ್ನೊಂದಿದ ಹೆಣ್ಣಿಗೆ ಸಹಗಮನ ನಿರಾಕರಿಸಲಾಗಿರುತ್ತದೆ. ಸ್ತ್ರೀ ಸಹಗಮನ ಮಾಡದೇ ಜೀವಂತವಾಗಿ ಉಳಿದರೆ ಮತ್ತೆ-ಮತ್ತೆ ಮನುಷ್ಯ ಲೋಕದಲ್ಲಿ ಜನ್ಮವೆತ್ತಬೇಕೆಂಬ ನೀತಿಗಳು ಸಮಾಜದಲ್ಲಿ ನೆಲೆಯೂರಿದ್ದವು. ಪುರುಷ ಮೇಲುಗೈ ಸಾಧಿಸುತ್ತಿರುವ ಈ ಸಮಾಜದಲ್ಲಿ ಪುನಃ ಪುನಃ ಜನ್ಮವೆತ್ತಿ ಇದೇ ರೀತಿ ನರಕದಲ್ಲಿ ಬೇಯುವುದಕ್ಕಿಂತ ಬೆಂಕಿಗೆ ಆಹುತಿಯಾಗುವುದೇ ಲೇಸೆಂದು

ಹೆಣ್ಣಾಗಿ ಹುಟ್ಟುವುದು ಈ ಜನ್ಮಕ್ಕೆ ಸಾಕೆಂಬ ಮಟ್ಟದ ಹೆಣ್ಣಿನ ನೋವು ಇದರ ಕಾರಣದಿಂದ ಹೊರತಾಗಿಲ್ಲ. ಜನಪದರು ಒಂದು ಕಡೆ ಹೀಗೆ ಹೇಳುತ್ತಾರೆ.

ಹೆತ್ತವ್ವ ತನ ಮಗಳು ಪಕ್ಕೇಲಿ ಕುಂಡರಿಸಿಕಂಡು
ಬೆಟ್ಟೀಲಿ ಕಣ್ಣೀರ ವರೆಸೂತ
ಬೆಟ್ಟೀಲಿ ಕಣ್ಣೀರ ವರೆಸೂತ। ಎಣುಮಕ್ಕಳು
ವುಟ್ಟಬಾರದೇಳು ಜಲುಮಾಕಂದು॥[೨]

ಹೆಣ್ಣಾಗಿ ಸಮಾಜದಲ್ಲಿ ಹುಟ್ಟುವುದೇ ಬೇಡವೆಂದು ತಾಯಿಯ ಮೂಲಕ ಈ ಹಾಡನ್ನು ಜನಪದರು ಹೇಳಿಸಿದಂತಿದೆ. ಗಂಡನೊಂದಿಗೆ ಸಾಯದ ವಿನಃ ಅವಳಿಗೆ ಪುರುಷ ಪ್ರಧಾನ ವ್ಯವಸ್ಥೆಯ ಕಟ್ಟಳೆಗಳಿಂದ ಮುಕ್ತಿಯೇ ಸಾಧ್ಯವಿಲ್ಲವೆಂಬ ಮಟ್ಟಕ್ಕೆ ಸಮಾಜ ಅವಳಿಗೆ ಚೌಕಟ್ಟನ್ನು ವಿಧಿಸಿದೆ.

ಮಹಾಸತಿ ಎಂಬುದರ ತದ್ಭವ ರೂಪ ಸಂಸ್ಕೃತದ 'ಮಾಸ್ತಿ' ಶಬ್ದವಾಗಿದೆ. ಪತಿಯಾದವನು ಯುದ್ಧದಲ್ಲೋ, ರಕ್ಷಣೆಯ ಸಂದರ್ಭದಲ್ಲೋ ಅಥವಾ ಬೇರಾವ ಕಾರಣದಿಂದಲೋ ಮರಣಿಸಿದರು ಅವನೊಂದಿಗೆ ಸತಿಯಾದವಳು ಅವನೊಂದಿಗೋ, ಅನಂತರವೋ ತಾನು ಮರಣಿಸುವುದಕ್ಕೆ ಮಹಾಸತಿ ಆಚರಣೆ ಎನ್ನಲಾಗುತ್ತದೆ. ಇಂತಹ ಸತಿ ಆಚರಣೆಗಳಲ್ಲಿ ಎರಡು ವಿಧಗಳಿದ್ದು, ಅವುಗಳು ಸಹಗಮನ ಮತ್ತು ಅನುಗಮನ ಪದ್ಧತಿಗಳಾಗಿವೆ. ಗಂಡನೊಂದಿಗೆ ಚಿತಾಪ್ರವೇಶ ಮಾಡುವುದನ್ನು ಮಹಾಭಾರತದ ಪಾಂಡುರಾಜನ ಪತ್ನಿ ಮಾದ್ರಿ ಗಂಡನೊಂದಿಗೆ ಸಹಗಮನ ಮಾಡುತ್ತಾಳೆ. ನಮಗೆ ಅಲ್ಲಿಂದಲೇ ಸತಿಪದ್ಧತಿ ರೂಢಿಗತವಾಗಿ ಬಂದಿದೆ ಎನ್ನಬಹುದು. ಅನುಗಮನವೆಂದರೆ ಗಂಡ ಎಲ್ಲೋ ಮರಣಿಸಿದಾಗ ಸ್ವಲ್ಪ ದಿನಗಳ ನಂತರ ತಾನೇ ಚಿತೆ ನಿರ್ಮಿಸಿಕೊಂಡೋ ಅಥವಾ ತನ್ನ ಬಂಧು ಬಳಗದವರು ನಿರ್ಮಿಸಿದ ಚಿತೆಯಲ್ಲೋ ಹಾರಿ ಪ್ರಾಣ ತ್ಯಾಗ ಮಾಡುವುದಾಗಿದೆ. ಸಮಾಜದಲ್ಲಿ ಸತಿ ವ್ಯವಸ್ಥೆಗಿದ್ದ ಕಾರಣಗಳನ್ನು ಈ ಕೆಳಕಂಡಂತೆ ಗಮನಿಸಬಹುದು.

* ವ್ಯಕ್ತಿ ಮರಣಿಸಿದಾಗ ಅವನೊಂದಿಗೆ ಅವನ ಪ್ರಿಯ ವಸ್ತುಗಳೆಲ್ಲವೂ ಅವನಿಗೆ ಸ್ವಂತವಾದವುಗಳು ಆ ಕಾರಣಕ್ಕೆ ಅವು ಅವನೊಂದಿಗೆ ಹೋಗಬೇಕೆಂಬ ಉದ್ದೇಶದಿಂದ.
* ಗಂಡ ಸತ್ತ ನಂತರ ಅವನೊಂದಿಗೆ ಅವನ ಸತಿಯು ಮರಣಿಸುವುದರಿಂದ ಸತಿ ಪತಿಯರಿಬ್ಬರಿಗೂ ಸ್ವರ್ಗ ಪ್ರಾಪ್ತಿಯಾಗುತ್ತದೆ. ಒಂದು ವೇಳೆ ಗಂಡನೊಂದಿಗೆ ಸಾಯದ ಸ್ತ್ರೀಗೆ ನರಕ ಪ್ರಾಪ್ತಿಯಾಗುತ್ತದೆಂಬ ಭಾವನೆ, ಅಲ್ಲದೆ ಇಬ್ಬರೂ ಒಟ್ಟಿಗೆ ಸಾಯುವುದರಿಂದ ಮುಂದಿನ ಜನ್ಮದಲ್ಲಿ ಪತಿ ಪತ್ನಿಯರಾಗಿ ಹುಟ್ಟುವರೆಂಬ ಪುನರ್ಜನ್ಮದ ಭ್ರಮೆ.
* ಮಹಾಸತಿಯಾಗುವ ಸ್ತ್ರೀಯರ ಹೆಸರು ಲೋಕದಲ್ಲಿ ಶಾಶ್ವತವಾಗಿ ಉಳಿಯುತ್ತದೆಂಬ ಭಾವನೆ.

* ಅಗ್ನಿಪ್ರವೇಶ ಮಾಡುವ ಹೆಣ್ಣು ಸ್ವರ್ಗಕ್ಕೆ ಅಂದರೆ ಗಂಡನ ಮನೆಗೆ ಹೋಗುತ್ತಾಳೆಂಬ ಹುಸಿ ನಂಬಿಕೆಗಳು.

* ಪತಿ ಸತ್ತ ನಂತರ ಸತಿಯಾದವಳು ಸ್ವಇಚ್ಛೆಯಿಂದಲೋ ಇಚ್ಛೆಯಿಲ್ಲದೆಯೋ ಅನ್ಯ ಪುರುಷರ ವಶವಾಗುತ್ತಾಳೆಂಬ ಪುರುಷ ಸ್ವಾರ್ಥ.

* ಗಂಡ ಮರಣಿಸಿದ ನಂತರ ಹೆಂಡತಿಯಾದವಳು ತನ್ನ ಶೀಲ ಸಂರಕ್ಷಣೆ, ಪಾವಿತ್ರ್ಯಗಳ ಅನಿಶ್ಚಿತತೆಯ ಕಾರಣದಿಂದ ತನ್ನನ್ನು ತಾನೇ ಬಲಿಕೊಟ್ಟು ಕೊಳ್ಳುವುದು.

* ಗಂಡ ಸತ್ತ ನಂತರ ಸತಿಯನ್ನು ಬೆಂಕಿಗೆ ತಳ್ಳಿದರೆ ಅವರ ಆಸ್ತಿಯನ್ನು ಪಡೆಯಬಹುದೆಂಬ ಪ್ರಭುವರ್ಗ ಅಥವಾ ಪುರೋಹಿತಶಾಹಿ ವ್ಯವಸ್ಥೆಯ ಹುನ್ನಾರ.

“ಬ್ರಹ್ಮ ಶಿವನು ಪುರುಷನ ಪರೋಕ್ಷದೊಳ್ ಪೆರ
ಗಿರದಾಗಡೆ ಸತ್ತಳಪ್ಪೊಡಾಕೆಗೆ ಸಗ್ಗಂ
ದೊರಕೊಳ್ಳುಮೆಂಬ ದುರ್ಬೋ
ಧರ ಮಾತಂ ಕೇಳ್ದು ನಂಬಿ ಕಿಚ್ಚಂ ಪುಗುವರ್”॥[೩]

ಈ ಮಾತುಗಳ ಮೂಲಕ ಸಂಪೂರ್ಣ ಸತಿವ್ಯವಸ್ಥೆಯನ್ನು ಅಲ್ಲಗಳೆಯುತ್ತಾನೆ. ವ್ಯಕ್ತಿ ವ್ಯವಹಾರಿಕವಾಗಿ ನಡೆಸುವ ಶೋಷಣೆ, ಧರ್ಮದ ಹೆಸರಿನಲ್ಲಿ ಧಾರ್ಮಿಕ ಮುಖವಾಡ ಧರಿಸಿ ಹೆಣ್ಣಿಗೆ ಪರಿಧಿ ನಿರ್ಮಿಸಿ ಬಂಧಿಸಿದೆ. ದಕ್ಷಬ್ರಹ್ಮ ತನ್ನ ಯಜ್ಞದ ಸಂದರ್ಭದಲ್ಲಿ ಶಿವನನ್ನು ಹಿಯ್ಯಾಳಿಸಿದಾಗ ಶಿವನ ಪತ್ನಿ ದಾಕ್ಷಾಯಿಣಿ ಪತಿ ಪರವಾಗಿ ನಿಂತು ಆ ಯಜ್ಞದಲ್ಲಿ ಪ್ರಾಣಹರಣ ಮಾಡಿದ ಸಂದರ್ಭವೇ ಪತಿಗಾಗಿ ಸತಿ ಬೆಂಕಿಗಾವುತಿಯಾಗುವ ಪದ್ಧತಿಯ ಬೆಳವಣಿಗೆಗೆ ದಾರಿಯಾಯಿತೆನ್ನಲಾಗಿದೆ. ಸಹಗಮನದ ಮೊದಲ ನಿದರ್ಶನ ನಮಗೆ “ಕ್ರಿ.ಪೂ.೩೧೬ರಲ್ಲಿ ಗ್ರೀಕರೊಡನೆ ಹೋರಾಡಿ ಮಡಿದ ಕೆತ್ತೂಸನ ಕಿರಿಯ ಹೆಂಡತಿಯ ಮರಣವಾಗಿದೆ. ಈ ಪದ್ಧತಿ ಕ್ರಿ.ಶ.ನಾಲ್ಕನೆ ಶತಮಾನದಿಂದ ಪ್ರಾರಂಭವಾಗಲಾರಂಭಿಸಿತು ಎನ್ನಲಾಗಿದೆ.”[೪] ಚಿತಾ ಪ್ರವೇಶ ಮಾಡುವುದರಿಂದ ಮಾಡಿದ ಪಾಪಗಳೆಲ್ಲ ನಿವಾರಣೆಯಾಗುವುದರ ಜೊತೆಗೆ ಮೂರುವರೆ ಕೋಟಿ ವರ್ಷ ಸ್ವರ್ಗದಲ್ಲಿ ಸುಖವಾಗಿರುತ್ತಾರೆಂಬ ನಂಬಿಕೆಯಿಂದ ಆರಂಭವಾಯಿತು.

“ಕಾಳಿದಾಸ ಕವಿಯು ಸ್ತ್ರೀಗೆ ಸಹಗಮನ ಸಹಜವಾದುದೆಂದು ಅಭಿಪ್ರಾಯಪಡುತ್ತಾನೆ.”[೫] ಬಾಣಕವಿ ತನ್ನ ಕಾದಂಬರಿಯಲ್ಲಿ ಸತಿವ್ಯವಸ್ಥೆಯನ್ನು ಉಗ್ರವಾಗಿ ವಿರೋಧಿಸುತ್ತಾನೆ. ಕಾಶ್ಮೀರದಲ್ಲಿ “ಅತ್ಯಂತ ಪ್ರಬಲ ಆಚರಣೆಯಾಗಿತ್ತೆಂದು ಕಲ್ಹಣನು ತನ್ನ ರಾಜತರಂಗಿಣಿಯಲ್ಲಿ ವ್ಯಕ್ತಪಡಿಸುತ್ತಾನೆ.”[೬]

ದಕ್ಷಿಣ ಭಾರತದಲ್ಲಿ ಕ್ರಿ.ಶ.೧೦ನೇ ಶತಮಾನದಿಂದ ಹೆಚ್ಚಾಗಿ ಪ್ರಚಾರಕ್ಕೆ ಬಂದ ಈ ಪದ್ಧತಿ, ಅನಂತರ ಹೆಚ್ಚು ಹೆಚ್ಚು ಆಚರಣೆಗೆ ಬಂದಿತೆನ್ನಲಾಗಿದೆ. ಕರ್ನಾಟಕದಲ್ಲಿ ಕ್ರಿ.ಶ.ಸು.೪೦೦ರ ಸೊರಬ ತಾಲೂಕಿನ ಶಾಸನವು ಕದಂಬ ವಂಶದ ರಾಣಿ ರವಿವರ್ಮನೊಡನೆ ಚಿತಾಪ್ರವೇಶ

ಮಾಡಿದಳೆಂದು ತಿಳಿಸುತ್ತದೆ. ಅಲ್ಲದೆ ಸತಿ ಉಲ್ಲೇಖಿತ ಕರ್ನಾಟಕದ ಮೊದಲ ಶಾಸನವಾಗಿದೆ. ಕ್ರಿ.ಶ.೯೦೮–೯ನೇ ಶಾಸನವೊಂದರಲ್ಲಿ.... ನಹೆಗ್ಗಡೆ ತೊಮ್ಮನೆಂಬೊ...(ಆಜಿ) ಯೊಳ್ಕಾದಿ ಸತ್ತೋಡಾತನ ಪೆಂಡತಿ ಬಳಕ್ಕನಪ... ಸದೊ ಕಾಯಿಕೋಜ....[೭] ಸಹಗಮನ ಕುರಿತ ಶಾಸನವಾಗಿದ್ದು, ಹೆಚ್ಚು ತ್ರುಟಿತವಾಗಿರುವುದು ಕಂಡುಬರುತ್ತದೆ.

ಕ್ರಿ.ಸು.೯೪೫ರಲ್ಲಿ ರಚಿತವಾದ ಪಂಪನ ಪಂಪ ಭಾರತದಲ್ಲಿ ಮಾದ್ರಿಯ ಸಹಗಮನವಿದ್ದು, "ವೀರನೊಬ್ಬನು ನಾಳೆ ತಾನು ಸತ್ತು ದೇವತಾ ಸ್ತ್ರೀಯನ್ನು ಸೇರುವೆನೆಂದು ಹೇಳಿದಾಗ ಅವನ ನಲ್ಲೆಯು ತಾನು ಅವನಿಗಿಂತ ಮುಂಚೆಯೇ ದೇವಲೋಕಕ್ಕೆ ಹೋಗುವುದಾಗಿ ಹೇಳುವ"[೮] ಪ್ರಸಂಗವೊಂದು ಬರುತ್ತದೆ. ಕರ್ನಾಟಕದ ಮೊಟ್ಟಮೊದಲ ಸ್ಪಷ್ಟ ಸತಿ ನಿದರ್ಶನವು ಕ್ರಿ.ಶ.೯೭೨ರ ಶಾಸನವಾಗಿದ್ದು, ಇದರಲ್ಲಿ ಬದಿಯಣ್ಣನು ಮಡಿದಾಗ ಅವನ ಪತ್ನಿ ಜಕ್ಕಬ್ಬೆ ಪ್ರಾಣಾರ್ಪಣೆ ಮಾಡಿದಳೆಂದು, ಇವಳ ಕಲ್ಲನ್ನು ತಂಗಿಯಾದ 'ಜಾಬೆ' ನಿಲ್ಲಿಸಿದಳೆನ್ನಲಾಗಿದೆ. ರನ್ನಕವಿ ತನ್ನ ಅಜಿತನಾಥ ಪುರಾಣದಲ್ಲಿ ಗುಂಡಮಬ್ಬೆಯ ಬಾಯಿಯಿಂದ "ಕುಲವಧುವಾದವಳು ಪತಿಯ ಪರೋಕ್ಷದಲ್ಲಿ ಮಾಡಬೇಕಾದ ಕರ್ತವ್ಯ 'ಜಿನದೀಕ್ಷಾ ಚರಣಂ' ಅಥವಾ ಶುಭ ಚರಿತದೆ ಮರಣಂ"[೯] ಹೀಗೆ ಹೇಳಿಸುತ್ತಾನೆ.

೬ ರಿಂದ ೧೭ನೇ ಶತಮಾನದವರೆಗೆ ಸುಮಾರು ೧೦ ಸತಿ ನಿದರ್ಶನಗಳು ದೊರೆಯುತ್ತವೆ. ನಂತರ ಪಾಳೇಗಾರರ ಆಳ್ವಿಕೆಯವರೆಗೂ ಹೆಚ್ಚು–ಹೆಚ್ಚು ಸತಿ ನಿದರ್ಶನಗಳು ಸಿಗುತ್ತವೆ. ಗಂಡನೊಂದಿಗೆ ಮಡಿದ ಮಹಾಸತಿಯರ ಸ್ಮರಣಾರ್ಥವಾಗಿ ನಿಲ್ಲಿಸಿದ ಸ್ಮಾರಕಗಳೇ ಮಾಸ್ತಿಗಲ್ಲುಗಳಾಗಿದ್ದು, ಮೇಲೆತ್ತಿದ ತೋಳಿನ ಚಿತ್ರದಿಂದ ಕೂಡಿರುತ್ತವೆ. ಶಿಲ್ಪಗಳ ಕೆತ್ತನೆ ಕರ್ನಾಟಕದಾದ್ಯಂತ ಕಂಡುಬರುತ್ತದೆ. ಆದರೂ ಬರಹಗಳಿಂದ ಕೂಡಿದ ಕೆತ್ತನೆ ಅತ್ಯಂತ ವಿರಳವಾಗಿ ಕಂಡುಬರುತ್ತದೆ.

೪.೧. ಮಾಸ್ತಿಕಲ್ಲುಗಳ ವಿಧಗಳು

ಸ್ತ್ರೀಯರ ಮುಡಿಯಲ್ಲಿ ಹೂವಿನ ದಂಡೆ, ಕಂಬದಿಂದ ಹೊರಟ ಕೈ, ಚಿತೆಯೇರುವ ಸತಿ ಚಿತೆಯೇರುವ ಮುನ್ನ ಕುಂಕುಮದಲ್ಲಿ ಕೈ ಬೆರಳನ್ನು ಅದ್ದಿ ಬಾಗಿಲಿನ ಮೇಲೆ ತಮ್ಮ ಬೆರಳು ಮೂಡಿಸುತ್ತಿದ್ದರೆಂದು, ಶಿಲ್ಪಗಳನ್ನು ಕೊರೆಯುವಾಗ ಬೆರಳುಗಳನ್ನು ಸೇರಿದಂತೆ ತೋಳನ್ನು ಕೆತ್ತುತ್ತಿದ್ದರು. ಮರಣ ಹೊಂದುವ ಸತಿ ಬಲಗೈ ತೋರಿಸಿ ನೆರೆದ ಜನರಿಗೆ ಆಶೀರ್ವಾದ ಮಾಡುವ ಕೈಲಿ ನಿಂಬೆ ಹಣ್ಣು, ಮಾದಲದ ಹಣ್ಣು, ಕನ್ನಡಿ ಹಿಡಿದು ಸರ್ವಾಲಂಕಾರ ಭೂಷಿತೆಯಾಗಿ ಚಿತೆಗೇರುತ್ತಿದ್ದಳು. ಒಂಟಿ ಕೈಯಿರುವ ಮಾಸ್ತಿಗಲ್ಲುಗಳನ್ನು "ವ್ಯಾಸನ ತೋಳು" ಒಂಟಿ ಕೈ ಮಾಸ್ತಿಕಲ್ಲೆಂತಲೂ ಎರಡು ಕೈಗಳಿಂದ ಕೂಡಿದ್ದರೆ ಇಕ್ಕೈಮಾಸ್ತಿಕಲ್ಲೆಂದು ಕರೆಯುತ್ತಾರೆ. ಅಲ್ಲದೆ ಪೂರ್ಣಸತಿ ಶಿಲ್ಪ, ಪೂರ್ಣಸತಿ ಮತ್ತು ಇತರಶಿಲ್ಪ, ಇಬ್ಬರು ಸತಿಯರ ಪೂರ್ಣಶಿಲ್ಪ ಮತ್ತು ಇತರರ ಶಿಲ್ಪ, ವೀರಮಾಸ್ತಿಗಲ್ಲುಗಳೆಂದು ವಿಂಗಡಿಸಲಾಗುತ್ತದೆ.

ಪೂರ್ಣ ಸತಿಶಿಲ್ಪವು ಕೆತ್ತಿರುವ ಮೂರ್ತಿಯಲ್ಲಿ ಒಬ್ಬ ಸ್ತ್ರೀ ಚಿತ್ರಮಾತ್ರ ದೇವತೆಯೋಪಾದಿಯಲ್ಲಿರುತ್ತದೆ. ಬೇರೆ ಮತ್ತಾವ ಚಿತ್ರವೂ ಇರದ ಎಡಗೈಯಲ್ಲಿ ಕಮಂಡಲವಿಡಿದು ಬಲಗೈ ಮೇಲಕ್ಕೆತ್ತಿ ಸತಿ ಹೋಗುವಾಗ ಅಲ್ಲಿ ನೆರೆದ ಸಾಗರದೋಪಾದಿಯ ಜನರಿಗೆ ಆಶೀರ್ವಾದ ಮಾಡುವ ಸಲುವಾಗಿ ಎತ್ತಿದ ಆಶೀರ್ವಾದದ ಕೈ ಇದಾಗಿರುತ್ತದೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಬಾಗೂರು ಹೋಬಳಿಯಲ್ಲಿ ಕೆರೆಯ ಏರಿಯ ಬದಿಯಲ್ಲಿ ಸುಮಾರು ೧೬-೧೭ನೇ ಶತಮಾನದ ಮಾಸ್ತಿಗಲ್ಲನ್ನು ಕೆತ್ತಲಾಗಿದ್ದು, ಇದು ೫ ಅಡಿ ಎತ್ತರದ ಪೂರ್ಣಸತಿ ಶಿಲ್ಪವಾಗಿದ್ದು, ತುಂಬಾ ವಿಶಿಷ್ಟತೆಯಿಂದ ಕೂಡಿದೆ. ಕಪ್ಪು ಶಿಲೆಯಿಂದ ಕೆತ್ತಿದ್ದು, ಸತಿ ತನ್ನ ಬಲಗೈ ಮೇಲಕ್ಕೆತ್ತಿ ಕೊರಳ ತುಂಬ ಆಭರಣ, ಮುಡಿಗೆ ಕೇದಗೆ ಹೂವಿನ ದಂಡೆ, ಪಾದದವರೆಗೂ ಸೀರೆ ಕಾಣುವಂತೆ ನರಿಗೆ ಹೊಯ್ದು ಸೀರೆ ಹುಟ್ಟು ಸಿಂಗರಿಸಿಕೊಂಡಿರುವ ಚಿತ್ರವಿದೆ. ಈ ಶಿಲ್ಪದ ಬಗ್ಗೆ ಊರಿನವರು ಬಾಗೂರನ್ನು ಆಳುತ್ತಿದ್ದ ಗೌಡನ ಅಧಿಕಾರ ಸಹಿಸದ ಗುಂಪೊಂದು ಗೌಡ ರಾತ್ರಿ ವೇಳೆ ಹೊರಗೆ ನಿದ್ರಿಸುವಾಗ ಕಲ್ಲು ಎಸೆದು ಕೊಂದರೆಂದು, ಇವನೊಂದಿಗೆ ಗೌಡನ ಪತ್ನಿಯೂ ಚಿತಾಪ್ರವೇಶ ಮಾಡಿದಳೆಂದು, ಇವಳ ಹೆಸರಿನಲ್ಲಿ ಗೌಡನ ವಂಶದವರು ಶಿಲ್ಪವನ್ನು ನಿರ್ಮಿಸಿದರೆಂದು, ಇಂದಿಗೂ ಮಾಸ್ತಮ್ಮನ ಗುಡಿಯೆಂದು ಪೂಜಿಸುತ್ತಾರೆಂಬ ಮೌಖಿಕ ಕಥೆಯಿದೆ. ಇದೇ ತಾಲೂಕಿನ ಬಲ್ಲಾಳ ಸಮುದ್ರದಲ್ಲಿ "ಕ್ರಿ.ಶ.ಸು.೧೧-೧೨ನೇ ಶತಮಾನದ ೪ ಅಡಿ ಎತ್ತರದ ಶಿಲ್ಪವಿದ್ದು, ಎಡಗೈಯಲ್ಲಿ ಕಮಂಡಲ, ಬಲಗೈ ಮೇಲಕ್ಕೆತ್ತಿ ಹೆಬ್ಬೆರಳ ತುದಿಯಲ್ಲಿ ನಿಂಬೆಹಣ್ಣು ಹಿಡಿದು ತುರುಬಿಗೆ ಕೇದಿಗೆ ಹೂ ಮುಡಿದು, ಕಿವಿಯಲ್ಲಿ ಕುಂಡಲ, ಕೈಬಳೆ, ಕೊರಳಲ್ಲಿ ಆಭರಣ ಧರಿಸಿ ಸೀರೆಯುಟ್ಟು, ನಿಂತ ಚಿತ್ರವಿದೆ. ಇದೇ ತಾಲೂಕು ಚಿಕ್ಕ ಬ್ಯಾಲದ ಕೆರೆಯ ಪ್ರೌಢಶಾಲೆಯ ಬಳಿ ಸು.ಎರಡು ಅಡಿ ಎತ್ತರದ ಶಿಲ್ಪವಿದ್ದು, ಹಸಿರುಬಣ್ಣದ ಹೊಯ್ಸಳ ಶೈಲಿಯ ವಿಶಿಷ್ಟವಾದ ಸತಿ ಕಲ್ಲಾಗಿದೆ. ಬಲಭಾಗದಲ್ಲಿ ಕಮಂಡಲ ಬಲಗೈಯಲ್ಲಿ ನಿಂಬೆಹಣ್ಣು ಎಡಗೈಯಲ್ಲಿ ಕನ್ನಡಿ ಹಿಡಿದು ನಿಂತ ಶಿಲ್ಪವಾಗಿದೆ."[೯] ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ತಾಲೂಕು ಗೊಡಬನಾಳ ಗ್ರಾಮದಲ್ಲಿ ಪ್ರೌಢಶಾಲೆಯ ಪಕ್ಕ ಭೈರೇಸಿದ್ದೇಶ್ವರ ದೇವಾಲಯದ ಬಳಿ ದೇವಾಲಯದ ಬಲಭಾಗಕ್ಕೆ ಸು.೨/೨ ಅಡಿ ಎತ್ತರದ ಸತಿ ಶಿಲ್ಪವನ್ನು, ಬಲಗೈ ಮೇಲಕ್ಕೆ, ಎಡಗೈಯಲ್ಲಿ ಕಮಂಡಲವಿಡಿದು, ಪಾದದವರೆಗೂ ನರಿಗೆ ಹೊಯ್ದ ಸೀರೆ ಹುಟ್ಟು ನಿಂತಿರುವ ದೃಶ್ಯವಿದೆ. ಇಂದಿಗೂ ಜನ ಅದನ್ನು ಪೂಜಿಸುತ್ತಿದ್ದಾರೆ.

ಪೂರ್ಣಸತಿ ಶಿಲ್ಪ ಮತ್ತು ಇತರ ಶಿಲ್ಪಗಳಲ್ಲಿ ಒಂದು ಮೂಲೆಯಲ್ಲಿ ಹೋರಾಡುತ್ತಿರುವ ವೀರ ಅಥವಾ ಮಹಾಸತಿಯೊಂದಿಗೆ ಕುಳಿತಿರುವ ಭಂಗಿಯಲ್ಲಿ ಚಿತ್ರಿಸಲಾಗಿದೆ. ಹೊಸದುರ್ಗ ತಾಲೂಕು ನಾಗೇನಳ್ಳಿ ಎಂಬ ಗ್ರಾಮದಲ್ಲಿ "೫ ಅಡಿ ಎತ್ತರದ ಕಪ್ಪು ಶಿಲೆಯಿಂದ ನಿರ್ಮಿಸಿದ ಕ್ರಿ.ಶ.೧೧-೧೨ನೇ ಶತಮಾನದ ಶಿಲ್ಪವಾಗಿದ್ದು, ಇದರಲ್ಲಿ ಬಲಗೈಯಲ್ಲಿ ಹಣ್ಣಿರುವ ಗಿಡ ಹಿಡಿದು, ಕೈ ಮೇಲಕ್ಕೆತ್ತಿದ್ದಾಳೆ. ಎಡಗೈಯಲ್ಲಿ ನಿಂಬೆಹಣ್ಣು, ಮೂಲೆಯಲ್ಲಿ ಚಿಕ್ಕದಾಗಿ ಕೆತ್ತಿದ ಚಿತ್ರವಿದೆ.

ಸತಿಯ ಎರಡೂ ಬದಿಯಲ್ಲಿ ಕಮಂಡಲಗಳಿವೆ."[೧೦] ಇದೇ ತಾಲೂಕು ಬನಸಿಹಳ್ಳಿಯಲ್ಲಿ ಆಲದ ಮರದ ಕೆಳಗೆ ೩ ಅಡಿ ಎತ್ತರದ ಹಸಿರು ಬಳಪದ ಹೊಯ್ಸಳರ ಕಾಲದ ಶಿಲ್ಪವಿದ್ದು, ಸತಿ ನಿಂಬೆಹಣ್ಣು ಹಿಡಿದು ಬಲಗೈ ಮೇಲಕ್ಕೆತ್ತಿದ್ದಾಳೆ. ಬಲಗಡೆ ಸಣ್ಣದಾಗಿ ವೀರನ ಚಿತ್ರವಿದೆ.

ಇಬ್ಬರು ಸತಿಯರ ಪೂರ್ಣ ಮತ್ತು ಇತರ ಶಿಲ್ಪಗಳಲ್ಲಿ ವೀರನೊಬ್ಬ ಮಡಿದಾಗ ಅವನಿಗೆ ಇಬ್ಬರು ಪತ್ನಿಯರಿದ್ದು, ಇಬ್ಬರೂ ಚಿತಾ ಪ್ರವೇಶ ಮಾಡಿ ಪ್ರಾಣಹಾನಿ ಮಾಡಿಕೊಳ್ಳುವುದಾಗಿದೆ. ಹೊಸದುರ್ಗ ತಾಲೂಕು ಚಿಕ್ಕಬ್ಯಾಲದ ಕೆರೆಯಲ್ಲಿ "ಪ್ರೌಢಶಾಲೆಯ ಮುಂದೆ ಹೊಯ್ಸಳರ ಕಾಲದಲ್ಲಿ ನಿರ್ಮಿಸಿದ ಹಸಿರುಬಳಪದ ಶಿಲೆಯಲ್ಲಿ ಕೆತ್ತಿದ ಶಿಲ್ಪವಿದ್ದು, ಸ್ತ್ರೀಯು ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು ಎಡಗೈಯಲ್ಲಿ ಕನ್ನಡಿ, ಸ್ತ್ರೀಯ ಎಡಬದಿಯ ಕೆಳಗಡೆ ಕಮಂಡಲ, ಬಲಬದಿಯಲ್ಲಿ ವೀರನು ಕುದುರೆ ಮೇಲೆ ಕುಳಿತು ಈಟಿಯನ್ನು ಹಿಡಿದಿದ್ದಾನೆ. ಇವನ ಹಿಂದೆ ಸೇವಕರು ಛತ್ರಿ ಹಿಡಿದು ನಿಂತಿರುವ ಚಿತ್ರವಿದೆ."[೧೧]

ವೀರಮಾಸ್ತಿ ಕಲ್ಲುಗಳಲ್ಲಿ ವೀರನೊಂದಿಗೆ ಅವನ ಸತಿಯನ್ನು ಕೆತ್ತಲಾಗಿರುತ್ತದೆ. ಇವುಗಳಲ್ಲಿ ಬರಹಗಳಿರುವುದು ಅತ್ಯಂತ ವಿರಳವಾಗಿದ್ದು, ಲಕ್ಕಿಹಳ್ಳಿಯಲ್ಲಿ ವಿಜಯನಗರೋತ್ತರ ಕಾಲದ ಎರಡು ವೀರಮಾಸ್ತಿಗಲ್ಲುಗಳು ಸಿಗುತ್ತವೆ. ಅದರ ಒಂದು ಶಿಲ್ಪದಲ್ಲಿ ವೀರನು ಬಿಲ್ಲು, ಕತ್ತಿ ಹಿಡಿದು ನಿಂತಿರುವ, ಅವನ ಬಲಬದಿಯಲ್ಲಿ ಕುದುರೆ ಛತ್ರಿಯೊಂದಿಗೆ ನಿಂತ ಸೇವಕ ಇವನ ಎಡಭಾಗದಲ್ಲಿ ಸತಿಯು ತನ್ನ ಎರಡು ಕೈ ಮೇಲಕ್ಕೆತ್ತಿ ಎಡಗೈಯಲ್ಲಿ ಕನ್ನಡಿ ಬಲಗೈಯಲ್ಲಿ ನಿಂಬೆಹಣ್ಣು ಹಿಡಿದಿದ್ದಾಳೆ. ಇನ್ನೊಂದು ಶಿಲ್ಪದಲ್ಲಿ ವೀರನು ರಾಜ ಉಡುಪು ಧರಿಸಿ, ಎಡಗೈಯಲ್ಲಿ ಕತ್ತಿ ಬಲಗೈಯಲ್ಲಿ ಯಾವುದೋ ಪ್ರಾಣಿ ಹಿಡಿದಿದ್ದಾನೆ. ತಲೆಯಲ್ಲಿ ಮುಡಿ ಕೊರಳಲ್ಲಿ ಆಭರಣ ಧರಿಸಿದ್ದಾನೆ. ಇವನ ಸತಿ ಎಡಗೈಯಲ್ಲಿ ಕನ್ನಡಿ ಹಿಡಿದು ಕೈ ಮೇಲಕ್ಕೆತ್ತಿದ್ದಾಳೆ. ಬಲಗೈಯಲ್ಲಿ ವಸ್ತುವೊಂದನ್ನು ಹಿಡಿದು ಮೇಲಕ್ಕೆತ್ತಿದ್ದಾಳೆ. ಇವಳ ಮುಡಿ ಅಲಂಕಾರಭರಿತವಾಗಿದ್ದು, ಕೇದಿಗೆ ಹೂ ಮುಡಿದಿದ್ದಾಳೆ. ಇದೇ ತಾಲೂಕು ಮತ್ತೋಡು ಗ್ರಾಮದ ಬನಶಂಕರಿ ದೇವಾಲಯದ ಪ್ರಾಕಾರದ ಒಳಗೆ "ಕ್ರಿ.ಶ.ಸು.೧೭ನೇ ಶತಮಾನದ ಶಿಲ್ಪವಿದ್ದು, ವೀರನೊಬ್ಬ ಕುದುರೆಯ ಮೇಲೆ ಕುಳಿತು ಎಡಗೈಯಲ್ಲಿ ಲಗಾಮು, ಬಲಗೈಯಲ್ಲಿ ಈಟಿ ಹಿಡಿದಿದ್ದಾನೆ. ಬದಿಯಲ್ಲಿ ಸತಿ ಇದ್ದು, ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು ಮೇಲೆತ್ತಿ ಎಡಗೈಯಲ್ಲಿ ಕನ್ನಡಿ ಹಿಡಿದಿದ್ದಾಳೆ."[೧೨] ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ ತಾಲೂಕು ಗೊಡಬನಾಳ ಗ್ರಾಮದಲ್ಲಿ ಕರಿಯಮ್ಮ ದೇವಾಲಯದ ಬಳಿ ೧೭ನೇ ಶತಮಾನಕ್ಕೆ ಸೇರಿದ ಮಾಸ್ತಿಗಲ್ಲಿದ್ದು, ಆಳವಾಗಿ ಕೊರೆದಿರುವ ಸವೆದ ಅಸ್ಪಷ್ಟ ಲಿಪಿಯಿಂದ ಕೂಡಿದ ಶಿಲ್ಪವಾಗಿದೆ. ಇದೇ ಊರಿನಲ್ಲಿ ರುದ್ರಜ್ಜರ ಚಂದ್ರಪ್ಪ ಎಂಬವರ ಹೊಲದಲ್ಲಿ ಸಣ್ಣ ಗುಡಿಯೊಂದರಲ್ಲಿ ವೀರಮಾಸ್ತಿಗಲ್ಲಿದೆ. ಇದು ೧೭ನೇ ಶತಮಾನಕ್ಕೆ ಸೇರಿರಬಹುದಾಗಿದೆ. ಭವಿಷ್ಯಃ ಇವು ಪಾಳೇಗಾರರ ಕಾಲಕ್ಕೆ ಸೇರಿದವುಗಳಾಗಿರ ಬೇಕೆನ್ನಿಸುತ್ತದೆ. ಹೊಳಲ್ಕೆರೆ ತಾಲೂಕು ಮತಿಘಟ್ಟ ಎಂಬ ಗ್ರಾಮದಲ್ಲಿ ವೀರಗಲ್ಲಿನ ಬಲಭಾಗದಲ್ಲಿ ವೀರಮಾಸ್ತಿಗಲ್ಲಿದ್ದು, ಇದು ಸುಮಾರು ೧೭ನೇ

ಶತಮಾನಕ್ಕೆ ಸೇರಿರಬಹುದಾಗಿದೆ. ಇದೇ ತಾಲೂಕು ಗುಂಜಿಗನೂರು ಗ್ರಾಮದಲ್ಲಿ ದಾನ ಶಾಸನದ ಶಿಲೆಯಿದ್ದು, ಅದರ ಬಳಿ ಸುಮಾರು ೧೫-೧೬ನೇ ಶತಮಾನಕ್ಕೆ ಸೇರಿದ ವೀರಮಾಸ್ತಿಗಲ್ಲಿದೆ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕು ಜವನಗೊಂಡನ ಹಳ್ಳಿ ಬಳಿಯ ದಂಡಿಗೆರೆಯ ಅರಳಿಕಟ್ಟೆ ಮೇಲೆ ಒಂದು ವೀರ ಮಾಸ್ತಿಗಲ್ಲಿಡಲಾಗಿದ್ದು, ಅದು ಕರಿಯಬಣ್ಣದ ಗ್ರಾನೈಟ್ ಶಿಲೆಯಾಗಿದೆ. ಈ ಭಾಗದ ವೀರ ಮಾಸ್ತಿಗಲ್ಲುಗಳಲ್ಲಿ ಸರ್ಪದ ಚಿತ್ರಣ ಸಾಮಾನ್ಯವಾಗಿ ಕಂಡುಬರುತ್ತದೆ. ವೀರನು ಖಡ್ಗವನ್ನು ಇಳಿಬಿಟ್ಟುಕೊಂಡು ನಿಂತಿದ್ದಾನೆ. ಎಡಗೈಯಲ್ಲಿ ಬಿಚ್ಚುಗತ್ತಿ ಹಿಡಿದಿದ್ದಾನೆ. ಇವನ ಎರಡೂ ಬದಿಯಲ್ಲಿ ಒಬ್ಬೊಬ್ಬರು ಸತಿಯರು ಅಲಂಕಾರ ಭರಿತರಾಗಿ ನಿಂತಿದ್ದಾರೆ. ಬಲಗೈಯಲ್ಲಿ ನಿಂಬೆಹಣ್ಣು ಎಡಗೈಯಲ್ಲಿ ಕನ್ನಡಿ ಹಿಡಿದು ನಿಂತಿದ್ದಾಳೆ.

ಇದೇ ತಾಲೂಕು ಐಮಂಗಳದದ ಬಳಿ ಗುಯಿಲಾಳು ಎಂಬ ಊರಿನಲ್ಲಿ ಆಂಜನೇಯ ದೇವಾಲಯದ ಎದುರು ಒಂದು ಮಾಸ್ತಿಗಲ್ಲಿನ ಶಿಲ್ಪವಿದ್ದು, ಅದು ಐದು ಅಡಿ ಎತ್ತರ ಎರಡೂಕಾಲು ಅಡಿ ಅಗಲ, ನಾಲ್ಕು ಹಂತಗಳ ಚಿತ್ರಣದಿಂದ ನಿರ್ಮಿಸಲಾಗಿದೆ. ಮೊದಲ ಹಂತ ನೆಲದಲ್ಲಿ ಹೂತು ಹೋಗಿದೆ. ಎರಡನೇ ಹಂತದಲ್ಲಿ ಅಪ್ಸರೆಯೊಬ್ಬಳು ಪಲ್ಲಕ್ಕಿಯಲ್ಲಿ ಕುಳಿತ ವೀರನಿಗೆ ಚಾಮರವನ್ನು ಬೀಸುತ್ತ ಸ್ವರ್ಗಕ್ಕೆ ಕರೆದೊಯ್ಯುತ್ತಿರುವ ದೃಶ್ಯವಿದೆ. ವೀರನು ಧ್ಯಾನಸ್ಥನಾಗಿ ಕೈಮುಗಿದು ಕುಳಿತಿದ್ದಾನೆ. ಇವನ ಪಕ್ಕದಲ್ಲಿ ಅವನ ಇಬ್ಬರು ಸತಿಯರು ನಿಂತಿದ್ದಾರೆ. ಎಡ ಸತಿಯು ಬಲಗೈ ಎತ್ತಿ ನಿಂತಿದ್ದಾಳೆ. ಎಡಗೈಯಲ್ಲಿ ಯಾವುದೋ ವಸ್ತು ಹಿಡಿದುಕೊಂಡಿದ್ದು ಮುಡಿಗೆ ಕೇದಿಗೆ ಹೂ, ಕೊರಳಲ್ಲಿ ಹೂಮಾಲೆ ಧರಿಸಿದ್ದಾಳೆ. ಇವಳ ಪಕ್ಕದಲ್ಲೊಂದು ಸೇವಕಿ ಚಿತ್ರಣವಿದೆ. ಮೂರನೆ ಹಂತದಲ್ಲಿ ವೀರನೊಬ್ಬನು ಮೂರು ಜನ ಸ್ತ್ರೀಯರೊಂದಿಗಿದ್ದಾನೆ. ಎಡಬದಿಯಲ್ಲಿ ಸತಿ ಹೋಗುತ್ತಿರುವ ಚಿತ್ರಣವಿದೆ. ಇವಳ ಪಕ್ಕದಲ್ಲಿ ಮತ್ತೋರ್ವ ಸ್ತ್ರೀ ಕೈಮುಗಿದು ನಿಂತಿದ್ದಾಳೆ. ಈ ಕಲ್ಲು ಸು.ಕ್ರಿ.ಶ.೧೩ನೇ ಶತಮಾನದ್ದಿರಬೇಕೆಂದು ಹೇಳಲಾಗಿದೆ. ನಾಲ್ಕನೇ ಹಂತದಲ್ಲಿ ಪೂಜಿಸುತ್ತ ಕುಳಿತಿರುವ ವೀರ, ಶಿವಲಿಂಗ, ನಂದಿ ಚಿತ್ರಗಳು, ಸೂರ್ಯಪಾನ, ಚಂದ್ರರ ಚಿತ್ರಗಳಿವೆ.

ಇದೇ ತಾಲೂಕು ಹುಳಿಯಾರು ರಸ್ತೆಯ ಕಡೆಯಿರುವ ಉಡುವಳ್ಳಿ ಎಂಬ ಊರಿನ ಕೆರೆಯ ಅಂಗಳದಲ್ಲಿ ದೊರೆತ ವೀರಗಲ್ಲು ಮತ್ತು ಮಾಸ್ತಿಗಲ್ಲುಗಳನ್ನು ಆ ಊರಿನ ಕರಿಯಮ್ಮ ದೇವಾಲಯದ ಬಳಿ ಪೂರ್ವಾಭಿಮುಖವಾಗಿ ನಿಲ್ಲಿಸಲಾಗಿದೆ. ಗ್ರಾನೈಟ್ ಕಲ್ಲಿನಿಂದ ಕೆತ್ತಲಾಗಿದ್ದು, ಕಲ್ಲಿನ ಮೇಲೆ ಮೂರು ಚಿತ್ರಗಳಿವೆ. ಕುದುರೆಯ ಮೇಲೆ ಕುಳಿತಿರುವ ವೀರ ಬಲಗೈಯಲ್ಲಿ ಉದ್ದನೆಯ ಭರ್ಜಿ ಎಡಗೈಯಲ್ಲಿ ಕುದುರೆ ಲಗಾಮು ಹಿಡಿದಿದ್ದಾನೆ. ಇವನಿಗೆ ಓರ್ವ ಸೇವಕ ಎತ್ತರವಾದ ಛತ್ರಿಹಿಡಿದು ನಿಂತಿದ್ದಾನೆ. ಕುದುರೆಯ ಮುಂದೆ ವಸ್ತ್ರಧರಿಸಿ ಬಲಗೈ ಇಳಿಬಿಟ್ಟು ಎಡಗೈ ಮಡುಚಿನಿಂತಿರುವ ದೃಶ್ಯವಿದ್ದು, ಇದು ಸುಮಾರು ಕ್ರಿ.ಶ.೧೩ನೇ ಶತಮಾನದಿದ್ದರಬಹುದೆಂದು ಹೇಳಲಾಗಿದೆ. ಇದೇ ವೀರಮಾಸ್ತಿಗಲ್ಲಿನ ಬಲಭಾಗದಲ್ಲಿ ಸು.ಕ್ರಿ.ಶ.೧೩ನೇ ಶತಮಾನಕ್ಕೆ ಸೇರಿದ

ಮಾಸ್ತಿಗಲ್ಲೊಂದಿದ್ದು, ಗ್ರಾನೈಟ್ ಕಲ್ಲಿನಿಂದ ಕೆತ್ತಲಾಗಿದೆ. ಸ್ತ್ರೀ ಸರ್ವಾಲಂಕಾರ ಭೂಷಿತೆಯಾಗಿ ಎಡಗೈಯಲ್ಲಿ ಕಮಂಡಲ ಬಲಗೈಯಲ್ಲಿ ಮರದ ಚಮಚ ಹಿಡಿದಿರುವ ಚಿತ್ರವಿದೆ. ಈ ರೀತಿಯ ಮಾಸ್ತಿಕಲ್ಲುಗಳು ಇದೇ ತಾಲೂಕಿನ ಬಬ್ಬೂರು, ಕೂನಿಕೆರೆಗಳಲ್ಲಿಯೂ ದೊರೆಯುತ್ತವೆ.

ಚಿತ್ರದುರ್ಗ ತಾಲೂಕು ತುರುವನೂರು ಎಂಬ ಗ್ರಾಮದಲ್ಲಿ ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ ವೀರಮಾಸ್ತಿಗಲ್ಲೊಂದನ್ನು ಪೋಲಿಸ್ ಸ್ಟೇಷನ್ ಎದುರು ನಿಲ್ಲಿಸಲಾಗಿದ್ದು, ಇದು ಎರಡು ಅಡಿ ಉದ್ದ ಎರಡು ಅಡಿ ಅಗಲದಿಂದ ಕೂಡಿದೆ. ಇದೆ ಗ್ರಾಮದ ಅಡವಿ ಆಂಜನೇಯ ದೇವಾಲಯದ ಬಳಿ ಎರಡು ಅಡಿ ಉದ್ದ ಎರಡು ಅಡಿ ಅಗಲದ ಮಾಸ್ತಿಗಲ್ಲೊಂದನ್ನು ನಿಲ್ಲಿಸಲಾಗಿದೆ. ಇದೇ ತಾಲೂಕು ಗೊಡಬನಾಳ ಎಂಬ ಗ್ರಾಮದಲ್ಲಿ ಕಲ್ಲೇಶ್ವರ ದೇವಾಲಯದ ಬಲಭಾಗದಲ್ಲಿ ಪೂರ್ವಾಭೀಮುಖವಾಗಿ ವೀರಗಲ್ಲುಗಳ ಮಧ್ಯದಲ್ಲಿ ಎರಡು ಸತಿಕಲ್ಲುಗಳನ್ನು ನಿಲ್ಲಿಸಲಾಗಿದ್ದು, ಇವು ಸುಮಾರು ಕ್ರಿ.ಶ.೧೬-೧೭ನೇ ಶತಮಾನದವುಗಳಾಗಿರಬೇಕೆನ್ನಲಾಗಿದೆ. ಈ ಕಲ್ಲುಗಳಲ್ಲಿ ಯಾವುದೇ ತೆರನಾದ ಬರಹ ಕಂಡುಬರುವುದಿಲ್ಲ. ಒಂದರ ಕೆತ್ತನೆ ತೀರಾ ಸರಳವಾಗಿದ್ದು, ಸತಿ ತನ್ನ ಬಲಗೈ ಎತ್ತಿ ನಿಂತಿದ್ದಾಳೆ. ತುರುಬಿನಲ್ಲಿ ಯಾವುದೇ ರೀತಿಯ ಅಲಂಕಾರ ಕಂಡುಬರುವುದಿಲ್ಲ. ಇನ್ನೊಂದು ಕಲ್ಲು ಸುಂದರವಾದ ಕೆತ್ತನೆಯಿಂದ ಕೂಡಿದ್ದು, ಬಲಗೈಯಲ್ಲಿ ದುಂಡನೆಯ ವಸ್ತುವಿದೆ. ತುರುಬು ಹೂವಿನಿಂದ ಅಲಂಕೃತಗೊಂಡಿದ್ದು, ಅವಳ ಎಡಭಾಗದಲ್ಲಿ ಗಿಳಿಯೊಂದಿದೆ. ಬಲಭಾಗದಲ್ಲಿ ಒಂದೊಂದು ಕೇಲನ್ನು ಚಿತ್ರಿಸಲಾಗಿದೆ. ಮೊದಲ ಚಿತ್ರದುರ್ಗ ಜಿಲ್ಲೆಗೆ ಸೇರಿದ ಹರಿಹರ ತಾಲೂಕಿನಲ್ಲಿ ಹೆಸರಿಲ್ಲದ ಮಹರಾಜರು ಬರೆಯಿಸಿದ ೨೮ ಶಾಸನಗಳು ದೊರೆತಿದ್ದು, ೪ ವೀರಗಲ್ಲು ಶಾಸನಗಳಾಗಿವೆ. ಅವುಗಳಲ್ಲಿ ಹಳೇವಾಸ ಎಂಬ ಗ್ರಾಮದಲ್ಲಿ ದೊರೆತ ವೀರಗಲ್ಲು ಶಾಸನವು "ಹರಿಯ ಗವುಡ ಎಂಬವನು ಮಡಿದಾಗ 'ಲಖಮಾಯಿ' ಎಂಬ ಅವನ ಹೆಂಡತಿ ಅಗ್ನಿಪ್ರವೇಶ ಮಾಡಿದಳೆಂದು ತಿಳಿಸುತ್ತದೆ. ಮತ್ತೊಂದು ವೀರಗಲ್ಲು ನುಂಕವುಡನು ಸ್ವರ್ಗಸ್ಥನಾದಾಗ ಅವನೊಂದಿಗೆ ಅಗ್ನಿಪ್ರವೇಶ ಮಾಡಿದ ಅವನ ಹೆಂಡತಿಯ ಬಗ್ಗೆಯೂ ತಿಳಿಸುತ್ತದೆನ್ನಲಾಗಿದೆ."[೧೩]

ಖ್ಯಾತ ಸಂಶೋಧಕರಾದ ಹುಲ್ಲೂರು ಶ್ರೀನಿವಾಸ ಜೋಯಿಸರು ಕೆಲವು ಐತಿಹಾಸಿಕ ದಾಖಲೆಗಳನ್ನು ಹುಡುಕುತ್ತಿರುವಾಗ ಅವರಿಗೆ ದೊರೆತ ಹಸ್ತಪ್ರತಿಯೊಂದು ಸಿರುಮನ ಚರಿತ್ರೆಯನ್ನು ಹೇಳುತ್ತದೆ. ಈ ಪ್ರತಿಗಳನ್ನು ಕೆಂಚಶೆಟ್ಟಿಯ ಮಗ 'ರಾಮ' ಎಂಬುವವನು ರಚಿಸಿದ್ದಾನೆ. ಈ ಸಾಂಗತ್ಯ ಕೃತಿಯನ್ನು ಜೋಯಿಸರು ಗದ್ಯದಲ್ಲಿ ಪ್ರಕಟಿಸಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಶ್ರೀರಾಮಪುರ ಹಿಂದೆ ಬೂದಿಹಾಳು ಎಂಬ ಹೆಸರಿನ ಪಾಳೆಪಟ್ಟಾಗಿದ್ದು, ಇದನ್ನು ಗೊಲ್ಲಜನಾಂಗದ ಸಿರುಮನೆಂಬ ಪಾಳೆಗಾರ ಆಳ್ವಿಕೆ ನಡೆಸುತ್ತಿದ್ದನು. ಇವನ ಶೌರ್ಯ ಐಶ್ವರ್ಯವನ್ನು ಕಂಡು ಸುತ್ತಲಿನ ಪಾಳೆಗಾರರು ಮತ್ತು ವಿಜಯನಗರ ಸಾಮ್ರಾಜ್ಯವನ್ನಾಳುತ್ತಿದ್ದ ಸಾಳ್ವ ನರಸಿಂಹರಾಯ ಇವನ ಕೋಟೆಗೆ ಮುತ್ತಿದಾಗ ಸುಮಾರು ಆರು ತಿಂಗಳುಗಳ ಕಾಲ ಹೋರಾಡಿ ಜಯ ಸಿಗದಿದ್ದಾಗ

ತನ್ನ ರಾಣಿವಾಸದೊಂದಿಗೆ ಅಗ್ನಿ ಪ್ರವೇಶ ಮಾಡುತ್ತಾನೆ. ಇವನ ಮಗ ವೀರಣ್ಣ ಯುದ್ಧದಲ್ಲಿ ಹೋರಾಡಿ ಮಡಿದಾಗ ಅವನೊಂದಿಗೆ ಅವನ ಪತ್ನಿಯನ್ನೂ ಜೀವಂತವಾಗಿ ಹೂಳುತ್ತಾರೆ.

ಎತ್ತಿ ತಂದಾರು ಕುಮಾರ ವೀರಣ್ಣನ
ಮತ್ತೆ ಸಮಾಧಿಯೊಳಿರಿಸಿ
ಹತ್ತಿರಲವನ ಸ್ತ್ರೀಯರ ಕುಳ್ಳಿರಿಸಿಯೆ
ಹೆತ್ತ ತಂದೆಯು ಸಿರುಮಯ್ಯ[೧೪]

ತನ್ನ ಹೆಂಡತಿಯ ಶೀಲ ಶಂಕಿಸಿಯೋ ಅಥವಾ ತನಗೆ ಸೇರಿದ ಹೆಂಡತಿ ಬೇರೆಯವರ ವಶವಾಗುತ್ತಾಳೆಂಬ ಪುರುಷ ವ್ಯವಸ್ಥೆಯ ಧೋರಣೆಯಿಂದಲೋ ಹೆಣ್ಣನ್ನು ತನ್ನೊಂದಿಗೆ ಅವಳ ಆಸೆಗಳೇನು? ನಿಲುವುಗಳೇನು ಎಂಬ ಯಾವ ಮಾತನ್ನು ಕೇಳದೆ, ವಸ್ತುವಿನೋಪಾದಿಯಲ್ಲಿ ತನ್ನ ಸ್ವಾರ್ಥ ಹಿತಾಸಕ್ತಿಯಿಂದ ಬಲಿತೆಗೆದುಕೊಂಡಿದ್ದಾರೆನ್ನಬಹುದು.

ಹೊಳಲ್ಕೆರೆ ತಾಲೂಕು ಜಾನಕಲ್ಲು ಎಂಬ ಗ್ರಾಮದ ಶಿಥಿಲವಾಗಿರುವ ಕೋಟೆ ದ್ವಾರದ ಹೊರಗೆ ಹೊಸದುರ್ಗ ರಸ್ತೆ ಇರುವ ಕಡೆ ವೀರನೊಬ್ಬನು ಆನೆಯೊಂದಿಗೆ ಹೋರಾಡುತ್ತಿರುವ ಮತ್ತು ಅವನೊಂದಿಗೆ ಪಕ್ಕದ ಹಿಂಬದಲಿಯಲ್ಲಿರುವ ಅಭಯ ಹಸ್ತದ ಮಹಾಸತಿಯ ದೃಶ್ಯವನ್ನು ಕೆತ್ತಲಾಗಿದೆ. ನಿಶ್ಯಸ್ತ್ರವಾಗಿ ಆನೆಯೊಂದಿಗೆ ಹೋರಾಡಿದ ವೀರನ ಕಳೇಬರಹದೊಂದಿಗೆ ಅವನ ಪತ್ನಿ ಸಹಗಮನ ಮಾಡಿದ್ದಾಳೆಂದು ತಿಳಿದುಬರುತ್ತದೆ.

ಇದೇ ತಾಲೂಕು ಗುಂಜಿಗನೂರು ಗ್ರಾಮದಲ್ಲಿ ದಾನಶಾಸನದ ಬಳಿ ಮಾಸ್ತಿಗಲ್ಲೊಂದು ದೊರೆಯುತ್ತದೆ. ಇದೇ ತಾಲೂಕು ಯತಿಘಟ್ಟಗ್ರಾಮದಲ್ಲಿ ಹರಳಿಮಠದ ಎಡಭಾಗದಲ್ಲಿ ವೀರಗಲ್ಲಿನ ಎರಡು ಬದಿಯಲ್ಲಿ ಮಾಸ್ತಿಗಲ್ಲುಗಳನ್ನು ನೆಡಲಾಗಿದೆ. ಎಡಭಾಗದಲ್ಲಿ ನಿಲ್ಲಿಸಿದ ಮಾಸ್ತಿಗಲ್ಲಿನಲ್ಲಿ ಸ್ತ್ರೀ ಎಡಗೈ ಇಳಿಬಿಟ್ಟಿದ್ದಾಳೆ. ತುರುಬಿಗೆ ಅಲಂಕಾರ, ತೋಳುಗಳಿಗೆ ತೋಳಬಂದಿಗಳನ್ನು ಧರಿಸಿ ಸಿಂಗರಿಸಿಕೊಂಡಿದ್ದಾರೆ. ಇನ್ನೊಂದು ವೀರಮಾಸ್ತಿಗಲ್ಲಿನಲ್ಲಿ ಸ್ತ್ರೀ ತುರುಬನ್ನು ಸಿಂಗರಿಸಿಕೊಂಡು ಕೈಗೆ ಬಳೆ, ಕೊರಳಿಗೆ ಆಭರಣ, ತೋಳಬಂದಿ ತೊಟ್ಟು, ಅಲಂಕರಿಸಿಕೊಂಡಿದ್ದಾಳೆ.

ಹೊಸದುರ್ಗ ತಾಲೂಕು ಹೊಸದುರ್ಗದಿಂದ ಅಜ್ಜಂಪುರ ರಸ್ತೆಯಿಂದ ೬ ಕಿ.ಮೀ. ದೂರದಲ್ಲಿರುವ ಬಾಗೂರು ಎಂಬ ಗ್ರಾಮದಲ್ಲಿ ಮಲಿಯಮ್ಮ ದೇವರ ಗುಡಿಯ ಬಳಿ ಚೌಡಮ್ಮ ಎಂದು ಪೂಜೆಸಲ್ಪಡುವ ಸ್ತ್ರೀ ದೇವತೆಯ ವಿಗ್ರಹದೊಂದಿಗೆ "ಚಿಕ್ಕದಾದ ಮಹಾಸತಿ ಕಲ್ಲು ಹಾಗೂ ವೀರ ಸ್ತ್ರೀಯೊಬ್ಬಳ ಶಿಲ್ಪವಿದೆ. ಜೊತೆಗೆ ಸಿಡಿಗಂಬವಿರುವ ಹುಣಸೇ ಮರದ ಬಳಿಯೂ ಇತರ ಪುಟ್ಟ ಸ್ತ್ರೀವಿಗ್ರಹಗಳನ್ನು ನಿಲ್ಲಿಸಲಾಗಿದೆ."[೧೫] ಇದೇ ತಾಲೂಕು ದೇವಪುರದಲ್ಲಿಯೂ ಮಾಸ್ತಿಗಲ್ಲನ್ನು ನಿಲ್ಲಿಸಲಾಗಿದೆ. ಇದೇ ತಾಲೂಕು ಕಂಗವಳ್ಳಿ ಎಂಬ ಗ್ರಾಮದಲ್ಲಿ ಶಾಲೆಯ ಬಳಿಯಿರುವ ಮಂಟಪದಲ್ಲಿ ಮೂರು ಅಡಿ ಎತ್ತರದ ಮಾಸ್ತಿಗಲ್ಲನ್ನು ನಿರ್ಮಿಸಲಾಗಿದೆ. ಇದೇ

ತಾಲೂಕು ಮಧುರೆಗೆ ಹೋಗುವ ರಸ್ತೆಯ ಬಲಕ್ಕೆ ದೇಗುಲದ ಹೊರಗೆ ಬಲಗಡೆ ಇರುವ ಸಭಾಮಂಟಪದಲ್ಲಿ ಕುದುರೆಯ ಮೇಲೇರಿ ಖಡ್ಗ ಹಿಡಿದೆತ್ತಿ ಸಾಗುತ್ತಿರುವ ವೀರಸ್ತ್ರೀಯ ಶಿಲ್ಪವು ೫ ಅಡಿ ಎತ್ತರದಲ್ಲಿದ್ದು, ಶಿಲ್ಪದ ಕೆಳಭಾಗವು ಮೃಗದೊಂದಿಗೆ ಹೋರಾಡುತ್ತಿರುವ ಸ್ತ್ರೀ ಕೆತ್ತನೆಯಿಂದ ಕೂಡಿದೆ. ಇದನ್ನು ಗಮನಿಸಿದರೆ, ಹೆಂಗಸರು ಯುದ್ಧದಲ್ಲಿ ಪುರುಷನಂತೆ ಹೋರಾಡುವ, ಬೇಟೆಯಾಡುವ, ಧೈರ್ಯ, ಸಾಹಸ ಶಕ್ತಿಯನ್ನೊಂದಿದ್ದರೆಂದು ತಿಳಿದುಬರುತ್ತದೆ.

ಚಿತ್ರದುರ್ಗ ಜಿಲ್ಲೆಯ ಭೈರವನ ಕೊಂಬೆ ಎಂಬ ಗ್ರಾಮದಲ್ಲಿನ ಹನುಮನ ಕೊಂಬೆಯಲ್ಲಿ ೧೫ ಅಂಕಣದ ಅರಮನೆಯ ಹಿಂಭಾಗದ ಬಂಡೆಗಳತ್ತ ನೋಡಿದರೆ ಆಕರ್ಷಕ ಮಂಟಪದ ಬಳಿ ಪುಟ್ಟ ಪೆಟ್ಟಿಗೆಯಾಕಾರದ ಮಂಟಪದಲ್ಲಿ ಬಳಪದ ಕಲ್ಲಿನಿಂದ ಕೆತ್ತಿದ ಸುಂದರ ವಿಗ್ರಹವಿದ್ದು ಅದರಲ್ಲಿ ವೀರನೊಬ್ಬನ ಪಕ್ಕದಲ್ಲಿ ಸ್ತ್ರೀ ನಿಂತಿರುವ ದೃಶ್ಯವಿದೆ.

೪.೧.೧. ವೀರಮಾಸ್ತಿಕಲ್ಲು

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು ಪರಶುರಾಮಪುರ ಹೋಬಳಿ. ಪಿ.ಮಹದೇವಪುರದಿಂದ ೩ ಕಿ.ಮೀ.ದೂರದಲ್ಲಿರುವ ಕಪ್ಪು ಗ್ರಾನೈಟ್ ಕಲ್ಲಿನಿಂದ ಕೆತ್ತಿದ ಶಿಲ್ಪವು ೪ ಅಡಿ ಉದ್ದ ೨ ಅಡಿ ಅಗಲವಿದ್ದು ಚಿತ್ರದಲ್ಲಿ ಕಾಣಲ್ಪಡುವ ವೀರ ಕೈಯಲ್ಲಿ ಭರ್ಜಿ ಹಿಡಿದು ನೆಲದತ್ತ ತೋರಿಸುತ್ತಿದ್ದಾನೆ. ಕೈಕಡಗ, ತೋಳ್ಬಂದಿ, ಕಂಠಾಭರಣ, ಕಾಲ್ಕಡಗ, ಕಿವಿ ಆಭರಣ, ತಲೆಯಲ್ಲಿ ತುರುಬು ಮೊದಲಾದವುಗಳಿಂದ ಸಿಂಗರಿಸಿಕೊಂಡು ವೀರಗಚ್ಚೆ ಹಾಕಿ ನಿಂತಿರುವ ದೃಶ್ಯವಿದೆ. ಇವನ ಪಕ್ಕದಲ್ಲಿ ಮಹಾಸತಿ ಎರಡು ಕೈಗಳನ್ನು ಮೇಲಕ್ಕೆತ್ತಿ ತನ್ನೆರಡು ಕೈಗಳಲ್ಲೂ ನಿಂಬೆಹಣ್ಣು ಹಿಡಿದು ನಿಂತಿದ್ದಾಳೆ. ಕೊರಳಲ್ಲಿ ಗುಂಡುಗಳಿಂದ ಪೋಣಿಸಿದ ಮಣಿಸರ, ಕಿವಿಗಳಿಗೆ ದೊಡ್ಡ ಆಭರಣಗಳು, ತಲೆಯ ಬಲಭಾಗಕ್ಕೆ ತುರುಬನ್ನು ಕಟ್ಟಿಕೊಂಡು, ಮುಡಿಗೆ ಕೇದಗೆ ಹೂವಿನ ದಳಗಳನ್ನು ಸಿಕ್ಕಿಸಿಕೊಂಡಿದ್ದು, ತೋಳ್ಬಂದಿ, ಕೈಬಳೆ, ಕಾಲ್ಕಡಗ, ಮೊಳಕಾಲಿನವರೆಗೆ ವಸ್ತ್ರವನ್ನು ಧರಿಸಿ ಅಲಂಕರಿಸಿಕೊಂಡಿದ್ದಾಳೆ.

ಇದೇ ಸ್ಥಳದ ಮತ್ತೊಂದು ವೀರಗಲ್ಲಿನ ಪಕ್ಕದಲ್ಲಿ ಒಂದು ಮಹಾಸತಿ ಕಲ್ಲಿದ್ದು, ಈ ಮಹಾಸತಿಯು ತನ್ನೆರಡು ಕೈಗಳನ್ನು ಮೇಲಕ್ಕೆತ್ತಿ ಕೈಗಳಲ್ಲಿ ನಿಂಬೆಹಣ್ಣು ಹಿಡಿದು ನಿಂತಿದ್ದಾಳೆ. ತನ್ನ ಉದ್ದನೆಯ ಕೇಶರಾಶಿಗಳಿಂದ ತುರುಬು ಕಟ್ಟಿಕೊಂಡು ಅದಕ್ಕೆ ಕೇದಿಗೆ ಹೂವಿನಿಂದ ಸಿಂಗರಿಸಿ, ಕೊರಳುಗಳಿಗೆ ಗುಂಡಿನ ಸರ, ತೋಳ್ಬಂದಿ, ನೆರಿಗೆಯಾಕಾರದಲ್ಲಿ ಮುಂಗಾಲಿನವರೆಗೂ ಬಟ್ಟೆ ಧರಿಸಿದ್ದಾಳೆ. ಈ ಬಟ್ಟೆ ಮಹಾಸತಿಯ ಎಡ ಮತ್ತು ಬಲಗೈಗಳ ಪಕ್ಕದಲ್ಲಿ ಕೆಳಗಡೆಯವರೆಗೂ ಹೊಯ್ದಾಡುವಂತಿದೆ.

ಇದೇ ಸ್ಥಳದ ಮತ್ತೊಂದು ವೀರಮಾಸ್ತಿಗಲ್ಲು ೨.೫ ಅಡಿ ಉದ್ದ ೨.೫ ಅಡಿ ಅಗಲವಿದ್ದು, ವೀರನ ಎಡಭಾಗದಲ್ಲಿ ಮಹಾಸತಿ ನಿಂತಿದ್ದು, ಈ ಮಹಾಸತಿಯು ಕೈಮುಗಿದುಕೊಂಡು

ಮುಂಗಾಲಿನವರೆಗೂ ನೆರಿಕೆಯಾಕಾರದ ವಸ್ತ್ರ ಧರಿಸಿ, ಕೊರಳಲ್ಲಿ ಸರ ಮತ್ತು ಅದರೊಂದಿಗೆ ಪದಕ ಹಾಕಿದಂತೆ, ಒಂದೊಂದು ಕೈಗಳಿಗೆ ಎರಡೆರಡು ತೋಳ್ಬಂದಿ, ಕೈತುಂಬಾ ಬಳೆ, ತಲೆಯ ಎಡಭಾಗಕ್ಕೆ ತುರುಬು ಕಟ್ಟಿಕೊಂಡು ಅಲಂಕೃತಳಾಗಿದ್ದಾಳೆ.

ಇದೇ ಊರಿನ ಚಿಕ್ಕ ಕೆರೆಯ ಏರಿಯ ಬಲ ಕೋಡಿಯ ಪಕ್ಕದಲ್ಲಿರುವ ೨.೫ ಅಡಿ ಉದ್ದ ೨.೫ ಅಡಿ ಅಗಲದ ವೀರಗಲ್ಲಿನ ಎಡಭಾಗದಲ್ಲಿ ಮಹಾಸತಿಯ ಶಿಲ್ಪವಿದ್ದು, ಬಲಗೈಯನ್ನು ಮೇಲಕ್ಕೆತ್ತಿ ಮಡಚಿಕೊಂಡು ಕೈಯಲ್ಲಿ ನಿಂಬೆಹಣ್ಣು ಹಿಡಿದು ಎಡಗೈಯನ್ನು ಕೆಳಗಡೆ ಇಳಿ ಬಿಟ್ಟಿದ್ದಾಳೆ. ಕೈಬಳೆ, ತೊಳ್ಬಂದಿ, ಕೊರಳಸರ, ಆಭರಣ, ತಲೆಯ ಎಡಭಾಗಕ್ಕೆ ತುರುಬು, ಮುಂಗಾಲಿನವರೆಗೂ ನೆರಿಗೆಯಾಕಾರದ ಉಡುಪು ಧರಿಸಿದ್ದಾಳೆ.

ಇದೇ ಊರಿನ ವೀರಭದ್ರಸ್ವಾಮಿ ದೇವಾಲಯದ ಪೌಳಿ ಗೋಡೆಯ ಪಕ್ಕದಲ್ಲಿ ೩ ಅಡಿ ಉದ್ದ, ೨ ಅಡಿ ಅಗಲದ ಕಲ್ಲಿನಲ್ಲಿ ವೀರನ ಬಲಭಾಗದಲ್ಲಿ ಮಹಾಸತಿ ನಿಂತಿರುವ ದೃಶ್ಯವಿದ್ದು, ಬಲಗೈಯಲ್ಲಿ ನಿಂಬೆಹಣ್ಣು ಹಿಡಿದು ಕೈ ಮೇಲಕ್ಕೆತ್ತಿ ನಿಂತಿದ್ದಾಳೆ. ಮುಂಗಾಲಿನವರೆಗೂ ನೆರಿಗೆಯಾಕಾರದ ಸೀರೆ ಉಟ್ಟು ನಿಂತಿರುವುದರ ಜೊತೆಗೆ ಕುಪ್ಪಸ ಧರಿಸಿ, ಕೊರಳಲ್ಲಿ ಸರ, ಕಿವಿ ಓಲೆ, ತಲೆಯಲ್ಲಿ ತುರುಬಿಗೆ ಕೇದಗೆ ಹೂ ಮುಡಿದು ಅಲಂಕೃತಳಾಗಿದ್ದಾಳೆ. ಈ ಶಿಲ್ಪದ ಪಕ್ಕದಲ್ಲೆ ಇನ್ನೊಂದು ಸ್ತ್ರೀಯ ಚಿಕ್ಕ ಶಿಲ್ಪವಿದೆ. ಇದು ಅಸ್ಪಷ್ಟವಾಗಿದ್ದು, ಮೇಲೆ ಸೂರ್ಯಚಂದ್ರರನ್ನು ಕೆತ್ತಲಾಗಿದೆ. ಈ ಶಿಲ್ಪವನ್ನು ಗಮನಿಸಿದರೆ ವೀರನು ಹೆಂಡತಿಯರ ಸಮೇತ ಸ್ವರ್ಗಕ್ಕೆ ಹೋಗಿದ್ದಾನೆಂದು ಅಲ್ಲಿನ ಜನರು ಇಂದಿಗೂ ಈ ಕಲ್ಲನ್ನು 'ವೀರಜನ್ನಪ್ಪನ' ಕಲ್ಲು ಎಂದು ಪೂಜಿಸುತ್ತಾರೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು ಪರಶುರಾಮಪುರ ಹೋಬಳಿಯ ಪರ್ಲಹಳ್ಳಿಯಿಂದ ೪ ಕಿ.ಮೀ. ದೂರದ ಊರಿನ ಮಧ್ಯಭಾಗದಲ್ಲಿ ಸ್ಥಳೀಯ ಬಿಳಿ ಗ್ರಾನೈಟ್ ಕಲ್ಲಿನಿಂದ ಕೆತ್ತಿದ ಶಿಲ್ಪವೊಂದರಲ್ಲಿ ವೀರನೊಬ್ಬ ಕುದುರೆ ಮೇಲೆ ಕುಳಿತು ಬಲಗೈಯಲ್ಲಿ ಖಡ್ಗ ಹಿಡಿದು ಎಡಗೈಯಲ್ಲಿ ಕುದುರೆಯ ಲಗಾಮು ಹಿಡಿದಿದ್ದಾನೆ. ಜೊತೆಗೆ ಆಭರಣಗಳಿಂದ ಅಲಂಕೃತಗೊಂಡಿದ್ದಾನೆ. ಕುದುರೆಯ ಹಿಂದೆ ಸ್ತ್ರೀಯೊಬ್ಬಳು ಸರ್ವಾಲಂಕಾರ ಭೂಷಿತೆಯಾಗಿ ಸಿಂಗರಿಸಿಕೊಂಡು ನಿಂತಿರುವ ದೃಶ್ಯವಿದೆ. ಈ ಶಿಲ್ಪವನ್ನೂ ಸೇರಿದಂತೆ ೫ ವೀರಮಾಸ್ತಿಗಲ್ಲುಗಳಿದ್ದು, ಇನ್ನುಳಿದ ನಾಲ್ಕು ವೀರಮಾಸ್ತಿಗಲ್ಲುಗಳೂ ಸಹ ಇದೇ ತೆರನಾಗಿದ್ದು, ಯುದ್ಧದಲ್ಲಿ ಮಡಿದ ವೀರನೊಂದಿಗೆ ಅವನ ಮಡದಿಯರು ಸಹಗಮನ ಮಾಡಿದ್ದಾರೆಂದು ಸೂಚಿಸುತ್ತದೆ. ಇವು ಸರಿ ಸುಮಾರು ಕ್ರಿ.ಶ.೧೭ನೇ ಶತಮಾನಕ್ಕೆ ಸೇರಿದವುಗಳೆನ್ನಲಾಗಿದೆ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲೂಕು ಐಮಂಗಳ ಹೋಬಳಿ ಹರ್ತಿಕೋಟೆಯಲ್ಲಿ ಮಾಸ್ತಿಕಲ್ಲುಗಳು ದೊರೆತಿದ್ದು, ಅವು ಕ್ರಿ.ಶ.೧೬ ಅಥವಾ ೧೭ನೇ ಶತಮಾನಗಳಿಗೆ ಸೇರಿದವುಗಳಾಗಿವೆ.

ಇದೇ ಜಿಲ್ಲೆಯ ಜಟಂಗಿರಾಮೇಶ್ವರದಲ್ಲಿ ಅಶೋಕನ ಬಂಡೆಗಲ್ಲು ಶಾಸನವಿರುವ ಬಳೆಗಾರರ ಗುಂಡಿನ ಹಿಂಬದಿಯಲ್ಲಿ ಮಹಾಸತಿ ಶಿಲೆ ಇದ್ದು, ಅದರ ಕೆಳಭಾಗದಲ್ಲಿ ಕೈಮುಗಿದು ನಿಂತ ಓರ್ವ ಮಹಾಸತಿ ಚಿತ್ರವನ್ನು ಕೆತ್ತಲಾಗಿದ್ದು, ಅವಳ ಅಕ್ಕ-ಪಕ್ಕದಲ್ಲಿ ನಾಲ್ಕು ಜನ ಸ್ತ್ರೀಯರು ಕೈಮುಗಿದು ನಿಂತಿದ್ದಾರೆ. ಈ ನಾಲ್ಕು ಜನ ಪರಿಚಾರಕಿಯರನ್ನು ಚಿಕ್ಕದಾಗಿ ಕೆತ್ತಲಾಗಿದೆ. ಈ ಸತಿ ಶಿಲ್ಪದ ಸ್ತ್ರೀಯು ತುರುಬು ಕಟ್ಟಿಕೊಂಡಿದ್ದು, ನೆರಿಗೆಯುಳ್ಳ ಸೀರೆಯನ್ನು ಪಾದದವರೆಗೂ ಹುಟ್ಟಿದ್ದು ಅಕ್ಕ ಪಕ್ಕದ ಪರಿಚಾರಕಿಯರನ್ನು ಗಮನಿಸಿದರೆ, ಆಕೆ ಆ ಊರಿನ ಪ್ರಮುಖ ವ್ಯಕ್ತಿಯ ಪತ್ನಿಯಿರಬೇಕೆನ್ನಿಸುತ್ತದೆ.

ಚಿತ್ರದುರ್ಗದ ವಸ್ತು ಸಂಗ್ರಹಾಲಯದಲ್ಲಿರುವ ಮಾಸ್ತಿ ಕಲ್ಲೊಂದರಲ್ಲಿ ನಾಯಕನೊಬ್ಬ ಮಡಿದಾಗ ಅವನೊಂದಿಗೆ ಅವನ ಒಂಭತ್ತು ಜನ ಮಡದಿಯರು ಸಹಗಮನ ಮಾಡಿದ ಚಿತ್ರವನ್ನು ಕೆತ್ತಲಾಗಿದೆ. ಕಳಶ, ಕನ್ನಡಿ, ಬಳೆಗಳು, ತೋಳುಬಂದಿ, ನಿಂಬೆಹಣ್ಣು, ಮಾದಲಹಣ್ಣು ಮೊದಲಾದ ಮಂಗಳ ದ್ರವ್ಯಗಳಿರುವುದು ಚಿತ್ರದಲ್ಲಿ ಕಂಡುಬರುತ್ತದೆ. ಇದೇ ತಾಲೂಕು ಕುರುಮರಡಿ ಕೆರೆಯಲ್ಲಿ ೧೪-೧೫ನೇ ಶತಮಾನದ ಮಾಸ್ತಿಗಲ್ಲೊಂದು ನಿಲ್ಲಿಸಲಾಗಿದ್ದು, ಇದನ್ನು ಚಿತ್ರದುರ್ಗದ ವಸ್ತುಸಂಗ್ರಹಾಲಯಕ್ಕೆ ವರ್ಗಾಯಿಸಲಾಗಿದೆ. ಈ ಶಿಲ್ಪದಲ್ಲಿರುವ ದೃಶ್ಯ ನೋಡಲು ಅತ್ಯಂತ ಆಕರ್ಷಕವಾಗಿದ್ದು, ತಲೆಗೆ ಕೇದಗೆ ಹೂ, ಉದ್ದನೆಯ ಜಡೆ, ಕೈಗೆ ಬಳೆ, ಕಿವಿಗೆ ಆಭರಣ, ಕೊರಳಿಗೆ ಆಕರ್ಷಕ ಆಭರಣ ಧರಿಸಿ ಕೈಮುಗಿದು ನಿಂತಿರುವ ಕೆತ್ತನೆ ಅತ್ಯಂತ ಸುಂದರವಾಗಿದೆ. ಇದೇ ಸ್ಥಳದಲ್ಲಿ ಬಲಗೈ ಎತ್ತಿದ ಸತಿಯ ಶಿಲ್ಪವನ್ನು ನಿಲ್ಲಿಸಲಾಗಿದೆ. ಇದೇ ಸ್ಥಳದ ಇನ್ನೊಂದು ಮಾಸ್ತಿಗಲ್ಲು ಸು.೧೫-೧೬ನೇ ಶತಮಾನದ್ದಾಗಿದ್ದು ಚಿತ್ರದುರ್ಗದಲ್ಲೆ ದೊರೆತಿದೆ. ಇಲ್ಲಿನ ಸತಿ ಬಲಗೈ ಎತ್ತಿ ನಿಂತಿದ್ದಾಳೆ. ತಲೆಗೆ ಕೇದಗೆ ಹೂ ಮುಡಿದಿರುವ ದೃಶ್ಯವಿದೆ.

ಗಂಡನೊಂದಿಗೆ ಚಿತೆಯೇರಿ ಸಾಯುವ ವ್ಯವಸ್ಥೆ ಮಹಾಸತಿ ಆಚರಣೆಯಾಗಿ ಸತಿ ಹೋದವರ ನೆನಪಿಗೆ ಮಾಸ್ತಿಕಲ್ಲುಗಳನ್ನು ನಿರ್ಮಿಸಲಾಗುತಿತ್ತು. ಹೊಸದುರ್ಗ ತಾಲೂಕು ಕಂಚೀಪುರದಲ್ಲಿ ಸಿಗುವ ಗರುಡಗಂಭ ಶಾಸನ ಕುದುರೆಕಲ್ಲು ಶಾಸನಗಳ ಬಗ್ಗೆ ಇಲ್ಲಿಯ ಜನರು "ಕಂಚೀಪುರದ ರಾಜನಿಗೆ ಒಬ್ಬಳು ಮಗಳಿದ್ದು, ಅವಳಿಗೆ ಆಟವಾಡಿಕೊಳ್ಳಲು ತಂದಿದ್ದ ಬೊಂಬೆಗೆ ರಾತ್ರಿ ವೇಳೆ ಜೀವ ಬಂದು ಆಕೆ ಗರ್ಭವತಿಯಾದಳು. ಇದರಿಂದ ಬೊಂಬೆ ಮನುಷ್ಯ ದಶರಥ ರಾಮೇಶ್ವರನ ಮೊರೆ ಹೊಕ್ಕನಂತೆ. ದಶರಥ ರಾಮೇಶ್ವರನು ನೀನು ಕಾಂಚೀಪುರಕ್ಕೆ ಹೋಗಿ ನೆಲೆಸು ಎಂದಾಗ "ಕಂಚೀವರದ ಸ್ವಾಮಿ"ಯಾಗಿತ್ತು ಎಲ್ಲಲಾಗಿದೆ."[೧೬]

ಧರ್ಮ, ಮೌಢ್ಯ, ಅಂದ ಆಚರಣೆಗಳ ಹೆಸರಿನಲ್ಲಿ ಪುರುಷ ತನ್ನ ಸ್ವಾರ್ಥಕ್ಕೆ ಹೆಣ್ಣನ್ನು ಬಳಸಿಕೊಂಡು ದೈವತ್ವದ ಬಣ್ಣ ಹಚ್ಚುತ್ತಾನಲ್ಲದೆ ಬೇರೇನು ಅಲ್ಲವೆನ್ನಬಹುದು. ಮೌಢ್ಯಕ್ಕೆ ಹೇಗೆ ಹೆಣ್ಣನ್ನು ಬಲಿಕೊಡುತ್ತಾರೆಂಬುದಕ್ಕೆ ಚಿತ್ರದುರ್ಗ ಜಿಲ್ಲೆಯ ಹೊಳಲಕೆರೆ ಪಟ್ಟಣದಲ್ಲಿರುವ ಹೊನಮ್ಮ

ಹೊಳಲಮ್ಮ ಎಂಬ ಸ್ತ್ರೀ ವಿಗ್ರಹಗಳ ಬಗೆಗಿರುವ ಸ್ಥಳಪುರಾಣ ಸಾಕ್ಷಿಯಾಗಿವೆ. ಪಟ್ಟಣದ ದ್ವಾರಬಾಗಿಲಿನ ಉತ್ತರ ದಿಕ್ಕಿಗೆ ಹೊಳಲಮ್ಮ, ದಕ್ಷಿಣ ದಿಕ್ಕಿಗೆ ಹೊನ್ನಮ್ಮನ ಶಿಲ್ಪವಿರುವ ದೇವಾಲಯಗಳಿವೆ. ಇವರು ಆ ಪ್ರದೇಶದ ಲಿಂಗಾಯಿತ ಮನೆಯ ಹೆಣ್ಣು ಮಕ್ಕಳಾಗಿದ್ದು ಬೆಳಾಲ ಕುಲದವರಾಗಿದ್ದರು.

"ಒಂದು ದಿನ ಹೊನ್ನಮ್ಮ ಬಟ್ಟೆ ತೊಳೆಯಲು ಸಮೀಪದ ಕೆರೆಗೆ ಹೋಗಿರುತ್ತಾಳೆ. ಅಲ್ಲಿ ಅವಳು ತೊಳೆದ ಬಟ್ಟೆಯ ಮೇಲೆ ಹೋರಿ ಬಂದು ಹೊನ್ನಮ್ಮನ ವಸ್ತ್ರವನ್ನು ತುಳಿದು ಸಗಣಿ, ಗಂಜಲವನ್ನು ಹಾಕಿ ಹೋಗುತ್ತದೆ. ಅದನ್ನವಳು ತೊಳೆಯಲು ಹೋದಾಗ ಅಲ್ಲಿನ ಜನರು ಅದು ಬಸವಣ್ಣ ದೇವರು ತೊಳೆಯಬಾರದೆಂದು ಸಲಹೆ ನೀಡುತ್ತಾರೆ. ಈ ಸಲಹೆ ಮಾತುಗಳನ್ನು ಕೇಳಿದ ಹೊನ್ನಮ್ಮ ತೊಳೆಯದ ಬಟ್ಟೆ ಧರಿಸಿ ಗರ್ಭವತಿಯಾಗುತ್ತಾಳೆ. ತನ್ನ ಏಳು ಜನ ಅಣ್ಣಂದಿರು ಕುಪಿತರಾಗಿ ಇದಕ್ಕೆ ಕಾರಣರಾರೆಂದು ಕೇಳಲು ನಡೆದ ವೃತ್ತಾಂತವನ್ನೆಲ್ಲ ಹೊನ್ನಮ್ಮ ವಿವರಿಸುತ್ತಾಳೆ. ಈ ಸಂಗತಿಯನ್ನು ನಂಬದ ಅಣ್ಣಂದಿರು ಊರ ಬಾಗಿಲಲ್ಲಿ ತಮ್ಮ ತಂಗಿಯನ್ನು ಮಲಗಿಸಿ ನೇಗಿಲ ಗೆರೆಯನ್ನವ ಮೇಲೆ ಎಳೆಯುತ್ತಾರೆ. ಅವಳ ಹೊಟ್ಟೆಯಿಂದ ಆಕಳ ಕರು ಹೊರಬರುತ್ತದೆ."[೧೭] ಈ ರೀತಿಯ ಅಂಧ ಆಚರಣೆಗಳಿಗೆ ಹೆಣ್ಣನ್ನು ಪುರುಷ ನಿರ್ಮಿತ ಸಮಾಜ ಬಳಸಿಕೊಳ್ಳುತ್ತಿದೆ. ಈ ಹೆಣ್ಣು ಮಗಳ ನೆನಪಿನಲ್ಲಿ ವಿಗ್ರಹ ಕೆತ್ತಿಸಿ, ಗುಡಿಕಟ್ಟಿಸಿ, ಕೆರೆ ಕಟ್ಟಿಸಿ ಇಂದಿಗೂ ಪೂಜಿಸಲಾಗುತ್ತಿದೆ.

ಸಮಾಜದಲ್ಲಿ ಮಹಾಸತಿ ಆಚರಣೆಯಿಂದ ಹೆಣ್ಣಿನ ಶೋಷಣೆ ಒಂದು ಮುಖವಾಗಿ ನಡೆದರೆ, ಹೆಣ್ಣನ್ನು ಬಹುತೇಕ ಅವಳನ್ನು ಪುರುಷ ಸಮಾಜ ಕಂಡು ಕಾಣಿಸಿದ ದೃಷ್ಟಿಯೆಲ್ಲ ಅವಳನ್ನು ಲೈಂಗಿಕತೆಯ ಭೋಗದ ವಸ್ತುವನ್ನಾಗಿಯೇ ಎಂಬುದರಲ್ಲಿ ಎರಡು ಮಾತಿಲ್ಲ. ಇವುಗಳಿಗೆ ಸಾಕ್ಷಿಯೇನೋ ಎಂಬಂತೆ ನಮಗೆ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು ಗೌರಿಪುರದ ಉಮಾಮಹೇಶ್ವರ ದೇವಾಲಯದಿಂದ ಸುಮಾರು ಅರ್ಧ ಕಿ.ಮೀ. ದೂರದ ದೇವಾಲಯದ ಎದುರು 'ಹಾವಡದಮ್ಮ' ಮೂರ್ತಿಶಿಲ್ಪವಿದೆ. ಇದು ಹಾವಿನ ರೂಪದ ಸ್ತ್ರೀ ಶಿಲ್ಪವಾಗಿದ್ದು, ಪಶ್ಚಿಮಕ್ಕೆ ಮುಖ ಮಾಡಿಕೊಂಡಿದೆ. ಈ ಶಿಲ್ಪವೂ ಸಹ ಕ್ರಿ.ಶ.೧೬, ೧೭ನೇ ಶತಮಾನಕ್ಕೆ ಸೇರಿರಬಹುದಾಗಿದ್ದು, ಇದನ್ನು ಗ್ರಾನೈಟ್ ಕಲ್ಲಿನಿಂದ ಕೆತ್ತಲಾಗಿದೆ. ಕೆಳಭಾಗದಿಂದ ಸೊಂಟದವರೆಗೆ ಹಾವಿನ ರೂಪದಲ್ಲಿದೆ. ಸೊಂಟದಿಂದ ಮೇಲ್ಭಾಗ ಸ್ತ್ರೀ ರೂಪವನ್ನು ಹೊಂದಿದೆ. ಕೈಗೆ ಕೊರಳಿಗೆ ಆಭರಣ ಧರಿಸಿ, ತಲೆಯಲ್ಲಿ ಕಿರೀಟವನ್ನೊಳಗೊಂಡಿದೆ. ಎರಡು ಕೈಗಳನ್ನು ಎದೆಯ ಬಳಿ ಜೋಡಿಸಿ ಮುಗಿದಿದ್ದು, ಸ್ತ್ರೀಯು ಎಡ ಬಲ ತೋಳುಗಳ ಹತ್ತಿರ ಎರಡು ಹಾವುಗಳನ್ನು ಹಿಡಿದುಕೊಂಡು ತಲೆ ಭಾಗದಿಂದ ಮೊಳಕಾಲಿನವರೆಗೆ ಹಾವುಗಳು ನೇತಾಡುತ್ತಾ ಎಡೆಬಿಚ್ಚಿಕೊಂಡಿವೆ. ಒಟ್ಟಾರೆಯಾಗಿ ಇದು ನಾಗಕನ್ಯೆಯ ಶಿಲ್ಪವಾಗಿದ್ದು ಇದೇ ತರಹದ ಶಿಲ್ಪವು ಚಿಗತನ ಹಳ್ಳಿಯಲ್ಲಿಯೂ ದೊರೆತಿದೆ.

ಮಹಾಸತಿ ಆಚರಣೆಯ ಬಗೆಗೆ ದಿವಾನ್ ಪೂರ್ಣಯ್ಯನವರಿಗೆ ಬರೆದ ಪತ್ರ ಈ ರೀತಿ ಇದೆ.

"ಶ್ರೀ ಮತ್ತು ಪೂರ್ಣಯ್ಯನವರು ಸೋಸಲೆ ಅಮಲದಾರ ವೆಂಕಣರಮಣೈಯಗೆ ಆಶೀರ್ವಾದ. ಅದಾಗಿ ಕಳುಹಿಸಿದ ಅರ್ಜಿಯಿಂದ ವಿವರ ಯಾವತ್ತು ಶ್ರುತವಾಯಿತ್ತು. ತಲಕಾಡಿನಲ್ಲಿ ವೆಂಕಟ್ರಾಮಶಾಸ್ತ್ರಿಗಳಿಗೆ ಯಿದಕೆಯಿದ ಹಾಗೆ ನಾಲ್ಕು ತಡೆವೆ ಪ್ರವರ್ತಿ ಆಗಿ ತೀರಿ ಹೋದದ್ರಿಂದ ಅವರ ಕುಟುಂಬ ಸಹಗಮನ ಮಾಡಬೇಕೆಂಬುದಾಗಿ ಯಾರು ಹೇಳಿದಾಗ್ಯೂ ಕೇಳದೆ ಮುಷಕರ ಮಾಡಿಕೊಂಡು ಅಪ್ಪಣೆ ಕೊಡ್ಸ ಬೇಕೆಂಬುದಾಗಿ ಯಿದಾರೆಂಬ ವಿವರಗಳಾಗಿ ಬರದು ಸರಿಯಷ್ಟೆ ಆ ಬಗ್ಗೆ ಅವರು ದೊಡ್ಡ ಬ್ರಾಂಹರು. ಅವರು ಯಿದದುಕ್ಕೆ ಯೀಕೆ ಈ ಮೇರೆಗೆ ಮಾಡಬಾರದು. ಬೇಡವೆಂಬುದಾಗಿ ಹೇಳಿದರೆ ಕೇಳದ ಮೇಲೆ ಆಕೆ ಹೇಳಿದ ಮೇರೆಗೆ ನಡೆದುಕೊಳ್ಳುವಂತೆ ಅಪ್ಪನೆಕೊಟ್ಟು ಬಿಡುವದು. ರಕ್ತಾಕ್ಷಿ ಸಂವತ್ಸರದ ಪಾಲ್ಗುಣ ಬ ೬ ಲು ರುಜು ಶ್ರೀ"[೧೮] ಪೈವಸ್ತಗಿ ಪಾಲ್ಗುಣ ೯ಲು ಸಾಗಮನ ಮಾಡುವ ಹೆಂಗಸಿಗೆ ಅಪ್ಪಣೆ ಎಂದು ಕ್ರಿ.ಶ.೧೮೦೫ರ ಈ ಸನ್ನದು (MAR 1938)[೧೯] ಟಿ.ನರಸೀಪುರ ತಾಲೂಕು ಕಚೇರಿಯಲ್ಲಿದ್ದಿತು. ಇದರಿಂದ ಸರ್ಕಾರದ ಅಪ್ಪಣೆ ಬೇಕಿತ್ತೆಂದು ತಿಳಿಯುತ್ತದೆ. ದಿವಾನ್ ಪೂರ್ಣಯ್ಯನವರಿಂದ ೩ ದಿನಗಳ ಅವಧಿಯ ನಂತರ ಬಂದ ಪತ್ರವನ್ನು ಕಛೇರಿಯಲ್ಲಿ ದಾಖಲಿಸಿ("ಪೈವಸ್ತ") ಅದೇ ದಿನ ಹೆಂಗಸಿಗೆ ಅನುಮತಿ ನೀಡಲಾಯಿತು. ಇದನ್ನು ಗಮನಿಸಿದರೆ ಈ ಸಂದರ್ಭಕ್ಕೆ ಸರ್ಕಾರ ಸತಿಪದ್ಧತಿಯನ್ನು ನಿಷೇಧಿಸಿರಬೇಕು. ಆದರೆ ಅಪ್ಪಣೆ ಪಡೆದಾದರೂ ನಡೆಯುತ್ತಿದ್ದವು ಎಂಬುದು ಸ್ಪಷ್ಟವಾಗುತ್ತದೆ.

ಚಿಕ್ಕ ವಯಸ್ಸಿನಲ್ಲಿಯೇ ತನ್ನ ಸೋದರಿಯ ಸಹಗಮನದ ಹಿಂಸೆಯ ಘಟನೆಯನ್ನು ಗಮನದಲ್ಲಿಟ್ಟುಕೊಂಡು ಇಂಗ್ಲೀಷ್ ಶಿಕ್ಷಣ ಕಲಿತ ರಾಜಾರಾಂ ಮೋಹನರಾಯರು ಹತ್ತೊಂಬತ್ತನೆಯ ಶತಮಾನ ಅಂದರೆ ೧೮೨೯ರಲ್ಲಿ ಸತಿಪದ್ಧತಿ ನಿಷೇಧ ಕಾಯ್ದೆಯನ್ನು ಜಾರಿಗೆ ತಂದರು. ಈ ಕಾಯ್ದೆ ಜಾರಿಗೆ ಬಂದ ನಂತರ ಕಾಲಕ್ರಮೇಣ ಸುಧಾರಿಸಿತಾದರೂ ತುಮಕೂರು ಜಿಲ್ಲೆಯ ಕೈದಾಳ ಗ್ರಾಮದಲ್ಲಿದ್ದ ಸ್ಮಾರ್ತಬ್ರಾಹ್ಮಣರಾಗಿದ್ದ ಶಿವರಾಮಯ್ಯನವರು ಮಡಿದಾಗ ಅವರ ಪತ್ನಿ ಲಕ್ಷ್ಮೀದೇವಮ್ಮ ಸಂಗಮನ ಮಾಡಲು ನಿರ್ಧರಿಸಿದಾಗ ಇದು ಬ್ರಿಟೀಷ್ ಅಧಿಕಾರಿಗೆ ತಿಳಿದು ನಂದಿದುರ್ಗ ಡಿವಿಜನ್ನಿಗೆ ಸೇರಿದ ತುಮಕೂರಿನಿಂದ ಅದನ್ನು ನಿಲ್ಲಿಸುವಂತೆ ಗ್ರಾಮದ ಪಟೇಲರಿಗೆ ಹುಕುಂ ಜಾರಿಯಾಯ್ತು. ಆದರೆ ಹುಕ್ಕುಂ ತೆಗೆದುಕೊಂಡು ಅಧಿಕಾರಿಗಳು ಊರಿಗೆ ಬರುವ ಮೊದಲೇ ಇದನ್ನು ತಿಳಿದ ಲಕ್ಷ್ಮೀದೇವಮ್ಮ ತನ್ನೆಲ್ಲ ಒಡವೆ ವಸ್ತ್ರಗಳನ್ನು ಜನರಿಗೆ ಹಂಚಿ ಊರಿನ ಚನ್ನಕೇಶವ ದೇವಾಲಯದ ಬಳಿ ಅಗ್ನಿಪ್ರವೇಶ ಮಾಡಿದಳು. ಅಲ್ಲಿ ನೆರೆದ ಜನರಿಂದ ಅಲ್ಲಿನ ರಾಗಿ ಬೆಳೆ ತುಳಿದು ಹಾಳಾದರೂ ಅದರಿಂದ ಸಂಮೃದ್ಧಿಯಾದ ಫಸಲು ಬಂತು ಎಂದು ಅಲ್ಲಿನ ಜನರ ನಂಬಿಕೆ. ಆಕೆಯ ಮಗ ದಾನಪ್ಪ ಅಲ್ಲಿ ದೇವಾಲಯ ನಿರ್ಮಿಸಲು ಮುಂದಾದಾಗ ಬೇಡ ಅಲ್ಲಿ ಜನರಿಗೆ ನೆರಳು ಕೊಡುವ ತೋಪು ನಿರ್ಮಾಣ ಮಾಡಬೇಕೆಂದು

ಆಜ್ಞೆಯಾಗಿ ಇಂದಿಗೂ ಆ ಜಾಗದಲ್ಲಿ ದೊಡ್ಡ ಹಿಪ್ಪೆಮರಗಳ ತೋಪೂ, ಒಂದು ಬೃಂದಾವನವೂ ಇದೆ. ಇಂದಿಗೂ ಈ ವಂಶದಲ್ಲಿ ಜನಿಸುವ ಹಿರಿಯ ಹೆಣ್ಣು ಮಕ್ಕಳಿಗೆ ಲಕ್ಷ್ಮೀ ಎಂಬ ಭಾಗವಿರುವ ಹೆಸರನ್ನು ಇಡುವುದು ವಾಡಿಕೆ. ಅಲ್ಲದೇ ಯಾವುದೇ ಶುಭಕಾರ್ಯಕ್ಕೂ ಮೊದಲು ಬೃಂದಾವನಕ್ಕೆ ಪೂಜೆ ಅರ್ಪಿಸುವ ಪದ್ಧತಿ ಇದೆ. ಇಲ್ಲಿ ಸತಿ ಹೋದ ಹೆಣ್ಣು ಜನರ ಕಣ್ಣಿನಲ್ಲಿ ದೇವತೆಯಾಗುತ್ತಾಳೆ. ಅಲ್ಲದೆ ಫಲವತ್ತತೆಯ ಶಕ್ತಿ ಸಂವರ್ಧನೆಯಾಗಿ ಗೋಚರಿಸುತ್ತಾಳೆ.

ಈ ಸತಿಯ ಆಚರಣೆ ಎಂಬುದು ಸಮಾಜಕ್ಕೆ ಅದರಲ್ಲೂ ಪುರುಷ ಪ್ರಧಾನ ಸಮಾಜಕ್ಕೆ ಒಪ್ಪಿತ ಮೌಲ್ಯವಾಗಿರಬಹುದು. ಆದರೆ ಸ್ತ್ರೀ ತನ್ನನ್ನು ತಾನು ದಹಿಸಿಕೊಳ್ಳುವುದು ಅದರಲ್ಲೂ ದೇಹದಲ್ಲಿ ಉಸಿರಿರುವಾಗಲೇ ದಹಿಸಿಕೊಳ್ಳುವ ಅಮಾನವೀಯ ಸಂಗತಿ ನಿಜಕ್ಕೂ ಎದೆ ಜಲ್ಲೆನ್ನಿಸುತ್ತದೆ. ಈ ಸಹಗಮನ ಪದ್ಧತಿಯಂತೆ ಗರುಡ ಪದ್ಧತಿಯೆಂಬುದೊಂದಿದೆ. ಈ ಗರುಡ ಪದ್ಧತಿ ಸಹಗಮನಗಳೆರಡು ಒಂದೇ ತೆರನಾದ ಹಾದಿಯವುಗಳೆನ್ನಬಹುದು. ತಂದೆಯ ಮನೆಯಿಂದ ವಿವಾಹವೆಂಬ ಬಂಧನವನ್ನು ಸ್ವೀಕರಿಸಿದ ಹೆಣ್ಣು ತನಗೆ ತಾಳಿ ಕಟ್ಟಿದ ತನ್ನ ಗಂಡನ ಮನೆಗೆ ಹೋದಾಗ ಗಂಡನಾದವನು ಅವಳಿಗೆ ಆಶ್ರಯ ಕೊಡುತ್ತಾನೆ, ಸಾಕುತ್ತಾನೆ, ಸಲಹುತ್ತಾನೆ, ಆಸರೆಯಾಗಿಯೂ ಇರುತ್ತಾನೆ. ಇದು ಕೆಲವೊಮ್ಮೆ ಕೆಲವು ಹೆಣ್ಣು ಮಕ್ಕಳ ಪಾಲಿಗೆ ವಿರೋಧವು ಆಗಿರಬಾರದು ಎಂದೇನಿಲ್ಲ. ಅಂತಹ ಗಂಡ, ತನ್ನೊಡೆಯ ಸತ್ತಾಗ ದುಃಖ, ಹತಾಶೆ, ನೋವು, ಸಂಕಟ ಇವೆಲ್ಲವೂ ಆಗುವುದು ಸಹಜ. ಆದರೆ ತನ್ನ ಮುಂದಿರುವ ಜೀವನ, ಆಯುಷ್ಯ, ಬದುಕು ಎಲ್ಲವನ್ನು ಮರೆತು ಅಮಾನವೀಯವಾಗಿ ತನ್ನನ್ನು ತಾನು ದಹಿಸಿಕೊಳ್ಳುವುದು ಆದರ್ಶ ನಿಲುವಾಗಿ ಕಾಣವುದಿಲ್ಲ. ಇದೊಂದು ನಾಚಿಕೆಗೇಡಿನ ಸಂಗತಿಯಾದರೂ ಅವಳಿಗೆ ಅನಿವಾರ್ಯ ಸ್ಥಿತಿಯನ್ನು ತಂದೊಡ್ಡಿದ ಸಮಾಜ, ಅವಳಲ್ಲಿ ಕುರುಡು ನಂಬಿಕೆಯ ವಿಷ ಬೀಜ ಭಿತ್ತಿ ನೈತಿಕ ಒತ್ತಾಯವನ್ನು ನಿರ್ಬಂಧವಾಗಿ ಹೇರಿದೆ.

ಸತಿ ಹೋದ ಹೆಣ್ಣಿನ ಮಹಾಸತಿಕಲ್ಲುಗಳು, ಗರುಡ ಕಲ್ಲುಗಳು ಮುಂದಿನವರಿಗೆ ಆ ಹೆಣ್ಣಿನ ಕರುಣಾಜನಕ ಸ್ಥಿತಿಯನ್ನು ತಿಳಿಸುತ್ತವೆಯಾದರೂ, ಅವುಗಳಿಗೆ ಗುಡಿಕಟ್ಟಿ ಪೂಜೆ ಮಾಡಿ ಆ ಪೂಜೆಯನ್ನು ಮಾಡುವ ಪೂಜಾರಿಗೆ ದಾನ ನೀಡುವ ಸಂಗತಿಗಳೆಲ್ಲ ಮುಂದಿನ ಹೆಣ್ಣು ಮಕ್ಕಳಿಗೆ ಆದರ್ಶವಾಗಲಿ ಎಂಬ ಪುರುಷ ಪ್ರಧಾನ ಸಮಾಜದ ಒಳಗುಟ್ಟೇನೋ ಎನ್ನಿಸುತ್ತದೆ. ಮಳೆ ಕಾಲಕಾಲಕ್ಕೆ ಸರಿಯಾಗಿ ಬಂದಾಗ ಬೆಳೆಯೂ ಚೆನ್ನಾಗಿ ಬರುವುದು ವೈಜ್ಞಾನಿಕ ಸಂಗತಿ. ಆದರೆ ವೈದ್ಯ ಹೇಳಿದಕ್ಕೂ ರೋಗಿ ಬಯಸಿದ್ದಕ್ಕೂ ಸರಿಹೋಯಿತು ಎಂಬಂತೆ ಇವೆಲ್ಲ ಅಂಧ ಆಚರಣೆಗಳಲ್ಲದೆ, ಬೇರೇನು ಆಗಿ ಕಾಣಿಸುವುದಿಲ್ಲ. ಮಾಸ್ತಿಕಲ್ಲುಗಳು ಅನಾಗರೀಕ ಅಂಧ ಆಚರಣೆಯ ದುರ್ದೈವ ಕರುಣಾಜನಕ ಸ್ಮಾರಕಗಳಲ್ಲವೆ? ಎಂದು ಆಧುನಿಕರಾದ ನಾವು ಈ ಪ್ರಶ್ನೆ ಹಾಕಿಕೊಂಡಾಗ ಸತಿ ಆಚರಣೆಯೊಂದು ರೂಢಿಯಲ್ಲಿತ್ತು. ಆದರೆ ಈಗ ಅದು ಕಣ್ಮರೆಯಾಗಿದೆ ಎಂದೆನಿಸುತ್ತದೆಯಷ್ಟೆ. ಹೆಣ್ಣು ಅಂದು ಜೀವಂತ ಸುಟ್ಟು ಬೂದಿಯಾಗಿ ಮರೆಯಾಗುತ್ತಿದ್ದಳು.

ಆದರೆ ಇಂದು ಜೀವಂತವಾಗಿ ಬದುಕಿ ಪ್ರತಿ ದಿನವೂ ಸಾಯುತ್ತಿರುವಳೆಂದರೆ ತಪ್ಪಾಗಲಾರದು. ಕಾರಣ ಹೆಣ್ಣಿನ ಶೋಷಣೆ ಇಷ್ಟೊಂದು ವಿಜ್ಞಾನ, ತಂತ್ರಜ್ಞಾನ ಮುಂದುವರಿದಿದ್ದರೂ ಅದು ದಿನೇ ದಿನೇ ಹೆಚ್ಚುತ್ತಾ ಬೇರೊಂದು ರೀತಿಯಲ್ಲಿ ತನ್ನ ಜಾಗವನ್ನು ಆಕ್ರಮಿಸುತ್ತಿದೆ. ಇಂದು ವರದಕ್ಷಿಣೆಯ ನೆಪದಲ್ಲಿ ಹೆಣ್ಣನ್ನು ಜೀವಂತ ದಹಿಸಲಾಗುತ್ತಿದೆ. ಸರ್ಕಾರ ೧೯೬೧ರಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆ ಜಾರಿಗೆ ತಂದು, ಈ ಪ್ರಕರಣದ ಅಪರಾಧಿಗಳಿಗೆ ೨ ವರ್ಷ ಕಾರಾಗೃಹ ೧೦,೦೦೦ರೂ ದಂಡ ವಿಧಿಸಿದೆ. ಆದರೂ ನಮ್ಮ ದೇಶದಲ್ಲಿ ೨೦೧೦ರಲ್ಲಿ ೩೬೯೧ ಪ್ರಕರಣಗಳು, ೨೦೧೧ರಲ್ಲಿ ೮೩೩೧ ಪ್ರಕರಣಗಳು, ೨೦೧೨ರಲ್ಲಿ ೮೨೩೩ ಪ್ರಕರಣಗಳು, ೨೦೧೩ರಲ್ಲಿ ೬೮೫೧ ವರದಕ್ಷಿಣೆಯ ಸಾವು ಪ್ರಕರಣಗಳು ಸಂಭವಿಸುತ್ತವೆ. ಪ್ರತಿ ಗಂಟೆಗೆ ಒಂದು ಸಾವು ಸಂಭವಿಸುತ್ತಿದೆ. ಪ್ರತಿ ಲಕ್ಷ ಜನಸಂಖ್ಯೆಗೆ ಶೇ.೧.೪ರಷ್ಟು ಮಹಿಳೆಯರ ಸಾವು ಸಂಭವಿಸುತ್ತಿವೆ.

ಆದರೆ ಸತಿಯ ಆಚರಣೆಯಲ್ಲಿ ಸ್ವಲ್ಪ ಮಟ್ಟಕ್ಕಾದರೂ ಪರಿಸ್ಥಿತಿ ಶೋಷಣೆ ಕಡಿಮೆಯಾಗಿ ಶಿಕ್ಷಣ ಕಲಿತ ಹೆಣ್ಣು ಮಕ್ಕಳು ಅಲ್ಲಲ್ಲಿ ಪ್ರಜ್ಞಾವಂತರಾಗಿ ಗಂಡ ಸತ್ತ ನಂತರ ವಿವಾಹವಾಗುವುದು, ಪುರುಷ ದೌರ್ಜನ್ಯವನ್ನು ಎದುರಿಸಿ ನಿಂತ ಕೆಲವೊಬ್ಬ ದಿಟ್ಟ ಮಹಿಳೆಯರು ಅವನಿಂದ ವಿಚ್ಛೇದನದ ಮೂಲಕ ವಿದಾಯ ಹೇಳುತ್ತಿದ್ದಾರೆ. ಅಂತಹವರ ಸಂಖ್ಯೆ ಇಂದು ಕರ್ನಾಟಕದಲ್ಲಿ ಪ್ರತಿ ಸಾವಿರ ಪುರುಷರಿಗೆ ಶೇ.೧೩ರಷ್ಟು ವಿಚ್ಛೇದನ ಪ್ರಕರಣಗಳು ನಡೆಯುತ್ತಿವೆ. ಸರ್ಕಾರ ಸ್ತ್ರೀಯರಿಗೆ ೧೯೫೬ರಲ್ಲಿ ವಿಚ್ಛೇದನ ಹಕ್ಕನ್ನು ಜಾರಿಗೊಳಿಸಿತ್ತು.

ಸಹಗಮನದಂತೆ ರಾಜಸ್ಥಾನದಲ್ಲಿ ಪ್ರಚಲಿತದಲ್ಲಿದ್ದ ಜೋಹರ್ ಎಂಬ ವ್ಯವಸ್ಥೆ ರೂಢಿಯಲ್ಲಿತ್ತು. ಭವಿಷ್ಯಃ ಅಧಿಕಾರದ ಗದ್ದುಗೆಯನ್ನೆರಿದ ಅನೇಕ ರಾಜರುಗಳು ತಮ್ಮ ಅಧಿಕಾರದ ಪರಮೋನ್ನತಿ, ಹೆಣ್ಣಿನದಾಹ, ಲೋಲುಪತೆಯಿಂದ ತುಂಬಿ ಹೋಗಿದ್ದರು. ಹೆಸರಿಗೆ ಕೆಲವೊಬ್ಬರಾಜರು ಪರನಾರಿ ಸೋದರನೆಂದು ಕರೆಸಿಕೊಂಡರು. ಆಂತರ್ಯದಲ್ಲಿ ಕಾಮುಕತೆಯ ಪ್ರತಿಬಿಂಬವೇ ಆಗಿರುತ್ತಿದ್ದರು. ಇತರ ರಾಜ್ಯಗಳನ್ನು ಗೆಲ್ಲುವ ದೃಷ್ಟಿಯಿಂದ ರಾಜ್ಯಗಳ ಮೇಲೆ ಆಕ್ರಮಣ ಮಾಡಿ ಆ ಪ್ರದೇಶವನ್ನು ವಶಪಡಿಸಿಕೊಂಡದ್ದಲ್ಲದೆ ಅಲ್ಲಿನ ವಸ್ತು, ಸಂಪತ್ತನ್ನು ದೋಚಿದಂತೆ ಅಲ್ಲಿನ ಸ್ತ್ರೀಯರನ್ನೂ ಸಹ ವಸ್ತುವೆಂದೆ ಕೊಂಡ್ಯೊಯುತ್ತಿದ್ದರು. ಅಂದಿನಿಂದಲೂ ಪುರುಷ ಸಮಾಜ ಹೆಣ್ಣಿಗೂ ಅವಳದೆ ಆದ ಭಾವನೆಗಳಿರುತ್ತವೆ ಎಂಬುದನ್ನು ಗಮನಿಸದೆ, ಹೆಣ್ಣೆದ್ದರೆ ವಸ್ತುವೆಂದು ಭಾವಿಸಿ ವಸ್ತುವಿನಂತೆಯೇ ಕಾಣುತ್ತ ಬಂದಿದೆ. ಪುರುಷನಾದವನು ಎಷ್ಟು ಜನ ಹೆಂಡಿರನ್ನು ಬೇಕಾದರೂ ಹೊಂದಬಹುದು. ಎಷ್ಟು ವಿವಾಹವಾದರೂ ಆಗಬಹುದು. ಅವನಿಗೆ ಸಮಾಜದಲ್ಲಿ ಎಲ್ಲ ವಿಧವಾದ ನೈತಿಕ ಹಕ್ಕು ಬಾಧ್ಯತೆಗಳಿವೆ. "ಗಂಡ ಸತ್ತ ಹೆಣ್ಣು ವಿಧವೆ, ಹೆಂಡತಿ ಸತ್ತ ಗಂಡನಿಗೆ ಮದುವೆ" ಎಂಬ ಮಾತು ಪರಂಪರೆಯಿಂದಲೂ ರೂಢಿಗತವಾಗಿ ಬಂದಿದೆ. ಹೆಣ್ಣಿಗೆ ಮಾತ್ರ ನೈತಿಕತೆಯ ಬೇಲಿಯನ್ನು ಭದ್ರವಾಗಿಸಿ ಒಂದಿರುವೆಯೂ ನುಸಿಯದಂತೆ ಭದ್ರಪಡಿಸಲಾಗಿದೆ. ನೈತಿಕತೆ ಎಂಬ ಬೀಜವನ್ನು

ಹೆಣ್ಣೆಂಬವಳ ಹುಟ್ಟಿದಂದಿನಿಂದಲೇ ಅವಳ ಮನಸ್ಸಿನಲ್ಲಿ ಹದವಾದ ಉಳುಮೆ ಮಾಡಿ ಬಿತ್ತಿದಂತಿದೆ. ಈ ಬಿತ್ತನೆಯು ಸಂವೃದ್ಧಿಯಾದ ಫಸಲನ್ನು ಕಂಡದ್ದಲ್ಲದೆ, ಆಲದ ಮರದೋಪಾದಿಯಲ್ಲಿ ಬೇರು ಇಳಿಸಿಕೊಂಡಾಗ ಒಂದು ಬೇರಾದರೆ ಕಿತ್ತೆಸೆಯಬಹುದು, ಪ್ರತಿ ಬೇರನ್ನು ಕಿತ್ತೆಸೆಯುವುದು ಕಷ್ಟಕರ ಸಂಗತಿಯಾದ ಕಾರಣ ಅದು ಕಿತ್ತಷ್ಟು ತನ್ನ ಬೇರನ್ನು ಮತ್ತೆ ಮತ್ತೆ ಸೃಷ್ಟಿಸುತ್ತಲೇ ಹೋಗುತ್ತದೆ. ರಾಜಸ್ಥಾನದ ಜೋಹರ್ ಇದಕ್ಕೆ ಹೊರತಾಗಿಯೇನು ಉಳಿದಿಲ್ಲ. ಬೇರೆಯವರು ತಮ್ಮ ಮೇಲೆ ಆಕ್ರಮಣ ಎಸಗಿದಾಗ ಸೋಲು ಖಚಿತವೆಂದು ತಿಳಿದಾಗ ಅವಮಾನ ಸಹಿಸಲಾರದೆ ಹೆಂಗಸರು ಗಂಡಸರು ದೊಡ್ಡ ಚಿತೆ ನಿರ್ಮಿಸಿ ಅದರಲ್ಲಿ ಬಿದ್ದು ಪ್ರಾಣಹಾನಿ ಮಾಡಿಕೊಳ್ಳುತ್ತಿದ್ದರು. ಅಲ್ಲಿನ ಗಂಡಸರಿಗೆ ತಮ್ಮ ಪ್ರಿಯ ವಸ್ತು ಮತ್ತೊಬ್ಬರ ಆಸ್ತಿಯಾಗಬಾರದೆಂಬ ವೈಯಕ್ತಿಕ ಉದ್ದೇಶವೂ, ಹೆಂಗಸರನ್ನು ಜೊತೆಗೆ ಕರೆದುಕೊಂಡು ಸಾಯುವುದಕ್ಕೆ ಕಾರಣವೆನ್ನಬಹುದು. ಚಿತ್ತೂರಿನ ಮೇಲೆ ಅಲ್ಲಾವುದ್ದೀನ್ ಖಿಲ್ಜಿ ದಾಳಿ ಮಾಡಿದಾಗ ಅಲ್ಲಿನ ಸಹಸ್ರ ಸ್ತ್ರೀಯರು ಚಿತೆಯಲ್ಲಿ ದಹನವಾದರು. ಹದಿನಾರನೆಯ ಶತಮಾನದಲ್ಲಿ ೧೩ ಸಾವಿರ ಸ್ತ್ರೀಯರು ಸತ್ತರಂತೆ. ಕಾರಣ ತಮ್ಮ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವುದಾಗಿತ್ತು. ಸಮಾಜದಲ್ಲಿ ಅಂಥ ಆಚರಣೆಗಳಿಲ್ಲದಿದ್ದರೆ ಸತಿಯಾದವಳು ಅಂತಹ ಘೋರ ಕಠಿಣ ತರವಾದ ನಿಲುವನ್ನು ತಾಳುತ್ತಿರಲಿಲ್ಲ ಎನ್ನಿಸುವುದು ಸ್ಪಷ್ಟ. ಲಂಬಾಣಿಗಳೆಂಬ ಜನಾಂಗದವರು 'ಹೂನಾಸತ್ತಿ'ಯ ಬಗ್ಗೆ ಹಾಡುಗಳನ್ನು ರಾತ್ರಿಯೆಲ್ಲ ಹಾಡುತ್ತ ಅವಳ ಭಕ್ತಿ ಭಾವಗಳನ್ನು ವ್ಯಕ್ತಪಡಿಸುತ್ತಾರೆ. ರಾಜಸ್ಥಾನದ ಮಾರ್ವಾರಿಗಳಲ್ಲಿ ಸತ್ತ ಮೇಲೆ ಆಣೆ ಇಡುವುದು ಆಣೆಗಳಲ್ಲೆಲ್ಲ ಗಂಭೀರವಾದುದು, ಅಷ್ಟರಮಟ್ಟಿಗೆ ಜನರ ಮನಸ್ಸಿನಲ್ಲಿ ಆಳವಾದ ನಂಬಿಕೆ ಬೇರೂರಿದೆ ಎಂದರೆ ತಪ್ಪಾಗಲಾರದು.

೪.೨. ಪೆಣ್ಬುಯಲ್

ಯುದ್ಧವೆಂಬುದು ಪ್ರಾಚೀನ ಸಂದರ್ಭದಿಂದ ಇಂದಿನ ಆಧುನಿಕ ತಂತ್ರಜ್ಞಾನಯುಗದಲ್ಲಿಯೂ ಸಹ ಹೃದಯ ವಿದ್ರಾವಕ ಘಟನೆಯೇ ಸರಿ. ಈ ಭೀಕರ ದೃಶ್ಯ ದೂರ ನಿಂತು ನೋಡುವವರ ಹೃದಯವನ್ನೇ ಘಾಸಿಗೊಳಿಸುವಂತಹದ್ದು. ಹಿಂದೆ ರಾಜರುಗಳು ತಮ್ಮ ಅಧಿಕಾರದ ಅಮಲಿನ ಹಿತಾಸಕ್ತಿಯಿಂದ ಯುದ್ಧ ಏರ್ಪಡಿಸಿದಾಗ ಆ ಯುದ್ಧದಲ್ಲಿ ಸತ್ತ ವೀರರ ಪತ್ನಿಯರೆಲ್ಲ ವಿಧವೆಯರಾಗುತ್ತಿದ್ದರು. ಕೆಲವೊಮ್ಮೆ ಯುದ್ಧವನ್ನು ಜಯಿಸಿ, ಆ ಊರುಗಳನ್ನು ಲೂಟಿ ಮಾಡಿದ್ದಲ್ಲದೆ, ಅಲ್ಲಿನ ಹೆಣ್ಣುಗಳನ್ನು ಅವಮಾನಿಸುತ್ತಿದ್ದರು. ಜೊತೆಗೆ ಮಾನಹಾನಿ ಮಾಡಲು ಯತ್ನಿಸುತ್ತಿದ್ದರು. ಹೆಣ್ಣಿನ ಮಾನವನ್ನು ರಕ್ಷಣೆ ಮಾಡುವುದು ಆದರ್ಶವೆಂದು ಭಾವಿಸಿದವರು ಮಾನಹಾನಿ ಮಾಡುವವರ ವಿರುದ್ಧ ಹೋರಾಡಿ ಮಡಿಯುತ್ತಿದ್ದರು. ತನ್ನಿಂದ ತನ್ನವರ ಸಾವು ಸಂಭವಿಸಿದೆ ಎಂದು ಅನ್ಯತಾ ತಿಳಿದು ವಿನಾಕಾರಣ ಹಲವಾರು ಸ್ತ್ರೀಯರು ತಮ್ಮನ್ನು ತಾವೇ ದಹಿಸಿಕೊಳ್ಳುತ್ತಿದ್ದರು. ರನ್ನ ಕವಿ ತನ್ನ ಕೃತಿಯಾದ ಸಾಹಸ ಭೀಮ ವಿಜಯದಲ್ಲಿ

ತುಱುಗೊಳೋಳ್ ಪೆಣ್ಬುಯ್ಯಲೊ
ಳ್ ಱವೆಸದೊಳ್ ನಂಟನೆಡಱೊಳೂರಱುವಿನೊಳಂ
ತಱಿಸಂದು ಗಂಡುತನಮನೆ
ನೆಱುಪದವಂ ಗಂಡನಲ್ಲನೆಂತುಂ ಷಂಡಂ"[೨೦]

ಎಂದು ಹೇಳಿದ್ದನೆ.

ಪೆಣ್ಬುಯಲ್ ಪದವು ಪೆಣ್+ಪುಯ್ಯಲ್ ಎಂಬ ಎರಡು ಪದಗಳಿಂದ ಜೋಡಿಸಲ್ಪಟ್ಟಿದೆ. ಇದು ಹೆಣ್ಣಿನ ಕೂಗು, ಹೆಣ್ಣಿನ ಆಕ್ರಂದನವನ್ನು ಹೇಳುತ್ತದೆ. ಶಾಸನಗಳಲ್ಲಿ ಎಲ್ಲಿಯೂ ಪೆಣ್ಬುಯಲ್ ಪದ ಪ್ರಯೋಗವಾಗಿರುವುದು ಕಂಡುಬರುವುದಿಲ್ಲ. ಬದಲಿಗೆ ಪೆಣ್ದಿರುಡೆಯುರ್ಚಿ, ಪೆಣ್ಣಿರ ಉಡೆ ಉರ್ಚ್ಚಲು, ಉಡೆ ಉರ್ಚ್ಚಿ, ಪೆಂಡಿರ ಪೆರಗಿಕ್ಕಿ, ಹೆಂಡಿರುಡೆಯುರ್ಚ್ಚಿ, ಕೆಲವು ಶಾಸನಗಳಲ್ಲಿ ಹೆಣ್ಣು ಸೆರೆ ಬಿಡಿಸಿದನು ಎಂಬ ಪದಗಳು ಬಳಕೆಯಲ್ಲಿವೆ.

'ಉಡೆಉರ್ಚ್ಚು' ಎಂದರೆ ಉಟ್ಟ ಬಟ್ಟೆಯನ್ನು ಸೆಳೆ, ನಗ್ನಮಾಡು ಎಂಬ ಅರ್ಥವನ್ನು ಕೊಡುತ್ತದೆ. ವಿದ್ವಾಂಸರೊಬ್ಬರು ಈ ಶಬ್ದಕ್ಕೆ ವಿಧವೆಯನ್ನಾಗಿಸು ಎಂದು ಅರ್ಥೈಸಿದ್ದಾರೆ.

ಪೆಣ್ಬುಯಲ್ ವೀರಗಲ್ಲು ಶಿಲ್ಪಗಳನ್ನು ಗಮನಿಸಿದರೆ ಸ್ತ್ರೀಯರು ತಮ್ಮ ಮಕ್ಕಳೊಂದಿಗೆ ನಗ್ನರಾಗಿ ಕೆದರಿದ ಕೇಶಗಳೊಂದಿಗೆ ನಿಂತಿರುವುದು, ನಾಚಿಕೆ ಮತ್ತು ಅವಮಾನದಿಂದ ತಮ್ಮ ಮರ್ಮಾಂಗವನ್ನು ಕೈಗಳಿಂದ ಮುಚ್ಚಿಕೊಂಡಿರುವ ಚಿತ್ರಗಳನ್ನು ನೋಡಿದರೆ ದಾಳಿ ಮಾಡಿದ ದಾಳಿಕೋರರು ಸ್ತ್ರೀಯರನ್ನು ಬರೀ ವಿಧವೆಯರನ್ನಾಗಿ ಮಾಡಿ ಹೋಗುತ್ತಿರಲಿಲ್ಲ. ಜೊತೆಗೆ ಅತ್ಯಾಚಾರ ಮಾಡುವುದು, ಲೈಂಗಿಕ ಕಿರುಕುಳ ಕೊಡುತ್ತಿದ್ದರೆಂಬ ಕಟುಸತ್ಯ ಅರಿವಾಗದೆ ಇರಲಾಗದು. ಹಸುಗಳನ್ನು ಕದಿಯಲು ಬಂದವರು ಪ್ರಾಣಿಗಳನ್ನು ಕದಿಯುವಂತೆ ಅಲ್ಲಿನ ಸ್ತ್ರೀಯರನ್ನು ಅಪಹರಿಸುವುದರೊಂದಿಗೆ ಸೀರೆ ಸೆಳೆಯುವ ಕೆಲಸವನ್ನು ಎಸಗುತ್ತಿದ್ದರು. ಆಗ ಅನಿವಾರ್ಯವಾಗಿ ಹೆಂಗಸರನ್ನು ರಕ್ಷಿಸಲು ಹೋರಾಡುವ ಸಂದರ್ಭ ಎದುರಾಗಿ ಹೋರಾಡ ಬೇಕಾಗುತ್ತಿತ್ತು.

ನಮ್ಮ ಕನ್ನಡ ಕಾವ್ಯದಲ್ಲೂ ಸಹ ಅಲ್ಲಲ್ಲಿ ಈ ಪೆಣ್ಬುಯಲ್ ಪ್ರಸಂಗಗಳು ಕಂಡುಬರುತ್ತವೆ. ನಾಗಚಂದ್ರನ ರಾಮಚಂದ್ರ ಚರಿತ ಪುರಾಣದಲ್ಲಿ ಪೆಣ್ಬುಯಲ್ ಬಗೆಗಿನ ವರ್ಣನೆಯನ್ನು ಈ ಕೆಳಗೆ ಗಮನಿಸಬಹುದು.

"ಸತಿ ಪುಯ್ಯಲ್ಚಿದಪಳ್ ರಘೂದ್ವಹಕುಲಸ್ತ್ರೀ ಸೀತೆ ಪೆಣ್ಬುಯ್ಯಲಂ
ಶ್ರುತಿ ಕೈಕೊಂಡುದು ಕೇಳ್ದೊಡಂತೆವಳೆಗಂಡಂದೆನ್ನ ವಿಖ್ಯಾತಿ ದೂ
ಷಿತ ಮಕ್ಕುಂ ಸೆಱಗೊಂಡನಂ ಕದನದೊಳ್ಬೆಂಕೊಂಡು ಬಾಹಾಬಳೋ
ನ್ನತಿಯಂ ಬೀಱುವೆನೆಂದು ಘೂರ್ಮಿಸಿದನೇಂ ಗಂಡಂ ಪರಿಚ್ಛೇದಿಯೋ
ಅಂತು ಪರಿಚ್ಛೇದಿಸಿ ರತ್ನಜಟ ಬದ್ಧಭ್ರುಕುಟ ದಶಾನನವಿಮಾನಕ್ಕಡ್ಡಂ ಬಂದು..."[೨೧]

ಅಗ್ಗಳದೇವನ ಕಾವ್ಯವು ಪೆಣ್ಬುಯ್ಯಲ ನಾರಯ್ಯ ದೋಸರಿಪುದೆನ್ನ ಗಂಡು ಗೂಸುತನಕ್ಕೆ ಪಸುಗೆಯಲ್ತೆಂದು.....[೨೨] ಹೋರಾಡಿದನೆಂದು ಹೇಳುತ್ತದೆ.

ಅನಂತನಾಥಪುರಾಣ, ಅನಂತನಾಥ ಚರಿತ್ರೆ, ಮಲ್ಲಿನಾಥ ಪುರಾಣ, ಚಂದ್ರಪ್ರಭ ಚರಿತ್ರೆ ಗಳಲ್ಲಿಯೂ ಸಹ ಪೆಣ್ಬುಯಲ್ ಪ್ರಸಂಗಗಳು ಬರುತ್ತವೆ. ಕನ್ನಡದಲ್ಲಿ ಈ ಚಂದ್ರಪ್ರಭ ಚರಿತ್ರೆಯಲ್ಲಿಯೂ ಸಹ ಪೆಣ್ಬುಯಲ್ ಪ್ರಸಂಗಗಳು ಬರುತ್ತವೆ. ಕನ್ನಡದಲ್ಲಿ ಈವರೆಗೆ ೪೬ ಪೆಣ್ಬುಯ್ಯಲೆಗೆ ಸಂಬಂಧಿಸಿದ ಶಾಸನಗಳು ಲಭ್ಯವಾಗಿವೆ. "ಅವುಗಳಲ್ಲಿ ಸೊರಬ ತಾಲೂಕಿನ ಮನೆ ಮನೆ ಗ್ರಾಮದ ಶಾಸನ ಪ್ರಾಚೀನ ಶಾಸನವಾಗಿದೆ. ಈ ಶಾಸನವು ಕ್ರಿ.ಶ.೮೦೦ಕ್ಕೆ ಸೇರಿದ್ದಾಗಿದೆ. ಇದರಲ್ಲಿ ಅಜ್ಜರನೆಂಬ ವೀರನು ಊರಳಿವಿನ ಸಮಯದಲ್ಲಿ ಸ್ತ್ರೀಯರ ಮಾನಭಂಗಕ್ಕೆ ಯತ್ನಿಸಿದ ಶತ್ರುಗಳ ವಿರುದ್ಧ ಹೋರಾಡಿ ಮಡಿಯುತ್ತಾನೆ. ಇವನ ನೆನಪಿಗಾಗಿ ಶಾಸನ ಹಾಕಿಸಿ ದಾನ ನೀಡಿಲಾಯಿತೆನ್ನಲಾಗಿದೆ. ಈ ಶಾಸನದಲ್ಲಿ "ಪೆಣ್ಡಿಕ್ಕಿಱು ಮಂಕ್ಕಾಳಾ ಉದುಗುಜೆಯನು ಟ್ಟುಕೊಳ್ಪ..."[೨೩]

ಕೋಗೋಡಿನ ವೀರಗಲ್ಲಿನಲ್ಲಿ ಸಿವರ ಗಾವುಂಡನು ತಮ್ಮ ರಾಜಯ್ಯನ ಮಗನಾದ ಮಾಚನು ತಾಯಿಯ ಉಡೆ ಉಚ್ಚುವ ಸಮಯದಲ್ಲಿ ಹೋರಾಡಿ ಮಡಿದನೆಂದು ತಿಳಿಸುತ್ತದೆ. ಊರಟಿವಿನ ಸಮಯದಲ್ಲೆ ಹೆಚ್ಚು ಉಡೆಉಚ್ಚುವ ಪ್ರಸಂಗಗಳು ಕಂಡುಬರುತ್ತವೆ. ಮನುಷ್ಯ ತನ್ನ ಸ್ವಾರ್ಥ, ಸ್ವಹಿತಾಸಕ್ತಿಗೋಸ್ಕರ ವೈಯಕ್ತಿಕ ದ್ವೇಷ, ಅಸೂಯೆ, ಮದಾಂಧತೆಗಳಿಂದ ಅತ್ಯಂತ ಕೀಳು ಮಟ್ಟಕ್ಕೆ ಇಳಿಯುತ್ತಿದ್ದುದು ಈ ಪೆಣ್ಬುಯಲ್‌ನಿಂದ ವ್ಯಕ್ತವಾಗುತ್ತದೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ದೊಡ್ಡ ಉಳ್ಳರ್ಲೆಯಲ್ಲಿನ ಕ್ರಿ.ಶ.೧೦ನೇ ಶತಮಾನದ ವೀರಗಲ್ಲಿನ ಶಿಲ್ಪವು ತುಂಬಾ ಮಹತ್ವಪೂರ್ಣದ್ದಾಗಿದೆ. ಬಲ ಮೂಲೆಯಲ್ಲಿ ಶತ್ರುವು ಹೆಂಗಸೊಬ್ಬಳ ವಸ್ತ್ರವನ್ನು ಸೆಳೆಯುತ್ತಿರುವಂತೆಯೂ ಅವಳು ಅರೆ ನಗ್ನಳಾಗಿರುವಂತೆಯೂ ಚಿತ್ರಿಸಲಾಗಿದೆ. ಎಡಭಾಗದಲ್ಲಿ ವೀರನೊಬ್ಬನು ಅವನನ್ನು ಉದ್ದವಾದ ಭರ್ಜಿಯಿಂದ ತಿವಿಯುತ್ತಿರುವಂತೆಯೂ ಕೆತ್ತಲಾಗಿದೆ. ವೀರರ ಹಿಂದೆ ಸೈನಿಕರು ಕೈಯಲ್ಲಿ ಖಡ್ಗಗಳನ್ನು, ಕೊಂತಗಳನ್ನು ಹಿಡಿದು ಸಾಲಾಗಿ ಬರುತ್ತಿರುವಂತೆ, ಕೆಲವು ಶತ್ರುಗಳ ಹೆಣಗಳನ್ನು ತುಳಿಯುತ್ತಾ ಮುಂದೆ ಸಾಗುವ ದೃಶ್ಯವಿದೆ. ಶತ್ರುವೊಬ್ಬನು ವೀರನೆಡೆಗೆ ಬಾಣ ಪ್ರಯೋಗಿಸುತ್ತಿರುವಂತೆ ಚಿತ್ರವಿದ್ದು, ಮಾನಹಾನಿ ನಡೆಯುತ್ತಿರುವಾಗ ವೀರನು ಮತ್ತವನ ಸಂಗಡಿಗರು ಶತ್ರುಗಳ ಮೇಲೆ ದಾಳಿ ಮಾಡಿ ಸ್ತ್ರೀಯರನ್ನು ರಕ್ಷಿಸುವ ಪ್ರಯತ್ನವಿದೆ. ಇಲ್ಲಿ ಸ್ತ್ರೀಯರ ಬಟ್ಟೆ ಸೆಳೆಯುವ ಪ್ರಸಂಗಗಳು ನಿಜಕ್ಕೂ ಹೃದಯ ಕಲಕುವಂತಿವೆ.

ಇದೇ ಜಿಲ್ಲೆಯ ಜಟಂಗಿರಾಮೇಶ್ವರದಲ್ಲಿ ಯತಿಗಳು ಮತ್ತು ವೀರಗಲ್ಲಿನ ಪಕ್ಕದಲ್ಲಿ ನಗ್ನವಾಗಿ ಕೆತ್ತಲಾದ ಸ್ತ್ರೀ ಶಿಲ್ಪವಿದೆ. ಈ ಶಿಲ್ಪದಲ್ಲಿ ಸ್ತ್ರೀಯೋರ್ವಳು ನಗ್ನಳಾಗಿ ನಿಂತಿರುವಳು. ಸ್ತ್ರೀಯು ಬಲಗೈಯನ್ನು ಸೊಂಟದ ಮೇಲಿಟ್ಟುಕೊಂಡು ಎಡಗೈ ಮೇಲಕ್ಕೆತ್ತಿ ನಿಂತಿರುವ ಚಿತ್ರವಿದೆ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆಯಲ್ಲಿ ದೊರೆತ ಇಮ್ಮಡಿ ಮದಕರಿ ನಾಯಕನ ಕಾಲದ ತಾಮ್ರಪಟವು ಕ್ರಿ.ಶ.೧೬೭೩ರಲ್ಲಿ ರಚಿತವಾಗಿದ್ದು, ಹಿಂಬದಿ ಮುಂಬದಿಯಿಂದ ಕೂಡಿದೆ. ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲೂಕಿನ ಅಜ್ಜಂಪುರವಾಸಿ ಶ್ರೀಮತಿ ಪಾಪಮ್ಮ ಎಂಬುವವರ ಬಳಿಯಲ್ಲಿರುವ ತಾಮ್ರಪಟವು ತರೀಕೆರೆಯ ಎಸ್.ಜೆ.ಎಂ.ಕಾಲೇಜಿನಲ್ಲಿ ಕನ್ನಡ ಪ್ರವಾಚಕರಾದ ಟಿ.ಶಂಭುಲಿಂಗಪ್ಪನವರ ಸಹಕಾರದಿಂದ ೧೯೮೯ರ ಫೆಬ್ರವರಿ ತಿಂಗಳಿನಲ್ಲಿ ದೊರೆತಿದೆ. ೩೦ ಸೆಂ.ಮೀ.ಉದ್ದ, ೨೦ ಸೆಂ.ಮೀ. ಅಗಲವಿದೆ. ಈ ಶಾಸನವು ಚಿತ್ರದುರ್ಗ ಜಲ್ಲೆಯ ಹೊಳಲ್ಕೆರೆಯಲ್ಲಿ ಹಾಗೂ ಚಿತ್ರದುರ್ಗದಲ್ಲಿ ದೊರೆತ ಕ್ರಿ.ಶ.೧೬ ಮತ್ತು ೧೭ನೇ ಶತಮಾನದ ಎರಡು ತಾಮ್ರ ಶಾಸನಗಳ ಅಕ್ಷರರೂಪ ಮತ್ತು ಭಾಷೆಯನ್ನು ಹೋಲುವಂತಿದೆ.

ಈ ತಾಮ್ರಶಾಸನವು ಕ್ರಿ.ಶ.೧೭ನೇ ಶತಮಾನದಲ್ಲಿ ಜರುಗಿದ ಒಂದು ಹೃದಯ ವಿದ್ರಾವಕ ಘಟನೆ ಮತ್ತು ಪರಿಣಾಮವನ್ನು ಹೇಳುತ್ತದೆ. ಚಿತ್ರಕಲ್ಲು ದುರ್ಗವನ್ನು ಮದಕರಿ ನಾಯಕನು ಆಳುತ್ತಿದ್ದನು. ಅದೇ ಪ್ರಾಂತ್ಯಕ್ಕೆ ಸೇರಿದ 'ಕೆನ್ನಳ್ಳಿ' ಎಂಬ ಗ್ರಾಮದಲ್ಲಿ ಅಂಡೆದನುಗರ ಜಾತಿಯ ತಿಮ್ಮರಾವುತ ಎಂಬವನು ಆ ಗ್ರಾಮದ ಗೌಡನಾಗಿದ್ದನು. ಇವನ ಮಗಳು ಲಕ್ಕು(ಲಕ್ಷ್ಮಿ). ಇವಳನ್ನು ಮೋಹಿಸಿ ಮದಕರಿನಾಯಕನು ಹೆಣ್ಣು ಕೇಳಲು ತನ್ನ ದಳವಾಯಿಗಳಾದ ಉಡುವಳ್ಳಿಯ ಹೊಟ್ಟೆಗಿರಿನಾಯಕ ಮತ್ತು ಕಾಟನಾಯಕರನ್ನು ಕಳುಹಿಸಿದನು. ಆಗ ಲಕ್ಕುವಿನ ತಂದೆ ತಿಮ್ಮರಾವುತನು ಅಂಡೆ ದನುಗರ ಜಾತಿಯವರ ಹೆಣ್ಣನ್ನು ವಾಲ್ಮೀಕಿ ಜಾತಿಯವರು ಕೇಳಲು ಏನು ಹಕ್ಕಿದೆ. ಎಂದು ಹೆಣ್ಣು ಕೇಳಲು ಬಂದವರನ್ನು ಹಗ್ಗದಿಂದ ಕಾಲುಕಟ್ಟಿ ಗ್ರಾಮದಿಂದ ಹೊರಗಡೆ ಎಳೆಸುತ್ತಾನೆ. ದಳವಾಯಿಗಳು ಈ ವಿಚಾರವನ್ನು ಅರಸನ ಬಳಿ ಬಂದು ತಿಳಿಸಲು ಅರಸನು ೧೬೮ ಜನ ಜವಾನರನ್ನು ಕೆನ್ನಳ್ಳಿ ಲೂಟಿ ಮಾಡಲು ಕಳಹಿಸುತ್ತಾನೆ. ಅವರು ಊರಿಗೆ ಬೆಂಕಿ ಹಚ್ಚಿ ಲಕ್ಕುವನ್ನು ಹಿಡಿಯುತ್ತಾರೆ. ಅಲ್ಲಿಯ ಹಿರಿಯರಾವುತರು ೫ ಜನ ಮತ್ತು ಅವರ ಮಕ್ಕಳು ೧೫ ಜನ ಜವಾನರೊಂದಿಗೆ ಹೋರಾಡಿದರು. ಅರಸನ ಕಡೆಯಿಂದ ೧೧೨ ತಲೆಗಳು, ರಾವುತರ ಕಡೆಯಿಂದ ೯ ತಲೆಗಳು ಮಡಿದು ಬಿದ್ದವು. ಅರಸನ ಸೈನ್ಯವೇನೋ ಹಿಮ್ಮೆಟ್ಟಿತಾದರೂ ತನ್ನ ಕಡೆಯವರು ೯ ಜನ ಮರಣಿಸಿ ಅವರಿಗೆ ಕಿಚ್ಚು ಹಾಕಿದಾಗ ನನ್ನಿಂದಾಗಿ 'ನನ್ನ ಅಣ್ಣಂದಿರು ಪ್ರಾಣ ತೆತ್ತರು' ಎಂದು ಅದೇ ಬೆಂಕಿಗೆ ಹಾರಿ ಪ್ರಾಣ ತ್ಯಾಗ ಮಾಡಿದಳು. ಈ ಶಾಸನವು ಶಾಲಿವಾಹನ ಶಕ ೧೫೯೬ ಪ್ರಮಾದೀಚ ಸಂವತ್ಸರದ ವೈಶಾಖ ಬಹುಳ ೫ರ ಶುಕ್ರವಾರವಾಗಿದ್ದು, ಇದು ಕ್ರಿ.ಶ.೧೬೭೩, ಏಪ್ರಿಲ್ ೨೫–೨೬ಕ್ಕೆ ಸರಿಹೊಂದುತ್ತದೆ.

೧೭ ..... ಕೆಂ ನಳಿ ರಾಉತರ ಜನ ೯ ತಲೆ (ಬಿ*)ದು ದುರ್ಗದ ಜನ ಹಿಂ

೧೮ ಮುರಿಯಲಾಗಿ। ಇ ನಾಯ್ಕಲ್ಕರು ಪಂಚತ್ವನೈದಿದವರು ೯ ಜನ ಕಿಚಿಗೆ ಹಾಕಿ

೧೯ ನನಿಂದ ನಂ ಮಂಣದಿರು ಪ್ರಾಣ ಹೋ ಇತೆಂದು ಲಕ್ಕು ಅದೇ ಕಿಚ್ಚಿಗೆ ಬಿದಲಿ।.....[೨೪]

ಹೆಣ್ಣಾದವಳು ತನ್ನ ಮಾನ ರಕ್ಷಿಸಿಕೊಳ್ಳಲು ಸಮಾಜದ ವ್ಯವಸ್ಥೆಯ ವಿರುದ್ಧ ಪ್ರತ್ಯಕ್ಷವಾಗಿ ಮುಖಾಮುಖಿಯಾಗಿ ನಿಂತು ಪ್ರತಿರೋಧಿಸುವ ಸ್ವತಂತ್ರ್ಯವಿಲ್ಲದ ಕಾರಣ ಪರೋಕ್ಷವಾಗಿ ಸಾವಿನ ಮೂಲಕ ಪ್ರತಿರೋಧಿಸುವ ಪ್ರಯತ್ನ ಇಲ್ಲಿಯದು. ಈ ಶಾಸನದಲ್ಲಿ ಕುಲಪಾವಿತ್ರ್ಯ ರಕ್ಷಣೆ, ಕುಲಾಭಿಮಾನ, ಅನ್ಯಜಾತಿಯ ನಿರಾಕರಣೆ, ಹೆಣ್ಣಿನ ಶೀಲಪ್ರಜ್ಞೆ, ಅವಳ ಜೀವನ ವಿಧಾನ ಈ ಎಲ್ಲಾ ಅಂಶಗಳೂ ಸಹ ಹೆಣ್ಣನ್ನೆ ಗುರಿಯಾಗಿಟ್ಟುಕೊಂಡಿರುವುದು ಇಲ್ಲಿ ವ್ಯಕ್ತವಾಗುತ್ತದೆ. ಹೆಣ್ಣನ್ನು ಒಂದು ವಸ್ತುವಿನಂತೆ ಪರಿಭಾವಿಸಿ ಅವಳು ಹಣ, ಅಧಿಕಾರ, ಬಲ ಇದ್ದವರ ಸ್ವತ್ತು ಎಂಬಂತೆ ಕಾಣುತ್ತಾ ಬರಲಾಗುತ್ತಿದೆ. ಪುರುಷ ಪ್ರಧಾನ ವ್ಯವಸ್ಥೆಯ ಬಲದ ಎದುರು ಪ್ರತಿಭಟಿಸದ ಹೆಣ್ಣುಗಳು ಅನ್ಯವಿಧಿಯಿಲ್ಲದೆ ತಮ್ಮನ್ನು ತಾವು ಒಪ್ಪಿಸಿಕೊಳ್ಳುವ ಸಂದರ್ಭಗಳೇ ಚರಿತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ.

E.C.XI ೨೬ "ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕು ಪರಶುರಾಮಪುರ ಹೋಬಳಿ ರಾಮಸಾಗರ ಗ್ರಾಮದ ಜಟ್ಟಿಂಗರಾಮೇಶ್ವರ ಬೆಟ್ಟದಲ್ಲಿ ನಾಗರ ಪಡೆಗುಂಡಿನಲ್ಲಿರುವ ೨ನೇ ಶಾಸನವಾಗಿದ್ದು, ಕ್ರಿ.ಶ.೯೬೧ರ ಶಾಸನವಾಗಿದೆ."[೨೫] ಸೀತೆಯನ್ನು ರಾವಣ ಕದ್ದೊಯ್ಯುವಾಗ ಜಟಾಯು ಪಕ್ಷಿಯು ರಾವಣನೊಂದಿಗೆ ಹೋರಾಡಿ ಮಡಿದುದ್ದರಿಂದ ರಾಮ ಪ್ರತಿಷ್ಠೆಯನ್ನು ಮಾಡಿಸಿ ದೇವಾಲಯ ನಿರ್ಮಿಸಿ ಅದಕ್ಕೆ ದಾನ ನೀಡಿದ ವಿವರ ಸಿಗುತ್ತದೆ. ನಮಗೆ ರಾಮಾಯಣದ ಕಾಲದಲ್ಲೆ ಸೀತೆಯನ್ನು ರಾವಣ ಅಪಹರಿಸಿ ಹೆಣ್ಣಿಗಾಗಿ ಯುದ್ಧ ನಡೆದ ಪ್ರಸಂಗ ಗಮನಕ್ಕೆ ಬರುತ್ತದೆ.

ಶಾಸನಗಳಲ್ಲಿ ಪುರುಷನ ದೌರ್ಜನ್ಯಕ್ಕೆ ಬಲಿಯಾದ ಹೆಣ್ಣಿನ ಹೆಸರುಗಳ ಉಲ್ಲೇಖ ಸಿಗುವುದು ವಿರಳ. ಕಾರಣ ಸಮಾಜಕ್ಕೆ ಹೆದರಿದ ಹೆಣ್ಣಿನ ಕುಟುಂಬದವರು ಅವಳ ಹೆಸರನ್ನು ಗೌಣವಾಗಿಸಿರಬೇಕು. ಆದರೆ ಪುರುಷನ ದಬ್ಬಾಳಿಕೆ, ಶೌರ್ಯ ಪ್ರದರ್ಶನಗಳಿಗೆ ಬಲಿಯಾದ ಹೆಣ್ಣಿನ ಧಾರುಣ ವ್ಯಥೆ ಈ ಪೆಟ್ಟುಬ್ಬಯ್ಯಲಾಗಿದೆ. ನಮ್ಮ ಪುರುಷ ಸಮಾಜ ಬಹು ಹಿಂದಿನಿಂದಲೂ ಮಹಿಳೆಯರನ್ನು ಪ್ರಾಣಿಗಳಂತೆ ಬೇಕೆಂದಡೆ ಬಳಸುವ ವಸ್ತುವಿನೋಪಾದಿಯಲ್ಲಿ ಪರಿಭಾವಿಸಿದಂತಿದೆ. "ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರೆಂಬ" ನಾಣ್ನುಡಿಯಂತೆ ಗೋವು ಸಂಪತ್ತನ್ನು ವಶಪಡಿಸಿಕೊಂಡು ಹೋಗುವಾಗ ಪುರುಷರು ಮಾಡಿಕೊಳ್ಳುವ ಯುದ್ಧಕ್ಕೆ ಅಮಾಯಕ ಹೆಣ್ಣುಗಳು ಬಲಿಯಾಗುತ್ತಿದ್ದರು. ಶತ್ರುಗಳು ದಾಳಿಯಿಡುವುದು ಮುಂಚಿತವಾಗಿಯೇ ತಿಳಿಯದ ಕಾರಣ ಅವರು ಯಾವ ಸ್ಥಿತಿಯಲ್ಲೇ ಇರಲಿ, ತನ್ನ ಮಕ್ಕಳಿಗೆ ಲಾಲನೆ ಪಾಲನೆ ಮಾಡುತ್ತಿರಲಿ, ಹೊಲದಲ್ಲಿ ದುಡಿಯುತ್ತಿರಲಿ, ನಿದ್ರಿಸುತ್ತಿರಲಿ ಹೇಗಿದ್ದರೂ ಸುಲಭವಾಗಿಯೇ ಸೆರೆಯಾಗುತ್ತಿದ್ದರು. ಮೊದಲೇ ಸಾಮ್ರಾಜ್ಯವನ್ನು ಗೆಲ್ಲಲೆಂದೇ ಕೋಪ, ಆಕ್ರೋಶ, ಹುಮ್ಮಸ್ಸಿನಿಂದ ಬಂದವರ ಕೈಗೆ ಹೂವಿನಷ್ಟು ಸುಕೋಮಲವಾದ ಹೆಣ್ಣುಗಳು "ಹಸಿದ ಹುಲಿಗೆ ಆಹಾರವಾದಂತೆ" ಆ ರಾಕ್ಷಸರ ಕೈಗೆ ಸಿಕ್ಕ ಅವರ ದೇಹ ಅದೆಷ್ಟು ಕನಲಿ ಬಾಡಿ ಬಸವಳಿದಿರಬೇಕು? ಅವರ ಕಾಮತೃಷೆಗೆ

ಬಲಿಯಾದ ಅದೆಷ್ಟು ಹೆಣ್ಣುಗಳ ಮಾನಹಾನಿಯಾಗಿರಬೇಕು? ಅವಮಾನ ತಾಳಲಾರದೆ ಆತ್ಮಹತ್ಯೆಗೆ ಶರಣಾದ ಹೆಣ್ಣುಗಳೆಷ್ಟೋ? ಇವರೆಲ್ಲ ಸಮಾಜದಲ್ಲಿ ತನ್ನೆಲ್ಲ ಸರ್ವಸ್ವ ಕಳೆದುಕೊಂಡು ಬೆಂಕಿ ಮೊದಲಾದವುಗಳಿಂದ ಪ್ರಾಣ ಹಾನಿಮಾಡಿಕೊಂಡಿರುವುದೆಲ್ಲ ತನ್ನ ಕಣ್ಣೀರಿನಿಂದಾದರೂ, ನಾನು ಸುಡುತ್ತಿರುವ ಜ್ವಾಲೆಯ ಬಿಸಿಯಿಂದಾದರೂ ಮುಂದಿನ ಸಮಾಜ ಎಚ್ಚೆತ್ತುಕೊಳ್ಳಲಿ ಎಂಬ ಕಾಳಜಿ, ಕಳಕಳಿ ಇದೆಯೇ ವಿನಃ ಮತ್ತೇನು ಅಲ್ಲ.

ಮಾತೃದೇವತಾ ಆರಾಧನೆಯ ಕಾಲದಲ್ಲಿ ಹೆಣ್ಣನ್ನು ಗೌರವಿಸುತ್ತಿದ್ದ ಜನರು ರಾಜಪ್ರಭುತ್ವದ ಕಾಲಕ್ಕಾಗಲೇ "ಹೆಣ್ಣೆಂದರೆ ಹಣ್ಣು" ಅದು ತಿನ್ನುವುದಕ್ಕೆ, ಭೋಗಿಸುವುದಕ್ಕೆ ಮಾತ್ರ ಬಳಕೆಯಾಗುವ ವಸ್ತುವೆಂಬಂತೆ ಭಾವಿಸಿದಂತಿದೆ. ಶತ್ರುಗಳು ಸ್ತ್ರೀಯರನ್ನು ಭಕ್ಷಿಸದೇ, ಅಪಹರಿಸದೇ ಅವರನ್ನು ಸೋಲಿಸಿ ಹಿಂದಟ್ಟಿದ ಉದಾಹರಣೆಗಳು ನಮ್ಮ ಶಾಸನಗಳಲ್ಲಿ ದೊರೆಯುವುದು ಅತ್ಯಂತ ವಿರಳ. ಹೆಣ್ಣುಗಳ ಮಾನಹಾನಿಯಾದ ನಂತರ "ಊರುಕೊಳ್ಳೆ ಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದರು" ಎಂಬಂತೆ ಆನಂತರ ಯುದ್ಧ ಮಾಡುತ್ತಿದ್ದರು. ಇದಕ್ಕೆ ಕಾರಣ ಶತ್ರುಗಳ ದಾಳಿಯ ಪಿತೂರಿ ಮೊದಲೇ ತಿಳಿಯದಿರುವುದು. ಜೊತೆಗೆ ಯಾವಾಗ ಹದ್ದಿನಂತೆ ಎರಗಿ ಬರುತ್ತಿದ್ದರೋ, ಇವೆಲ್ಲ ಮೊದಲೇ ತಿಳಿದಿರುತ್ತಿರಲಿಲ್ಲ. ಕ್ರಿ.ಶ.೭ ಅಥವಾ ೮ ರಿಂದ ಆರಂಭಗೊಂಡ ಹೆಣ್ಣಿನ ಉಡೆಉರ್ಚುವ ವಿಧಾನ ೧೩ನೆಯ ಶತಮಾನದ ಮಧ್ಯಭಾಗಕ್ಕೆ ನಿಂತು ಹೋಗಿರಬಹುದು. ಏಕೆಂದರೆ ನಮಗೆ ಲಭ್ಯವಾಗುವ ಕೊನೆಯ ಪೆಣ್ಬುಯಲಿನ ವೀರಗಲ್ಲು ಕ್ರಿ.ಶ.೧೨೫೮ಕ್ಕೆ ಸೇರಿದ ಚಿಟ್ಟೂರಿನ ವೀರಗಲ್ಲಾಗಿದೆ. ಆದರೆ ಈ ಕಾಲಕ್ಕೇ ನಿರ್ದಿಷ್ಟವಾಗಿ ಮುಗಿದು ಹೋಗಿತೆಂದಲ್ಲ. ಶಾಸನದಲ್ಲಿ ಲಭ್ಯವಿಲ್ಲವಷ್ಟೆಯಾದರೂ ಇಂದಿನ ಸಮಾಜದವರೆಗೂ ಈಗಲೂ ಹೆಣ್ಣಿನ ಮಾನ ಹಾನಿಯಾಗುತ್ತಿರುವುದು ಮುಗಿಯದ ಕಗ್ಗಥೆಯೇ ಆಗಿದೆ. ಅಂದಿನಿಂದ ಇಂದಿನವರೆಗೂ ಮಹಿಳೆಯರ ಮಾನ ಹಾನಿ ಮಾಡಿದವರಿಗೆ ಕಠಿಣ ಶಿಕ್ಷೆಯಾದ ಪ್ರಸಂಗಗಳೂ ತೀರಾ ವಿರಳವೆನ್ನಬಹುದು. ಹೆಣ್ಣನ್ನು ಹೊನ್ನು, ಮಣ್ಣಿನಂತೆ ಭಾವಿಸಿ ಅವಳಿಗಾಗಿಯೇ ಯುದ್ಧ ನಡೆದ ಪ್ರಸಂಗಗಳು ಚಿತ್ರದುರ್ಗವನ್ನಾಳಿದ ಅರಸರಲ್ಲಿ ನಡೆದಿಲ್ಲವೆಂದಿಲ್ಲ. ದೊರೆ ತಿಮ್ಮಣ್ಣನಾಯಕನು ತಿರುಪತಿಯ ಸಮೀಪದ ಮದಕರಿ ಎಂಬ ಗ್ರಾಮದಿಂದ ಒಂದು ಸಶಸ್ತ್ರ ಗುಂಪು ಕಟ್ಟಿಕೊಂಡು ಬಸವಾಪಟ್ಟಣದ ನಾಯಕನ ಬಳಿ ಬರುತ್ತಾನೆ. ಪ್ರೇಯಸಿಯೊಬ್ಬಳ ಕಾರಣದಿಂದ ತಿಮ್ಮಣ್ಣನಾಯಕನ ಮೇಲೆ ಬಸವಾಪಟ್ಟಣದ ನಾಯಕ ಕುಪಿತಗೊಳ್ಳುತ್ತಾನೆ.

ರಾಜರುಗಳ ಆಳ್ವಿಕೆಯ ಕಾಲದಲ್ಲಿ ಸ್ತ್ರೀಯರನ್ನು ಯುದ್ಧಮಾಡಿಯೋ, ಕಪಟತನದಿಂದಲೋ ಅಪಹರಿಸಿ ಶೀಲಹರಣ ಮಾಡುತ್ತಿದ್ದರು. ಈ ಪ್ರಕ್ರಿಯೆ ಇಂದಿನ ಆಧುನಿಕ ಕಾಲದಲ್ಲಿ ಅಲ್ಪಸ್ವಲ್ಪ ಮಾರ್ಪಾಡಿನೊಂದಿಗೆ ನಡೆಯುತ್ತಿದೆ. ಅಂದು ಕುದುರೆ, ರಥ ಮೊದಲಾದವುಗಳ ಮೇಲೆ ಅಪಹರಿಸಿ ಹೊತ್ತೊಯ್ಯುತ್ತಿದ್ದರು. ಇಂದು ತಂತ್ರಜ್ಞಾನದ ಆವಿಷ್ಕಾರದಿಂದಾಗಿ ವಾಹನಗಳಲ್ಲಿ ಬಹುಬೇಗನೆ ಕದ್ದೊಯ್ಯೊದೋ, ಅಪಹರಿಸಿಕೊಂಡೊ ಹೋಗಿ ಹೆಣ್ಣಿನ ಶೀಲಹರಣ ಮಾಡ

ಲಾಗುತ್ತಿದೆ. National Crime Records bureau ಒದಗಿಸಿದ ಮಾಹಿತಿಯಂತೆ ೨೦೧೭-೨೦೧೩ರಲ್ಲಿ ಭಾರತ ದೇಶವೊಂದರಲ್ಲೇ ೨೪.೯೨೩ ಅತ್ಯಾಚಾರ ಪ್ರಕರಣಗಳು ನಡೆದಿರುವುದು ದಾಖಲಾಗಿದೆ. ೨೦೧೪ರಲ್ಲಿ ೩೩.೭೬೪ ಪ್ರಕರಣಗಳು ನಡೆದಿವೆ. ಪ್ರತಿ ಅರ್ಧಗಂಟೆಗೆ ಒಂದು ಅತ್ಯಾಚಾರಗಳು ನಮ್ಮ ದೇಶದಲ್ಲಿ ನಡೆಯುತ್ತಿವೆ. ಪ್ರತಿ ಲಕ್ಷ ಜನಸಂಖ್ಯೆಗೆ ಎರಡರಂತೆ ಪ್ರಕರಣಗಳು ನಡೆಯುತ್ತಿದ್ದು, ಪ್ರತಿದಿನವೊಂದಕ್ಕೆ ೫೭ ಪ್ರಕರಣಗಳು ಸಂಭವಿಸುತ್ತಿವೆ. ಅಲ್ಲದೆ ಶೇ.೧೩.೧ರಷ್ಟು ಅತ್ಯಾಚಾರಗಳು ೧೪ ವರ್ಷದ ಒಳಗಿನ ಮಕ್ಕಳ ಮೇಲೆ ನಡೆಯುತ್ತಿವೆ. ಶೇ.೨೬.೩ರಷ್ಟು ಅತ್ಯಾಚಾರಗಳು ೧೪ರಿಂದ ೧೮ವರ್ಷದ ಒಳಗಿನವರ ಮೇಲೆ ನಡೆಯುತ್ತಿದೆ. ಶೇ.೪೬ರಷ್ಟು ೧೮ರಿಂದ ೩೦ ವರ್ಷದವರ ಮೇಲೆ, ಶೇ.೧೩.೮ರಷ್ಟು ೩೦ರಿಂದ ೫೦ ವರ್ಷದವರ ಮೇಲೆ ಅತ್ಯಾಚಾರ ಪ್ರಕರಣಗಳು ನಡೆಯುತ್ತಿರುವುವುದ ದಾಖಲಾಗಿದೆ. ಇಂದು ಹೆಣ್ಣಿನ ಮಾನ, ಪ್ರಾಣಕ್ಕೆ ಬೆಲೆಯೇ ಇಲ್ಲದಂತಾಗಿದೆ. ಪ್ರತಿ ಗಂಟೆಗೆ ನಿಮಿಷಕ್ಕೆ ನಮ್ಮ ದೇಶದಲ್ಲಿ ಹೆಣ್ಣಿನ ಶೀಲಹರಣವಾಗುತ್ತಿದೆ. ಜೊತೆಗೆ ಚಿಕ್ಕ ಕಂದಮ್ಮಗಳ ಮೇಲೆ ಹಲ್ಲೆ ನಡೆಯುತ್ತಿರುವುದು ನಮ್ಮ ಕಣ್ಣಿಗೆ ಕಾಣದಿರಲಾರದ ಸಂಗತಿಯೇನಲ್ಲ. ಆದರೆ ಇದರ ತಪ್ಪಿತಸ್ಥನಿಗೆ ಮಾತ್ರ ನಮ್ಮ ಕಾನೂನಿನಲ್ಲಿ ಶಿಕ್ಷೆಯ ಪ್ರಮಾಣ ಕಡಿಮೆ. ಕಾನೂನು ವ್ಯವಸ್ಥೆ ಹೆಣ್ಣಿನ ವಿಷಯದಲ್ಲಿ ಬಿಗಿಯಾದರೆ ಸ್ತ್ರೀಯರಿಗೆ ಬಂದೊದಗುವ ಅಪಾಯವನ್ನು ತಪ್ಪಿಸಬಹುದೇನೋ ಎನಿಸುತ್ತದೆ. ಅಂದು ಇಂದುಗಳ ಹೆಣ್ಣಿನ ಎಲ್ಲಾ ಪ್ರಸಂಗಗಳನ್ನು ಗಮನಿಸಿದರೆ ಸ್ತ್ರೀಯರಿಗೆ ಸಾಮಾಜಿಕ ಭದ್ರತೆಯ ಕೊರತೆ ಎದ್ದು ಕಾಣುತ್ತದೆ. ಹೆಣ್ಣಾದವಳು ತನ್ನ ಶೀಲವನ್ನು ಕಳೆದುಕೊಂಡರೆ ಅವಳ ಸ್ಥಾನ ಸಮಾಜ, ಮತ್ತವಳ ಕುಟುಂಬದಲ್ಲಿ 'ನಾಯಿ ಮುಟ್ಟಿದ ಮಡಿಕೆ'ಯ ಸ್ಥಾನವೇ ಸರಿ. ಹೆಣ್ಣಿನ ಪಾವಿತ್ರ್ಯ, ಶೀಲಕ್ಕೆ ಉಚ್ಚಸ್ಥಾನ ನೀಡಿರುವ ನಮ್ಮ ಸಮಾಜದಲ್ಲಿ ಇವುಗಳನ್ನು ಕಳೆದುಕೊಂಡ ಹೆಣ್ಣಿನ ಸ್ಥಿತಿ ಅತ್ಯಂತ ಕರಾಳವಾಗಿರುತ್ತದೆ. ಸಮಾಜದಲ್ಲಿ ಬದುಕುವ ಅರ್ಹತೆ ತನಗಿಲ್ಲವೆಂದು ಭಾವಿಸಿದ ಸ್ತ್ರೀ ತನ್ನ ದಾರಿಯನ್ನು ಕಂಡುಹಿಡಿದು ಕೊಳ್ಳುವುದು ಎರಡು ಮಾರ್ಗಗಳಿಂದ. ಒಂದು ಸಾವು, ಮತ್ತೊಂದು ಬದುಕಲಿಚ್ಚಿಸುವವರು ನೀತಿ ಭ್ರಷ್ಟಮಾರ್ಗ ಹಿಡಿಯಲೇ ಬೇಕಾಗುತ್ತದೆ. ಸಮಾಜದಲ್ಲಿ ಹೆಣ್ಣಿಗೆ ಆಪತ್ತು ವಿಪತ್ತುಗಳು ಬಂದೊದಗುವುದು ಪುರುಷರಿಂದಲೇ. ಮತ್ತವರ ರಕ್ಷಣೆಯ ಕಾರ್ಯ ಜರುಗುವುದೂ ಸಹ ಪುರುಷರಿಂದಲೇ "ಬೆಳ್ಳಗಿರುವುದೆಲ್ಲ ಹಾಲೂ ಅಲ್ಲ, ಇತ್ತ ಕಡೆ ನೀರೂ ಅಲ್ಲ" ಎನ್ನಬಹುದು. ಪೆಣ್ಬುಯಲ್‌ನ ಉದ್ದೇಶ ಹೆಣ್ಣಿನ ಶೀಲಹರಣ ಮಾಡಿ ಪುರುಷ ತನ್ನ ಆಕಾಂಕ್ಷೆ ಈಡೇರಿಸಿಕೊಂಡು ಅವಳ ಅಂತಃಶಕ್ತಿಯನ್ನು ಕುಗ್ಗಿಸುವ ಕಾರಣ ಒಂದಾದರೆ ಮತ್ತೊಂದು ಆ ಊರಿನ ಮುಖಂಡ, ನಾಯಕ, ಯಜಮಾನರು ಅಸಹಾಯಕರು ಎಂಬುದಾಗಿ ಹಿಯ್ಯಾಳಿಸುವುದಾಗಿದೆ. ಮಾತೃಪ್ರಧಾನ ವ್ಯವಸ್ಥೆಯ ಪುರುಷರಿಗಿಂತ ಪಿತೃಪ್ರಧಾನ ವ್ಯವಸ್ಥೆಯ ಮಾನವರ ಮನೋರಚನೆ, ಅವರ ವಿಕೃತ ಭಾವನೆ, ಆಲೋಚನೆ, ಸ್ವಭಾವ, ಹೆಣ್ಣನ್ನು ನೋಡುವ ದೃಷ್ಟಿಕೋನ, ಪರಿಶುದ್ಧ ಆಲೋಚನೆಗಳಿಲ್ಲದ ಮನಸ್ಥಿತಿ ಇವೆಲ್ಲವೂ ಹೆಣ್ಣಿನ ಮೇಲಿನ ಹಲ್ಲೆಯ ದುರಂತಕ್ಕೆ ಕಾರಣಗಳಾಗುತ್ತವೆ.

೪.೩. ಬಹುಪತ್ನಿತ್ವ

ಭಾರತೀಯರಲ್ಲಿ ಅದರಲ್ಲೂ ಹಿಂದೂಧರ್ಮದ ಪವಿತ್ರ ಗ್ರಂಥಗಳಲ್ಲಿ, ಮಹಾಕಾವ್ಯಗಳಲ್ಲಿ ಅಲ್ಲದೆ ನಮ್ಮ ಪ್ರಾಚೀನ ಪರಂಪರೆಯಿಂದಲೇ ಈ ಬಹುಪತ್ನಿತ್ವ ವ್ಯವಸ್ಥೆ ಇಂದಿನ ಸಮಾಜದವರೆಗೂ ಸಾಗಿಬಂದಿದೆ. ನಮ್ಮ ಸಮಾಜ ಪುರುಷ ಪ್ರಧಾನವಾದುದು. ಇಲ್ಲಿ ಪುರುಷನೇ ಅಗ್ರ ಗಣ್ಯ. ಇದರಿಂದ ಅವನು "ಮಾಡಿದ್ದೆ ಕಾನೂನು, ಆಡಿದ್ದೆ ವೇದವಾಕ್ಯ"ವಾಗಿದೆ. ತನ್ನ ಹಿತದೃಷ್ಟಿಯಿಂದ ತನ್ನ ವೈಭೋಗದ ಪರಾಕಾಷ್ಠತೆಯಿಂದ ತನಗೆ ಅನುಕೂಲವಾಗುವ ರೀತಿಯಲ್ಲೆ ಸಮಾಜದ ಚೌಕಟ್ಟನ್ನು ನಿರ್ಮಿಸಿಕೊಂಡಿದ್ದಾನೆ. ಇವನು ಎಷ್ಟು ಸ್ತ್ರೀಯರನ್ನು ಬೇಕಾದರೂ ವಿವಾಹವಾಗಬಹುದು. ಎಷ್ಟು ಜನ ಹೆಣ್ಣುಗಳೊಂದಿಗೆ ಬೇಕಾದರೂ ಸಂಬಂಧ ಹೊಂದಬಹುದು. ಇದಕ್ಕೆಲ್ಲ ನಮ್ಮಲ್ಲಿ ಸಾಮಾಜಿಕ ಮನ್ನಣೆ ಇದೆ. ಜೊತೆಗೆ ನೈತಿಕತೆಯೂ ಹೌದು. ಪ್ರಾಚೀನ ಸಂದರ್ಭದಲ್ಲಿ ಅರಸರಲ್ಲಿ, ಶ್ರೀಮಂತರಲ್ಲಿ ಹೆಚ್ಚಾಗಿ ಈ ವ್ಯವಸ್ಥೆ ಕಾಣಸಿಗುತ್ತದೆ. ನಮ್ಮ ಪುರಾಣಗಳು ಶ್ರೀಕೃಷ್ಣ ಪರಮಾತ್ಮನಿಗೆ ೧೬,೦೦೦ ಜನ ಮಡದಿಯರಿದ್ದರೆಂದು ಹೇಳುತ್ತದೆ. ರಾಮನ ತಂದೆ ದಶರಥನಿಗೆ ಕೌಸಲ್ಯ, ಸುಮಿತ್ರೆ, ಕೈಕೇಯಿ ಎಂಬ ಮೂರು ಜನ ಪತ್ನಿಯರಿದ್ದರೆಂದು, ವಾಲ್ಮೀಕಿರಾಮಾಯಣದಿಂದ ತಿಳಿದುಬರುತ್ತದೆ. ಮಹಾಭಾರತದ ಕಥಾನಾಯಕನಾದ ಅರ್ಜುನನಿಗೆ ದ್ರೌಪದಿ, ಸುಭದ್ರೆ, ಉಲುಚಿ, ಚಿತ್ರಾಂಗದ ಮೊದಲಾದ ಪತ್ನಿಯರಿದ್ದರೆನ್ನಲಾಗಿದೆ. ಅಂದಿನಿಂದ ಸಾಗಿಬಂದ ಈ ಬಹುಪತ್ನಿತ್ವ ಪದ್ಧತಿಯು ಅರಸು ಮನೆತನಗಳ ಕಾಲದಲ್ಲಿಯಂತೂ ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿತು. ಪರಮೇಶ್ವರ ಇಬ್ಬರು ಹೆಂಡಿರನ್ನು ವಿವಾಹವಾಗಿದ್ದಾನೆ. ಶ್ರೀಕೃಷ್ಣ ೧೬,೦೦೦ ಜನ ಸ್ತ್ರೀಯರನ್ನು ವಿವಾಹವಾದರೂ ಅವನಲ್ಲಿಗೆ ಭಕ್ತರ ಸಂಖ್ಯೆ ಹೆಚ್ಚಾಗಿ ಹೋಗುತ್ತದೆ. ಕಾರಣ ಪುರುಷನಿಗೆ ಬಹುಜನ ಹೆಂಡತಿಯರು ಇರುವುದು, ಹೊಂದುವುದು, ಪುರುಷ ಸಮಾಜದ ಒಪ್ಪಿತ ಮೌಲ್ಯವಾಗಿದೆ. ಇದರಿಂದಲೇ ಕೃಷ್ಣನನ್ನು, ಪರಮೇಶ್ವರನನ್ನು ಯಾರೂ ಸಹ ಪ್ರಶ್ನಿಸುವುದಿಲ್ಲ. ಆದರೆ ಮಹಾಭಾರತದ ದ್ರೌಪದಿಯನ್ನೊರತುಪಡಿಸಿ, ಕೆಲವು ಬುಡಕಟ್ಟು ಸಮುದಾಯಗಳನ್ನೊರತುಪಡಿಸಿ ಎಲ್ಲಿಯೂ ನಮಗೆ ಬಹುಪತಿತ್ವದ ಉಲ್ಲೇಖ ಸಿಗುವುದು ವಿರಳ. ಸಮಾಜ ಹೆಣ್ಣಿಗೆ ಒಂದು ಸೀಮಾ ಗೆರೆಯನ್ನೆಳೆದು ಲಕ್ಷ್ಮಣ ರೇಖೆಯನ್ನೆಳೆದಿದೆ. ಆದರೆ ಪುರುಷನ ಸಂದರ್ಭಕ್ಕೆ ಯಾವ ಗೆರೆಯೂ ಇಲ್ಲ. ಅವನು ಸರ್ವ ಸ್ವತಂತ್ರ. ಭೂಮಿಯನ್ನಾಳುವ ಅರಸನಿಗೆ ಹಲವು ರಾಣಿಯರಿರುತ್ತಿದ್ದರು. ಅವರಿಗೆ ಪಟ್ಟಮಹಿಷಿ, ಪಿರಿಯರಸಿ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಅರಸನ ರಾಣಿಯರಲ್ಲಿ ಪ್ರಧಾನರಾದವರಿಗೆ "ಪಿರಿಯರಸಿ ಪಟ್ಟಮಹಾದೇವಿ" ಎಂದು ವಿಶೇಷಣಗಳಿಂದ ಸೂಚಿಸಲಾಗುತ್ತಿತ್ತು. ನಮ್ಮ ಸಂಪ್ರದಾಯ ಬಹುಸಂಖ್ಯೆಯದು. ನಮ್ಮ ಆರಾಧನೆ ಬಹುದೇವತಾ ಆರಾಧನೆಯಾಗಿದೆ. ಕರ್ನಾಟಕವನ್ನಾಳಿದ ಚಾಲುಕ್ಯ ಇಮ್ಮಡಿ ಪುಲಿಕೇಶಿ, ಕಲ್ಯಾಣಿ ಚಾಲುಕ್ಯ ಸೋಮೇಶ್ವರ, ೬ನೇ ವಿಕ್ರಮಾದಿತ್ಯ, ಹೊಯ್ಸಳ ಎರೆಯಂಗ, ವಿಷ್ಣುವರ್ಧನ, ನಾರಸಿಂಹ,

ಬಲ್ಲಾಳರು, ವಿಜಯನಗರದ ಅರಸು ಕೃಷ್ಣದೇವರಾಯ ಮೊದಲಾದ ಅರಸರುಗಳೆಲ್ಲ ಬಹುಪತ್ನಿತ್ವ ಹೊಂದಿದವರೇ ಆಗಿದ್ದಾರೆ.

೬ನೇ ವಿಕ್ರಮಾದಿತ್ಯನ ೧೬ ರಾಣಿಯರಲ್ಲಿ ಮಲಯಮತಿ ಮಹಾದೇವಿಯನ್ನು 'ಪಿರಿಯರಸಿ ಪಟ್ಟಮಹಾದೇವಿ'(ಚಿನ್ನತುಂಬಳದ ಶಾಸನದಲ್ಲಿ) ಮೈಳಲದೇವಿ, ಮಲ್ಹಣದೇವಿಯರನ್ನು ಪಟ್ಟಮಹಾದೇವಿ ಎಂದು ಬೀಮರಾಮತ್ತು ಕನವಳ್ಳಿ ಶಾಸನ ಕರೆದಿವೆ. ಒಂದು ಸಾಮ್ರಜ್ಯದ ಅರಸನೆನಿಸಿಕೊಂಡವನು ಆ ಸಾಮ್ರಾಜ್ಯದ ಎಲ್ಲ ವಸ್ತುಗಳು ತನಗೆ ಸ್ವಂತ ಎಂದು ಭಾವಿಸುವುದರ ಜೊತೆಗೆ ಮಹಾತ್ವಾಕಾಂಕ್ಷೆಯನ್ನು ಹೊಂದಿರುತ್ತಿದ್ದನು. ತನಗಿಷ್ಟವಾದ ಸ್ತ್ರೀಯರನ್ನು ರಾಣಿಯರನ್ನಾಗಿಯೋ ಬಂಗಾರದ ಸಂಬಂಧಗಳಾಗಿಯೋ ಹೊಂದುವ ಹಕ್ಕು ಮತ್ತು ಸಾಮರ್ಥ್ಯವನ್ನು ಹೊಂದಿರುತ್ತಿದ್ದನು. ಇಷ್ಟೆಲ್ಲ ಸಂಬಂಧ ಹೊಂದಿದ ರಾಜ ತನ್ನ ಆಸೆ, ಆಕಾಂಕ್ಷೆ, ಬಯಕೆಗಳನ್ನು ಈಡೇರಿಸಿಕೊಳ್ಳಲು ಬಹುಪತ್ನಿತ್ವ ಹೊಂದುತ್ತಿದ್ದನು. ಆದರೆ ಇದು ಹೊಸದೊಂದು ಸವತಿ ಮತ್ಸರವೆಂಬ ಸಮಸ್ಯೆಗೆ ನಾಂದಿ ಹಾಡುತ್ತಿತ್ತು.

ಶಾಸನಗಳು ಮತ್ತೆ ಮತ್ತೆ ಈ ಸವತಿ ಮತ್ಸರದ ಬಗ್ಗೆ ಅಲ್ಲಲ್ಲಿ ಹೇಳುತ್ತವೆ. ಚಾಳುಕ್ಯ ತ್ರೈಲೋಕ್ಯ ಮಲ್ಲನ ಮಡದಿ ಮೈಳಲದೇವಿ "ಸವತಿ ಮದಭಂಜನೆ ಸಮಸ್ತಾನ್ತಪ್ಪುರ ಮುಖಮಣ್ಣನೆ" ತ್ರಿಭವನ ಮಲ್ಲನ ಮಡದಿ ಚಂದಲದೇವಿ "ದುಷ್ಟ ದರ್ಪಿಷ್ಟ ಸವತಿ ಶಿರೋ ವಜ್ರಮುಷ್ಟಿ", ವಿಷ್ಣುವರ್ಧನನ ಮಡದಿ ಶಾಂತಲದೇವಿ "ಉದ್ವೃತ್ತ ಸವತಿಗಂಧ ವಾರಣೆ", "ಸವತಿ ಗಂಧ ಹಸ್ತಿ" ಅರಿಕೇಸರಿಯ ಮಡದಿ ಲಚ್ಚಲದೇವಿ "ಸವತಿ ಮದಭಂಜನೆ" ಚಾಲುಕ್ಯ ಇರಿವೆಬೆಡಂಗನ ಮಗ ಕುಂದರಾಜನ ಮಡದಿ ಕುಂದಲದೇವಿ "ಪೆರ್ಮಾ‌ತಿನ ಸವತಿಯರ ಬೆನ್ನ ಚಮ್ಮಡಿಕೆ."[೨೬]

ಲಕ್ಕುಂಡಿ ಶಾಸನದಲ್ಲಿ ಅತ್ತಿಮಬ್ಬೆಯ ಸವತಿ ಒಡ್ಡಿದ ಪ್ರಾಣಾಂತಿಕ ಅಪಾಯವನ್ನಿಲ್ಲಿ ನೆನೆಯಬಹುದು.

> ಒಡನೇಱೆ ಸವತಿ ನೂಂಕ
> ಲ್ಕೊಡರಿಸಿ ತೊಱೆಯೊಳಗೆ ಪೞುಗೋಲತ್ತಿತ್ತಲಣಂ
> ಮಿಡುಕದೆ ತಿರಿಯುತ್ತಿರೆ ಕ
> ಣ್ಡಿ ಗೆಱಗಿದಳತ್ತಿಮಬ್ಬೆ ಸತಿಭಯ ವಶದಿಂ॥[೨೭]

ಅರಸರಲ್ಲದೆ ಮಹಾಮಂಡಳೀಕರಲ್ಲಿ, ಅಧಿಕಾರಿ ವರ್ಗದವರಲ್ಲಿಯೂ ಸಹ ಈ ಬಹುಪತ್ನಿತ್ವ ಪದ್ಧತಿ ಸಮಾಜದ ಮನ್ನಣೆಯನ್ನು ಹೊಂದಿತ್ತಾದರೂ ರಾಜಮನೆತನದಲ್ಲಿದ್ದಂತೆ ವ್ಯಾಪಕವಾಗಿರಲಿಲ್ಲ. ಚಿತ್ರದುರ್ಗವನ್ನಾಳಿದವರಲ್ಲಿ ಪಾಳೆಯಗಾರರ ಸಂತತಿಯವರು ಪ್ರಮುಖರು. ಇವರ ವಂಶದಲ್ಲಿ ನಾಗತಿಯರು ನಾಯಕರ ಪತ್ನಿಯರಾಗಿದ್ದರೆಂದು ತಿಳಿದುಬರುತ್ತದೆ. ಚಿತ್ರದುರ್ಗ ಜಿಲ್ಲೆಯ ಚಿಕ್ಕ ಮಧುರೆ ಶಾಸನದಲ್ಲಿ ಸಿಂಗಪೋತರಾಜನು ನೊಳಂಬರಿಗೆ ೧೦೦೦ ನಿರ್ಗುಂದ ಆಳ್ವಿಕೆ ಮಾಡುತ್ತಿದ್ದಾಗ

ಆತನ ಪತ್ನಿ ನೊಳಂಬೆ ನೊಳಂಬರಿಗೆ ೧೦೦೦ ನಿರ್ಗುಂದ ಆಳ್ವಿಕೆ ಮಾಡುತ್ತಿದ್ದಾಗ ಆತನ ಪತ್ನಿ ನೊಳಂಬೆ ಮಾಧವೆ ಈಕೆಗೆ "ಮಹಾದೇವಿ ಅರಸಿ ಮತ್ತು ಪೆರ್ಮಾನಡಿ"[೨೮] ಎಂಬ ಮಕ್ಕಳಿದ್ದರು. ಈ ರಾಜನಿಗೆ ನೊಳಂಬೆಯಲ್ಲದೆ ಮತ್ತೊಬ್ಬ ಪತ್ನಿಯಿದ್ದಳು. ಒಂದು ಗ್ರಾಮದ ಅಧಿಕಾರ ವಹಿಸಿಕೊಡುವುದರ ಮೂಲಕ ಈ ಇಬ್ಬರ ಆಂತರಿಕ ಕಲಹವನ್ನು ದೂರವಿಡುವ ಪ್ರಯತ್ನ ಅರಸ ಮಾಡುತ್ತಾನೆ.

ರಾಜರ ಆಳ್ವಿಕೆಯ ಅವಧಿಯಲ್ಲಿ ರಾಜ ಪ್ರಬಲನಾಗಿ ದುರ್ಬಲ ರಾಜ್ಯದ ಮೇಲೆ ದಂಡೆತ್ತಿ ಬಂದು ಸಾಮ್ರಾಜ್ಯವನ್ನು ವಶಪಡಿಸಿಕೊಂಡಾಗ ಪ್ರಬಲನಾದ ಅರಸನಿಗೆ ವಿವಾಹವಾಗಿದ್ದರೂ ಸಹ ಸೋತವರು ತಮ್ಮ ಮಕ್ಕಳನ್ನು ಅವರಿಗೆ ಕೊಟ್ಟು ವಿವಾಹ ಮಾಡಬೇಕಿತ್ತು. ಚಿತ್ರದುರ್ಗವನ್ನಾಳಿದ ಒಂದನೇ ಕಸ್ತೂರಿ ರಂಗಪ್ಪ ನಾಯಕ(ಕ್ರಿ.ಶ.೧೬೦೩–೧೬೫೨)ನು ಸಿರಾದ ಮುಮ್ಮಡಿ ರಂಗಪ್ಪನ ನಾಯಕನ ಮಗ ಕೃಷ್ಣಪ್ಪ ನಾಯಕನಿಗೆ ತನ್ನ ಮಗಳು ಓಬವ್ವಳನ್ನು ಕೊಟ್ಟು ವಿವಾಹ ಮಾಡಿ ವೈವಾಹಿಕ ಸಂಬಂಧ ಬೆಳೆಸುತ್ತಾನೆ.

ಕಸ್ತೂರಿ ಚಿಕ್ಕಣ್ಣನಾಯಕ ಕ್ರಿ.ಶ.೧೬೭೮ರಲ್ಲಿ ರಾಯದುರ್ಗವನ್ನು ಮುತ್ತಿದಾಗ ತನಗೆ ಬುಟುಗಲ ಓಬಯ್ಯನು ಸಹಾಯ ಮಾಡಿದನೆಂಬ ಕಾರಣಕ್ಕೆ ಮಗಳನ್ನು ಕೊಟ್ಟು ವಿವಾಹ ಮಾಡುತ್ತಾನೆ. ಅಲ್ಲದೆ ಚಿಕ್ಕಣ್ಣನಾಯಕನು ನಾಯಕನಹಟ್ಟಿ ಮಲ್ಲಪ್ಪನಾಯಕನ ಮಗಳು ಮಲ್ಲವ್ವಳನ್ನು ವಿವಾಹವಾಗಿ ಅವಳೊಂದಿಗೆ ವಿರಸ ಉಂಟಾಗಿ ತರೀಕೆರೆಯವರ ಮೇಲೆ ದಂಡೆತ್ತಿ ಹೋದಾಗ ತರೀಕೆರೆ ವಂಶದ ಹನುಮವ್ವ ನಾಗತಿಯನ್ನು ವಿವಾಹವಾಗುತ್ತಾನೆ. ಭರಮಣ್ಣ ನಾಯಕನು ಈರ್ವರು ಪಟ್ಟ ಮಹಿಷಿಯರಾದ ದೊಡ್ಡ ಸಿದ್ದವ್ವನಾಗತಿ ಮತ್ತು ಚಿಕ್ಕ ಸಿದ್ದವ್ವನಾಗತಿ ಯರನ್ನು ವಿವಾಹವಾದುದಲ್ಲದೆ ೮ ಜನ ಸ್ತ್ರೀಯರಾದ ಮರಡವ್ವ, ಮೊಳಲ್ಕಾರು, ತೊದಲು ಭರಮಪ್ಪನ ಮಗಳು ಬಸವ್ವ, ಪಾಲವ್ವ, ಹುಚ್ಚವ್ವ, ದ್ಯಾಮವ್ವ, ರಂಗವ್ವ, ಭರಮವ್ವ, ಸಿದ್ಧವ್ವ[೨೧] ರೊಂದಿಗೆ ಬಂಗಾರದ ಸಂಬಂಧ ಹೊಂದಿದ್ದನು.

ದೊರೆಯುವ ಮಹಾಸತಿ ಕಲ್ಲುಗಳು ಸಹ ಬಹುಪತ್ನಿತ್ವ ಪದ್ಧತಿಗೆ ಸಾಕ್ಷಿಯಾಗಿ ನಿಂತಿವೆ. ಯುದ್ಧದಲ್ಲಿ ಬಹುಪತ್ನಿತ್ವ ಹೊಂದಿದ ಅರಸನೋ, ಅಧಿಕಾರಿಯೋ, ವೀರನೋ ಮಡಿದರೆ ಇವರ ಪತ್ನಿಯರೆಲ್ಲ ವಿಧವೆಯರಾಗಿಯೋ ಅಥವಾ ಸತಿಪದ್ಧತಿಗೆ ಆಹಾರವಾಗಿಯೋ ಬಲಿಯಾಗಬೇಕಿತ್ತು. ಪುರುಷನ ದೃಷ್ಟಿಯಲ್ಲಿ ಹೆಣ್ಣೆಂದರೆ ವಿಶೇಷವಾಗಿ ದೊರೆಯುವ ಅಗ್ಗದ ವಸ್ತು. ಅವು ಎಷ್ಟಾದರೂ ಸರಿಯೇ. ಹೆಣ್ಣಿನ ವಿಷಯದಲ್ಲಿ ಗಂಡಿನ ಅಭಿಪ್ರಾಯವೆಂದರೆ ಅವನ ಬಯಕೆಗಳು "ಎಂದಿಗೂ ಬರಿದಾಗದ ಅಕ್ಷಯ ಪಾತ್ರೆಯೇ ಸರಿ" ಈ ಬಹುಪತ್ನಿತ್ವಕ್ಕೆ ಹಲವು ಕಾರಣಗಳುಂಟು. ಮೊದಲ ಪತ್ನಿಗೆ ಮಕ್ಕಳಿಲ್ಲದೇ ಹೋದ ಸಂದರ್ಭದಲ್ಲಿ ವಿವಾಹವಾಗುತ್ತಿದ್ದರು. 'ಅಪುತ್ರಸ್ಯ ಗತಿರ್ನಾಸ್ತಿ' ಗಂಡು ಸಂತಾನವಿಲ್ಲದವರಿಗೆ ಸ್ವರ್ಗ ಪ್ರಾಪ್ತಿಯಾಗುವುದಿಲ್ಲವೆಂಬ ಕಾರಣಕ್ಕೆ

ಮರುಮದುವೆಯಾಗುತ್ತಿದ್ದರು. ಪತ್ನಿ ಮರಣಿಸಿದರೆ ಪುನರ್ವಿವಾಹವಾಗುತ್ತಿದ್ದರು. ಈ ವ್ಯವಸ್ಥೆ ಇಂದಿಗೂ ರೂಢಿಯಲ್ಲಿದೆ.

ಅರಸರ ಕಾಲಕ್ಕಾದರೆ ಇವುಗಳೊಂದಿಗೆ ರಾಜ್ಯ ಗೆದ್ದ ರಾಜ್ಯದ ಹೆಂಗಸರೆಲ್ಲ ಅರಸನ ಪತ್ನಿಯರಂತೆಯೇ. ಅಪೂರ್ವ ಲಾವಣ್ಯವತಿಯಾಗಿದ್ದರೆ ಅವಳನ್ನು ಮೋಹಿಸಿ ವಿವಾಹವಾಗುವ ಪರಿಪಾಠವಿತ್ತು. ಒಟ್ಟಾರೆ ಪುರುಷನಿಗೆ ಪ್ರಿಯವಾದುದೆಲ್ಲ ಅವನ ಸೊತ್ತೆ ಆಗಿರುತ್ತದೆ. ಈ ವ್ಯವಸ್ಥೆಯಲ್ಲಿ ಹೆಣ್ಣಿಗೆಲ್ಲಿಯೂ ತನ್ನ ನಿರ್ಧಾರಗಳಿಗೆ ಜಾಗವೇ ಇಲ್ಲ. ಪುರುಷ ಹೆಣ್ಣನ್ನು ಏನೆಲ್ಲ ರೀತಿಯಿಂದ ಕಟ್ಟಿ ಬೋನಿನಲ್ಲಿಡಬೇಕೋ ಆ ಎಲ್ಲಾ ತಂತ್ರಗಳನ್ನ ಬಳಸಿಯೇ ಅವಳನ್ನು ನಿರ್ಬಂಧಿಸಿದ್ದಾನೆ. ಹೆಣ್ಣಿನ ಜೀವನವನ್ನು ಬಾಯಿಯಲ್ಲಿಟುಕೊಂಡ ಬಿಸಿ ನೀರಿನಂತೆ ಮಾಡಿ ನೀರನ್ನು ನುಂಗಲೂಬಾರದು, ಉಗಿಯಲೂ ಬಾರದೆಂಬಂತೆ ಬಂಧಿಸಿದ್ದಾನೆ. ನೀರು ನುಂಗಿದರೆ ಬಿಸಿ, ಬಿಟ್ಟರೆ ತಣ್ಣಗೆ ಎಂಬಂತಾಗಿದೆ ಹೆಣ್ಣಿನ ಜೀವನ.

ಇಂದಿನ ಸಮಾಜದಲ್ಲಿ ಬಹುಪತ್ನಿತ್ವ ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ. ಇಂದಿನ ಸಮಾಜದಲ್ಲಿ ಆದರ್ಶ ಕುಟುಂಬ ವ್ಯವಸ್ಥೆ ಜಾರಿಯಲ್ಲಿದ್ದು, ಹೆಚ್ಚಾಗಿ ಏಕಪತ್ನಿತ್ವಕ್ಕೆ ಮನ್ನಣೆ ದೊರೆತಿದೆ. ಜೊತೆಗೆ ಬಹುಪತ್ನಿತ್ವ ಕಾನೂನಿನ ಪ್ರಕಾರ ಶಿಕ್ಷಾರ್ಹ ಅಪರಾಧ. ಬಹುಪತ್ನಿತ್ವ ವ್ಯವಸ್ಥೆಯನ್ನು ಹೋಗಲಾಡಿಸಲು ಸರ್ಕಾರ ಸಂವಿಧಾನದ ೧೪,೧೫,೧೬ನೇ ವಿಧಿ ಅನ್ವಯ ಲಿಂಗತಾರತಮ್ಯ ನಿಷೇಧಿಸಿದೆ. ಅಲ್ಲದೆ ಆಸ್ತಿಯ ಹಕ್ಕು, ವಿವಾಹ ಸಂಬಂಧದ ಹಕ್ಕು, ವಿಚ್ಛೇದನದ ಹಕ್ಕು ಜಾರಿಗೊಳಿಸಿದೆ. ಬಾಲ್ಯವಿವಾಹ ತಡೆಲಯ ೧೯೭೮ರಲ್ಲಿ ಬಾಲ್ಯವಿವಾಹ ನಿಷೇಧ ಕಾಯ್ದೆ, ೧೯೫೬ ವಿಚ್ಛೇದನ ಕಾಯ್ದೆ, ೧೯೫೫ರಲ್ಲಿ ಹಿಂದೂ ವಿವಾಹದಲ್ಲಿ ಬಹುಪತ್ನಿತ್ವ ನಿಷೇಧ ಕಾಯ್ದೆ ಜಾರಿಗೊಳಿಸಿದೆ. ಆದ ಕಾರಣ ಬಹುಪತ್ನಿತ್ವದ ಸಂಖ್ಯೆ ಕಡಿಮೆ. ಆದರೂ ಸಹ ಕಾನೂನಿನ ಕಣ್ಣು ತಪ್ಪಿಸಿ ಬಳ್ಳಾರಿ ಜಿಲ್ಲೆಯ ಹಲವು ಭಾಗಗಳಲ್ಲಿ ಈ ವ್ಯವಸ್ಥೆ ಆಚರಣೆಯಲ್ಲಿದೆ. ಜೊತೆಗೆ ಕಾನೂನಿನ ರಕ್ಷಣೆ ಇಂದು ಸ್ತ್ರೀಯರಿಗಿದೆ ಕಾನೂನಿನಲ್ಲಿ ಅವಳಿಗೆ ಉಸಿರಾಡಲು ಸ್ಥಳ ಸಿಕ್ಕಂತಾಗಿದೆ. ಹಲವಾರು ಸ್ತ್ರೀಯರು ದಿಟ್ಟತನದಿಂದ ಇಂದು ಹೆಜ್ಜೆಯನ್ನಿಡುತ್ತಿದ್ದಾರೆ. ದುರ್ಬಲ ಪುರುಷನೊಂದಿಗೆ ಕೆಲವರು ಜೀವನ ನಡೆಸದೆ ವಿಚ್ಛೇದನ ನೀಡಿ ಸ್ವತಂತ್ರರಾಗಿ ಬಾಳು ನಡೆಸುತ್ತಿದ್ದಾರೆ. ಹೆಣ್ಣಿನ ಆಸೆಯಿಂದ ತಮ್ಮ ಹೆಂಡತಿಯನ್ನು ಅನ್ಯವಿವಾಹವಾಗಲು ಬಲಿತೆಗೆದುಕೊಂಡ ಪ್ರಸಂಗಗಳೂ ನಮ್ಮಲ್ಲಿವೆ. ಇಂದಿನ ಸಮಾಜದವರೆಗೂ ಸಹ ಹೆಣ್ಣಿಗೆ ಅಭಿವ್ಯಕ್ತಿ ಸ್ವತಂತ್ರ್ಯ ಸಿಕ್ಕಿರುವುದು ಬೆರಳೆಣಿಕೆಯಷ್ಟು ಮಾತ್ರವೇ ಎಂದು ಹೇಳಬಹುದು.

ಅಡಿಟಿಪ್ಪಣಿ

೧. ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಪು.೩೪೭

೨. ಕೃಷ್ಣಮೂರ್ತಿ ಹನೂರು, **ಕತ್ತಲದಾರಿದೂರ,** ಪು.vii

೩. ಕಲಬುರ್ಗಿ ಎಂ.ಎಂ., **ಸಮಾಧಿ ಬಲಿದಾನ ವೀರ ಮರಣ ಸ್ಮಾರಕಗಳು**, ಪು.೨೭, ೨೮.

೪. ಚಿದಾನಂದಮೂರ್ತಿ ಎಂ., **ಪೂರ್ವೋಕ್ತ**, ಪು.೩೪೭-೩೪೮

೫. ಅದೇ, ಪು.೩೪೭-೩೪೮

೬. ಅದೇ, ಪು.೩೪೮

೭. ಅದೇ, ಪು.೩೪೮

೮. ಅದೇ, ಪು.೩೪೯

೯. ಮಹಾಂತೇಶ್ ಎನ್. ಎಸ್., **ಹೊಸದುರ್ಗ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ**, ಪು.೨೪೩

೧೦. ಅದೇ, ಪು.೨೪೩

೧೧. ಅದೇ, ೨೪೪

೧೨. ಅದೇ, ೨೪೪

೧೩. ಸಂತೇಬೆನ್ನೂರು ಸುಮತೀಂದ್ರ ನಾಡಿಗ, **ದಾವಣಗೆರೆ ಜಿಲ್ಲೆ: ಇತಿಹಾಸದ ಕೆಲವು ಹೆಜ್ಜೆಗಳು**, ಪು.೬೩-೬೪

೧೪. ಕಲಬುರ್ಗಿ ಎಂ.ಎಂ., **ಸಮಾಧಿ ಬಲಿದಾನ, ವೀರ ಮರಣ ಸ್ಮಾರಕಗಳು**, ಪು.೧೧೧

೧೫. ನಾಗರಾಜ ಆರ್.ಬಾಗೂರು, **ಹೊಸದುರ್ಗದ ಸುತ್ತ**, ಪು.೮-೯

೧೬. ಅದೇ ಪು.೧೫

೧೭. ಲತಾ ಬಿ.ಕೆ., **ಹೊಳಲ್ಕೆರೆ ಪಟ್ಟಣದ ಚಾರಿತ್ರಿಕ ಅಧ್ಯಯನ**, ಪು.೮೦

೧೮. ಚಿದಾನಂದಮೂರ್ತಿ ಎಂ., **ವೀರಗಲ್ಲುಗಳು ಮತ್ತು ಮಾಸ್ತಿಗಲ್ಲುಗಳು**, ಪು.೪೫

೧೯. ಅದೇ, ಪು.೪೫

೨೦. ರನ್ನನ **ಸಾಹಸಭೀಮ ವಿಜಯಂ**, ರನ್ನ ಸಂಪುಟ, ನಾಗರಾಜಯ್ಯ ಹಂಪ(ಸಂ) ಪು.೧೪೯

೨೧. ನಾಗಚಂದ್ರ **ರಾಮಚಂದ್ರ ಚರಿತ ಪುರಾಣಂ**, ನಾಗಚಂದ್ರ ಸಂಪುಟ, ಶಾಂತಿನಾಥ ದಿಬ್ಬದ(ಸಂ), ಪು.೨೪೮

೨೨. ಪರಶಿವಮೂರ್ತಿ ಡಿ.ವಿ., **ಪೆಣ್ಬುಯ್ಯಲ್**, ಪು.೧೨

೨೩. ಅದೇ, ಪು.೨-೩

೨೪. ರಾಜಶೇಖರಪ್ಪ ಬಿ., **ನಿರಂತರ**, ಪು.೪

೨೫. ಐಸಿಎಚ್ಆರ್ ೨೬

೨೬. ನಾಗಯ್ಯ ಜೆ.ಎಂ., ೬ನೇ ವಿಕ್ರಮಾದಿತ್ಯನ ಶಾಸನಗಳು, ಪು.೩೬

೨೭. S.I.I.Vol.XI-i, Bombay Karnatka Incription, No.52-53

೨೮. ಶೋಬಾನ ಎಸ್., ಶಾಸನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ(ಅಪ್ರಕಟಿತ), ಪು.೯೨

ಅಧ್ಯಾಯ ಐದು

ಚಿತ್ರದುರ್ಗ ಜಿಲ್ಲೆಯ ಜನಪದ ಕಥನ ಗೀತೆಗಳಲ್ಲಿ ಮಹಾಸತಿ ಆಚರಣೆ ಮತ್ತು ಸ್ತ್ರೀ ಬಲಿದಾನ

ಅಧ್ಯಾಯ ಐದು

ಜನಪದ ಕಥನ ಗೀತೆಗಳಲ್ಲಿ ಮಹಾಸತಿ ಆಚರಣೆ ಮತ್ತು ಸ್ತ್ರೀ ಬಲಿದಾನ

ನಮ್ಮ ದೇಶ ವಿವಿಧ ಜಾತಿ, ಮತ, ಧರ್ಮ, ಜನಾಂಗಗಳಿಂದ ತುಂಬಿ ಹೋಗಿದ್ದು, ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿದೆ. ಎಂಬ ಹೆಗ್ಗಳಿಗೆ ಹೆಸರಾಗಿದೆಯಾದರೂ, ಅದೇ ಜಾತಿ, ಮತ, ಧರ್ಮ, ಜನಾಂಗಗಳ ಒಳಹೊಕ್ಕು ನೋಡಿದರೆ, ಅಲ್ಲಿನ ಆಚರಣೆ, ಸಂಪ್ರದಾಯ, ವಿಧಿ-ವಿಧಾನಗಳು ಇವೆಲ್ಲ ಮಾನವ ಜನಾಂಗದ ಸೃಷ್ಠಿಕರ್ತೆಯಾದ ಹೆಣ್ಣಿನ ವಿಷಯದಲ್ಲಿ ಅನುಸರಿಸಿರುವ ಧೋರಣೆ, ನೀತಿ, ನಿಲುವುಗಳು, ಕಠೋರ ಆಚರಣೆಗಳು ನಮ್ಮ ಗಮನಕ್ಕೆ ಬಾರದಿರಲಾರವು. ನಮ್ಮ ಸಮಾಜ ಹೆಣ್ಣಾದವಳು ಹೀಗೆಯೇ ಇರಬೇಕು ಎಂಬ ನೈತಿಕ ಚೌಕಟ್ಟನ್ನು ವಿಧಿಸಿದೆ. ಆ ಔಕಟ್ಟನ್ನು ಮೀರಿದವರಿಗೆ ಅದು ನೈತಿಕ ಶಿಕ್ಷೆಗಳನ್ನೆ ವಿಧಿಸುತ್ತದೆ. ಇಂತಹ ನೈತಿಕ ಆಚರಣೆಗಳಲ್ಲಿ ಅದರಲ್ಲೂ ಅಮಾನವೀಯ ಆಚರಣೆಗಳಲ್ಲಿ ಮಹಾಸತಿ ಆಚರಣೆ ಮತ್ತು ಸ್ತ್ರೀ ಬಲಿದಾನದ ಆಚರಣೆಗಳು ಮಾನವೀಯತೆಯೊಂದಿಗೆ ಬಾಳುವ ಸಮಾಜದ ಜನರ ಮನಕಲಕದಿರಲಾರವು.

ಪುರಾತನ ಕಾಲದಿಂದಲೂ ಸ್ತ್ರೀಯರನ್ನು ಗೌರವಿಸುತ್ತೇವೆ. ಪೂಜ್ಯನೀಯ ಭಾವದಿಂದ ಕಾಣುತ್ತೇವೆ ಎಂತಲೇ ಪುರುಷ ಸಮಾಜ ಅವಳನ್ನು ದೈವೀಕರಿಸುತ್ತ ಅವಳ ಮಾರಣ ಹೋಮವನ್ನು ಮಾಡುತ್ತಲೇ ಬಂದಿದೆ. ಗಂಡ ಸತ್ತ ನಂತರ ಅವನ ಸತಿಯಾದವಳು ಅವನೊಂದಿಗೆ ಚಿತೆಯನ್ನೆರಬೇಕಿತ್ತು. ಪತಿ ಸತ್ತ ನಂತರ ಸಮಾಜ ಅವಳ ಮೇಲೆ ವಿಧಿಸುವ ಅಮಾನುಷ ನಿರ್ಬಂಧಗಳ ಭಾರವನ್ನು ಹೊರಲಾರದೆ ಸುಲಭ ಮಾರ್ಗವೆಂದರೆ ಸಾವೊಂದೆ ಎಂದು ನಿರ್ಧರಿಸಿ ಬೆಂಕಿಗಾವುತಿಯಾಗುತ್ತಿದ್ದಿರಬೇಕು. ಕಾರಣ ಬದುಕಿ ಉಳಿದರೆ ಅಷ್ಟೊಂದು ಘನಘೋರ ಹಿಂಸೆಯನ್ನವಳು ಅನುಭವಿಸಬೇಕಿತ್ತು. ನಾವು ಗೌರವ ಭಾವದಿಂದ ಕಾಣುವ ಮಹಾಕಾವ್ಯವಾದ ಮಹಾಭಾರತದಲ್ಲೆ ಪಾಂಡುಮಹಾರಾಜ ಸತ್ತಾಗ ಅವನ ಮಡದಿ ಮಾದ್ರಿ ದೇವಿಯು ಚಿತೆಯೇರಿದಳೆಂಬ ವಿವರವು ಅಲ್ಲಿಂದಲೇ ಸತಿಪದ್ಧತಿ ಆಚರಣೆಯಲ್ಲಿತ್ತೆಂದು ನಮಗೆ ತಿಳಿದು

ಬರುತ್ತದೆ. ಸತಿ ಆಚರಣೆ ವೈಧಿಕ ಮೂಲದಲ್ಲಿ, ಸೂತ್ರಗಳಲ್ಲಿ, ಋಗ್ವೇದ, ಮನುಸಂಹಿತೆಗಳಲ್ಲಿ ದಾಖಲಾಗಿರುವ ಸೂಚನೆಗಳು ಅಷ್ಟಾಗಿ ದೊರಕುವುದಿಲ್ಲ. ಆದರೂ ಕ್ರಿಪೂ.ನಾಲ್ಕನೇ ಶತಮಾನದಿಂದ ಕ್ರಿ.ಶ.ಆರನೇ ಶತಮಾನದವರೆಗೆ ಸತಿಪದ್ಧತಿ ರೂಢಿಯಲ್ಲಿದ್ದುದಲ್ಲದೆ, ಧಾರ್ಮಿಕ, ಸಾಮಾಜಿಕ ಸಮ್ಮತಿಯೊಂದಿಗೆ ನಡೆಯುತ್ತಿತ್ತೆನ್ನಲಾಗಿದೆ. ಕಾಲಕ್ರಮೇಣ ಈ ಆಚರಣೆ ಸಮಾಜದಲ್ಲಿ ಎಷ್ಟು ಪ್ರಬಲವಾಗಿ ಬೇರೂರಿತೆಂದರೆ, ಕ್ರಿ.ಶ.೧೮೨೯ರವರೆಗೆ ಅಂದರೆ ಬ್ರಿಟಿಷ್ ಸರ್ಕಾರದ ಅನುಮತಿಯಿಂದ ರಾಜಾರಾಂ ಮೋಹನರಾಯರು ಸತಿಪದ್ಧತಿ ನಿಷೇಧ ಕಾಯ್ದೆಯನ್ನು ಜಾರಿಗೆ ತರುವವರೆಗೂ ಭದ್ರವಾಗಿ ನೆಲೆಸಿತ್ತು. ಕಾಯ್ದೆ ಜಾರಿಗೆ ಬಂದ ಮೇಲೂ ಇಂದಿಗೂ ನೇಪಾಳ ಪ್ರಾಂತ್ಯದಲ್ಲಿ ಈ ವ್ಯವಸ್ಥೆ ಜೀವಂತವಾಗಿಯೇ ಉಸಿರಾಡುತ್ತಿದೆ.

ದಕ್ಷಿಣ ಮತ್ತು ಉತ್ತರ ಕರ್ನಾಟಕದ ಮಧ್ಯೆ ಬರುವ ಶುದ್ಧ ಕನ್ನಡದ ಪ್ರದೇಶವಾದ ಚಿತ್ರದುರ್ಗ ಜಿಲ್ಲೆಯು ಸಮೃದ್ಧ ಐತಿಹಾಸಿಕ ಹಿರಿಮೆಯನ್ನೊಳಗೊಂಡ ಪ್ರದೇಶವಾಗಿದ್ದು, ಇಲ್ಲಿ ಪಾಳೇಗಾರ ಮನೆತನದವರು ವೈಭವಪೂರಿತ ಆಳ್ವಿಕೆ ನಡೆಸಿ, ತಮ್ಮದೇ ಇತಿಹಾಸ ಸೃಷ್ಟಿಸಿದ್ದಾರೆ. ಇಲ್ಲಿನ ಸುತ್ತಲ ಬಯಲುಗಾಡಿನ ಹಳ್ಳಿಯ ಜನರು ಪಾಳೆಯಗಾರರೊಂದಿಗೆ ಮುಗಿದು ಹೋದ ಇತಿಹಾಸದ ಚಹರೆಯನ್ನು ಬೇರೆ–ಬೇರೆ ರೀತಿಯಲ್ಲಿ ಕಾಣಿಸಿ ಕೇಳಿಸುತ್ತಾರೆ. "ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿ"ಗಳಾದ ಇಲ್ಲಿಯ ಜನರು ತಮ್ಮನ್ನಾಳಿದ ನಾಯಕರ ಕಥೆಯನ್ನು ನೆನಪಿನಲ್ಲಿಟ್ಟುಕೊಂಡು ಪೀಳಿಗೆಯಿಂದ ಪೀಳಿಗೆಗೆ ಬಾಯಿಮಾತಿನ ಮೂಲಕವೇ ರವಾನಿಸುವ ಕಾರ್ಯವನ್ನು ಅಚ್ಚುಕಟ್ಟಾಗಿಯೇ ನಿರ್ವಹಿಸಿದ್ದಾರೆ. ಕೇವಲ ತಮ್ಮನ್ನಾಳಿದ ನಾಯಕರ ಚರಿತ್ರೆಯನ್ನು ಮಾತ್ರವಲ್ಲ ತಲೆತಲಾಂತರದಿಂದ ರೂಢಿಯಲ್ಲಿರುವ ಆಚರಣೆಗಳು, ಪದ್ಧತಿಗಳು ಮೊದಲಾದುವನ್ನು ಕುರಿತಾದ ಹಾಡು, ಲಾವಣಿ ಮೊದಲಾದ ಪದಗಳನ್ನು ಉಳಿಸಿ, ಬೆಳೆಸಿ ಪೋಷಿಸಿಕೊಂಡು ಬಂದಿದ್ದಾರೆ.

ಚಿತ್ರದುರ್ಗ ಬಳಿ ಆಲಗೊಂಡನಹಳ್ಳಿ, ಕಸವಿಗೊಂಡನಹಳ್ಳಿ, ದ್ಯಾಮವ್ವ ನಾಗತಿಹಳ್ಳಿ, ಜಂಪಣ್ಣನಾಯಕನ ಕೋಟೆ, ದಂಡಿನ ಕುರುಬರ ಹಟ್ಟಿ, ಭರಮಣ್ಣ ನಾಯಕನ ಸಾಗರ, ರಂಗಣ್ಣನಾಯಕನ ಸಮುದ್ರ, ಚಿಕ್ಕಮಲ್ಲನಹೊಳೆ ಇವೆಲ್ಲ ತ್ಯಾಗ, ಬಲಿದಾನದ ಹೆಸರಿನಲ್ಲಿ ಮಡಿದವರ ನೆನಪನ್ನು ಮಡುಗಟ್ಟಿಸಿ ನಿಂತ ಸ್ಫೂರ್ತಿಯ ಚಿಲುಮೆಯ ಸ್ಥಳಗಳಾಗಿವೆ. ಅಲ್ಲದೆ ಈ ಹಳ್ಳಿಗಾಡಿನ ಜನರ ಬದುಕಿನ ರೀತಿ–ನೀತಿಗಳು, ಆಚರಣೆ, ನಡೆ–ನುಡಿ, ಸಂಪ್ರದಾಯ, ಬದ್ಧತೆಗಳು, ರಿವಾಜುಗಳು ಒಂದಿಲ್ಲೊಂದು ತೆರನಾಗಿ ಇತಿಹಾಸ ಕಾಲದ ಗತಿಸಿದ ಬದುಕನ್ನೆ ನಮ್ಮ ಸ್ಮೃತಿಗೆ ತರುತ್ತವೆ.

ಚಿತ್ರದುರ್ಗ ಜಿಲ್ಲೆಯ ಬಹುಭಾಗಗಳಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಹಾಡುಗಳೆಂದರೆ, ಅವು ಸ್ತ್ರೀ ಸಂರಕ್ಷಣಾರ್ಥವಾಗಿಯೋ ತುಱುಗೋಳ್‌ನಲ್ಲೋ, ತಮ್ಮ ಜನಾಂಗದ ದೇವಾಲಯಗಳ ಲೂಟಿ ತಡೆಯಲು ಹೋದವರೋ, ಹುಲಿ–ಹಂದಿ ಬೇಟೆಯಾಡಲು ಹೋಗಿ ಮಡಿದ ವೀರ

ಪುರುಷರ ಮತ್ತು ಇವರೊಂದಿಗೆ ಬಲಿಯಾದ ಸತಿಯರ ಆಚರಣೆಯ ಗೀತೆಗಳಾಗಿವೆ. ಐತಿಹಾಸಿಕ ಸ್ಥಳಗಳಲ್ಲಿ ಹಾಡುಗಳು ಸೃಷ್ಟಿಯಾಗುವಾಗ ಅನಿವಾರ್ಯವೆಂಬಂತೆ ಅಲ್ಲಿಯ ಸ್ಥಳಗಳ ಚರಿತ್ರೆಯನ್ನು ಅಂಟಿಸಿಕೊಂಡು ಆವಿರ್ಭವಿಸುತ್ತವೆ. ಕೆಲವೊಮ್ಮೆ ತೀರಾ ನಡೆದ ಘಟನೆಗಳನ್ನೆ ಮುಖ್ಯ ವಸ್ತುವನ್ನಾಗಿ ಆಧರಿಸಿ ರಚಿಸಲ್ಪಡುತ್ತವೆ. ಈ ದೆಸೆಯಲ್ಲಿ ಇತಿಹಾಸಕ್ಕೆ ಜನಪದ ಸಾಹಿತ್ಯವೂ ಸಹ ಆಕರವಾಗಿಯೇ ನಿಲ್ಲುತ್ತದೆಂಬುದರಲ್ಲಿ ಎರಡು ಮಾತಿಲ್ಲ. ಕಾರಣ ಸ್ತ್ರೀ ಪಾತ್ರ ಪ್ರಧಾನ ಗೀತೆಗಳಲ್ಲಿ ಒಂದೆರಡನ್ನು ಹೊರತುಪಡಿಸಿ ಉಳಿದೆಲ್ಲವೂ ಐತಿಹಾಸಿಕ ಘಟನೆಗಳನ್ನಾಧರಿಸಿದವುಗಳೇ ಆಗಿವೆ. ಹೇಳುವ ದಾಟಿ ಪೌರಾಣಿಕವಾದರೂ ಸಹ ಅಂದಿನ ಜನರ ಬದುಕಿನ ಆಚಾರ-ವಿಚಾರ, ನಡೆ-ನುಡಿ, ನಂಬಿಕೆಗಳು, ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ಆಚರಣೆ, ಕೌಟುಂಬಿಕ ಜೀವನದ ಏರು-ಪೇರುಗಳು ಇವೆಲ್ಲವನ್ನು ನಮ್ಮ ಕಣ್ಮುಂದೆ ತರುತ್ತವೆ. ಇಲ್ಲಿ ಸಂಗ್ರಹವಾದ ಗೀತೆಗಳೆಲ್ಲ ಸ್ತ್ರೀ ಪಾತ್ರ ಪ್ರಧಾನವಾದವುಗಳೇ ಆಗಿದ್ದು, ಅನಾದಿಕಾಲದಿಂದಲೂ ಸ್ತ್ರೀಯರಿಗಿದ್ದ ಸ್ಥಾನಮಾನಗಳು, ಸಾಮಾಜಿಕ ವ್ಯವಸ್ಥೆ, ಸಮಾಜ ಹೆಣ್ಣನ್ನು ಕಾಣುತ್ತಿದ್ದ ರೀತಿ, ಹೆಣ್ಣಾದವಳನ್ನು ಹೇಗೆ ತನಗೆ ಬೇಕೆಂದಾಗ ಅವಳನ್ನು ಹೊಗಳಿ ಪೋಷಿಸುವ ನೆಪದಲ್ಲಿ ಕೊಡುವ ಹಿಂಸೆ, ಪುರುಷನ ಔನ್ನತ್ಯದ ವರ್ತನೆಯಲ್ಲಿ ಅವಳೊಂದಿಗಿನ ತಿರಸ್ಕಾರ, ಪುರುಷನ ಕುತಂತ್ರ ಆಚರಣೆಗೆ ಹೆಣ್ಣನ್ನು ಕುರಿಯಂತೆ ಬಲಿಕೊಡುವ ವ್ಯವಸ್ಥೆ, ಸಂಪ್ರದಾಯ, ಆಚರಣೆ, ನಂಬಿಕೆಗಳೆಂಬ ಬಿಗಿಮುಷ್ಠಿಯಲ್ಲಿ ಹೆಣ್ಣನ್ನು ಬೋನಿನೊಳಗೆ ಹೋಗುವ ಇಲಿಯಂತೆ ಸಿಕ್ಕಿಸಿ ಅವಳು ತನ್ನನ್ನು ತಾನೇ ಬಲಿಕೊಟ್ಟು ಕೊಳ್ಳುವ ಸ್ಥಿತಿಯನ್ನು ತಂದೊಡ್ಡುವ ಪರಿಯಿಲ್ಲಿ ಹೃದಯವಿದ್ರಾವಕವಾದುದು.

೫.೧. ಜನಪದರಲ್ಲಿ ಸತಿ ಆಚರಣೆ

ಇತಿಹಾಸದ ಪುಟಗಳುದ್ದಕ್ಕೂ ಆಚರಿಸಿ, ಆರಾಧಿಸಲ್ಪಟ್ಟ ಹಿಂಸಾತ್ಮಕ ಭೀಕರ ಆಚರಣೆಗಳಲ್ಲಿ ಮಹಾಸತಿ ಆಚರಣೆ ಅಗ್ರಸ್ಥಾನದಲ್ಲಿದೆ. ಅಲ್ಲದೆ ಸಹಗಮನ, ಅನುಗಮನವೆಂಬ ಎರಡು ರೀತಿಯ ಆಚರಣೆಗಳಲ್ಲಿ ಬೆಳೆದುಬಂದಿದೆ. ವೇದಗಳ ಕಾಲದಲ್ಲಿ ಅಷ್ಟಾಗಿ ಬೆಳಕಿಗೆ ಬರದಿದ್ದರೂ "ಓ ಹೆಣ್ಣು ಮಗಳೇ ಎದ್ದೇಳು, ಜೀವ ಕಳೆದು ಕೊಂಡವಳಂತೆ ಮಲಗಬೇಡ, ಈ ಪ್ರಪಂಚಕ್ಕೆ ಬಾ, ಸತ್ತವನ ಕೈಗಳಿಂದ ಬಿಲ್ಲನ್ನು ತೆಗೆದುಕೊಂಡು ಬಾ"[೧] ಎಂಬ ಅಥರ್ವಣ ವೇದದ ಶ್ಲೋಕವೊಂದು ಸಹಗಮನದ ಆಚರಣೆಯನ್ನೆ ಬಿಂಬಿಸುತ್ತದೆ. ಸಹಗಮನ ಅನುಗಮನದಲ್ಲಿ ಸ್ವಲ್ಪಮಟ್ಟಿನ ವ್ಯತ್ಯಾಸ ಕಂಡುಬರುತ್ತದೆ. ಗಂಡನೊಂದಿಗೆ ಚಿತೆಯೇರುವುದು ಸಹಗಮನವಾದರೆ ಗಂಡ ಎಲ್ಲೋ ಸತ್ತು ಸ್ವಲ್ಪ ದಿನಗಳ ನಂತರ ಚಿತೆಯೇರುವುದು ಅನುಗಮನವಾಗಿರುತ್ತದೆ. ನಿಕೋಲೋ ಮನೂಚಿ ಎಂಬ ಪ್ರವಾಸಿ ಯಾತ್ರಿಕ ಹೀಗೆ ವಿವರಿಸುತ್ತಾನೆ. "ಸತ್ತವನನ್ನು ಚಿತೆಯ ಮೇಲೆ ಮಲಗಿಸುತ್ತಿದ್ದರು. ಆತನ ಮಡದಿ ಸರ್ವವಸ್ತ್ರಾಲಂಕಾರ ಭೂಷಿತೆಯಾಗಿದ್ದವಳು ಮೈ ಮೇಲಿನ ಒಡವೆಗಳನ್ನು ಕಳಚಿ ಸುತ್ತಮುತ್ತಲ ಬಂಧು ಬಳಗಕ್ಕೆ ದಾನ ಮಾಡಿದಳು. ನೆರೆದವರಾದರೂ ಆಕೆಯನ್ನು ಮೇಲಿಂದ ಮೇಲೆ ಮಾತನಾಡಿಸುತ್ತ ಸ್ವರ್ಗದಲ್ಲಿರುವ ತಂದೆ, ತಾಯಿ, ಅಜ್ಜ,

ಅಜ್ಜಂದಿರಿಗೆಲ್ಲ ನಮಸ್ಕಾರ ತಿಳಿಸುವಂತೆ ಕೇಳಿ ಕೊಳ್ಳುತ್ತಿದ್ದರು. ಆಭರಣಗಳನ್ನೆಲ್ಲ ಹಂಚಿದ ಸತಿ ಚಿತೆಯನ್ನು ಹತ್ತಿ ಗಂಡನ ಶವದ ಬಳಿ ಮಲಗಿದಳು. ಆಕೆಯ ಕಾಲುಗಳನ್ನು ಕಟ್ಟಿಗೆಗೆ ಬಿಗಿದರು. ಎಲ್ಲಾ ಶಾಸ್ತ್ರ ವಿಧಗಳೂ ಆದ ಮೇಲೆ ನಿಂತವರು ಕೂಗಿ ಆಕೆಗೆ ಸ್ವರ್ಗಕ್ಕೆ ಹೋಗಲು ಆಸೆಯಿದೆಯೇ ಎಂದು ಕೇಳಲು ಕಟ್ಟಿಗೆಯ ನಡುವಿದ್ದ ಸತಿ ಹೂಗುಟ್ಟಲು ಬೆಂಕಿ ಹಚ್ಚಿದರು. ಸದ್ದು ಮಾಡದೆಯೇ, ಚೀರಡದೆಯೇ ಮಲಗಿದಾಕೆ ಭಸ್ಮವಾದಳು"[೨] ಎಂದು ಸಹಗಮನದ ಕುರಿತಾದ ಮಾತುಗಳನ್ನು ವಿವರಿಸುತ್ತಾನೆ.

ಕಾಲಕ್ರಮೇಣ ಬರಬರುತ್ತಾ ಪ್ರಾರಂಭದಲ್ಲಿ ಬೆಂಕಿಗೆ ಹೆದರದೆ ಹೋಗುತ್ತಿದ್ದ ಸ್ತ್ರೀಯರು ಕಾಲ ನಂತರದಲ್ಲಿ ಕೆಲವರು ಹೆದರಿ ಹಿಂಜರಿದಾಗ ಅವರನ್ನು ಬಲವಂತದಿಂದ ಬೆಂಕಿಗೆ ತಳ್ಳುತ್ತಿದ್ದರು. ಮತ್ತೆ ಕೆಲವರು ಊರಿನಿಂದ ಓಡಿ ಹೋಗಿ ಪಟ್ಟಣಗಳಲ್ಲಿ ಜೀವನ ಸಾಗಿಸಲು ಅನಿವಾರ್ಯವಾಗಿ ವೇಶ್ಯೆಯರಾಗಿಯೋ, ಜೀತದಾಳುಗಳಾಗಿಯೋ ಜೀವನ ಸಾಗಿಸುತ್ತಿದ್ದರು. ಕಾರಣ ಪುನಃ ಊರಿಗೆ ಬಂದರೆ ಅವರು ನಿಂದನೆಗಳಿಂದ ಹೊರಬರುವಂತಿರಲಿಲ್ಲ. ಪ್ರತಿಕ್ಷಣ ಜನರ ಮಧ್ಯೆ ಸಾಯುವುದಕ್ಕಿಂತ ಓಡಿ ಹೋದವರು ಈ ರೀತಿಯ ಜೀವನವನ್ನು ಸಾಗಿಸಲೇ ಬೇಕಾಗುತಿತ್ತು. ಇವೆಲ್ಲವನ್ನು ಗಮನಿಸಿಯೇ ಗಂಡ ಸತ್ತ ನಂತರ ಅವನ ಪತ್ನಿಯರು ಸಮಾಜದಲ್ಲಿ ನಿಂದೆಗೆ ಬಲಿಯಾಗುವುದಕ್ಕಿಂತ ಸತ್ತು ಜನರ ಬಾಯಲ್ಲಿ ದೇವತೆಯಾಗುವದೇ ಲೇಸೆಂದು ಈ ದಾರಿ ತುಳಿಯುತ್ತಿದ್ದರು. 'ದಯವೇ ಧರ್ಮದ ಮೂಲ' 'ಧರ್ಮೋ ರಕ್ಷತಿ ರಕ್ಷಿತಃ' ಯಾರು ಧರ್ಮವನ್ನು ಕಾಪಾಡುವರೋ ಅವರನ್ನು ಧರ್ಮ ಕಾಪಾಡುತ್ತದೆ ಎಂದಿದೆ ಭಗವದ್ಗೀತೆ. ಆದರೆ ಹೆಣ್ಣಿನ ವಿಷಯದಲ್ಲೇಕೆ ಧರ್ಮ ಬರುವುದಿಲ್ಲ? ಏಕೆ ಅವಳನ್ನು ಬೆಂಕಿಯಿಂದ ರಕ್ಷಿಸುವುದಿಲ್ಲ? ಇವುಗಳಿಗೆಲ್ಲ ನಮ್ಮ ಸಮಾಜದಲ್ಲಿ ಉತ್ತರ ಸಿಗಲಾರದು.

ವೀರತಿಮ್ಮವ್ವ, ನಾಗವ್ವ, ಕಾಟವ್ವ, ವಲ್ಲಣದೇವಿ ಈ ಗೀತೆಗಳಲ್ಲಿ ಬರುವ ಸ್ತ್ರೀಯರು ಪತಿ ಸತ್ತ ನಂತರ ಚಿತೆಯೇರಿ ಚಿತ್ರದುರ್ಗದ ಹಲವು ಭಾಗಗಳಲ್ಲಿ ಜನರ ಮನಸ್ಸಿನಲ್ಲಿ ದೇವತೆಗಳಾಗಿ ನೆಲೆಸಿದ್ದಾರೆ. ಅಲ್ಲದೆ ಇಂದಿಗೂ ಅನೇಕ ಊರುಗಳಲ್ಲಿ ಗೊಲ್ಲರ ಕುಲದೇವತೆಯರಾಗಿ ಪೂಜಿಸಲ್ಪಡು ತ್ತಿದ್ದಾರೆ. ಜನಪದರು ತಾವು ಕಂಡ ಸತ್ಯವನ್ನೆ ಹಾಡಗಿ ಕಟ್ಟಿದ್ದುದರ ಜೊತೆಗೆ ಅಂದಿನ ಆಚರಣೆ, ವಿಧಿ, ಪದ್ಧತಿಗಳನ್ನು ಸಹ ಕೋಲು ಗೀತೆ, ಕಥನಗೀತೆಗಳಾಗಿ ರಚಿಸಿದ್ದಾರೆ. ಶ್ರೀ ಕ.ರಾ.ಕೃ. ಅವರ 'ಚಿತ್ರಕಲ್ಲು ಮದಕರಿ ಜನಪದ ಗೀತೆಗಳ ಸಂಕಲನ'ದ ಒಂದು ಗೀತೆಯಲ್ಲಿ ದುರ್ಗವನ್ನಾಳಿದ ವೀರಮದಕರಿನಾಯಕ ಮಡಿದಾಗ ಅವನ ಅರಸಿಯರು, ಬಣ್ಣದ ಸೂಳೆಯರು, ಹಣ್ಣಡಕೆ, ಹೂಗೆ ಹಿಡಿದು ಮೇಲುವರ್ಗದ ಹೊಂಡಕ್ಕೆ ಬಿದ್ದರೆಂದು ತಿಳಿಸುತ್ತದೆ. ಚಿತ್ರದುರ್ಗವನ್ನಾಳಿದ ನಾಯಕ ಪತ್ನಿಯರ ಮರಣ ಪ್ರಸಂಗವನ್ನು ವಿವರಿಸುವ ಗೀತೆಗಳು ಕಡಿಮೆಯಿದ್ದರೂ ಹಳ್ಳಿಗಳಲ್ಲಿ ಜನರು ತಾವು ವಾಸಿಸುವ ಸುತ್ತಲ ಆಜುಬಾಜಿನಲ್ಲಿ ನಡೆದ ಬಲಿಗಳ ಬಗ್ಗೆ ಮಾತ್ರ ಕಣ್ಣಿಗೆ ಕಟ್ಟುವಂತೆ ವಿವರಿಸಿಕೊಂಡು ಬಂದಿದ್ದಾರೆ.

ಸಾಮಾನ್ಯವಾಗಿ ಈ ಮಹಾಸತಿ ಆಚರಣೆಯ ಗೀತೆಗಳು ಜನಪದರಲ್ಲಿ ಮೂರು ರೀತಿಯಲ್ಲಿ ವ್ಯಕ್ತವಾಗುತ್ತವೆ. ಹೆಣ್ಣು ಸತಿಯಾಗುವ ಮೊದಲು ಅವಳ ವಿವಾಹ, ವರನ ಮನೆಯಿಂದ ಬರುವ ದಿಬ್ಬಣ, ತಂದೆ, ತಾಯಿ, ದೊಡ್ಡಮ್ಮ, ದೊಡ್ಡಪ್ಪ ವಿವಾಹಕ್ಕೆ ಒಪ್ಪುವ ಸೂಚನೆಗಳು, ವಿವಾಹದ ಸಿದ್ಧತೆಗಳು ಮೊದಲ ಹಂತದಲ್ಲಿ ಜರುಗುತ್ತವೆ. ಎರಡನೆ ಹಂತದಲ್ಲಿ ವಿವಾಹ, ವೀರನ ಬೇಟೆ, ಹೋರಾಟ, ಸತಿಯ ತವರಿನ ಹಗಲಿಕೆ ಇತ್ಯಾದಿಗಳನ್ನೊಳಗೊಂಡಿರುತ್ತದೆ. ಮೂರನೇ ಹಂತದಲ್ಲಿ ಸತಿ ಕೊಂಡಕ್ಕೆ ಹೋಗುವ ವಿವರಣೆಯಿರುತ್ತದೆ.

ಮಹಾಸತಿ ವೀರತಿಮ್ಮವ್ವಳ ಕಥನಗೀತೆಯು ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲೂಕು ಹಿರಿಯಟ್ಟಿ, ಮದನಕುಂಟೆ, ಯರಬಳ್ಳಿ ಗ್ರಾಮಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದ್ದು, ಮದನಕುಂಟೆಯ ಕರಿಯಮ್ಮ, ಶಾಂತಮ್ಮ ಮೊದಲಾದ ಗೊಲ್ಲಮತದವರು ಇಂದಿಗೂ ಹಾಡುವ ಪರಂಪರೆ ಬೆಳೆಸಿಕೊಂಡು ಬಂದಿದ್ದಾರೆ. ಹಿರಿಯಟ್ಟಿಯಲ್ಲಿ ಜಂಪವ್ವ ಎಂಬವಳು ಹಾಲು ಮಜ್ಜಿಗೆ ಮಾರುವ ಕೆಲಸವನ್ನು ನಿರ್ವಹಿಸುವವಳಾಗಿದ್ದಳು. ಇವಳಿಗೆ ವೀರನಾಗಣ್ಣನೆಂಬ ಪುತ್ರನಿದ್ದನು. ಇವನು ಪ್ರತಿನಿತ್ಯ ಎಮ್ಮೆ, ಮೇಕೆ, ದನ ಕರುಗಳನ್ನು ಮೇಯಿಸಿಕೊಂಡು ಬರುತ್ತಿದ್ದ. ಜೊತೆಗೆ ಇವುಗಳನ್ನು ಮೇಯಿಸುವ ಸಂದರ್ಭದಲ್ಲಿ ಹುಲಿ ಎರಗಿ ಬಂದರೆ ಅದರೊಂದಿಗೆ ಹೋರಾಡುವ ಪರಾಕ್ರಮವನ್ನು ಸಹ ಹೊಂದಿದ್ದನು. ಸಿರಾದವರೆಗೂ ಹೋಗಿ ಅರಮನೆಯ ಪಂಜರದ ಹುಲಿ ಹೊಡೆದು ಬಂದಾಗ ಅವನಿಗೆ ರಂಗಣ್ಣನಾಯಕನು ಚಿನ್ನದ ಸತ್ತಿಗೆ, ಭೂಚಕ್ರದ ಕೊಡಗು ಕೊಟ್ಟು ಗೌರವಿಸಿರುತ್ತಾನೆ. ಹರ್ತಿಕೋಟೆಯ ಕಾಳಗವನ್ನು ಸಹ ಜಯಿಸಿದ ಇವನನ್ನು ಎಲ್ಲಾ ಹೆಣ್ಣುಗಳು ಮದುವೆಯಾಗಲು ಬಯಸಿದರೆ, ಇವನು ಮಾತ್ರ ಹರ್ತಿಕೋಟೆಯ ತಿಮ್ಮವ್ವಳನ್ನು ಕಂಡು ಮೋಹಿಸುತ್ತಾನೆ ಅಲ್ಲದೆ ವಿವಾಹವಾಗುತ್ತಾನೆ. ಆದರೆ ವಿವಾಹವಾದ ಸ್ವಲ್ಪ ವರ್ಷಗಳಲ್ಲೇ ಸಾಣೆ ಕೆರೆಯ ಆದಲದಾಯದಲ್ಲಿ ಭಾಗವಹಿಸಿ ಮೃತಪಟ್ಟನು. ಆಗ ತಿಮ್ಮವ್ವಳಿಗೆ ಎರಡು ಮಕ್ಕಳಿದ್ದರೂ ಬಂಧು, ಬಳಗ, ತಂದೆ, ತಾಯಿ ಎಷ್ಟು ಕೇಳಿಕೊಂಡರು ಅವಳು ಕೊಂಡಕ್ಕೆ ಬೀಳುತ್ತಾಳೆ. ಈಗಲೂ ಹಿರಿಯಟ್ಟಿಯಿಂದ ಸ್ವಲ್ಪದೂರಕ್ಕೆ ಇರುವ ಕೊಂಡದ ಸ್ಥಳವನ್ನು ಗುರುತಿಸಬಹುದು. ಕೊಂಡದ ಉದ್ದಗಲಕ್ಕೂ ಎತ್ತರದ ಜಗಲಿಯನ್ನು ಕಟ್ಟಲಾಗಿದೆ. ಅದರ ಹಿಂದೆ ಮಾಸ್ತಿಕಲ್ಲನ್ನು ನಿಲ್ಲಿಸಲಾಗಿದೆ. ಇದು ತಿಮ್ಮವ್ವಳ ಮಾಸ್ತಿಗಲ್ಲಾಗಿದ್ದು, ಅವಳು ಕೊಂಡಕ್ಕೆ ನಡೆಯುತ್ತಿರುವ ಮತ್ತು ತಲೆಯಲ್ಲಿ ತುರುಬು ಒಂದು ಕೈಯಲ್ಲಿ ಕನ್ನಡಿ ಮತ್ತೊಂದು ಕೈಯಲ್ಲಿ ನಿಂಬೆಹಣ್ಣು ಹಿಡಿದು ನಿಂತಿರುವ ದೃಶ್ಯದೊಂದಿಗೆ ನಾಗಣ್ಣ ಮಲ್ಲಗಚ್ಚೆ ಹಾಕಿ ಬಿಲ್ಲನ್ನು ಹಿಡಿದು ನಿಂತಿರುವ ಚಿತ್ರವಿದೆ. ಈ ಕಲ್ಲನ್ನು ಈಗಲೂ ಊರಿನ ಜನತೆ ಪೂಜಿಸುತ್ತಿದ್ದಾರೆ. ಅಲ್ಲದೆ ಇಲ್ಲೊಂದು ಬನ್ನಿಯ ಮರವಿದ್ದು, ಅಲ್ಲಿಂದ ೫೦–೬೦ ಹೆಜ್ಜೆಗಳ ದೂರದಲ್ಲೊಂದು ಮಾಸ್ತಿಗಲ್ಲಿದ್ದು ಈ ಕಲ್ಲಿನ ಬಗ್ಗೆ ಊರಿನ ಜನರು ಗಂಡ ಸತ್ತ ಹೆಣ್ಣು ಸತಿ ಹೋಗುವಾಗ ಕೊಂಡಕ್ಕೆ ಬೀಳಲು ಹೆದರಿ ಓಡಿ ಹೋದಾಗ ಅವಳನ್ನು ಬಲವಂತದಿಂದ ಹಿಡಿದುತಂದು ಕೊಂಡಕ್ಕೆ ತಳ್ಳಿದರೆಂದು ಹೇಳುತ್ತಾರೆ.

ಈ ವೀರತಿಮ್ಮವ್ವ ಮಕ್ಕಳಿದ್ದರು ಕೊಂಡಕ್ಕೆ ನಡೆಯುತ್ತಾಳೆ. ನಮ್ಮ ಸಮಾಜದಲ್ಲಿ ಸತಿ ಆಚರಣೆಯು ಮಕ್ಕಳಿರುವವರಿಗೆ ಕೊಂಡಕ್ಕೆ ಬೀಳುವುದರಿಂದ ವಿನಾಯಿತಿ ಇದೆಯೆಂದು ಹೇಳಿದೆಯಾದರೂ ಜನಪದರಲ್ಲಿ ಮಾತ್ರ ಗಂಡಸತ್ತ ಮೇಲೆ ಮುಂಡೆಯರಾಗಿ ಬಾಳುವುದು ತರವಲ್ಲವೆಂಬ ನಂಬಿಕೆ ಭದ್ರವಾಗಿ ಬೇರೂರಿದೆ. ಈ ಗೀತೆಯನ್ನು ಹಾಡಿದ ಕರಿಯಮ್ಮನನ್ನು ಸಂದರ್ಶಿಸಿದಾಗ ಈ ಕಾಲಕ್ಕೂ ಆ ಹೆಂಗಸು ಇದೇ ಮಾತನ್ನು ಹೇಳುತ್ತಾಳೆ. ಪುರುಷ ಸಮಾಜ ತನ್ನ ಸ್ವಾರ್ಥಕ್ಕೆ ಹೆಣ್ಣಾದವಳು ತಾನು ನಿರ್ಮಿಸಿದ ಕಾಯ್ದೆಗಳ ಚೌಕಟ್ಟಿನಲ್ಲೆ ಬಾಳಬೇಕೆಂಬ ವಿಧಿಯನ್ನು ವಿಧಿಸುತ್ತಾ ಬಂದಿದೆ. ಅದರ ಜೊತೆ ಗಂಡನನ್ನು ಗೌರವಿಸುವ, ಅವನನ್ನು ಸಾವಿನಲ್ಲೂ ಅನುಕರಿಸುವ ಹೆಣ್ಣು ಸ್ವರ್ಗಕ್ಕೆ ಹೋಗುತ್ತಾಳೆ. ಅಲ್ಲಿ ಎಷ್ಟೋ ಕೋಟಿವರ್ಷ ಸುಖದಿಂದ ಗಂಡನೊಂದಿಗೆ ಬಾಳಬಹುದು ಎಂಬೆಲ್ಲ ಹುನ್ನಾರಗಳನ್ನು ಕಟ್ಟಿ, ಅವಳ ಮನಸ್ಸಿನಲ್ಲಿ ಭದ್ರವಾಗಿ ಮೊಳೆಯೊಡೆಸಿದ್ದಾರೆ. ಅದು ಇಂದಿನ ಸಮಾಜದವರೆಗೂ ಯಾವುದಾದರೂ ರೂಪದಲ್ಲಿ ಕಾಣಿಸುತ್ತಲೇ ಬಂದಿದೆ.

ತುಪ್ಪಾದ ಕೊಡ ಉಕ್ಕುಕ್ಕಿ ಬೇವಾಗ
ನಿಸ್ತ್ರೇ ತಿಮ್ಮವ್ವ ಮೆರಿವಾಗ
ನಿಸ್ತ್ರೇ ತಿಮ್ಮವ್ವ ಮೆರಿವಾಗ। ಸಂದ ಪುತ್ರನ
ಎತ್ತೋರು ಮನಿಗೋಗೀರಿ[3]

ಕೆಂಪಾದ ಕೆಂಡದೊಳಗೆ ಸಜೀವ ದಹನವೆಂದರೆ ಅದು ಸಾಮಾನ್ಯ ವಿಷಯವೇನಲ್ಲ. ಹೆಣ್ಣು ಬೆಂಕಿಯಲ್ಲಿ ಬೇಯಲು ಸಿದ್ಧಳಾಗುತ್ತಾಳೆ. ಜೊತೆಗೆ ಬಂಧು ಬಳಗದವರೆಲ್ಲ ಬಂದು ತಡೆದರು ಅವರನ್ನು ಧಿಕ್ಕರಿಸುತ್ತಾಳೆಂದರೆ ಅವಳಲ್ಲಿ ಒಂದಿಲ್ಲೊಂದು ತೆರನಾಗಿ ನಿರ್ಲಿಪ್ತ ಪ್ರತಿರೋಧವೇ ಇದೆ ಹೊರತು ಬೇರೇನೂ ಅಲ್ಲ.

ಮಹಾಸತಿ ತಾಡಿ ನಾಗಮ್ಮನ ಗೀತೆಯನ್ನು ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ ತಾಲೂಕು, ಓಬಳಾಪುರದ ಚೌಡಮ್ಮ ತಿಮ್ಮಕ್ಕಯೆಂಬ ಅತ್ತೆಸೊಸೆಯಂದಿರು ಹಾಡಿದ್ದಾರೆ. ಚೌಡಮ್ಮ ಆಂಧ್ರ ಜಿಲ್ಲೆಯ ಕಲ್ಯಾಣದುರ್ಗ ತಾಲೂಕಿನ ಸೀಗೆಹಳ್ಳಿ ನಿಂಗವ್ವನಿಂದ ಕಲಿತಿದ್ದಳು. ಓಬಳಾಪುರದಲ್ಲಿ ನಾಗಮ್ಮನ ಮಾಸ್ತಿಗಲ್ಲು ಸಿಗುವುದಿಲ್ಲ. ಆದರೆ ಈ ಕಲ್ಲು ಇರುವುದು ಚಿತ್ರದುರ್ಗ ಜಿಲ್ಲೆಯ ವಡ್ಡಗೆರೆಯಲ್ಲಿ. ನಾಗಮ್ಮನ ಗೀತೆಯನ್ನು ಹಾಡುವವರು ಪೂಜಿಸುವವರೂ ಓಬಳಪುರದ ಸುತ್ತಲೂ ಕಂಡುಬರುತ್ತಾರೆ. ಈ ಕಥೆಯನ್ನೇ ಆಧರಿಸಿ "ವೀರಗ್ಯಾತರಾಯನ ಯಕ್ಷಗಾನ"[4]ವೆಂಬ ಪುಸ್ತಕ ರಚಿತವಾಗಿದೆ. ಈಕೆ ಎಲಿಯೋರ ಕುಲದಲ್ಲಿ ಹುಟ್ಟಿದವಳು. ಚಿಕ್ಕ ವಯಸ್ಸಿನಲ್ಲೆ ವಡ್ಡಗೆರೆ ಸಿರಿವಂತರೊಂದಿಗೆ ಸಂಬಂಧ ಬೆಳೆಸುವುದಾಗಿ ಕುಟುಂಬದವರು ತೀರ್ಮಾನಿಸುತ್ತಾರೆ. ವಿವಾಹಕ್ಕೂ ಮುನ್ನ ಅವಳಿಗೆ ಬಳೆ ತೊಡಿಸುವಾಗ ಬಲಗಡೆ ಸೀನು ಬರಲು, ಬಾಗಿಲಗಾಳಿ ಸದ್ದು ಮಾಡಿತು ಎಂಬ ಅಪಶಕುನಗಳು ಕಾಣಿಸಿಕೊಂಡವು. ಆದರೂ ಲಗ್ನದ ಕಾರ್ಯ ಮುಂದುವರೆಯಿತು.

ಲಗ್ನದ ದಿನವೂ ಬಂದಿತು. ಈರಗ್ಯಾತರಾಯನ ಮಗ ನಾಗಣ್ಣನೊಂದಿಗೆ ನಾಗಮ್ಮನ ಕೈಯು ಕೂಡಿತು. ಕೆಲದಿನಗಳ ನಂತರ ಚಿಪ್ಪುಗೊಡಲಿ ಹಿಡಿದು ನಾಗಣ್ಣ ದಂಡುಕಟ್ಟಿ ದಳವಾಯಿಯಾಗಿ ಹೋಗಿ ಕಾರಣಾಂತರಗಳಿಂದ ಉಸಿರುಬಿಟ್ಟನು. ಮೊದಲೇ ಲಗ್ನವಾಗುವುದಕ್ಕೂ ಮುನ್ನ ಶೂರ ನಾಗಣ್ಣ "ಕಾಳಗದಲ್ಲಿ ಮಡಿವೋನು"[೫] ಎಂದು ಶಕುನವಾಗಿತ್ತು. ಅಜ್ಜಿಯೊಂದಿಗೆ ಹೊಲದಲ್ಲಿ ಹತ್ತಿ ಬಿಡಿಸುತ್ತಿದ್ದ ನಾಗಮ್ಮ ಬಾಯಾರಿಕೆಯಾಗಿ ಮರಳು ಸರಿಸಿ ನೀರು ಕುಡಿಯಲು ಹೋದಾಗ ರಕ್ತ ಕಾಣಿಸಿ, "ಕೆಟ್ಟೆನಲ್ಲೆ ಅಜ್ಜಮ್ಮ ಕೆಟ್ಟೆನಲ್ಲೆ ಅತ್ತೆಮ್ಮ"[೬] ಎಂದು ಕೂಗಿದಾಗ ಅವರೆಲ್ಲ ಅಲ್ಲಿಗೆ ಬರುವಷ್ಟರಲ್ಲಿ ನಾಗಣ್ಣನ ಜೂಲ ನಾಯಿ ಮುಖವನ್ನು ರಕ್ತಮಾಡಿಕೊಂಡು ಎದುರಿಗೆ ಬಂದಾಗ ಗಂಡ 'ಬಿಳಿಯಂಗಿ ಮೇಲಾಗಿ ಹೋದ'[೭] ಎಂಬುದು ಅವಳಿಗೆ ಖಚಿತವಾಯಿತು. ಆಗವಳು "ವಂಡಾಕೆ ಕಲ್ಲವಡೀರಣ್ಣ"[೮] ಎಂದು ಕೇಳಿಕೊಂಡಳು. ತಂದೆ ತಾಯಿ, ಬಂಧು ಬಳಗದವರೆಲ್ಲ ಬಂದು

> ರಾಜ್ಯೇವ ಕೊಟೇವು ಇರುಮಗಳೆ।
> ತುಪ್ಪಾ ಜೋನವುಣ್ಣು ಮಗಳೇ![೯]

ಎಂದು ಎಷ್ಟೆಲ್ಲ ಬೇಡಿಕೊಂಡರು ಅವಳು "ಕೊಂಡ ಕೊಡದಿದ್ದರೆ ಸುಟ್ಟು ಕಂಬೆ ನಾಲಿಗೆಯ"[೧೦] ಎಂದವಳು ಹಠ ಹಿಡಿಯುತ್ತಾಳೆ. ದೇಕಬ್ಬೆಯ ಬೆಳತೂರು ಶಾಸನ ೧೮ರಲ್ಲಿಯೂ ತಂದೆ ಮತ್ತಿತರ ಬಂಧು ಬಳಗದವರು, ಎಲ್ಲರೂ ಬಂದು ಮಗಳೇ ಸಾಯದೆ ಮಾಣ್ಣೆನೆ....[೧೧] ಎಂದು ಬೇಡಿಕೊಂಡರೂ ಅವಳು ಚಿತಾ ಪ್ರವೇಶ ಮಾಡುತ್ತಾಳೆ. ಕೊಂಡಕ್ಕೆ ತೆರಳುವ ಮೊದಲು ನಾಗಮ್ಮ ಮನೆ ಮನೆಗೆ ಹೋಗಿ ಕಟ್ಟಿಗೆ ಕೊಡಿರೆಂದು ವೀಳ್ಯವನ್ನು ಕೊಡುತ್ತಾಳೆ.

> ಅಳ್ಳಿಗೆಣತೇರು ಕೊಳ್ಳೀರಿ ನಮ್ಮೀಳ್ಯಾವ
> ಒಳ್ಳೊಳ್ಳೆ ಸೌದೆ ಬರಬೇಕು। ಬೈಗಿನ ಕಡೆಯ
> ರೊಟ್ಟಿ ಗುಗ್ರಿಯ ತಿನಬೇಕು[೧೨]

ಇಂದಿಗೂ ಹಳ್ಳಿಗಳಲ್ಲಿ ಯಾರದರೂ ಮರಣಿಸಿದರೆ ಕಟ್ಟಿಗೆ ಕೊಡುವ ಪದ್ಧತಿ ಉಳಿದುಕೊಂಡೆ ಬಂದಿದೆ. "ಜನಪದ ಹಾಡುಗಳು ಸಂಪ್ರದಾಯಗಳಿಗೆ ಹಿಡಿದ ಕೈಗನ್ನಡಿಗಳೆಂದರೆ" ತಪ್ಪಾಗಲಾರದು. ಕಾರಣ ಅಂದಿನ ಬದುಕನ್ನು ಇಂದಿಗೂ ಕಣ್ಣಿಗೆ ಕಟ್ಟುವಂತೆ ಅದು ನೆನಪಿಗೆ ತಂದುಕೊಟ್ಟಿದೆ. ನಾಗಮ್ಮ ಕೊಂಡಕ್ಕೆ ತಾನು ಬಲಿಯಾಗಲು ಕೊಂಡದ ಬಳಿ ಬಂದಾಗ ಕೊಂಡದ ಸುತ್ತಲೂ ಹಾಕಿರುವ ತೆರೆಯನ್ನು ಕಂಡು "ಕಿಚಿಗೆದರೋರ ಮಗಳಲ್ಲ ಅಚ್ಚಡದ ತೆರೆಯ ತೆಗೆಸಯ್ಯ"[೧೩] ಇದು ಮುಂದೆ ಕಾಟವ್ವನ ಗೀತೆಯಲ್ಲಿಯೂ ಬರುತ್ತದೆ. ಈ ಮಾತುಗಳನ್ನು ಗಮನಿಸಿದರೆ ಈ ವೇಳೆಗಾಗಲೇ ಕೊಂಡಕ್ಕೆ ಬಲಿಯಾಗುವ ಹೆಣ್ಣು ಮಕ್ಕಳು ದಗದಗನೆ ಉರಿಯುವ ಬೆಂಕಿಗೆ ಹೆದರಿ ಹೋಗುತ್ತಿದ್ದರೆಂಬುದು ಜನಪದರ ಹಾಡುಗಳಿಂದ ಸ್ಪಷ್ಟವಾಗುತ್ತದೆ. ನಾಗಮ್ಮ ಸರ್ವಾಲಂಕಾರ ಭೂಷಿತೆಯಾಗಿ ಕೊಂಡಕ್ಕೆ ಬರುವಾಗ ಅಲ್ಲಿ ನೆರೆದ ತನ್ನ ಅತ್ತೆ, ತಾಯಿ, ಬಂಧು ಬಳಗದವರಿಗೆ

ತಾಳೀಯ ಸರವರಿದು ತಾಯಿಯ ಕೈಗೆಕೊಟ್ಟು
ತಾಯಮ್ಮ ನೀನು ಅಳದೀರೆ। ವಡ್ಡಗೆರೆ
ಗಾಜೀನ ಕೊಂಡ ನಮಗಾದಾವು॥
ಅತ್ತೆಮ್ಮ ನೀನು ಅಳದೀರೆ। ವಡ್ಡಗೆರೆ
ಕಿಚ್ಚೀನ ಕೊಂಡ ನಮಗಾದಾವು[೧೪]

ತನ್ನಲ್ಲಿ ನೋವು ತುಂಬಿದ್ದರೂ ಕೊಟ್ಟ ಕೊಂಡ ಮನೆಯ ಬೆಳಗುತ್ತೇನೆಂಬ ಮಾತುಗಳನ್ನು ಅವಳು ತನ್ನ ತಾಯಿ, ತಂದೆ, ತನ್ನವರ ಸಮಾಧಾನಕ್ಕೆ ಆಡುತ್ತಾಳೆಯಾದರೂ ಅವರಾರ ಮಾತಿಗೂ ಅವಳೂ ಕಿವಿಗೊಡದೆ ತನ್ನ ಪ್ರಾಣ ತ್ಯಜಿಸುವುದು ಅವಳು ಸಮಾಜದ ವಿರುದ್ಧ ಎತ್ತುವ ಪ್ರತಿರೋಧವೇ ಸರಿ. "ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟ"ವೆಂಬಂತೆ ಹೆಣ್ಣಾದವಳು ಪ್ರಾಣ ಕಳೆದುಕೊಳ್ಳುವ ಸಂದರ್ಭವನ್ನು ಹಬ್ಬವೆಂದು ಭಾವಿಸಿ ಜನರು ಆಚರಿಸುತ್ತಿದ್ದರು.

ಅಂಗಾಲು ಉರಿದಾವೆ ಅಂಗ್ಯೆಯುರಿದಾವೆ
ಉಂಗುರದ ಬೆಟ್ಟು ಉರಿದಾವೆ। ನಾಗಮ್ಮನ
ಸಂಗಾತದಿಂದಾಕ ತಿರುವ್ಯಾರೆ[೧೫]

ಈಗಲೂ ಗಂಡ ಸತ್ತ ನಂತರ ಅವನನ್ನು ಊಳುವಾಗಲೋ, ಸುಡುವಾಗಲೋ, ಕೈಬಳೆ, ತಾಳಿ, ಕಾಲಂದಿಗೆ, ಮುಡಿದ ಹೂ, ಕುಂಕುಮ ಮೊದಲಾದ ಮಂಗಳಕರ ಸಂಕೇತದ ವಸ್ತುಗಳನ್ನು ತೆಗೆಸಿ ವೈಧವ್ಯದ ಪಟ್ಟಕಟ್ಟಿ ಅವಳನ್ನು ಅಮಂಗಳ ಮಾಡುವ ಪದ್ಧತಿ ಜೀವಂತವಾಗಿಯೇ ಉಸಿರಾಡುತ್ತಿದೆ.

ಮಹಾಸತಿ ಕಾಟವ್ವನ ಗೀತೆಯು ಚಿತ್ರದುರ್ಗದ ಹಲವು ಭಾಗಗಳಲ್ಲಿ ಪ್ರಚಲಿತದಲ್ಲಿದ್ದು, ಕಾಟವ್ವನ ಕೊಂಡದ ಸ್ಥಳ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಹುಲಿಕುಂಟೆಯಲ್ಲಿ ಕಂಡುಬರುತ್ತದೆ. ಈಕೆಯ ಲಗ್ನದ ಬಗ್ಗೆಯಾಗಲೀ, ಪತಿ ಮುತ್ತಣ್ಣನ ಮರಣಕ್ಕೆ ಕಾರಣವಾಗಲೀ ನಮಗೆ ದೊರೆಯುವುದಿಲ್ಲ. ಇವಳ ತಂದೆ ಕುರಿಯಣ್ಣ, ತಮ್ಮ ಕಾಟಣ್ಣ, ಮೈದುನ ಸಿರಿಗೊಂಡ ಗೌಡ ಎಂಬುದಾಗಿ ತಿಳಿದುಬರುತ್ತದೆ. ಈ ಗೀತೆಯನ್ನು ಸಿರಿಯಜ್ಜಿ ಹಾಡಿದ್ದಾಳೆ.

ಕಾಟವ್ವ ಪತಿಯ ಮರಣದ ತರುವಾಯ ತಾನು ಸಾಯಲೆಂದು ಬಯಸುವ ಕಾಲಕ್ಕೆ ಅಲ್ಲಿನ ಪ್ರಾಂತ್ಯದ ಆಳ್ವಿಕೆ ಮಾಡುವ ದೊರೆಯ ಅಪ್ಪಣೆಯ ಅಗತ್ಯವಿದ್ದಂತೆ ತೋರುತ್ತದೆ. ತಾನು ಕೊಂಡಕ್ಕೆ ಹೋಗಬೇಕೆಂದು ಹಠ ಹಿಡಿದಂತೆ ಕಾಣಿಸುತ್ತದೆ. ಭವಿಷ್ಯ ಆಗ ಆಳ್ವಿಕೆ ಮಾಡುತ್ತಿದ್ದ ಅರಸ ಈ ವ್ಯವಸ್ಥೆಗೆ ಮನ್ನಣೆ ಕೊಡದವನೆಂದು ಈ ಕೆಳಗಿನ ಸಾಲುಗಳನ್ನು ಗಮನಿಸಿದರೆ ವ್ಯಕ್ತವಾಗುತ್ತದೆ.

ಕಿಚ್ಚು ಕೊಡುವಾಕ ವೊಟ್ಯಾಪ್ಪ ನಾಯಕನಾಣೆ
ಪಚ್ಚೆ ಕಲ್ಲಾಣೆ ಪ್ರಜೆಯಾಣೆ। ಮುಮ್ಮಡಿ ಬೂಪ್ನ
ರಟ್ಟೆ ಮ್ಯಾಲಾಡೋ ಮಗನಾಣೆ॥[೧೬]

ಅಲ್ಲದೆ ರಾಜನ ವಿರೋಧ ಆ ಸಮಯಕ್ಕೆ ಇರಬಹುದಾದರೂ ಸಮಾಜ ಸಂಪ್ರದಾಯದ ಕಪಿಮುಷ್ಠಿಯಿಂದ ಹೊರಬಂದಿರಲಿಲ್ಲ. ಆ ಕಾರಣಕ್ಕೆ ಕಾಟವ್ವ ಕೊಂಡಕ್ಕೋಗುವ ದೃಢನಿರ್ಧಾರವನ್ನು ತೆಗೆದುಕೊಂಡಿರಬೇಕು. ಕಾರಣ ಯಾವುದೇ ಸಮಾಜ ದಿಢೀರನೆ ಬದಲಾಗಲು ಸಾಧ್ಯವಿಲ್ಲ. ಬದಲಾವಣೆ ಸಮಾಜ, ಪ್ರಕೃತಿಯ ನಿಯಮವಾದರೂ ಸಹ ಅದು ಘಟಿಸಲು ನೂರಾರು ವರ್ಷಗಳೇ ಕಳೆಯಬೇಕು. 'ಬಪ್‌ಲೇಸ್ಪ್ ಟೆವಾಶ್ನೀ' ಎಂಬವರು ವಿವರಿಸುವ ಪ್ರಸಂಗವೊಂದನ್ನಿಲ್ಲಿ ನೆನೆಯಬಹುದು. "ಡಚ್ಚನೊಬ್ಬ ಆ ಸ್ಥಳದ ಅಧಿಪತಿಯಾಗಿದ್ದು, ಡೇರೆಯೊಳಗೆ ಕುಳಿತಿರುವಾಗ ೨೨ ವರ್ಷದ ಯುವತಿಯೊಬ್ಬಳು ಚಿತೆಯೇರಲು ಅಪ್ಪಣೆ ಕೇಳಲು ಬಂದಾಗ ಅವನು ಅವಳ ಮನಸ್ಸನ್ನು ಪರಿವರ್ತನೆ ಮಾಡಲು ಬಯಸಿದಾಗ ಅವಳ ನಿರ್ಧಾರ ಮತ್ತಷ್ಟು ಗಟ್ಟಿಯಾಗಿ ಪಂಜಿಗೆ ಕೈಯಿಟ್ಟು ಸುಟ್ಟುಕೊಂಡಳು. ಆಗವಳ ಮುಖದಲ್ಲಿ ನೋವಿನ ಛಾಯೆಯೇ ಇರಲಿಲ್ಲವಂತೆ. ಕಿಚ್ಚುಕೊಡದಿದ್ದರೆ ಕಿತ್ತುಕಂಬೆ ನಾಲಿಗೆ.[೧೭]

ಭವಿಷ್ಯ ಅವಳ ಆಂತರ್ಯ ತನ್ನ ಮನಸ್ಸಿನ ಬದಲಾವಣೆಗಿಂತ ಸಮಾಜದ ಜನರ ಮನಸ್ಸಿನ ಬದಲಾವಣೆ ಬಯಸಿ ಅವಳ ನಿರ್ಧಾರ ಮತ್ತಷ್ಟು ಗಟ್ಟಿಯಾಗಿರಬೇಕೆನ್ನಿಸುತ್ತದೆ. ಆ ಪ್ರಾಂತ್ಯವನ್ನಾಳುವ ರಾಜ ಪತ್ತಲ ಗಂಧದ ಚಕ್ಕೆ, ಕುಂಕುಮ ಕಳಿಸಿದ ನಂತರವೇ ಸತಿಕೊಂಡಕ್ಕೆ ಸಿದ್ಧವಾಗುತ್ತಿದ್ದಳು. ಕೆಲವೊಮ್ಮೆ ಈ ಆಚರಣೆ ಅರಸನ ಅಪ್ಪಣೆಯಿಂದಲೂ ಬಂದಿರಬೇಕೆನ್ನಿಸುತ್ತದೆ. ಅವನೂ ಸಹ ಸಮಾಜದಿಂದೇನು ಹೊರತಾಗಿಲ್ಲ. ಅಧಿಕಾರದ ಗದ್ದುಗೆಯಲ್ಲಿರುವ ಪಟ್ಟದ ಅರಸನ ಮಾತನ್ನು ಯಾರೂ ಸಮಾಜದಲ್ಲಿ ಕಡೆಗಣಿಸುವಂತಿರಲಿಲ್ಲ.

> ಅರುಗೀದ ವಲದಾಗ ಸುರವೊನ್ನೆ ಮೆಳೆಯಾಗ
> ಅರುದೇ ಬರುತಾನೆ ಅವರಣ್ಣ। ಕಾಟಣ್ಣ
> ಅರುವತ್ತು ಕೊಟ್ಟೇನು ನಿಲುತಂಗಿ
> ಅರವತ್ತು ಕೊಟ್ಟಾರೆ ತುರುಬೀನ ಬೆಲೆಯಿಲ್ಲ
> ದುಗಾವಾಳೋರ ಮಗದೂರ
> ದುರುಗಾವಾಳೋರ ಮಗದೂರ। ವೋಗಲುವಾಳ
> ತಡಿಯಾದೆ ಕಿಚ್ಚ ಕೊಡಿರಣ್ಣ॥
> ಆಲಾದ ಮರದ ಸೋವಿಟ್ಟು ಮೆರೆಮೋಳೆ
> ತಾಯೀಯು ಬಂದವಳೆ ಮೊಕತೋರೆ॥
> ತಾಯಿ ಬಂದಾರೆ ಬರಲಿ ವಾಲೆ ತಂದರೆ ತರಲಿ
> ರಾಯವುಲಿಕುಂಟೆ ಮೂಡಾಲ। ದಿನ್ನಾಗ
> ಗಾಜೀನ ಕೊಂಡವು ನಮಗವೆ.[೧೮]

ತಂದೆ, ತಾಯಿ, ಬಂಧು ಬಳಗವೆಷ್ಟು ಬೇಡಿಕೊಂಡರೂ ಅವಳು ಅಷ್ಟೊಂದು ಕಲ್ಲಾಗುತ್ತಿದ್ದುದಕ್ಕೆ ಕಾರಣವೇನು? ತನ್ನನ್ನು ಹೆತ್ತು ಹೊತ್ತು ಸಾಕಿದವರ ಮುಖವನ್ನು ಆಕೆ ಯಾಕೆ ನೋಡಲು ಬಯಸುವುದಿಲ್ಲ? ಇವೆಲ್ಲಕ್ಕೂ ಉತ್ತರವಿಷ್ಟೆ. ಇಲ್ಲಿ ಬರುವ ತಾಯಿಯಾಗಲೀ ತಂದೆಯಾಗಲೀ

ಅತ್ತೆ ಮಾವಂದಿರಾಗಲೀ, ಸೋದರರಾಗಲೀ ಇವರೆಲ್ಲರು ಸಂಪ್ರದಾಯ, ಗೊಡ್ಡು ಆಚರಣೆಗಳು, ಕಟ್ಟುಪಾಡುಗಳ ಪ್ರತಿನಿಧಿಗಳು ಎಂಬುದು ಸ್ಪಷ್ಟವಾಗಿರುವ ಸಂಗತಿಯೇ ಸರಿ.

ನಿಂಬೀಯ ಅಣ್ಣ ಅಂಬಾರ ಕೀಡಾಡುತ
ಬಂದೀಯ ತೋಳ ತಿರುವೂತ। ಮುತ್ತಣ್ಣಾನ
ರಂಬೆ ಕೊಂಡಾಕ ನಡೆದಾಳೆ
ಪುರುಸಾ ನಿಲ್ಲದೋಳ ಸರಸಾವ ನೋಡೀರೆ
ಅರಿಸಿಣದೆ ಬಾವಿಯವಳ ಮನೆಮುಂದೆ। ಕಾಟವ್ವ
ಪುರುಸಾನಿದ್ದಾರೆಸ್ಟು ಮೆರೆದೀಯೆ॥[೧೯]

ಸಾಮಾನ್ಯವಾಗಿ ಸತಿ ಹೋಗುವ ಸ್ತ್ರೀಯರೆಲ್ಲ ಸರ್ವಾಲಂಕಾರ ಭೂಷಿತರಾಗಿ ತುರುಬು ಕಟ್ಟಿ ಅದಕ್ಕೆ ಕೇದಗೆ ಹೂ ಮುಡಿದು, ಅರಿಶಿಣ ಗಂಬಿಸೀರೆ ಉಟ್ಟು, ಅಂಗೈಯಲ್ಲಿ ಉತ್ತುತ್ತಿ, ನಿಂಬೆಹಣ್ಣು, ಕಾಕಿಯಹಣ್ಣು ಹಿಡಿದು, ಮೈತುಂಬ ಒಡವೆಗಳನ್ನು ಧರಿಸಿ, ಅವೆಲ್ಲವನ್ನು ಕೊಂಡಕ್ಕೆ ಹಾಕುವ ಮುನ್ನ ಅಲ್ಲಿ ಸುತ್ತಲೂ ನೆರೆದಿರುವ ಜನರಿಗೆ ಎಸೆದು ಅಗ್ನಿ ಪ್ರವೇಶಿಸುತ್ತಿದ್ದಳು. ಕೆಲವರು ಬೆಂಕಿಗೆ ಹೆದರಿ ಓಡಿ ಹೋಗುತ್ತಿದ್ದರೆಂದು ಕೊಂಡದ ಸುತ್ತ ತೆರೆಯನ್ನಾಕುವ ಪದ್ಧತಿ ರೂಢಿಯಲ್ಲಿತ್ತು. ಜನಪದರು ಕಾಟಮ್ಮನ ಮೂಲಕ ಈ ತೆರೆಯ ಬಗ್ಗೆ ಹೀಗೆ ಹೇಳಿಸುತ್ತಾರೆ.

ವೋಡಿ ವೋದಾಳೆಂದು ರಾಡುಗಳ ಆಕಿಸ್ದ
ವೋಡಿ ಪೋಗೋರ ಮಗಳಲ್ಲ। ಸಿರಿಗೊಂಡ ಗೌಡ
ರಾಡಾ ಬಾಗುಲ ತಗುಸಯ್ಯ॥
ಕದ್ದು ವೋದಾಳೆಂದು ದಿಡ್ಡಿಗಳ ಕಟ್ಟಸ್ತ
ಕದ್ದು ವೋಗೋರ ಮಗಳಲ್ಲ। ಸಿರಿಗೊಂಡ ಗೌಡ
ದಿಡ್ಡ ಬಾಗುಲ ತಗುಸಯ್ಯ॥
ಕಿಚ್ಚಿ ಗಂಜ್ಯಾಳೆಂದು ಅಚ್ಚಡದ ತೆರೆ ಕಟ್ಟಿಸ್ತ
ಕಿಚ್ಚಿಗಂಜೋರ ಮಗಳಲ್ಲ। ಸಿರಿಗೊಂಡ ಗೌಡ
ಅಚ್ಚಡದ ತೆರೆಯಂ ತಗುಸಯ್ಯ॥[೨೦]

ಪ್ರಾರಂಭದಲ್ಲಿ ಸಮಾಜದ ಅಂಥ ಆಚರಣೆಯನ್ನು ಸಹಿಸಲಾರದೆಯೇ ಪರಪುರುಷರಿಂದ ತಮ್ಮ ಶೀಲ ರಕ್ಷಣೆಯನ್ನು ಮಾಡಿಕೊಳ್ಳುವ ಸಲುವಾಗಿಯೋ ಅಲ್ಲಲ್ಲಿ ಒಂದೆರಡು ಪ್ರಸಂಗಗಳು ನಡೆದವು. ನಂತರ ಇದರ ವೈಭವೀಕರಣದ ಆಚರಣೆ ವಿಜೃಂಭಣೆಯಿಂದಲೇ ನಡೆದುಬಂದವು. ಬರಬರುತ್ತ ಬೆಂಕಿಗೆ ಹೆದರಿದ ಹೆಣ್ಣುಮಕ್ಕಳು ಸಮಾಜದ ಒತ್ತಡಕ್ಕೆ ಮಣಿದು, ಬೆಂಕಿಯವರೆವಿಗೂ ಬಂದು, ಅಲ್ಲಿಂದ ಹೆದರಿ ಹಿಂಜರಿದಾಗ ಅವರನ್ನು ಬಲವಂತದಿಂದ ಬೆಂಕಿಗೆ ಹಾಕುತ್ತಿದ್ದರೆಂಬುದಕ್ಕೆ ಕೊಂಡದ ಬಳಿಯ ತೆರೆ, ಊರಿನ ದಿಡ್ಡಿಗಳು ಸಾಕ್ಷಿಯಾಗಿ ನಿಂತಿವೆ. ಬದುಕಬೇಕೆಂದು ಬಯಸಿದವರಿಗೂ ಈ ಹೀನಾಯ ಸಮಾಜ ಅಂತಹ ಹೆಣ್ಣುಮಕ್ಕಳಿಗೆ ಅವಕಾಶ ಕೊಟ್ಟಂತೆ ಕಾಣಿಸುವುದಿಲ್ಲ. ಒಟ್ಟಾರೆ ಈ ಮಹಾಸತಿ ಆಚರಣೆಯೇ ಪುರುಷನು ನಿರ್ಮಿಸಿದ ಕುತಂತ್ರದ ಹುನ್ನಾರವೇ ಸರಿ.

ಮಧ್ಯಯುಗದ ಉತ್ತರದ ರಜಪೂತರಲ್ಲಿದ್ದ ಜೋಹಾರ ಪದ್ಧತಿ ಕಾಲಕ್ರಮೇಣ ದಕ್ಷಿಣಕ್ಕೂ ಆವರಿಸಿತು. ಮೇಲಿನ ಎಲ್ಲ ಕಥನ ಗೀತೆಗಳು ನೋವು, ವಿಶಾದಕ್ಕೆ ವಿರೋಧವೆಂಬಂತೆ ಕಾಣಿಸುತ್ತವೆ. ಆದರೂ ನಿರ್ಲಿಪ್ತವಾಗಿ ವಿರೋಧಿಸುವ ನಿರೂಪಣಾ ಶೈಲಿಯಿಂದಲೇ ಹೆಣೆದು ಕೊಂಡಿವೆ. ಉತ್ತರದ ಶ್ರೀಮಂತರಲ್ಲಿ ಜರುಗುತ್ತಿದ್ದ ಒಂದೆರಡು ಪ್ರಸಂಗಗಳು ದಕ್ಷಿಣದ ಕೃಷಿ ಶ್ರಮವರ್ಗದ ಕುಟುಂಬಗಳಲ್ಲಿಯೂ ಬೆಳೆದು ಸಮಸ್ಯೆಯ ಮಡುವಾಗಿ ನಿಂತುಬಿಟ್ಟವು. ಅದರಲ್ಲಿಯೂ ಶೂದ್ರ ಸಮುದಾಯಗಳಲ್ಲೇ ಹೆಚ್ಚಿನದಾಗಿ ಈ ಆಚರಣೆಗಳು ಕಂಡುಬರುತ್ತವೆ. ದಹನವಾಗುವ ಹೆಣ್ಣುಗಳು ಪ್ರಭುತ್ವ ಮತ್ತು ಸಾಂಸ್ಕೃತಿಕ ಆಚರಣೆ, ನಂಬಿಕೆಗಳ ವಿರುದ್ಧ ನಿರ್ಲಿಪ್ತ ವಿರೋಧ ವ್ಯಕ್ತಪಡಿಸುತ್ತಾರೆ. ಹೆಣ್ಣಿನ ಮನಸ್ಸಿನ ಆಂತರ್ಯವನ್ನು ಅರ್ಥೈಸಿಕೊಂಡರೆ ಅವಳ ಒಳ ಆಶಯವೇನೆಂಬುದು ಅರಿವಾಗುತ್ತದೆ. ಸಹಗಮನ ಸ್ವರ್ಗದ ಕಲ್ಪನೆಗಳೆಲ್ಲವೂ ಪುರುಷ ಸ್ತ್ರೀಯರನ್ನು ಅಧೀನರನ್ನಾಗಿಸಿಕೊಳ್ಳಲು ಹೆಣೆದ ತಂತ್ರಗಳೆನ್ನಿಸುತ್ತದೆ. ಆದರೆ ಪುರುಷ ನಿರ್ಮಿತ ಸತಿ ಆಚರಣೆಯ ಬಗೆಗೆ ಹೆಣ್ಣಿನ ಸೂಕ್ಷ್ಮ ಪ್ರತಿಭಟನೆ ಅವಳ ಮಾತುಗಳಲ್ಲೇ ಹುದುಗಿರುತ್ತದೆ.

೫.೨. ಸ್ತ್ರೀ ಬಲಿದಾನ

ಮಹಾಸತಿ ಆಚರಣೆಯೇ ಅಲ್ಲದೆ ಸಮಾಜದಲ್ಲಿ ಪುರುಷ ನಿರ್ಮಿತ ಹೆಣ್ಣುಮಕ್ಕಳ ಆತ್ಮ ಬಲಿಗಳು ಹಲವು ಮುಖಗಳಲ್ಲಿ ಸಾಗುತ್ತಲೇ ಬಂದಿವೆ. ಕರ್ನಾಟಕದಲ್ಲಿ ಕೊಂಡಕ್ಕೆ ಬಲಿಯಾಗುವ ಕಥೆಯಂತೆ ಸಾಮಾಜಿಕ ಕಾರ್ಯಗಳಿಗಾಗಿ ನಿರ್ಮಿಸಿದ ಕೆರೆ, ಕಟ್ಟೆ, ಬಾವಿ ಮೊದಲಾದವುಗಳಿಗೂ ಸಹ ಹೆಣ್ಣನ್ನೆ ಬಲಿಕೊಡಲಾಗುತಿತ್ತು. ಪ್ರಪಂಚದಾದ್ಯಂತ ಹೆಂಡತಿ ಸತ್ತರೆ ಗಂಡನನ್ನು ಬಲಿ ಕೊಟ್ಟ ಪ್ರಸಂಗಗಳಾಗಲೀ ಸಾರ್ವಜನಿಕರ ಹಿತಕ್ಕಾಗಿ ನಿರ್ಮಿಸಿದ ಕಟ್ಟಡಗಳಿಗೆ ಪುರುಷರನ್ನು ಬಲಿಕೊಟ್ಟ ಪ್ರಸಂಗಗಳಾಗಲೀ ಕಾಣಿಸಿಕೊಳ್ಳುವುದಿಲ್ಲ. ಆದರೆ ಹೆಣ್ಣನ್ನು ಮಾತ್ರ ಎಲ್ಲೆಂದರಲ್ಲಿ ಬಳಸಿಕೊಂಡು ಬಂದಿದ್ದಾರಲ್ಲದೆ, ಅನಾದಿಕಾಲದಿಂದಲೂ ಅವಳನ್ನು ಒಂದು ವಸ್ತುವಂತೆ ಪರಿಭಾವಿಸಿಕೊಂಡು ಬಂದಿರುವುದೇ ಇದಕ್ಕೆ ಕಾರಣವೆನ್ನಿಸುತ್ತದೆ.

ಸಾರ್ವಜನಿಕರ ಹಿತಕ್ಕಾಗಿ ಹೆಣ್ಣನ್ನು ಬಲಿಕೊಟ್ಟ ಗೀತೆಗಳು ಕರ್ನಾಟಕದಾದ್ಯಂತ ಕಂಡುಬರುತ್ತವೆ. ಆದರೂ ಚಿತ್ರದುರ್ಗದ ಸುತ್ತಲಿನ ಭಾಗಗಳಲ್ಲಿ ಧರಣಿಯಮ್ಮನ ಬಲಿದಾನ, ಕೆರೆಹೊನ್ನಮ್ಮನ ಹಾಡುಗಳು ವ್ಯಾಪಕ ಪ್ರಚಾರದಲ್ಲಿವೆ. ಮದಗದ ಕೆಂಚವ್ವ, ಅಣಜಿ ಹೊನ್ನಮ್ಮ, ಒಡ್ಡರ ಬೋಯಿ, ಕುಣಿಗಲು ಕೆರೆ, ಕೆರೆಗೆ ಹಾರ ಇವೆಲ್ಲವೂ ಒಂದೇ ವಸ್ತುವನ್ನೊಳಗೊಂಡ ಗೀತೆಗಳಾಗಿವೆ. ಇವೆಲ್ಲ ಕರ್ನಾಟಕದ ಹಲವು ಭಾಗಗಳಲ್ಲಿ ಪ್ರಚಲಿತದಲ್ಲಿವೆ. ಮಹಾಸತಿ ಆಚರಣೆಯಂತೆ ಹೆಚ್ಚು ಸಂಪ್ರದಾಯ ರೂಢಿಯಲ್ಲಿರುವುದು ವಿರಳ. ಕಾರಣ ಊರಿಗೊಂದು ಮಾತ್ರ ಕೆರೆ ನಿರ್ಮಿಸಲು ಸಾಧ್ಯ. ಹಾಗಾಗಿ ಕೆರೆಗೊಂದು ಹೆಣ್ಣನ್ನು ಬಲಿಕೊಡಲಾಗುತಿತ್ತು. ಆದರೆ ಸತಿ ಆಚರಣೆಯಲ್ಲಿ ಸತ್ತ ಪುರುಷರ ಪತ್ನಿಯರೆಲ್ಲರನ್ನು ಬಲಿಕೊಡಲಾಗುತಿತ್ತು.

ಪುರುಷ ಪ್ರಧಾನ ಸಮಾಜದ ಬಿಗಿ ಮುಷ್ಟಿಯಲ್ಲಿ ಸಿಕ್ಕು ತತ್ತರಿಸಿ ಹೋಗುತ್ತಿರುವವರು ಅಮಾಯಕ ಹೆಣ್ಣುಗಳು. ಕೆರೆ ಅಥವಾ ಕೋಟೆ ಮೊದಲಾದವುಗಳನ್ನು ನಿರ್ಮಿಸಿದಾಗ ಅವು ಹೆಣ್ಣನ್ನು ಅದರಲ್ಲೂ ಗರ್ಭಿಣಿ ಸ್ತ್ರೀಯರನ್ನು ಬಲಿಕೇಳುತ್ತಿದ್ದವು. ನಮ್ಮ ಸಮಾಜ ಹುಟ್ಟು ಹಾಕಿಕೊಂಡ ಸಂಪ್ರದಾಯಗಳು ಪುರುಷರ ಪರವಾಗಿಯೇ ನಿಲ್ಲುತ್ತವೆಯೇ ವಿನಃ ಹೆಣ್ಣಿಗೆ ಅನುಕೂಲಕರವಾಗಿಲ್ಲ. ಕೆರೆ, ಕೋಟೆಗಳು ಬಲಿಕೇಳುವುದು 'ಸೊಸೆಯನ್ನೆ ವಿನಃ ಮಗನನ್ನಲ್ಲ', "ಮಗಸತ್ತರೆ ಮನೆ ಹಾಳು ಸೊಸೆ ಸತ್ತರೆ ಸೋಬಾನ" ಎಂಬ ಪ್ರಸಿದ್ಧ ಗಾದೆ ಮಾತೊಂದಿದೆ. ಈ ಮಾತು ಕೆರೆ ಹೊನ್ನಮ್ಮನ ಗೀತೆಯಲ್ಲಿಯೂ ಬರುತ್ತದೆ. ಹೆಣ್ಣಿನ ವಿಷಯದಲ್ಲಿ ಜನನದಿಂದ ಹಿಡಿದು ಮರಣದವರೆಗೂ ಸಮಾಜ ತಾತ್ಸರ ಮಾಡುತ್ತಲೇ ಬಂದಿದೆ.

ಪ್ರಸ್ತುತ ಧರಣಿಯಮ್ಮನ ಬಲಿದಾನ ಗೀತೆಯನ್ನು ದಾನಮ್ಮ ಎಂಬುವವಳು ಹಾಡಿದ್ದು, ಚಿತ್ರದುರ್ಗದ ಸುತ್ತಮುತ್ತಲೂ ಈ ಗೀತೆ ಜನಪ್ರಿಯತೆಯನ್ನು ಹೊಂದಿದೆ. ಈಕೆ ಯಾವಾಗ ಹೇಗೆ ಬಲಿಯಾದಳೆಂಬ ವಿವರಗಳಿಲ್ಲ. ಧರಣಿಯಮ್ಮನ ಮಾವ ಹೇಮರೆಡ್ಡಿ ಊರಿನ ಸುತ್ತ ವಡ್ಡರ ದ್ಯಾಮಣ್ಣನಿಂದ ಕೋಟೆ ಕಟ್ಟಿಸಲು ಯೋಚಿಸಿದ. ಕೋಟೆ ಕಟ್ಟಲು ಪ್ರಾರಂಭಿಸಿದಾಗ ಅದು ಎಷ್ಟು ಕಟ್ಟಿದರೂ ಕುಸಿದು ಬೀಳುತಿತ್ತು. ಆಗ ಹೊತ್ತಿಗೆ ತೆಗೆದು ನೋಡಿದಾಗ ಅದು ಹೆಣ್ಣನ್ನು ಬಲಿ ಕೇಳಿತು. ಆಗ ಧರಣಿಯಮ್ಮನನ್ನು ಬಲಿಕೊಡಲು ನಿಶ್ಚಯಿಸಿದರು. ಗೋಡೆ ಯಾವುದೋ ಕಾರಣಕ್ಕೆ ಕುಸಿದಿರಬಹುದು. ಅದು ಬಲಿಕೇಳಿತೆಂದು ಹೆಣ್ಣನ್ನು ಬಲಿಕೊಡುವುದು ಮೂರ್ಖತನದ ಪರಮಾವಧಿಯೇ ಸರಿ. ಇದರ ಹಿಂದೆ ಪುರುಷ ಇನ್ನೊಂದು ಹೆಣ್ಣನ್ನ ವಿವಾಹವಾಗುವ ಹಂಬಲವಿರುತಿತ್ತೆ? ಎನ್ನಿಸುತ್ತದೆ. ಕೆರೆಗೋ ಕೋಟೆಗೋ ಬಲಿಯಾಗುವ ಎಲ್ಲಾ ಹೆಣ್ಣುಗಳು

ಕಂದನೆತ್ತುವರಿಲ್ಲ, ಕಂದಗಳ ತೂಗುವರಿಲ್ಲ
ಆರಂಬದಾ ಬದುಕು ಬಲು ದೊಡ್ಡದು ತಾಯಿ...[೨೧]

ತಮ್ಮ ತಂಗಿಯರನ್ನು ತನ್ನ ಗಂಡನಿಗೆ ವಿವಾಹವಾಗುವಂತೆ ಭಾಷೆ ತೆಗೆದುಕೊಂಡೇ ಬಲಿಯಾಗುತ್ತಾರೆ. ತನ್ನ ಮಗುವನ್ನವಳು ಬಿಟ್ಟು ಸಾಯುವುದೆಂದರೆ, ಅದು ನಿಜಕ್ಕೂ ಅಸಾಧ್ಯಕರ ಸಂಗತಿ. ಆದರೆ ಅವಳು ಬಲಿಯಾಗದಿದ್ದರೆ ಸಾಯುವವರೆಗೂ ಸಮಾಜದ ಜನರ ನಿಂದನೆಗೆ ಗುರಿಯಾಗುತ್ತಿದ್ದಳು. ಈ ಕಾರಣಕ್ಕವಳು ಬಲಿಯಾಗುವುದೇ ಲೇಸೆಂದು ವ್ಯವಸ್ಥೆಯನ್ನು ತಾನು ಸಾಯುವುದರ ಮೂಲಕವೇ ಪ್ರತಿರೋಧಿಸಿ ಬಲಿಯಾಗುತ್ತಾಳೆನ್ನಬಹುದು.

ಇತರ ಕಥನ ಗೀತೆಗಳಲ್ಲಿ ಹೆಣ್ಣಿನ ಚಿತ್ರಣ

ಚಿತೆಗೆ ಉರಿಯಾದವರ, ನೀರು ಪಾಲಾದವರ ಕಥನ ಗೀತೆಗಳಲ್ಲಿ ಅಲೌಖಿಕ ಅಂಶಗಳು ಬೆರೆತು ಹೆಣ್ಣನ್ನು ಮೋಡಿ ಮಾಡಿ ಬಲಿ ತೆಗೆದುಕೊಂಡರೆ, ಲೌಖಿಕ ಅಂಶಗಳು ಪ್ರಧಾನ ಪಾತ್ರವಹಿಸುವ ಕಥನಗೀತೆಗಳಲ್ಲಿ ಸಮಾಜದಲ್ಲಿ ಬಹು ಹಿಂದಿನಿಂದ ರೂಢಿಗತವಾಗಿ ಬೇರು

ಬಿಟ್ಟುಕೊಂಡಿರುವ, ಹೆಣ್ಣು ಮಕ್ಕಳ ಪಾಲಿಗೆ ನೈತಿಕ ಮೌಲ್ಯಗಳೆನಿಸಿರುವ ಪಾತಿವ್ರತ್ಯ, ಪತಿಭಕ್ತಿ, ಮನೆತನದ ಗೌರವ, ಪ್ರತಿಷ್ಠೆ, ಸತ್ಯಕ್ಕೆ ಜಯವೆಂಬ ಅಂಶಗಳಿಗೆ ಸ್ತ್ರೀ ಬಲಿಯಾಗದೆ ಉಳಿದಿಲ್ಲವೆಂಬುದು ಗುಣಸಾಗರಿ, ಸತಿ ಚೆನ್ನಮ್ಮ, ವಲ್ಲಣದೇವಿ, ರೇಣುಕ ಎಲ್ಲಮ್ಮ, ಕಾಡು ಸಿದ್ಧವ್ವ ಗೀತೆಗಳಿಂದ ವ್ಯಕ್ತವಾಗುತ್ತದೆ.

ಹೆಣ್ಣಾದವಳು ಸಮಾಜದಲ್ಲಿ ಪುರುಷರಿಂದ ಮತ್ತು ಪುರುಷ ಪ್ರಧಾನ ಸಮಾಜ ಸೃಷ್ಟಿಸಿದ ಅದರ ಪ್ರತಿಬಿಂಬದಂತಿರುವ ಅತ್ತೆ, ಇವಳೂ ಸಹ ಹೆಣ್ಣಾದರೂ ಇವಳು ಪುರುಷ ವ್ಯವಸ್ಥೆಯ ಅಧಿಕಾರಿಣಿ, ಮತ್ತಿವಳ ಕುಟುಂಬದ ಸದಸ್ಯರಿಂದ ಹತ್ತು ಹಲವು ಮುಖಗಳಲ್ಲಿ ಸಮಸ್ಯೆಗಳನ್ನು ಎದುರಿಸುವ ಪರಿ, ಅವಳ ಬವಣೆ, ಅವಳು ಅನುಭವಿಸುವ ಹಿಂಸೆಯ ರೋಧನೆ, ಕ್ರೌರ್ಯಗಳೆಲ್ಲ ಕಥನಗೀತೆಗಳಲ್ಲಿ ಮಡುಗಟ್ಟಿ ನಿಂತಿವೆ.

ವಲ್ಲಣದೇವಿ ಗೀತೆಯಲ್ಲಿ ವಲ್ಲಣದೇವಿ ನೀರನ್ನು ತರಲೆಂದು ಹೋದ ಸಂದರ್ಭದಲ್ಲಿ ಅವಳ ತುರುಬಿನ ಸೌಂದರ್ಯ, ರೂಪ ಲಾವಣ್ಯವನ್ನು ಕಂಡ ಶ್ರೀಮಂತ ಪುರುಷನೊಬ್ಬ

> ನಿಮ್ಮೋರು ಕಾಣದಾಂಗೆ ನಮ್ಮೋರು ಕಾಣದಾಂಗೆ
> ನಾರಿ ನೀ ಮಲಗೊ ನೆಲೆಯೇಳ॥[೨೨]

ಎಂದು ಕೇಳುತ್ತಾನೆ. ಆಗವಳು ತನ್ನ ಮನೆ ಊರಿನ ಮಧ್ಯೆಯಿದ್ದು, ಅದನ್ನು ಕಾಯುವ ಪುರುಷರಿದ್ದು, ಮನೆಯ ತುಂಬ ಸದಸ್ಯರಿರುವ ವಿಚಾರವನ್ನವನಿಗೆ ತಿಳಿ ಹೇಳುತ್ತಾಳೆ. ಇದಷ್ಟೇ ಸಂಗತಿ ವಲ್ಲಣದೇವಿಯ ಗಂಡನಿಗೆ ತಿಳಿದು ಮನೆಯಿಂದಟ್ಟುತ್ತಾನೆ. ಅಲ್ಲಿಂದವಳು ತವರಿಗೆ ಹೋದರೆ ಅಲ್ಲಿಂದ ಮತ್ತೆ ಗಂಡನ ಮನೆಗಟ್ಟುತ್ತಾರೆ. ಅಸಹಾಯಕಳಾದ ವಲ್ಲಣದೇವಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಸಮಾಜ ಹೆಣ್ಣಿಗಷ್ಟೇ ನೈತಿಕತೆಯನ್ನು ವಿಧಿಸಿ ವಿವಾಹವಾದ ಸ್ತ್ರೀ ಪರಪುರುಷ ನೊಂದಿಗೆ ನಿಂತು ಮಾತನಾಡಿದರೂ ಅದನ್ನು ಇಂದಿಗೂ ಖಂಡಿಸುವ ಪದ್ಧತಿ ಮುಂದುವರಿದು ಕೊಂಡೇ ಬಂದಿದೆ. ಇಂದು ಸ್ವಲ್ಪ ಕಾಲ ಬದಲಾವಣೆಯಾಗಿದ್ದು, ಸಣ್ಣ ಶಂಕೆಯ ವಿಷಯ ವಿಚ್ಛೇದನ ತಲುಪುವ ಹಂತಕ್ಕೂ ಕೊಂಡೊಯ್ಯುತ್ತದೆ.

ರೇಣುಕ ಎಲ್ಲಮ್ಮ ಗೀತೆಯು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಸುತ್ತಲೂ ಪ್ರಚಲಿತದಲ್ಲಿದೆ. ಚೌಡಿಕೆ ಹಿಡಿದವರು ಈ ಗೀತೆ ಹಾಡುತ್ತಾರೆಯಾದರು ಸಂಪೂರ್ಣ ಹಾಡನ್ನು ತಿಳಿದು ಹಾಡುವವರು ಕಡಿಮೆ. ಇದರ ತ್ರಿಪದಿಯ ರೂಪವು ಪರಶುರಾಮಪುರದಲ್ಲಿ ಕಾಣಿಸಿಕೊಳ್ಳು ವುದಲ್ಲದೆ, ಪದ್ಯಗದ್ಯ ಮಿಶ್ರಣದಿಂದ ಕೂಡಿದೆ. ಉತ್ತರಕರ್ನಾಟಕದ ಕಡೆಗೆ ಹೆಚ್ಚು ಬಳಕೆಯಲ್ಲಿರುವ ಈ ಹಾಡನ್ನು ದಾನಮ್ಮ ಮತ್ತು ಈರಮ್ಮ ಹಾಡಿದ್ದಾರೆ.

ಸಂಶಯದ ಸುಳಿಗೆ ಸಿಲುಕಿದ ಹೆಣ್ಣಿನ ಜೀವನ ಕೊನೆಗೆ ಸಾವಿನೊಂದಿಗೆ ಅಂತ್ಯವಾಗುತ್ತದೆ. ಎಂಬುದು ಪುರಾಣಗಳ ಕಾಲದಿಂದ ಜನಪದರ ಕಾಲದವರೆವಿಗೂ ಮಾತ್ರವಲ್ಲ, ವಿಜ್ಞಾನ,

ತಂತ್ರಜ್ಞಾನದ ಬಳಕೆಯ ಇಂದಿನ ದಿನಗಳಲ್ಲೂ ಬದಲಾಗದೆ ಯತಾವತ್ತಾಗಿಯೇ ಹೆಮ್ಮರೋಪಾದಿಯಲ್ಲಿ ಬೆಳೆದು ನಿಂತಿದೆ. ಇದಕ್ಕೆ ಹಿಡಿದ ಕನ್ನಡಿ ಈ ಎಲ್ಲಮ್ಮನ ಕಥನ ಗೀತೆಯಾಗಿದ್ದು, ಈ ಗೀತೆಯಲ್ಲಿ ಎಲ್ಲಮ್ಮನ ಪವಾಡ, ಜೋಗತಿ ಆಚರಣೆ ಇಂದಿಗೂ ಎಲ್ಲಮ್ಮನ ಹೆಸರಿನಲ್ಲಿ ಹೆಣ್ಣು ಮಕ್ಕಳಿಗೆ ತಾಳಿಕಟ್ಟಿ ವೇಶ್ಯೆಯರಾಗಿ ಬಿಡುವ ಅಂಥ ಆಚರಣೆಗಳು, ತಂದೆ ಯಾರೆಂದು ಕೇಳಿ ಸಂಶಯಕ್ಕೊಳಗಾದ ಅವಳ ಮಗ ಪರಶುರಾಮನಿಂದ ಅವಳ ಸಾವು, ಇವೆಲ್ಲವು ಗೀತೆಯಲ್ಲಿ ಹಸಿರಾಗಿ ನಿಂತಿವೆ. ಹೆಣ್ಣಿನ ಶೀಲಶಂಕೆ, ಪಾವಿತ್ರ್ಯದ ಪರೀಕ್ಷೆ ತ್ರೇತಾಯುಗದಿಂದ ಇಂದಿನ ಕಲಿಯುಗದವರೆಗೂ ಯತಾವತ್ತಾಗಿ ಸಮಾಜಕ್ಕೆ ಅಂಟಿಕೊಂಡೇ ಸಾಗುತ್ತಿದೆ.

ಕಾಡುಸಿದ್ಧವ್ವಳ ಕಥನಗೀತೆಯು ಬಹುಪತ್ನಿತ್ವ ಸಂಸಾರದ ಗೊಂದಲ ಹೊಂದಿದ ಗೀತೆಯಾಗಿದ್ದು, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕು ಗೊರಲಕಟ್ಟೆ ಮೊದಲಾದ ಹಳ್ಳಿಗಳಲ್ಲಿ ಪ್ರಚಲಿತದಲ್ಲಿದ್ದು, ಈ ಗೀತೆಯನ್ನು ಗೊರಲಕಟ್ಟೆಯ ಹರಿಜನ ಕೇರಿಯ ಹನುಮಜ್ಜಿ ಹಾಡಿದ್ದಾಳೆ. ಇವಳೊಂದಿಗೆ ಬಂಗಾರಮ್ಮ ದನಿಗೂಡಿಸಿದ್ದಾಳೆ. ಕಾಡುಸಿದ್ಧವ್ವನ ಗೀತೆ ಉಳಿದ ಕಥನ ಗೀತೆಗಳ ಹೆಣ್ಣುಗಳಿಗಿಂತ ಸ್ವಲ್ಪ ಭಿನ್ನವಾಗಿದೆ. ಮೇಲೆ ಹೇಳಿದ ಕಥನ ಗೀತೆಗಳ ಹೆಣ್ಣುಗಳು ತಮ್ಮ ಅಂತ್ಯವನ್ನು ಸಾವಲ್ಲಿ ಕಂಡರೆ ಕಾಡು ಸಿದ್ಧವ್ವ ಕಷ್ಟ, ನಷ್ಟ, ನೋವು, ಸಂಕಟ, ಶಂಕೆ, ನಿಂದೆ, ನಿರಾದಾರಗಳನ್ನು ಅನುಭವಿಸಿದರು ಕೊನೆಯಲ್ಲಿ ಸ್ವಲ್ಪಮಟ್ಟಿಗೆ ನೆಮ್ಮದಿಯನ್ನು ಪಡೆಯುತ್ತಾಳಲ್ಲದೆ ಗೀತೆ ಸುಖಾಂತ್ಯದಿಂದ ಕೊನೆಗೊಳ್ಳುತ್ತದೆ.

ಚಿತ್ರದುರ್ಗದ ಅರಸನಿಗೆ ಐದು–ಆರು ಹೆಂಡತಿಯರಿದ್ದರೂ ಅವರಿಗೆ ಮಕ್ಕಳಿಲ್ಲದ ಕಾರಣಕ್ಕೆ ಅರಸ ಕನ್ನೆಯನ್ನು ಅರಸುತ್ತಾ ಹೋಗಿ "ಹುಟ್ಟಿದನ್ನೆರಡು ವರುಷ ನರಮನುಸಾರ ಮುಕವಾ ಕಂಡವಳಲ್ಲದ"[೨೩] ಕಾಡುಸಿದ್ಧವ್ವನನ್ನು ಅವಳ ತಂದೆಗೆ ಒಪ್ಪಿಸಿ ವಿವಾಹವಾದ. ನಂತರ ಅವಳಿಗೊಂದು ಅರಮನೆಯನ್ನು ಕಟ್ಟಿಸಿದನು. ಗರ್ಭಿಣಿಯೂ ಆದ ಅವಳು ಎರಡು ಮಕ್ಕಳಿಗೆ ಜನ್ಮ ನೀಡಿದಳು. ಆದರೆ ಅವಳ ಸವತಿಯರು ಮಕ್ಕಳನ್ನು ತಿಪ್ಪೆಗೆ ಎಸೆದು ಕಸಮರಿಗೆ ಮತ್ತು ಗುಂಡುಕಲ್ಲುಗಳನ್ನು ಅವಳ ಬಳಿಯಿಟ್ಟು, ಅರಸನಿಗೆ ತೋರಿಸಿದಾಗ ಅರಸ ಅವಳಿಂದ ಜಿಗುಪ್ಸೆ ಹೊಂದಿ ಅವಳನ್ನು ಕಾಡಿನಲ್ಲಿ ಕಡಿಯುವಂತೆ ಆಜ್ಞೆ ಮಾಡಿದ. ಮಂತ್ರಿ ಕೊಲ್ಲದೇ ಸುರಹೊನ್ನೆಯನ್ನು ಕಡಿದು ಕಡಿದ ರತ್ತ ತೋರುತ್ತಾನೆ. ಕೊನೆಗೆ ತಿಪ್ಪೆಗೆಸೆದ ಮಕ್ಕಳು ಹೂಗಾರ ಮಲ್ಲಣ್ಣನಿಗೆ ಸಿಕ್ಕು, "ಅನ್ನೆರಡು ಪಾಪ ಮಡಿಲಾಗಿಟ್ಟುಕೊಂಡು ತಣ್ಣೀರು ಮುಳುಗೋರು ನೀವು ಬೆಡಗೀರು"[೨೪] ಎಂದು ತನ್ನ ತಾಯಿಯ ಸವತಿಯರಿಗೆ ಹೇಳಿ ನಡೆದ ವೃತ್ತಾಂತವನ್ನೆಲ್ಲ ರಾಜನಿಗೆ ವಿವರಿಸಿ, ಕೊನೆಗೆ ಕಾಡಿನಲ್ಲಿದ್ದ ಸಿದ್ದವ್ವನನ್ನು ಕರೆತಂದು, ಅರಮನೆಗೆ ಸೇರಿಸಿದರೆಂಬುದು ಕಥೆ. ಆದರೆ ಪುರುಷನಾದವನು. ತನ್ನ ಸ್ವಾರ್ಥಕ್ಕೆ ಹೆಣ್ಣನ್ನು ಬೇಕೆಂದಾಗ ಬಳಸಿಕೊಂಡು, ಅವಳಿಂದ ಅವನಿಗೆ ಉಪಯೋಗವಿಲ್ಲೆಂದಾಗ ಅವಳನ್ನು ಹಿಂಸೆಗೆ ಗುರುಪಡಿಸುವುದು ಎಷ್ಟರಮಟ್ಟಿಗೆ ನ್ಯಾಯ.

ಹೆಣ್ಣಾದವಳ ಸಂಕಟಗಳಿಗೆ ಕೊನೆಯೇ ಇಲ್ಲವೇ ಎಂಬ ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಸವತಿ ಮತ್ಸರವು ಲಕ್ಕುಂಡಿಯ ಶಾಸನದಲ್ಲೂ ಅತ್ತಿಮೊಬ್ಬೆ ಗುಂಡಮೊಬ್ಬೆಯರಲ್ಲಿ ಕಾಣಿಸುತ್ತದೆ.

ಗುಣಸಾಗರಿ ಕಥನಗೀತೆಯು ಚಿತ್ರದುರ್ಗದ ಭಾಗಗಳಲ್ಲೆ ಅಲ್ಲದೆ ಕರ್ನಾಟಕದಲ್ಲೆ ಹೆಚ್ಚು ಪ್ರಚಾರದಲ್ಲಿದ್ದು, ಗೀತೆಯನ್ನು ಚಳ್ಳಕೆರೆಯ ಗೊರಲುಕಟ್ಟೆಯ ಹನುಮಜ್ಜಿ ಹಾಡಿದ್ದಾಳೆ. ಹೆಣ್ಣಿನ ಪಾವಿತ್ರ್ಯತೆಯ ಪ್ರಶ್ನೆ, ಶೀಲಶಂಕೆ ಇಂದು ನಿನ್ನೆಯದಲ್ಲ. ಅದು ಮಾನವ ಜನಾಂಗ ಜನ್ಮ ತಳೆದು ಅವನಿಗೆ ಬುದ್ಧಿ ಬಂದಂದಿನಿಂದಲೂ ಸಮಾಜದಲ್ಲಿ ಹೆಣ್ಣಿಗೆ ಪೆಡಂಭೂತವಾಗಿ ಕಾಡುತ್ತಿದೆ. ಪರ್ವತಶೆಟ್ಟಿ ಎಂಬುವವನಿಗೆ ಚಿಕ್ಕ ವಯಸ್ಸಿನ ಗುಣದಮ್ಮನನ್ನು ಕೊಟ್ಟು ವಿವಾಹ ಮಾಡಲು ಪರ್ವತಶೆಟ್ಟಿ ಅರಿಶಿಣ ಹಾರುವ ಮೊದಲೇ ವ್ಯಾಪಾರಕ್ಕೆ ಹೋಗಿ ರಾತ್ರಿ ಮಲಗಿದ್ದಾಗ ಪಕ್ಷಿಗಳ ಜಗಳವನ್ನು ಕೇಳಿಸಿಕೊಳ್ಳುತ್ತಾನೆ. ತಡವಾಗಿ ಬಂದ ಗಂಡು ಗೀಜಗ ಪಕ್ಷಿಗೆ ಹೆಣ್ಣು ಗೀಜಗ "ಯಾವ ಸೂಳೆ ನಿನ್ನ ದಾರೀಲಿ ತಡೆದಳು" ಎನ್ನುತ್ತದೆ. ಆಗ ಗಂಡು ಗೀಜಗ "ಬೇಟೆಕಾರಣ್ಣ ಬೆನ್ನತ್ತಿ ಬರುವಾಗ ಕೇಳೆ ಸೀಗೆ ಮೆಳೆಯಾಗ ಸಿಗಿಬಿದ್ದೆ"[೨೬] ಎಂದೆಲ್ಲ ಮಾತನಾಡುವ ಪಕ್ಷಿಗಳ ಮಾತು ಕೇಳಿಕೊಂಡು ತನ್ನ ಪತ್ನಿಯ ನೆನಪಾಗಿ ಅರಮನೆಗೆ ಬಂದು ತನ್ನ ಹೆಂಡತಿಯೊಂದಿಗೆ ಕಾಲಕಳೆದು ಮತ್ತೆ ಯಾರು ನೋಡದ ಹೊತ್ತಿನಲ್ಲೆ ಶಾಕುಂತಲ ನಾಟಕದ ದುಶ್ಯಂತನಂತೆ ಮುದ್ರಿಕೆ ಕೊಟ್ಟು ಹೋಗುತ್ತಾನೆ. ಇವಳು ಆ ಮುದ್ರಿಕೆಯನ್ನು ಶಾಕುಂತಲೆಯಂತೆಯೇ ಕಳೆದು ಕೊಳ್ಳುತ್ತಾಳೆ. ದಿನ ಕಳೆದನಂತರ ಗರ್ಭಧರಿಸುತ್ತಾಳೆ. ಸಂಶಯಗೊಂಡ ಗಂಡನ ಮನೆಯವರು ತಾಯಿಯ ಮನೆಗೆ ವಿಷಯ ಮುಟ್ಟಿಸಿ

> ಹುಟ್ಟಿದಾರೊರುಸಾಕ ಕೆಟ್ಟಿತು ನಿಮ್ಮೆಣ್ಣು
> ಕೆಟ್ಟಾನೊಬ್ಬ ವಲಿಯಾಗ ಸೆರಗು ಆಸಿ.....[೨೭]

ಎಂಬ ವಿಷಯ ತಿಳಿಸಿ ಕಾಡಿಗಟ್ಟಿ ಕೊಲ್ಲುವಂತೆ ಭಟರಿಗೆ ಹೇಳಲು ಖಡ್ಗ ಅವರಿಗೆ ವಾಪಸ್ಸು ಎರಗಲು ಭಟರು ಓಡಿ ಹೋದರು. ಕಾಡಿನಲ್ಲಿ ಅನಾಥಳಾದ ಗುಣದಮ್ಮ ಪಶು, ಪಕ್ಷಿಗಳೊಂದಿಗೆ ಬೆಳೆದು ಗಂಡ ವ್ಯಾಪಾರದಿಂದ ಬರುವವರೆವಿಗೂ ಕಾದು, ನಂತರ ಅವನೊಂದಿಗೆ ಬಾಳುತ್ತಾಳೆ. ಈ ಗೀತೆ ದ್ವಿಪದಿ ಮತ್ತು ತ್ರಿಪದಿಯಲ್ಲಿದ್ದು, ಗಂಡನಿಲ್ಲದ ಹೆಣ್ಣಿನ ಕರಾಳ ಬದುಕನ್ನು ಕಣ್ಮುಂದೆ ತಂದುಕೊಡುತ್ತದೆ. ಅಲ್ಲದೆ ಸಮಾಜ ಹೆಣ್ಣಾದವಳು ಪುರುಷನ ನೆರಳಲ್ಲೆ ಬದುಕಬೇಕು ಎಂಬ ನಿರ್ಬಂಧವನ್ನು ವಿಧಿಸಿದೆ. ಈ ಕಥೆಯಿಂದ ಜನಪದರು ಸಮಾಜಕ್ಕೆ ಹೆಣ್ಣಾದವಳು ಸತ್ಯವನ್ನು ಕಾಯಲು ಎಂತಹ ಕಷ್ಟ ಬಂದರೂ ಸಹಿಸಿಕೊಳ್ಳಬೇಕು. ಕೊನೆಗೊಂದು ದಿನ ಜಯ ಲಭಿಸುತ್ತದೆ. ಎಂತಲೇ ಹೆಣ್ಣು ಮಕ್ಕಳನ್ನು ಕತ್ತಲ ಕೋಣೆಗೆ ತಳ್ಳುವ ಕಾರ್ಯವನ್ನು ನಾಜೂಕಾಗಿಯೇ ಮಾಡಿದೆ ಎಂದರೆ ತಪ್ಪಾಗಲಾರದು.

ಹೆಣ್ಣಿನ ಪರಮಶ್ರೇಷ್ಠ ಗುರಿಯೆಂದರೆ ಅವಳು ಹುಟ್ಟಿನಿಂದ ಸಾಯುವವರೆಗೂ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳುವುದಾಗಿದೆ. ಅದಿಲ್ಲದವಳು ನಾಯಿಮುಟ್ಟಿದ ಮಡಕೆ ಎಂಬ ಮಾತುಗಳು ಸಮಾಜದಲ್ಲಿ

ಅವಳಿಗೆ ಸರ್ವವಿಧಿತವಾಗಿ ಕೇಳಿಬರುತ್ತವೆ. ಜೊತೆಗೆ ಆರ್ಥಿಕವಾಗಿ ಸದೃಢರಾಗದ ಬಡತನ, ದಾರಿದ್ರ್ಯದ ಸ್ಥಿತಿಯಲ್ಲಿರುವ ಹೆಣ್ಣನ್ನು ಸಮಾಜ ಯಾವ ಮಟ್ಟಕ್ಕೆ ಕೊಂಡೊಯ್ಯುತ್ತದೆಂಬುದಕ್ಕೆ ಈ ಕಥನ ಗೀತೆಯಲ್ಲಿ ಚೆನ್ನಮ್ಮ ಸಾಕ್ಷಿಯಾಗಿ ನಿಲ್ಲುತ್ತಾಳೆ. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನಲ್ಲೆ ಹೆಚ್ಚು ಪ್ರಚಲಿತದಲ್ಲಿರುವ ಈ ಗೀತೆಯಲ್ಲಿ ಪುರಾಣದ ಸಾವಿತ್ರಿಯಂತೆ ಜನಪದರಲ್ಲಿ ಚೆನ್ನಮ್ಮ ಕಾಣಿಸಿಕೊಳ್ಳುತ್ತಾಳೆ.

ಕತ್ತಲರಾಮನಿಗೆ ಮಕ್ಕಳಾಗದೇ ಹೋದಾಗ ಪತ್ನಿ ಪಾಪುಂಜಿಣಿ ವಯಸ್ಸಾದಾಗ ಶಿವನನ್ನು ಬೇಡಿ ವರ ಪಡೆಯುತ್ತಾಳೆ. ಶಿವ ವರಕೊಡುವಾಗ ಪಾಪುಂಜಿಣಿಗೆ ಬಾಲಕ ಬಹಳ ಕಾಲ ಉಳಿಯುವುದಿಲ್ಲವೆಂದು ಹೇಳುತ್ತಾನೆ. ಮಕ್ಕಳ ಆತುರ, ಹಂಬಲದಲ್ಲಿದ್ದ ಅವಳು "ಮುಂಜಾನೆ ಹುಟ್ಟಲಿ ಸಂಜೇಲಿ ಸಾಯಲಿ ಬಂಜೆಂಬ ಸೊಲ್ಲು ಅಡಗಲಿ" ಎಂದುಕೊಂಡು ಮಗು ಪಡೆಯುತ್ತಾಳೆ. ಅವನಿಗೆ ಕಾಳಿಂಗರಾಯನೆಂತಲೂ ನಾಮಕರಣ ಮಾಡುತ್ತಾರೆ. ಬೆಳೆದು ದೊಡ್ಡವನಾಗಿ ಕಾಡಿಗೆ ಬೇಟೆಗೆಂದು ಹೋದಾಗ ಮಡಿಯುತ್ತಾನೆ. ಸಂಪ್ರದಾಯದ ವಿಧಿಯಂತೆ ಗೊಂಬೆ ಮಾಡಿ ಮದುವೆ ಮಾಡದೆ ಬಡತನದ ದಾರಿದ್ರ್ಯದಲ್ಲಿ ಮುಳುಗಿ ಹೋದ ಹಾರವಯ್ಯನ ಮಗಳು ಚೆನ್ನಮ್ಮನನ್ನು ವಿವಾಹ ಮಾಡುತ್ತಾರೆ. ಅವಳು ಶಿವನಿಂದ ವರಪಡೆದು ಗಂಡನನ್ನು ಬದುಕಿಸುತ್ತಾಳೆ.

ಸಮಾಜ ಹೆಣ್ಣನ್ನು ದೈವೀಕರಿಸಿ ಪವಾಡಗಳ ನೆಪ ಒಡ್ಡಿ, ಸಾಮಾನ್ಯ ಸ್ತ್ರೀವರ್ಗವನ್ನು ತುಳಿಯುತ್ತಲೇ ಬಂದಿದೆ. ಕಷ್ಟಗಳ ಹೊರೆಯನ್ನವಳಿಗೇರಿ ಆಟವಾಡುವ ಗೊಂಬೆಯನ್ನು ನೋಡಿದಂತೆ ಸಮಾಜ ಅವಳನ್ನು ನೋಡುತ್ತಲೇ ಬಂದಿದೆ. ಜಾನಪದರೇ ಹೇಳುವಂತೆ ಏಳೇಳು ಜನ್ಮಕ್ಕೂ ಹೆಣ್ಣಾಗಿ ಹುಟ್ಟಬಾರದೆಂಬ ನಿಲುವು ಸಮಾಜದಲ್ಲಿ ಹೆಣ್ಣಿನ ಅಸಹಾಯಕತೆಯನ್ನು ಎತ್ತಿ ತೋರಿಸುತ್ತದೆ. ಪುರುಷ ಸ್ವಾರ್ಥದ ಎದುರು ಹೆಣ್ಣಿನ ಭಾವನೆಗಳು, ಅವಳ ವ್ಯಕ್ತಿತ್ವ ಎಲ್ಲವೂ ಗೌಣವಾಗುವುದು ಮೇಲೆ ಹೇಳಿದ ಎಲ್ಲಾ ಕಥನ ಗೀತೆಗಳಲ್ಲೂ ಒಂದಿಲ್ಲೊಂದು ತೆರನಾಗಿ ಭಿತ್ತರವಾಗುತ್ತಲೇ ಬಂದಿದೆ.

ಅಡಿಟಿಪ್ಪಣಿ

೧. ಕೃಷ್ಣಮೂರ್ತಿ ಹನೂರು, **ಕತ್ತಲದಾರಿ ದೂರ, ಪ್ರಸ್ತಾವನೆ,** ಪು.೮

೨. ಅದೇ, ಪು.೧೦

೩. ಅದೇ, ಪು.೧೭

೪. ಅದೇ, ಪು.೪೩

೫. ಅದೇ, ಪು.೪೪

೬ ಅದೇ, ಪು.೪೪

೭ ಅದೇ, ಪು.೪೪

೮. ಅದೇ, ಪು.೪೪

೯. ಅದೇ, ಪು.೪೪

೧೦. ಅದೇ, ಪು.೪೪

೧೧. E.C.IV. ಹೆಗಡ್ಡದೇವನಕೋಟೆ ೧೮

೧೨. ಕೃಷ್ಣಮೂರ್ತಿ ಹನೂರು, **ಪೂರ್ವೋಕ್ತ,** ಪು.೧೩

೧೩. ಅದೇ, ಪು.೧೫

೧೪. ಅದೇ, ಪು.೧೫-೧೬

೧೫. ಅದೇ, ಪು.೧೭

೧೬. ಅದೇ, ಪು.೧೩

೧೭. ಅದೇ, ಪು.೧೪

೧೮. ಅದೇ, ಪು.೧೪

೧೯. ಅದೇ, ಪು.೧೫

೨೦. ಅದೇ, ಪು.೧೬

೨೧. ಅದೇ, ಪು.೧೭೫

೨೨. ಅದೇ, ಪು.೨೦೬

೨೩. ಅದೇ, ಪು.೨೪೫

೨೪. ಅದೇ, ಪು.೨೪೬

೨೫. ಅದೇ, ಪು.೨೭೪

೨೬. ಅದೇ, ಪು.೨೭೪

೨೭. ಅದೇ, ಪು.೨೭೫

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಪ್ರಸ್ತುತ ಅಧ್ಯಯನದಲ್ಲಿ ಸ್ತ್ರೀಯರ ಸಹಭಾಗಿತ್ವವನ್ನು ಕುರಿತಾದ ಶಾಸನಗಳನ್ನಿಟ್ಟುಕೊಂಡು ವಿವರಣಾತ್ಮಕವಾಗಿ ವಿಶ್ಲೇಷಿಸಲಾಗಿದೆ. ಇಲ್ಲಿ ಅಧ್ಯಯನಕ್ಕೊಳಪಡಿಸಿದ ಶಾಸನಗಳೆಲ್ಲವು ಪುರುಷ ಪ್ರಧಾನ ನೆಲೆಯಲ್ಲಿ ಸಾಗಿಬಂದಿವೆ ಎಂಬುದು ಸ್ಪಷ್ಟ ಸಂಗತಿಯಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ದೊರೆತ ಶಾಸನಗಳೆಲ್ಲವನ್ನು ಅವಲೋಕಿಸಿದಾಗ ಶಾಸನಗಳು ಮಹಿಳೆಯರ ಸಹಭಾಗಿತ್ವವನ್ನು ಗೌಣವಾಗಿಸಿವೆ. ಅಲ್ಲದೆ ಒಂದು ಶಾಸನವನ್ನೆತ್ತಿಕೊಂಡು ಇಡೀ ಶಾಸನವನ್ನು ಗಮನಿಸಿದರೆ ಅದರಲ್ಲಿ ಮಹಿಳೆಯರ ವಿಚಾರ ಸಿಗುವುದು ಒಂದು ತುಣುಕು ಮಾತ್ರ. ಪ್ರತಿಶತ ಶಾಸನಗಳಲ್ಲಿ ಸುಮಾರು ಹತ್ತರಷ್ಟು ಸ್ತ್ರೀಯರ ಸಹಭಾಗಿತ್ವ ಕಂಡುಬರುತ್ತದೆ. ಆದರೂ ಅವುಗಳಲ್ಲಿ ರಾಜನ ಪತ್ನಿಯರ ಹೆಸರಿನ ಉಲ್ಲೇಖ, ಸಾಮಂತ, ಮಾಂಡಳೀಕ ಪತ್ನಿಯರ ಹೆಸರಿನ ಉಲ್ಲೇಖಗಳೇ ಹೆಚ್ಚು. ಅವರುಗಳಾದರೂ ಯಾವುದೋ ಒಂದು ಚಿಕ್ಕ ಪ್ರಾಂತ್ಯವನ್ನಾಳುವ ರಾಣಿಯರಾಗಿಯೋ, ಕೆಲವು ದಾನ, ದತ್ತಿಗಳನ್ನು ಪುರುಷರಿಂದ ಬೇಡಿ ದಾನ ನೀಡಿದವರಾಗಿಯೇ ಕಾಣಿಸಿಕೊಳ್ಳುತ್ತಾರೆ. ಸಾಮಾನ್ಯ ಸ್ತ್ರೀಯರ ಪಾಲಿಗಂತೂ ಶಾಸನಗಳು ಸಂಪೂರ್ಣ ನಿರ್ಲಕ್ಷ ವಹಿಸಿವೆ ಎಂಬುದು ತಿಳಿದುಬರುತ್ತದೆ. ಒಟ್ಟು ಅಧ್ಯಯನದಲ್ಲಿ ಸ್ತ್ರೀಯರಿಗೆ ಶಾಸನಗಳಲ್ಲಿ ಪ್ರಾತಿನಿಧ್ಯ ದೊರೆತಿದೆಯೇ ಎಂಬುದನ್ನು ಕುರಿತಾಗಿ ವಿವೇಚಿಸಲಾಗಿದೆ.

ಆದಿ ಮಾನವನ ಸಂಸ್ಕೃತಿಯಿಂದ ಎಷ್ಟೋ ವರ್ಷಗಳವರೆಗೆ ಸ್ತ್ರೀಪ್ರಧಾನ್ಯತೆಯೇ ಕಂಡುಬರುತ್ತದೆ. ಮಾತೃ ಪ್ರಧಾನ್ಯತೆಯ ದ್ರಾವಿಡ ಸಂಸ್ಕೃತಿಯ ಮೇಲೆ ಪಿತೃ ಪ್ರಧಾನ ವೈದಿಕ ಸಂಸ್ಕೃತಿಯು ಬಂದೆರಗಿದಾಗ ಮಹಿಳೆಯರ ಸ್ಥಾನಗಳು ಪಲ್ಲಟಗಳಾಗತೊಡಗಿದವು. ಮಾನವ ವಿಕಾಸ ಹೊಂದುತ್ತಾ ಹೋದಂತೆ ಕೃಷಿ ಆರ್ಥಿಕತೆಯ ಕೇಂದ್ರಬಿಂದುವಾಯಿತು. ಹೆಣ್ಣು ತನ್ನನ್ನು ಸಂಪೂರ್ಣವಾಗಿ ಕೃಷಿ ಚಟುವಟಿಕೆಯಲ್ಲಿ, ಮಕ್ಕಳ ಲಾಲನೆ-ಪಾಲನೆ, ಪೋಷಣೆಯಲ್ಲಿ ತೊಡಗಿಸಿಕೊಳ್ಳಲಾರಂಭಿಸಿದಾಗ ಆರ್ಥಿಕತೆಯ ನಿಯಂತ್ರಣ ನಿಧಾನವಾಗಿ ಪುರುಷನ ವಶವಾಗ

ತೊಡಗಿತು. ಆಗ ಸ್ತ್ರೀ ಕುಟುಂಬದಲ್ಲಿ ಮೂಲೆಗುಂಪಾಗಿ ಪುರುಷರ ಆಳ್ವಿಕೆಯ ಪರಮೋನ್ನತಿ ಆರಂಭವಾಯಿತು.

ಮಾತೃ ಪ್ರಧಾನ ಸಂಸ್ಕೃತಿಯಲ್ಲಿ ಎಲ್ಲಿಯೂ ಲಿಂಗ ತಾರತಮ್ಯತೆ, ಅಸಮಾನತೆಗಳು ಕಂಡುಬರುವುದಿಲ್ಲ. ಕುಟುಂಬದ ಸದಸ್ಯರೆಲ್ಲರೂ ಒಟ್ಟಿಗೆ ತಮ್ಮ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಆದರೆ ಪಿತೃಪ್ರಧಾನ ಯಜಮಾನ ಸಂಸ್ಕೃತಿಯಲ್ಲಿ ಪುರುಷ ಶ್ರೇಷ್ಠ, ಸ್ತ್ರೀ ಕನಿಷ್ಠ ಎಂಬ ಭಿನ್ನತೆಗಳು ಎದ್ದು ಕಾಣಿಸುತ್ತವೆ. ಇಂತಹದ್ದೇ ಸಂಸ್ಕೃತಿಯಲ್ಲಿ ನಮ್ಮ ಶಾಸನಗಳೆಲ್ಲವೂ ಕಂಡುಬರುತ್ತವೆ. ಶಾಸನಗಳಲ್ಲಿ ಸ್ತ್ರೀಯರ ಕಾರ್ಯಕ್ಷೇತ್ರಗಳನ್ನು ಗಮನಿಸಿದರೆ ಬೃಹತ್ ಸಾಮ್ರಾಜ್ಯದ ರಾಣಿಯಾಗಿ ಆಳ್ವಿಕೆ ನಡೆಸಿರುವ ಕುರಿತಾಗಿ ಎಲ್ಲಿಯೂ ಶಾಸನಗಳಲ್ಲಿ ದೊರೆಯುವುದಿಲ್ಲ. ಸ್ತ್ರೀಯರು ಧಾರ್ಮಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಎಲ್ಲಿಯೂ ಸ್ವತಂತ್ರ ನಿರ್ಧಾರ ಕೈಗೊಂಡುದುರ ಬಗ್ಗೆ ಮಾಹಿತಿಗಳು ಶಾಸನಗಳಿಂದ ತಿಳಿದುಬರುವುದಿಲ್ಲ. ನನ್ನ ಅಧ್ಯಯನ ವ್ಯಾಪ್ತಿಯಲ್ಲಿ ತೆಗೆದುಕೊಂಡಿರುವ ಶಾಸನಗಳಲ್ಲಿ ಸ್ತ್ರೀ ಮಕ್ಕಳನ್ನು ಉತ್ಪಾದಿಸುವ ಯಂತ್ರವಾಗಿ ಗೋಚರಿಸುತ್ತಾಳೆ. ಅಲ್ಲದೆ ಪುರುಷನ ಇಷ್ಟಾರ್ಥಗಳನ್ನು ಈಡೇರಿಸುವ ಕಾಮಧೇನುವಾಗಿ ಕಾಣಿಸುತ್ತಾಳೆ. ಅಧಿಕಾರವೆಲ್ಲವೂ ಪುರುಷನ ಕೈಯಲ್ಲಿ ಕೇಂದ್ರೀಕೃತವಾಗಿರುತ್ತದೆ. ಶಾಸನಗಳಲ್ಲಿ ಅಧಿಕಾರಿ ವರ್ಗದ ಸ್ತ್ರೀಯರ ಹೆಸರಿನ ಉಲ್ಲೇಖಗಳು ಕಂಡುಬರುತ್ತವೆ. ಆದರೂ ಅವುಗಳಲ್ಲಿ ಯಾವೊಬ್ಬ ಮಹಿಳೆಯೂ ಉನ್ನತ ಅಧಿಕಾರದಲ್ಲಿರುವುದು ವ್ಯಕ್ತವಾಗುವುದಿಲ್ಲ. ಚಿಕ್ಕಪುಟ್ಟ ಪ್ರಾಂತ್ಯಗಳ ಅಧಿಕಾರವಹಿಸಿ ಕೊಂಡಾಗಲೂ ಅದು ಪುರುಷ ಸ್ವಾರ್ಥದ ಕನ್ನಡಿಯಾಗಿಯೇ ಕಾಣಿಸುತ್ತದೆ. ಪುರುಷ ತನ್ನ ತೀರದ ಕಾಮಾಂದತೆಯಿಂದ ಹಲವಾರು ಸ್ತ್ರೀಯರನ್ನು ವಿವಾಹವಾದಾಗ ಸಹಜವಾಗಿಯೇ ಸವತಿ ಮತ್ಸರಗಳು ಏರ್ಪಡುತ್ತಿದ್ದವು. ಇಂತಹ ಆಂತರಿಕ ಕಲಹಗಳಿಂದ ದೂರ ಮಾಡಲು ಅಧಿಕಾರ ನೀಡಿದ ಪ್ರಸಂಗಗಳೂ ಸಹ ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿವೆ. ಮಹಿಳೆಯರಿಗೆ ಚಿಕ್ಕ ಅಧಿಕಾರ ದೊರೆತರೂ ಅವರು ಅದನ್ನು ಸಮರ್ಥವಾಗಿ, ಯಶಸ್ವಿಯಾಗಿ, ಜಾಗೃಕತೆ, ದಕ್ಷತೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಿರುವುದು ಕಂಡುಬರುತ್ತದೆ. ಮಹಿಳೆಯರ ಇಂತಹ ದಕ್ಷ ಆಳ್ವಿಕೆಯನ್ನು ಗಮನಿಸಿದರೆ, ಹೆಣ್ಣಿಗೆ ಸಾಮರ್ಥ್ಯವೆಂಬುದು ಅವಳ ಹುಟ್ಟಿನಿಂದಲೇ ಗರ್ಭೀಕೃತವಾಗಿರುತ್ತದೆ. ಆದರೆ ಪುರುಷ ನಿರ್ಮಿತ ಸಮಾಜದ ಆಳ್ವಿಕೆಯ ಸರ್ವಾಧಿಕಾರದಲ್ಲಿ ಸ್ತ್ರೀ ಅವಕಾಶಗಳಿಂದ ವಂಚಿತಳಾಗಿದ್ದಾಳೆಂಬುದು ಸ್ಪಷ್ಟ

ಸ್ತ್ರೀಯಾದವಳು ದೈಹಿಕ ರಚನೆಯಲ್ಲಿ ಕೆಲವೊಂದು ಶಾರೀರಿಕ ಕಾರಣಗಳಿಂದ ಶಕ್ತಿಹೀನಳಾಗುತ್ತಾಳೆ. ಆದರೆ ಆಗೆಂದ ಮಾತ್ರಕ್ಕೆ ಅವಳನ್ನು ದುರ್ಬಲಳೆಂದು ತೀರ್ಮಾನಿಸುವುದು ಎಷ್ಟರಮಟ್ಟಿನ ನ್ಯಾಯ. ಸ್ತ್ರೀಯ ಶಾರೀರಿಕ ರಚನೆ ಸೃಷ್ಟಿಯ ವರದಾನವೇ ವಿನಃ ಅದು ದೌರ್ಬಲ್ಯದ ಪ್ರತಿರೂಪವೆಂದಲ್ಲ ಎಂಬುದು ಸ್ತ್ರೀಯರ ಸಾಧನೆಗಳನ್ನು ನೋಡಿದಾಗ ತಿಳಿದುಬರುತ್ತದೆ.

ಸ್ತ್ರೀಯರು ಕೆಲವೊಂದು ಪ್ರದೇಶಗಳ ಅಧಿಕಾರ ವಹಿಸಿಕೊಂಡಾಗಲೂ ಅವಳ ಅಧಿಕಾರದ ಲಗಾಮು ಪುರುಷನ ವಶದಲ್ಲಿರುತಿತ್ತು. ದಾನ-ದತ್ತಿಗಳ ಪ್ರಸಂಗ ಬಂದಾಗ ಪುರುಷರ ಅನುಮತಿ ಪಡೆದೇ ಬಸದಿಗಳನ್ನೊ, ಚಿಕ್ಕ ಪುಟ್ಟ ದೇವಾಲಯಗಳನ್ನೊ, ಲಿಂಗ ಪ್ರತಿಷ್ಠೆಗಳನ್ನೊ ನಿರ್ಮಿಸುತ್ತಿದ್ದರು. ಅಲ್ಲದೆ ಅವುಗಳಿಗೆ ದಾನದತ್ತಿಗಳನ್ನು ಕೊಡುವಾಗ ಪುರುಷರಿಂದ(ರಾಜ) ಬೇಡಿ ಪಡೆದು ನೀಡುತ್ತಿದ್ದರೆಂಬುದು ತಿಳಿದುಬರುತ್ತದೆ. ಇದರಿಂದ ಸ್ತ್ರೀಯರಿಗೆ ಯಾವುದೇ ವಿಧವಾದ ರಾಜಕೀಯ, ಧಾರ್ಮಿಕ, ಸ್ವಾತಂತ್ರ್ಯವಿತ್ತೆಂಬುದು ತಿಳಿದುಬರುವುದಿಲ್ಲ. ಇನ್ನೂ ಸಾಮಾನ್ಯವರ್ಗದ ಮಹಿಳೆಯರ ಉಲ್ಲೇಖಗಳಂತೂ ದೊರೆಯುವುದು ತೀರಾ ವಿರಳ. ಆಗೆ ದೊರೆತಾಗಲೂ ಅವರು ಯುದ್ಧದಲ್ಲಿ ಹೋರಾಡಿ ಮಡಿದ ವೀರನ ತಾಯಿಯರಾಗಿ, ಹೆಂಡತಿಯರಾಗಿ ಕಾಣಿಸುತ್ತಾರೆ. ದೇವಾಲಯಗಳ ಸಂದರ್ಭಕ್ಕೆ ಬಂದಾಗ ದೇವಾಲಯಗಳ ಸ್ವಚ್ಛತೆಯ ಕಾರ್ಯ ನಿರ್ವಹಿಸಿದವರಾಗಿ ಕಾಣಿಸುತ್ತಾರೆ. ಒಟ್ಟಿನಲ್ಲಿ ಯಾವ ವರ್ಗದ ಮಹಿಳೆಯರಿಗೂ ಯಾವ ವಿಧವಾದ ಸ್ಥಾನಮಾನಗಳ ಸ್ವಾಯತ್ತತೆಗಳಿರುವುದು ಕಂಡುಬರುವುದಿಲ್ಲ.

ಸ್ತ್ರೀಯರು ವೈವಾಹಿಕ ಸಂಬಂಧಗಳ ಬಗ್ಗೆ ಶಾಸನಗಳಲ್ಲಿ ಗಮನಿಸಿದರೆ ಕುಟುಂಬದಲ್ಲಿ ಸ್ತ್ರೀಯರ ಯಾವುದೇ ವಿಧವಾದ ಸ್ವಾತಂತ್ರ್ಯವನ್ನು ಹೊಂದಿಲ್ಲ. ಅವಳ ಪಾತ್ರವೆಲ್ಲವೂ ಕೃಷಿಯಲ್ಲಿ ಕಾರ್ಯನಿರ್ವಹಿಸುವುದು, ಮಕ್ಕಳ ಲಾಲನೆ-ಪಾಲನೆ, ಪೋಷಣೆ, ಪುರುಷನ ಬಯಕೆಗಳ ಈಡೇರಿಕೆಗಳಲ್ಲೆ ಅವಳ ಜೀವನ ಸಂಪೂರ್ಣ ಸವೆಯುತ್ತಿತ್ತು. ವಿವಾಹದ ಸಂದರ್ಭದಲ್ಲಿ ಯಾವ ವಿಧದ ಸ್ವಾತಂತ್ರ್ಯವೂ ಕಂಡುಬರುವುದಿಲ್ಲ. ಪುರುಷ ತನ್ನ ಸ್ವಾರ್ಥಕ್ಕೆ ಬೇಕಾದಂತೆ ಹೆಣ್ಣನ್ನು ಕೂಪಕ್ಕೆ ತಳ್ಳುತ್ತಿದ್ದನು. ಹೆಣ್ಣಿನ ತಂದೆ ತಾಯಿಗಳೇ ಮಕ್ಕಳ ಬೇಕುಬೇಡಗಳನ್ನು ಕೇಳದೆ ಪ್ರಬಲ ರಾಜನೆಂದ ಮಾತ್ರಕ್ಕೆ ಹಲವಾರು ಜನ ಸ್ತ್ರೀಯರನ್ನೊಂದಿದ ಪುರುಷನೊಂದಿಗೇ ವಿವಾಹ ಏರ್ಪಡಿಸುತ್ತಿದ್ದರು. ರಾಜನಾದವನು ತನ್ನ ಸಾಮ್ರಾಜ್ಯ ಉಳಿಸಿಕೊಳ್ಳಲು ಅಧಿಕಾರದಾಹದಿಂದ ಹೆಣ್ಣನ್ನು ವಿವಾಹವೆಂಬ ನೆಪದಲ್ಲಿ ಮಾರಾಟ ಮಾಡುತ್ತಿದ್ದುದು ವ್ಯಕ್ತವಾಗುತ್ತದೆ. ಮನು ಹೇಳಿರುವಂತೆ 'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ" ಎಂತಲೇ ಹೆಣ್ಣನ್ನು ದೈವೀಕರಿಸಿ ಪುರುಷ ಸಮಾಜ ಅಂದಿನಿಂದ ಇಂದಿನವರೆಗೂ ತುಳಿಯುತ್ತಲೇ ಬರಲಾಗಿದೆ. ಇಂದು ಸ್ತ್ರೀಯರು ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಅಲ್ಲದೆ ಬಹುಪತ್ನಿತ್ವಕ್ಕೆ ವಿರೋಧವನ್ನು ಕಾನೂನು ಬದ್ಧವಾಗಿ ಸ್ಥಾಪಿಸಿ ಬಾಲಿಕಾ ವಿದ್ಯಾಕೇಂದ್ರ ತೆರೆಯಲಾಗಿದೆ. ಸಂವಿಧಾನದ ೧೪, ೧೫ ಮತ್ತು ೧೬ ವಿಧಿಗಳು ಲಿಂಗ ತಾರತಮ್ಯ ನಿಷೇಧ ಮಾಡಿ ಹೆಣ್ಣಿಗೆ ಆಸ್ತಿ ಹಕ್ಕು, ವಿವಾಹ ಸಂಬಂಧದ ಹಕ್ಕು, ವಿಚ್ಛೇದನದ ಹಕ್ಕುಗಳೆಂಬ ವಿಶೇಷ ಹಕ್ಕುಗಳನ್ನು ನೀಡಿದೆ. ಆದರೆ ಇಂದಿಗೂ ಎಷ್ಟೋ ಮಹಿಳೆಯರಿಗೆ ಅವು ತಲುಪುತ್ತಲೇ ಇಲ್ಲವೆನ್ನಬಹುದು.

ಧಾರ್ಮಿಕ ಸಂದರ್ಭಕ್ಕೆ ಬಂದಾಗ ಮನುಷ್ಯ ತನ್ನ ಸ್ವಹಿತಾಸಕ್ತಿಯಿಂದಾಗಿ ನಿರ್ಮಿಸಿಕೊಂಡ ಒಂದು ಸಾಮಾಜಿಕ ವ್ಯವಸ್ಥೆ ಧರ್ಮವಾಗಿದೆ. ಧರ್ಮವನ್ನು ರಕ್ಷಿಸುವ ನೆಪದಲ್ಲಿ ಧರ್ಮಕ್ಕೆ

ಹಲವಾರು ದೇವರುಗಳು ಹುಟ್ಟಿಕೊಂಡವು. ಅಂತಹ ದೇವರುಗಳ ದೇವಾಲಯಕ್ಕೆ ದಾನ, ದತ್ತಿಗಳೂ ಹೇರಳವಾಗಿ ಬೆಳೆದು ಬಂದಾಗ ಆಡಳಿತ ವರ್ಗವೊಂದು ದೇವಸ್ಥಾನದಲ್ಲಿ ಹುಟ್ಟಿಕೊಂಡಿತು. ರಾಜರ ಕಾಲದಲ್ಲಿ ಸ್ತ್ರೀ ವಿದ್ಯಾಭ್ಯಾಸವೆಂದರೆ ಅದು ಕಲೆಗೋ, ಸಂಗೀತಕ್ಕೋ ನೃತ್ಯ, ವಾದ್ಯಕ್ಕೋ ಸೀಮಿತವಾಗಿತ್ತು. ಇಂತಹ ಕಲೆಯಲ್ಲಿ ಪರಿಣತಿ ಹೊಂದಿದ ವರ್ಗ ದೇವಾಲಯಗಳಲ್ಲಿ ಕಲೆಯ ಮೂಲಕ ಸೇವೆ ಸಲ್ಲಿಸಲಾರಂಭಿಸಿತು. ಪುರುಷ ಸಮಾಜ ತನ್ನ ಸ್ವಾರ್ಥಕ್ಕೆ, ಜೀವನ ಸಾಗಿಸಲು ಕಲಾವೃತ್ತಿಯನ್ನು ಮಾಡುವ ಸ್ತ್ರೀಯರನ್ನು ತನ್ನ ಹಿತಕ್ಕೆ ಬಳಸಿಕೊಂಡ ಪರಿ, ಹುನ್ನಾರಗಳು ಅಧ್ಯಯನದಿಂದ ವ್ಯಕ್ತವಾಗುತ್ತವೆ. ಜೀವನ ಸಾಗಿಸಲು ಮಾಡುತ್ತಿದ್ದ ಕಲಾವೃತ್ತಿಯನ್ನು ಆಸೆ, ಆಮಿಷಗಳನ್ನು ತಂದೊಡ್ಡಿ ಪುರುಷ ತನ್ನ ಸ್ವಾರ್ಥಕ್ಕೆ ಕಲೆಯನ್ನು ವ್ಯಾಪಾರೀಕರಣಗೊಳಿಸಿ, ವೇಶ್ಯಾವೃತ್ತಿಗೆ ತಂದೊಡ್ಡಿದ ಬಗೆಯನ್ನಿಲ್ಲಿ ಚರ್ಚಿಸಲಾಗಿದೆ.

ದೇವಾಲಯದ ಪ್ರತಿಯೊಂದು ಕಾರ್ಯಗಳು ಅಂದರೆ ಗರ್ಭಗುಡಿಯವರೆಗೆ ಅವಳು ಎಲ್ಲಾ ಕಾರ್ಯಗಳನ್ನು ನಿರ್ವಹಿಸಬೇಕಿತ್ತು. ಸೇವೆ ಮಾತ್ರ ಹೆಣ್ಣಿನದು, ದೇವಾಲಯದ ಅಧಿಕಾರ, ಮೇಲುಸ್ತುವಾರಿಯೆಲ್ಲವೂ ಪುರುಷನದೆ ಆಗಿರುತಿತ್ತು. ಪುರುಷ ಪ್ರಧಾನ ಸಮಾಜದ ಆಚಾರ, ವಿಚಾರ, ನೀತಿ, ನಿಯಮಗಳನ್ನು ಹುಟ್ಟಿನಿಂದ ಹೆಣ್ಣಿಗೆ ರೂಢಿಸಿ ಅವಳನ್ನು ಪುರುಷ ತನ್ನ ಕಪಿಮುಷ್ಠಿಯಲ್ಲಿ ಬಂಧಿಸಿದ ಪರಿಯನ್ನಿಲ್ಲಿ ಚರ್ಚಿಸಲಾಗಿದೆ. ನಮಗೆ ದೊರೆತಿರುವ ಮಾಸ್ತಿಗಲ್ಲುಗಳು, ಸತಿಸಹಗಮನ ಪದ್ಧತಿಯಲ್ಲಿ ಪುರುಷ ಸ್ವಾರ್ಥಕ್ಕೆ ಬಲಿಯಾದ ಮಹಿಳೆಯರ ಕರುಣಾಜನಕ ಕಥೆಯನ್ನು ಬಿತ್ತರಿಸುತ್ತವೆ. ಧಾರ್ಮಿಕ ಕಟ್ಟುಪಾಡುಗಳನ್ನು ಸ್ತ್ರೀಯರ ಮೇಲೆ ವಿಧಿಸಿ, ಧರ್ಮದ ಬೇಲಿಯೊಳಗೆ ಹೆಣ್ಣು ನಲುಗುವಂತೆ ಮಾಡಲಾಗಿದೆ. ಪುರುಷ, ಸಾಮಾಜಿಕ, ವ್ಯವಸ್ಥೆಯಲ್ಲಿ ಆರಂಭದಿಂದಲೂ ಮಹಿಳೆಯರನ್ನು ತುಳಿಯುತ್ತಲೇ ಬರಲಾಗಿದೆ. ಸಮಾಜದಲ್ಲಿ ಸಾಮಾಜಿಕ ಸಂಸ್ಥೆಗಳಲ್ಲಿ ಒಂದಾದ ಕುಟುಂಬದಲ್ಲಿ ಎಲ್ಲಾ ಜವಾಬ್ದಾರಿಗಳನ್ನು ಹೆಣ್ಣು ನಿರ್ವಹಿಸುತ್ತಿದ್ದಾಳೆ. ಆದರೆ ಅವಳಿಗೆ ಪುರುಷನಿಗೆ ಸಮಾನವಾದ ಸ್ಥಾನಮಾನಗಳಿಲ್ಲ. ಅವಳು ಮನುಷ್ಯಳು, ಅವಳಿಗೂ ಬೇಕು ಬೇಡಗಳಿವೆ ಎಂಬ ಕಲ್ಪನೆ ಪುರುಷ ಸಮಾಜಕ್ಕೆ ವೇದ್ಯವಾಗುತ್ತಿಲ್ಲ. ಕುಟುಂಬದಲ್ಲಿ ಸ್ತ್ರೀ ನಿಸ್ವಾರ್ಥದಿಂದ, ತ್ಯಾಗ ಮನೋಭಾವದಿಂದ ಆಧ್ಯಾತ್ಮಿಕ ಸೌಮ್ಯತೆಯಿಂದ ವರ್ತಿಸುತ್ತಿದ್ದಾಳೆ. ಶಾಸನಗಳು ಹೆಣ್ಣನ್ನು ಸದಾ ಮಾನವ ಉಪಕಾರಕ್ಕೆ ಶ್ರಮಿಸುವವಳೆಂಬಂತೆ ಭಾವಿಸಿದಂತಿದೆ.

ಪರೋಪಕಾರಾಯ ಫಲಂತಿ ವೃಕ್ಷಾಃ
ಪರೋಪಕಾರಾಯ ವಹಂತಿ ನದ್ಯಃ
ಪರೋಪಕಾರಾಯ ದುಹಂತಿ ಗಾವಃ
ಪರೋಪಕಾರಾರ್ಥಮಿದಂ ಶರೀರಂ

ಎಂಬ ಉಕ್ತಿಯಂತೆ.

ಸದಾ ಪುರುಷನ ಸೇವೆ ಮಾಡುವವಳು, ಪರರ ಹಿತಕ್ಕಾಗಿಯೇ ಹುಟ್ಟಿ, ಪರೋಪಕಾರಿಯಾಗಿಯೇ ಕೊನೆಯುಸಿರೆಳೆಯಬೇಕೆಂಬ ನೀತಿಯನ್ನು ಹೆಣ್ಣಿನ ಮೇಲೆ ವಿಧಿಸಲಾಗಿದೆ. ಅಂದು

ಪೆಣ್ಬುಯಲ್ ನೆಪದಲ್ಲಿ ಹೆಣ್ಣಿನ ಅಪಹರಣ, ಅತ್ಯಾಚಾರವಾಗುತಿತ್ತು. ಇಂದು ಸಮಸ್ಯೆಯಾಗಿಯೇ ಕಾಡುತ್ತಿದೆ. ಭಾರತದಂತಹ ಒಂದು ದೇಶದಲ್ಲೇ National Crime Records bureau ಪ್ರಕಾರ ಪ್ರತಿದಿನಕ್ಕೆ ೫೭ ಅತ್ಯಾಚಾರಗಳು ನಡೆಯುತ್ತಿವೆ. ೨೦೧೪ರ ಪ್ರಕಾರ ಪ್ರತಿ ಒಂದು ಲಕ್ಷಕ್ಕೆ ೨ ರಂತೆ ಪ್ರಕರಣಗಳು ನಡೆಯುತ್ತಿವೆ. ೧೩.೧% ರಷ್ಟು ೧೪ ವರ್ಷದ ಒಳಗಿನ ಮಕ್ಕಳ ಮೇಲೆ ನಡೆಯುತ್ತಿವೆ. ೭೬.೩%ರಷ್ಟು ೧೪-೧೮ ವಯಸ್ಸಿನ ಒಳಗಿನ ಮಕ್ಕಳ ಮೇಲೆ ನಡೆಯುತ್ತಿವೆ. ೪೬.೧ ರಷ್ಟು ೧೮ ರಿಂದ ೩೦ ವರ್ಷದ ಒಳಗಿನವರ ಮೇಲೆ ಶೇ. ೧೩.೮ರಷ್ಟು ೩೦ ರಿಂದ ೫೦ ವರ್ಷ ವಯಸ್ಸಿನವರ ಮೇಲೆ ನಡೆಯುತ್ತಿದೆ. ಇದೊಂದು ಅಮಾನವೀಯ ಘಟನೆಯೇ ಸರಿ. ಇನ್ನಾದರೂ ಕಾನೂನು ಮಹಿಳೆಯರ ಬಗೆಗೆ ಕಟ್ಟುನಿಟ್ಟಿನ ಕ್ರಮವನ್ನು ತಪ್ಪಿತಸ್ಥರ ಮೇಲೆ ಜರುಗಿಸಬೇಕಿದೆ.

ಚಿಂತಕರಾದ ಸ್ವಾಮಿವಿವೇಕಾನಂದರು ಒಂದು ಕಡೆ "ಯಾವ ಜನಾಂಗ, ಯಾವ ರಾಜ್ಯ ಮಹಿಳೆಯರಿಗೆ ಗೌರವ ತೋರಿಸುವುದಿಲ್ಲವೋ ಅದೆಂದೂ ಘನತೆಗೆ ಏರಿಲ್ಲ, ಏರಲೂ ಆಗದು. ಈ ಜೀವಂತ ಶಕ್ತಿಮೂರ್ತಿಗಳಿಗೆ ಗೌರವ ತೋರಿಸದೇ ಇರುವ ದೇಶ ಅಸಂಸ್ಕೃತ ದೇಶ. ಜಗನ್ಮಾತೆಯ ಜೀವಂತ ಸ್ವರೂಪದಂತಿರುವ ಮಹಿಳೆಯರನ್ನು ನೀವು ಉತ್ತಮ ಸ್ಥಿತಿಗೆ ತರದೇ ಹೋದರೆ ನಿಮ್ಮ ಅಭ್ಯುದಯವಾದಿತೆಂದು ತಿಳಿಯಬೇಡಿ" ಎಂದು ಜಾಗತೀಕ ಮಟ್ಟದಲ್ಲಿ ನಿಂತು ಸಾರಿ ಹೇಳಿದ್ದಾರೆ.

ಇಂದು ಮಹಿಳೆ ಶಿಕ್ಷಣವನ್ನು ಪಡೆಯುತ್ತಿದ್ದಾಳೆ. ಆದರೂ ಸಮಾಜದಲ್ಲಿ ಎಷ್ಟೊ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ. ೧೯೯೨ರ ಆಲ್ ಇಂಡಿಯಾ ವಿಮನ್ಸ್ ಕಾನ್ಫರೆನ್ಸ್ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿತ್ತು. ಅವುಗಳು ಸ್ತ್ರೀಯರ ಸೌಕರ್ಯ ಮತ್ತು ಪ್ರಗತಿ, ಶಿಕ್ಷಣ, ಸಾಮಾಜಿಕ ಸುಧಾರಣೆ, ಸಮಾನ ಹಕ್ಕಿನ ಅವಕಾಶ, ಶಾಂತಿ ಸೌಹಾರ್ದತೆ ಹಾಗೂ ಸಚ್ಚಾರಿತ್ರ್ಯ ಬೆಳೆಸುವುದು.

ಸರ್ಕಾರ ಇಂತಹ ಹಲವಾರು ಯೋಜನೆಗಳನ್ನು ಇಂದು ಹಮ್ಮಿಕೊಂಡರೂ ಸಹ ಯೋಜನೆಗಳು ಫಲಕಾರಿಯಾಗುತ್ತಿಲ್ಲ. ೧೯೨೯ರ ಬಾಲ್ಯವಿವಾಹ ನಿಷೇಧಕಾಯ್ದೆ, ೧೯೫೬ ವಿಚ್ಛೇದನ ಕಾಯ್ದೆ, ೧೯೫೫ರ ಹಿಂದೂ ವಿವಾಹದಲ್ಲಿ ಬಹುಪತ್ನಿತ್ವ ನಿಷೇಧ ಕಾಯ್ದೆ, ೧೯೬೧ರ ವರದಕ್ಷಿಣೆ ನಿಷೇಧ ಕಾಯ್ದೆ, ೧೯೮೨ ದೇವದಾಸಿ ನಿಷೇಧ ಕಾಯ್ದೆಗಳು ಜಾರಿಗೆ ಬಂದಿದ್ದರೂ ಇವೆಲ್ಲವು ಇಂದಿಗೂ ಕಾನೂನಿನ ಕಣ್ತಪ್ಪಿಸಿಯಾದರೂ ಆಚರಣೆಯಲ್ಲಿವೆ. ಹೆಣ್ಣು ಮಕ್ಕಳ ಮುಗ್ಧತೆ, ಬಡತನ, ದೈವೀಭಾವನೆಗಳೂ ಅವರನ್ನು ಇಂತಹ ವ್ಯವಸ್ಥೆಗೆ ಬಲಿಪಶುಗಳನ್ನಾಗಿ ಮಾಡುತ್ತಿವೆ.

ಇನ್ನಾದರೂ ಸಮಾಜ ೧೨ನೇ ಶತಮಾನದ ಶರಣರ ನುಡಿಗಳನ್ನು ದಾಸರ ಸಾಮಾಜಿಕ ಚಿಂತನೆಯನ್ನು ಪಾಲಿಸಬೇಕಿದೆ. ಶ್ರೀಮತಿ ರಮಾದೇವಿ, ಪಂಡಿತ್ ರಮಾಬಾಯಿ, ಶ್ರೀಮತಿ

ಪಿ.ಕೆ.ಕೀಲೇಡಿ ಬೋಸ್, ಶಿರಿಸ್ ಕಾನಜಿ, ರಾಜಾರಾಂ ಮೋಹನ್‌ರಾಯ್, ಈಶ್ವರಚಂದ್ರ ವಿದ್ಯಾಸಾಗರ, ದಯಾನಂದ ಸರಸ್ವತಿ, ಮೊದಲಾದ ಸಮಾಜ ಸುಧಾರಕರು ಮಂಡಿಸಿದ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕಿದೆ. ಮಕ್ಕಳಿಗೆ ಶಾಲೆಯಲ್ಲಿ ಸ್ತ್ರೀ ವಿರೋಧಿ ಆಚರಣೆಗಳ ಕುರಿತಾದ ವಿಷಯಗಳನ್ನು ಪಠ್ಯದಲ್ಲಿ ಅಳವಡಿಸಿ ಅವರಲ್ಲಿ ಜಾಗೃತಿ ಮೂಡಿಸಬೇಕಿದೆ. ಪ್ರತಿಗಂಟೆಗೆ ಇಂದು ೨೦೧೩ರ ಪ್ರಕಾರ ೧ ವರದಕ್ಷಿಣೆ ಸಾವು ಸಂಭವಿಸುತ್ತದೆ. ಪ್ರತಿಲಕ್ಷ ಜನಸಂಖ್ಯೆಗೆ ೧.೪% ರಷ್ಟು ವರದಕ್ಷಿಣೆ ಸಾವು ಪ್ರಕರಣಗಳು ನಡೆಯುತ್ತಿವೆ. ಸ್ತ್ರೀ ಇಂದು ಸ್ವಲ್ಪಮಟ್ಟಿಗಾದರೂ ಜಾಗೃತಳಾಗುತ್ತಿದ್ದಾಳೆ. ಕಾನೂನಿನ ಸದುಪಯೋಗವನ್ನು ಶಿಕ್ಷಣ ಕಲಿತ ಮಹಿಳೆಯರು ಪಡೆಯುತ್ತಿದ್ದಾರೆ. ಪುರುಷ ವ್ಯವಸ್ಥೆಗೆ ನಲುಗಿದ ಎಷ್ಟೋ ಮಹಿಳೆಯರು ಕರ್ನಾಟಕವೊಂದರಲ್ಲೆ ಸಾವಿರ ಜನಸಂಖ್ಯೆಗೆ ೧೩% ವಿಚ್ಛೇದನಗಳು ಜರುಗುತ್ತಿವೆ.

ಏನೆಲ್ಲ ಮಹಿಳೆಯರ ಬಗೆಗಿನ ಕಾನೂನುಗಳನ್ನು ಸರ್ಕಾರ ಜಾರಿಗೆ ತಂದಿದ್ದರೂ, ಅವು ಹಣವಂತ ಪುರುಷರ ಪಾಲಾಗುತ್ತಿವೆ. ಇನ್ನಾದರೂ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಬೇಕು. ಅಲ್ಲದೆ ಮಹಿಳೆಯರ ತಾಳ್ಮೆಯನ್ನು ಭೂಮಿತಾಯಿಗೆ ಹೋಲಿಸುತ್ತಾರೆ. ಭಾರ ಹೆಚ್ಚಾದರೆ ಭೂಮಿಯೇ ಕಂಪಿಸುತ್ತದೆ. ಅಂತಹ ಸ್ಥಿತಿಯಲ್ಲಿ ಹೆಣ್ಣು ಶಾಂತವಾಗಿರುವವರೆಗೂ ನಾರಿಯೇ ಆಗಿರುತ್ತಾಳೆ. ಆಕೆ ಒಂದು ದಿನ ಸಿಡಿದೆದ್ದರೆ ಮನುಕುಲದ ನಿರ್ನಾಮ ಖಚಿತ.

ಅನುಬಂಧಗಳು

೧. ಗ್ರಂಥಋಣ

೨. ನಕ್ಷೆ

೩. ಛಾಯಾಚಿತ್ರಗಳು

ಗ್ರಂಥಋಣ

ಸಂಪುಟಗಳು

* Epigraphia Carnatica
* Epigraphia Indica
* South Indian Incriptions XI-i, Bomby Karnatka Incriptions
* ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧

ಪುಸ್ತಕಗಳು

* ಕರುಣ ವಿಜಯೇಂದ್ರ, **ಕರ್ನಾಟಕ ದೇವಾಲಯಗಳಲ್ಲಿ ಅಂಗಭೋಗ(ನೃತ್ಯ)**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೭.
* ಕಲಬುರ್ಗಿ ಎಂ.ಎಂ., **ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು**, ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೧.
* ಕೃಷ್ಣಮೂರ್ತಿ ಹನೂರು, **ಕತ್ತಲದಾರಿ ದೂರ**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧.
* ಕೃಷ್ಣಮೂರ್ತಿ ಪಿ.ವಿ.(ಸಂ), ಗುಣಮಧುರ(ದೇವರಕೊಂಡಾರೆಡ್ಡಿ ಅವರ ಅಭಿನಂದನ ಗ್ರಂಥ), ದೇವರಕೊಂಡಾರೆಡ್ಡಿ ಅಭಿನಂದನ ಸಮಿತಿ, ಬೆಂಗಳೂರು, ೨೦೧೦.
* ಚಿದಾನಂದಮೂರ್ತಿ ಎಂ., **ವೀರಗಲ್ಲು ಮತ್ತು ಮಾಸ್ತಿಗಲ್ಲುಗಳು**, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೮೪.
* ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**(ಚಿದಾನಂದ ಸಮಗ್ರ ಸಂಪುಟ ೧), ಸಪ್ನ ಬುಕ್‌ಹೌಸ್, ಬೆಂಗಳೂರು, ೨೦೧೧.
* ಚೆನ್ನಕ್ಕ ಎಲಿಗಾರ, **ಕರ್ನಾಟಕ ಸ್ತ್ರೀ ಸಮಾಜ**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦.

* ಚೆನ್ನಕ್ಕ ಪಾವಟೆ, **ಕರ್ನಾಟಕ ಶಾಸನೋಕ್ತ ಮಹಿಳೆ(ಸಮೀಕ್ಷೆ ಸಂಸ್ಕೃತಿ)**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ, ೨೦೦೭.
* ಚೆನ್ನಕ್ಕ ಪಾವಟೆ, **ಸಾಹಿತ್ಯ ಚೈತ್ರೆ**, ಚೆನ್ನಗಂಗಾ ಪ್ರಕಾಶನ, ಧಾರವಾಡ, ೧೯೯೩.
* ದೇವರಕೊಂಡಾರೆಡ್ಡಿ, **ಕರ್ನಾಟಕ ಶಾಸನಗಳಲ್ಲಿ ಶಾಪಾಶಯ**, ಕರ್ನಾಟಕ ಇತಿಹಾಸ ಸಂಶೋಧನ ಮಂಡಳಿ, ಧಾರವಾಡ, ೨೦೦೭.
* ನಾಗರಾಜ ಆರ್.ಬಾಗೂರು, **ಹೊಸದುರ್ಗ ಸುತ್ತ**, ಅಭಿವ್ಯಕ್ತಿ ವೇದಿಕೆ, ಹೊಸದುರ್ಗ, ಚಿತ್ರದುರ್ಗ ಜಿಲ್ಲೆ, ೧೯೮೪.
* ನಾಗಯ್ಯ ಜೆ.ಎಂ., **ಆರನೇ ವಿಕ್ರಮಾದಿತ್ಯನ ಶಾಸನಗಳು**, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾವಿ, ೧೯೯೨.
* **ನಾಗಚಂದ್ರನ ರಾಮಚಂದ್ರ ಚರಿತ ಪುರಾಣ, ನಾಗಚಂದ್ರ ಸಂಪುಟ**, ಶಾಂತಿನಾಥ ದಿಬ್ಬದ(ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬
* ಪರಮಶಿವಮೂರ್ತಿ ಡಿ.ವಿ., **ಪೆಣ್ಬುಯ್ಯಲ್**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.
* **ರನ್ನ ಸಾಹಸಭೀಮ ವಿಜಯಂ, ರನ್ನ ಸಂಪುಟ**, ನಾಗರಾಜಯ್ಯ ಹಂಪ(ಸಂ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.
* ರಾಜಶೇಖರಪ್ಪ ಜಿ., **ಇತಿಹಾಸ ಕಥನ**, ಸಿ.ವಿ.ಜಿ.ಪಬ್ಲಿಕೇಶನ್ಸ್, ಬೆಂಗಳೂರು, ೨೦೧೦.
* ರಾಜಶೇಖರಪ್ಪ ಬಿ., **ನಿರಂತರ**, ಶ್ರೀ ಲೋಕ ಪಾವನಿ ಪ್ರಕಾಶನ, ಪಾಂಡವಪುರ, ಮಂಡ್ಯ, ೨೦೦೧.
* ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗದ ಒನಕೆ ಓಬವ್ವ ಚಾರಿತ್ರಿಕ ವಿವೇಚನೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦
* ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗ ಜಿಲ್ಲಾ ಇತಿಹಾಸ ಅಧ್ಯಯನದ ವ್ಯಾಪಕತೆ ಮತ್ತು ಸಾಧ್ಯತೆಗಳು: ಒಂದು ಶತಮಾನ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೪
* ಲಕ್ಷ್ಮಣ್ ತೆಲಗಾವಿ, **ಎಪ್ಪತ್ತೇಳು ಪಾಳೆಯಗಾರರು, ಸಂಖ್ಯಾ ಆಶಯ ನೆಲೆಯ ಚಾರಿತ್ರಿಕ ವಿವೇಚನೆ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೧೦.

* ಲಕ್ಷ್ಮಣ್ ತೆಲಗಾವಿ, **ಚಿತ್ರದುರ್ಗ ನಾಯಕ ಅರಸರು ರಾಜಕೀಯ ಚಿತ್ರ**, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, ೨೦೦೯.
* ಶಂಕರರಾವ್ ಚ.ನ., **ಮಹಿಳಾ ಅಧ್ಯಯನ**, ಜೈಭಾರತ ಪ್ರಕಾಶನ, ಮಂಗಳೂರು, ೨೦೧೨
* ಶರ್ಮಾ ಜಿ.ಎಂ.(ಅನು), **ರಾಹುಲ ಸಾಂಕೃತ್ಯಾಯನ ವೋಲ್ಗಾ-ಗಂಗಾ**, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೭
* ಶ್ರೀಮತಿ ಎಚ್.ಎಸ್., **ಸ್ತ್ರೀವಾದ: ತಾತ್ವಿಕತೆ**, ಎಂ.ಭೈರೇಗೌಡ ಪ್ರಗತಿ ಗ್ರಾಫಿಕ್ಸ್, ಬೆಂಗಳುರು, ೨೦೧೨.
* ಸುಮತೀಂದ್ರನಾಡಿಗ, **ಸಂತೇಬೆನ್ನೂರು**, ದಾವಣಗೆರೆ ಜಿಲ್ಲೆ ಇತಿಹಾಸದ ಕೆಲವು ಹೆಜ್ಜೆಗಳು, ವಿಜಯ ಯುವಕ ಸಂಘ, ಸಂತೇಬೆನ್ನೂರು.
* ಸೋಮಶೇಖರ ಎಸ್.ವೈ., **ಜಟಂಗಿ ರಾಮೇಶ್ವರ ಸಾಂಸ್ಕೃತಿಕ ದರ್ಶನ**, ಸುಮೇಧ ಪ್ರಕಾಸನ, ದೇವಸಮುದ್ರ, ಚಿತ್ರದುರ್ಗ ಜಿಲ್ಲೆ, ೨೦೦೪.
* ಹಂಪ ನಾಗರಾಜಯ್ಯ(ಸಂ), ರನ್ನನ **ಸಹಾಸವಿಜಯಂ**, ರನ್ನ **ಸಂಪುಟ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬

ಅಪ್ರಕಟಿತ ಪ್ರಬಂಧಗಳು


* ಮಹಂತೇಶ ಎನ.ಎಸ್., **ಹೊಸದುರ್ಗ ತಾಲೂಕು ಪರಿಸರದ ಸಾಂಸ್ಕೃತಿಕ ಅಧ್ಯಯನ**, ಪಿಎಚ್.ಡಿ.ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೨
* ಶಿಲ್ಪಾ ಜೆ.ಎಂ., **ರಾಯಚೂರು ಜಿಲ್ಲಾ ಶಾಸನ ಸಾಹಿತ್ಯದಲ್ಲಿ ಮಹಿಳೆಯರು**, ಎಂ.ಫಿಲ್.ನಿಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೯.
* ಶೋಭನಾ ಎಸ್., ಶಾಸನಗಳಲ್ಲಿ ಸ್ತ್ರೀ ಪ್ರತಿನಿಧೀಕರಣ, ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

ಪತ್ರಿಕೆಗಳು

* ದೇವರಕೊಂಡಾರೆಡ್ಡಿ(ಸಂ), **ಶಾಸನಗಳ ಅಧ್ಯಯನ-೨**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

* ಪರಮಶಿವಮೂರ್ತಿ ಡಿ.ವಿ.(ಸಂ), **ಶಾಸನ ಅಧ್ಯಯನ ಸಂಪುಟ ೪, ಸಂಚಿಕೆ ೧, ಜನವರಿ–ಜೂನ್ ೨೦೦೭, ಸಂಪುಟ ೪, ಸಂಚಿಕೆ ೭, ಜುಲೈ–ಡಿಸೆಂಬರ್ ೨೦೦೭, ಸಂಯುಕ್ತ ಸಂಚಿಕೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.
* ಭಟ್‌ಸೂರಿ ಕೆ.ಜಿ.(ಸಂ), **ಶಾಸನ ಅಧ್ಯಯನ ೭, ಸಂಚಿಕೆ ೧,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫.
* ಭಟ್‌ಸೂರಿ ಕೆ.ಜಿ.(ಸಂ), **ಶಾಸನ ಅಧ್ಯಯನ ೮, ಸಂಚಿಕೆ ೭,** ಜುಲೈ–ಡಿಸೆಂಬರ್ ೨೦೧೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

ಚಿತ್ರದುರ್ಗ ಜಿಲ್ಲೆ ನಕ್ಷೆ





ಛಾಯಾಚಿತ್ರಗಳು



ವೀರಗಲ್ಲು, ಗೊಡಬನಾಳು




ಮಾಸ್ತಿಗಲ್ಲುಗಳು ಮತ್ತು ವೀರಗಲ್ಲು, ಮತಿಘಟ್ಟ



ಆಂಜನೇಯ ದೇವಾಲಯದ ಕಂಬದಲ್ಲಿರುವ
ಸ್ತ್ರೀ ಶಿಲ್ಪ, ತುರುವನೂರು



ಆಂಜನೆಯ ದೇವಾಲಯದ ಕಂಬದ
ಮೇಲಿರುವ ನೃತ್ಯದ ಸ್ತ್ರೀ ಶಿಲ್ಪ, ತುರುವನೂರು




ಮಾಸ್ತಿಗಲ್ಲು, ಚಿತ್ರದುರ್ಗ



ಅಡವಿ ಆಂಜನೇಯ ದೇವಾಲಯದ
ಮುಂಭಾಗದ ವೀರಮಾಸ್ತಿಗಲ್ಲು




ವೀರಮಾಸ್ತಿಗಲ್ಲು, ಗುಂಜಿಗನೂರು



ವೀರಮಾಸ್ತಿಗಲ್ಲು, ಗೊಡಬನಾಳು




ಮಾಸ್ತಿಗಲ್ಲು, ಗೊಡಬನಾಳು



ಒಂಟಿ ಕೈ ಮಾಸ್ತಿಗಲ್ಲು, ಗೊಡಬನಾಳು



ಮಾಸ್ತಿಗಲ್ಲು, ಚಿತ್ರದುರ್ಗ




ಒಂಟಿ ಕೈ ಮಾಸ್ತಿಗಲ್ಲು, ಗೊಡಬನಾಳು




ವೀರಗಲ್ಲು, ಗೊಡಬನಾಳು



ಮಾಸ್ತಿಗಲ್ಲು, ಮುಸ್ಟೂರು



ವೀರಮಾಸ್ತಿಗಲ್ಲು, ಗೊಡಬನಾಳು



ಪೊಲೀಸ್ ಠಾಣೆ ಮುಂಭಾಗದ ವೀರಮಾಸ್ತಿಗಲ್ಲು
ತುರುವನೂರು



ವೀರಮಾಸ್ತಿಗಲ್ಲು, ಚಿತ್ರದುರ್ಗ



ಒಂಟಿ ಕೈ ಮಾಸ್ತಿಗಲ್ಲು, ಗೊಡಬನಾಳು

ಶಾಸನಶಾಸ್ತ್ರ